ನೊಬೆಲ್ ಪುರಸ್ಕೃತ ಸಾಹಿತ್ಯ ಮಾಲೆ



ಮಾರಿಸ್ ಮೇತರ್‌ಲಿಂಕ್

ವಾಚಿಕೆ

ಸಂಧ್ಯಾ ಎಸ್.

ನೊಬೆಲ್ ಪುರಸ್ಕೃತ ಸಾಹಿತ್ಯ ಮಾಲೆ

ಮಾರಿಸ್ ಮೇತರ್‌ಲಿಂಕ್

ವಾಚಿಕೆ

ಮಾರಿಸ್ ಮೇತರ್‌ಲಿಂಕ್ (೧೮೬೨ - ೧೯೪೯)

೧೯೧೧ ರಲ್ಲಿ ಪ್ರತಿಷ್ಠಿತ ನೊಬೆಲ್ ಪಾರಿತೋಷಕವನ್ನು ಪಡೆದ ಮಾರಿಸ್ ಮೇತರ್‌ಲಿಂಕ್ ಬೆಲ್ಜಿಯಂ ದೇಶದ ಸಾಹಿತಿ. ಫ್ರೆಂಚ್ ಭಾಷೆಯಲ್ಲಿ ಬರೆದು ಬೆಲ್ಜಿಯಂ ದೇಶದ ಸಾಹಿತ್ಯವನ್ನು ತನ್ನ ಅಲೌಕಿಕ ಪ್ರತಿಭೆಯಿಂದ ಸಮೃದ್ಧಗೊಳಿಸಿದ ಈತ ನಾಟಕ ಪ್ರಕಾರಕ್ಕೆ ವಿಶಿಷ್ಟ ಸಂವೇದನೆಯನ್ನೇ ನೀಡಿದವ. ಜೀವಿತದುದ್ದಕ್ಕೂ ಅವ್ಯಾಹತವಾಗಿ ಬರವಣಿಗೆಯಲ್ಲಿ ತೊಡಗಿದ ಧಾರ್ಮಿಕ ಪ್ರವೃತ್ತಿಯ ಮೇತರ್‌ಲಿಂಕ್ ಮೊದಮೊದಲು ಸಂಕೇತವಾದ (ಸಿಂಬಲಿಸಂ)ಕ್ಕೆ ಆತುಕೊಂಡಿದ್ದರೂ ಮುಂದೆ ತನ್ನ ಅನನ್ಯತೆಯನ್ನು ಮೆರೆಯುವ ಸೃಜನಶೀಲತೆಯನ್ನು ತನ್ನಲ್ಲಿ ಗಟ್ಟಿಗೊಳಿಸಿಕೊಂಡ. ಅನಂತದ ನಿಗೂಢವನ್ನು ಭೂತ ಮತ್ತು ಭವಿಷ್ಯಗಳಲ್ಲಿ ಅರಸುತ್ತ, ಕಂಡ ಹೊಳಹುಗಳನ್ನು ಗಾಢವಾದ ವೈಜ್ಞಾನಿಕ ಅಭ್ಯಾಸಗಳೊಂದಿಗೆ ಪುನಃ ಪುನಃ ಪರಿಶೀಲಿಸುತ್ತಾ ಗದ್ಯ ಬರಹಗಳಲ್ಲಿ ದಾಖಲಿಸುವ ಮೇತರ್‌ಲಿಂಕ್, ಸಂತರು-ದಾರ್ಶನಿಕರು ಹೇಳುವ ಸೃಷ್ಟಿಯ ಐಕ್ಯತೆಯನ್ನು ತನ್ನ ವಿಶ್ವಾತ್ಮಕ ದೃಷ್ಟಿಕೋನದಿಂದ ಕಂಡಕೊಂಡಂತೆ ತೋರುತ್ತದೆ. ಆಧುನಿಕ ಯೂರೋಪಿಯನ್ ಸಾಹಿತ್ಯದಲ್ಲಿ ಅವನದು ಅತಿಮುಖ್ಯ ದನಿ.

ಮಾರಿಸ್ ಮೇತರ್‌ಲಿಂಕ್‌ನ ಸಾಹಿತ್ಯದ ಪ್ರಾತಿನಿಧಿಕ ಸಂಕಲನವಾದ ಈ ವಾಚಿಕೆಯನ್ನು ಸ್ವತಃ ನಾಟಕಕಾರ್ತಿ ಹಾಗೂ ಅನುವಾದಕಿಯಾಗಿರುವ ಸಂಧ್ಯಾ. ಎಸ್ ಅವರು ಸಿದ್ಧಪಡಿಸಿದ್ದಾರೆ.

ನೊಬೆಲ್ ಪುರಸ್ಕೃತ ಸಾಹಿತ್ಯ ಮಾಲೆ

ಮಾರಿಸ್ ಮೇತರ್‌ಲಿಂಕ್

ವಾಚಿಕೆ

ಆಯ್ಕೆ / ಅನುವಾದ
ಸಂಧ್ಯಾ. ಎಸ್.

ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ
ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ,
ಬೆಂಗಳೂರು - ೫೬೦ ೦೧೮

MAURICE MAETERLINCK, Selected translations of Nobel Laureate Maurice Maeterlinck, Selected and translated by Sandhya S.; Published by Kannada Pustaka Pradhikara, (Kannada Book Authority); Pampa Mahakavi Road, Chamarajpet, Bangalore-560018.

Pages: 200 First Edition: 1997

ಪುಟಗಳು : 200

© ಗ್ರಂಥಸ್ವಾಮ್ಯ : ಕನ್ನಡ ಪುಸ್ತಕ ಪ್ರಾಧಿಕಾರ

ಮೊದಲ ಮುದ್ರಣ :೧೯೯೭

ಬೆಲೆ : ೩೧ = ೦೦

ಮುಖಪುಟ : ರಾ. ಸೂರಿ

ಅಕ್ಷರ ಜೋಡಣೆ ಮತ್ತು
ಮುದ್ರಣ : ಸಮತಾ ಪ್ರಿಂಟರ್ಸ್, ಮಂಡ್ಯ.

ಮುನ್ನುಡಿ

ಪುಸ್ತಕ ಪ್ರಾಧಿಕಾರವು ಕನ್ನಡ ಪುಸ್ತಕೋದ್ಯಮದ ಬೆಳವಣಿಗೆಗೆ ಪೂರಕವಾಗಿ ಅನೇಕ ಯೋಜನೆಗಳನ್ನು ರೂಪಿಸಿಕೊಂಡಿದ್ದು, ಅವುಗಳಲ್ಲಿ ಮುಖ್ಯವಾದುವೆಂದರೆ, ಕನ್ನಡದಲ್ಲಿ ಆಯಾ ವರ್ಷ ಪ್ರಕಟವಾಗುವ ಕೃತಿಗಳನ್ನು ಲೇಖಕರಿಂದ: ಪ್ರಕಾಶಕರಿಂದ ಕೊಂಡು ಗ್ರಂಥಾಲಯಗಳ ಮೂಲಕ ಓದುಗರಿಗೆ ತಲುಪಿಸುವುದು; ಅತ್ಯುತ್ತಮವಾದ ಕೃತಿಗಳನ್ನು ಪರಿಣಿತ ವಿದ್ವಾಂಸರಿಂದ ಬರೆಯಿಸಿ ಪ್ರಕಟಿಸುವುದು. ಈ ಯೋಜನೆಗಳಿಗೆ ಪೂರಕವಾಗಿ ಕಳೆದ ಐದು ವರ್ಷಗಳಿಂದ ಕನ್ನಡ ಪುಸ್ತಕ ಪ್ರಾಧಿಕಾರವು ಸೃಜನಶೀಲವಾದ ಹಾಗೂ ಸೃಜನೇತರವಾದ ಸಾಹಿತ್ಯವನ್ನು ಕನ್ನಡಿಗರಿಗೆ ಒದಗಿಸುತ್ತಾ ಬಂದಿದೆ. ಕನ್ನಡದ ಮೌಲಿಕವಾದ, ಹಲವಾರು ವರ್ಷಗಳಿಂದ ಬೇಡಿಕೆಯಲ್ಲಿದ್ದ ಪುನರ್ ಮುದ್ರಣವಾಗದಿದ್ದ ಗ್ರಂಥಗಳನ್ನು "ಜನಪ್ರಿಯಪುಸ್ತಕ ಮಾಲೆ" ಯ ಮೂಲಕ ಆಯ್ದು ಪ್ರಕಟಿಸುತ್ತಾ ಬಂದಿದೆ. ಹಾಗೆಯೇ ಸಮಕಾಲೀನ ಸಾಹಿತ್ಯ, ಶಿಕ್ಷಣ, ಸಂಸ್ಕೃತಿ, ಮಾನವಿಕ ಶಾಸ್ತ್ರ, ವಿಚಾರ, ಕಲೆ ಹಾಗೂ ವಿಜ್ಞಾನ ಶಿಕ್ಷಣಕ್ಕೆ ಸಂಬಂಧಿಸಿದಂತೆ ವಿಶಿಷ್ಟವಾದ ಕೃತಿಗಳನ್ನು ಆಯಾಯ ಕ್ಷೇತ್ರಗಳಲ್ಲಿ ಪರಿಣಿತರಾದ ವಿದ್ವಾಂಸರಿಂದ ಬರೆಯಿಸಿ ಪ್ರಕಟಿಸುವ ಕೆಲಸವನ್ನು ನಿರ್ವಹಿಸುತ್ತಿದೆ. ಅಲ್ಲದೆ ಕನ್ನಡದ ಕೆಲವು ಲೇಖಕರ ಶತಮಾನೋತ್ಸವ ಸಂದರ್ಭದಲ್ಲಿ ಅವರ ಪ್ರಾತಿನಿಧಿಕ ಸಂಕಲನವನ್ನು ವಿದ್ವಾಂಸರಿಂದ ಸಂಪಾದಿಸಿ ಪ್ರಕಟಿಸುವ ಕೆಲಸವನ್ನು ಮಾಡುತ್ತಿದೆ.

ಜಗತ್ತಿನ ಬೇರೆ ಬೇರೆ ವಿಜ್ಞಾನಿಗಳ, ತತ್ವಜ್ಞಾನಿಗಳ ಬದುಕು ಮತ್ತು ಬರಹಗಳನ್ನು ಕುರಿತು ಆಯಾ ಕ್ಷೇತ್ರದ ತಜ್ಞ ವಿದ್ವಾಂಸರಿಂದ ಬರೆಯಿಸಿ ಕನ್ನಡದ ಓದುಗರಿಗೆ ತಲುಪಿಸಬೇಕೆಂಬ ಮಹತ್ವಾಕಾಂಕ್ಷೆಯನ್ನೂ ಪ್ರಾಧಿಕಾರ ಹೊಂದಿದೆ. ಹೀಗೆ ಪರಿಚಯಿಸುವುದರ ಮೂಲಕ ಬೇರೆ ಬೇರೆ ದೇಶಗಳ ಭಾಷೆ, ಸಂಸ್ಕೃತಿ ಹಾಗೂ ನಾಗರೀಕತೆಗಳನ್ನು ಅರ್ಥ ಮಾಡಿಕೊಳ್ಳಲು ಸಾಧ್ಯವಾಗುತ್ತದೆ. ಈ ನಿಟ್ಟಿನಲ್ಲಿ ಪ್ರಸ್ತುತ ನೊಬೆಲ್ ಬಹುಮಾನ ವಿಜೇತ ಲೇಖಕರ ಮಾಲಿಕೆಯೊಂದನ್ನು 'ನೊಬೆಲ್ ಪುರಸ್ಕೃತ ಸಾಹಿತ್ಯಮಾಲೆ' ಎಂದು ಆರಂಭಿಸುತ್ತಿದ್ದೇವೆ.

ನೊಬೆಲ್ ಬಹುಮಾನ ಜಗತ್ತಿನಲ್ಲಿಯೇ ಅತ್ಯಂತ ಪ್ರತಿಷ್ಠಿತವಾದ ಬಹುಮಾನ. ಆಲ್‌ಫರ್ಡ್ ನೊಬೆಲ್ ತನ್ನ ಉಯಿಲಿನಲ್ಲಿ ತನ್ನ ಉಳಿದಿರುವ ಆಸ್ತಿಯನ್ನೇ ಮೂಲ ಬಂಡವಾಳವಾಗಿಟ್ಟುಕೊಂಡು ಅದರಿಂದ ಬರುವ ಬಡ್ಡಿ ಹಣದಲ್ಲಿ ಪ್ರತಿವರ್ಷ ಐದು ಬಹುಮಾನಗಳನ್ನು ಕೊಡುವಂತೆ ತಿಳಿಸಿದ್ದಾರೆ. ಈ ಬಹುಮಾನಗಳು 'ಭೌತಶಾಸ್ತ್ರ',

'ರಸಾಯನಶಾಸ್ತ್ರ', 'ಶರೀರ ಶಾಸ್ತ್ರ', ಅಥವಾ 'ವೈದ್ಯಕೀಯ ಶಿಕ್ಷಣ', 'ಸಾಹಿತ್ಯ' ಹಾಗೂ 'ಮನುಕುಲದ ಶಾಂತಿಗಾಗಿ' ಎಂದು ಸೂಚಿಸಿದ್ದಾರೆ. ಹಾಗೆ ಆಯಾ ವರ್ಷ ಬಹುಮಾನ ಪಡೆಯುವವರು ಹಿಂದಿನ ವರ್ಷಾವಧಿಯಲ್ಲಿ ಮಾನವ ಕುಲಕ್ಕೆ ತುಂಬ ಪ್ರಯೋಜನಕಾರಿಯಾದ, ಅತ್ಯಂತ ಶ್ರೇಷ್ಠ ಕಾರ್ಯ ಮಾಡಿರಬೇಕು. ವಿವಿಧ ಕ್ಷೇತ್ರಕ್ಕೆ ಸಂಬಂಧಿಸಿದಂತೆ ವಿವಿಧ ಅಕಾಡೆಮಿಗಳು ಆಯ್ಕೆ ಮಾಡಿ ಬಹುಮಾನವನ್ನು ನಿರ್ಧರಿಸುತ್ತವೆ. ಈ ಬಹುಮಾನ ನೀಡುವಲ್ಲಿ ಅಭ್ಯರ್ಥಿಗಳ ರಾಷ್ಟ್ರೀಯತೆಯನ್ನು ಪರಿಗಣಿಸಬಾರದೆಂಬುದನ್ನು ನೊಬೆಲ್ ಸೂಚಿಸಿದ್ದಾರೆ. ಸ್ಕಾಂಡಿನೇವಿಯಾದವರಾಗಿರಲಿ ಅಥವಾ ಇಲ್ಲದಿರಲಿ ಬಹುಮಾನ ನೀಡಲು ಮಾತ್ರ ಎಲ್ಲಾ ರೀತಿಯಿಂದಲೂ ಅರ್ಹವಾಗಿದ್ದವರಿಗೆ ಸಲ್ಲುವಂತಾಗಬೇಕೆಂಬುದು ಅವರ ಆಶಯವಾಗಿತ್ತು. ಸಾಹಿತ್ಯ ಕ್ಷೇತ್ರದಲ್ಲಿ ಇಂತಹ ಪುರಸ್ಕಾರವನ್ನು ಪಡೆದ ಸಾಹಿತಿಗಳನ್ನು ಕುರಿತ ಕೃತಿಗಳನ್ನು ಕನ್ನಡಿಗರಿಗೆ ತಲುಪಿಸುವುದು ಪ್ರಾಧಿಕಾರಕ್ಕೆ ಹೆಮ್ಮೆಯ ವಿಷಯವಾಗಿದೆ.

ಈ ಕೃತಿಗಳನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿಯು ಸಿದ್ಧಪಡಿಸಿ ಕೊಟ್ಟಿದೆ. ಈ ಅಕಾಡೆಮಿಯ ಹಿಂದಿನ ಅಧ್ಯಕ್ಷರಾದ ಶ್ರೀ ಬರಗೂರು ರಾಮಚಂದ್ರಪ್ಪ ಅವರು ಬೇರೆ ಬೇರೆ ಲೇಖಕರಿಂದ ಹಸ್ತಪ್ರತಿಯನ್ನು ಸಿದ್ಧಪಡಿಸಲು ನೆರವಾಗಿದ್ದಾರೆ. ಅಂತೆಯೇ ಅಕಾಡೆಮಿಯು ಸಿದ್ಧಪಡಿಸಿದ ಕೃತಿಗಳನ್ನೆಲ್ಲಾ ಕನ್ನಡ ಪುಸ್ತಕ ಪ್ರಾಧಿಕಾರವು ಪ್ರಕಟಿಸಲು ಇಂದಿನ ಅಧ್ಯಕ್ಷರಾದ ಶ್ರೀ ಶಾಂತರಸರವರು ಒಪ್ಪಿಗೆ ನೀಡಿದ್ದಾರೆ. ಇವರಿಬ್ಬರಿಗೂ ಪ್ರಾಧಿಕಾರವು ಆಭಾರಿಯಾಗಿದೆ. ಪ್ರಸ್ತುತ 'ಮಾರಿಸ್ ಮೇತರ್‌ಲಿಂಕ್' ಕೃತಿಯನ್ನು ಸಿದ್ಧಪಡಿಸಿರುವ ಸಂಧ್ಯಾ. ಎಸ್ ಅವರಿಗೆ, ಈ ಮಾಲಿಕೆಯ ಕೃತಿಗಳಿಗೆ ಆಕರ್ಷಕ ಹೊದಿಕೆ ರಚಿಸಿರುವ ರಾ.ಸೂರಿ ಅವರಿಗೆ, ಈ ಮಾಲಿಕೆಯಲ್ಲಿನ ಕೃತಿಗಳು ಇಷ್ಟು ಅಚ್ಚುಕಟ್ಟಾಗಿ ಹೊರಬರಲು ಕಾರಣರಾದ ಲಿಂಗರಾಜು ಅವರಿಗೆ ಕೃತಜ್ಞತೆಗಳು. ಹಾಗೆಯೇ ಈ ಪುಸ್ತಕವನ್ನು ಮುದ್ರಿಸಿಕೊಟ್ಟ ಸಮತಾ ಪ್ರಿಂಟರ್ಸ್ ರವರಿಗೂ ಕೃತಜ್ಞತೆಗಳು. ಸಹೃದಯ ಕನ್ನಡಿಗರು ಈ ಮಾಲಿಕೆಯ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ತಿಳಿಸುತ್ತಾರೆಂದು ಆಶಯ ಹೊಂದಿದ್ದೇನೆ.

ನೆಲಮನೆ ದೇವೇಗೌಡ

ಅಧ್ಯಕ್ಷರು

ಪರಿವಿಡಿ

ಅನುಬಂಧ

ಈ ಹೊತ್ತಿಗೆ ಕುರಿತು

ನಾಸ್ರುದ್ದೀನನ ಕುರಿತ ಒಂದು ಕತೆ ಹೀಗಿದೆ:

ನಾಸ್ರುದ್ದೀನ್ ಒಮ್ಮೆ ತನ್ನ ಮನೆಯೊಳಗಿಂದ ಸರ್ರನೆ ಆಚೆ ಬಂದು, ಏನನ್ನೋ ಹುಡುಕಾಡ ತೊಡಗಿದ. ತಲೆ ತಗ್ಗಿಸಿ, ನಡು ಬಗ್ಗಿಸಿ ಮನೆ ಮುಂದಿನ ಅಂಗಳದಲ್ಲೆಲ್ಲಾ ಹುಡುಕಿ, ಕಡೆಗೆ ಬೀದಿಗೆ ಬಂದ. ಹುಡುಕಾಡಿದ, ಹುಡುಕಾಡಿದ.ಹುಡುಕುತ್ತಲೇ ಮುಂದೆ ಮುಂದೆ ಹೋಗುತ್ತಿದ್ದ. ಇದನ್ನೇ ನೋಡಿದ ಎದುರು ಮನೆಯವ ನಾಸ್ರುದ್ದೀನನ್ನು ಕೇಳುತ್ತಾನೆ : ''ಏನು ತಮ್ಮ, ಏನು ಕಳಕೊಂಡಿದ್ದೀಯ ?'' ನಾಸ್ರುದ್ದೀನ್ ಹೇಳಿದ, ''ಬೀಗದ ಕೈಯಿ.'' ಎದುರು ಮನೆಯವ ಕೇಳಿದ, ''ಎಲ್ಲಿ ಕಳಕೊಂಡೆ? ಮನೆಗೆ ಬರುವಾಗ ದಾರಿಯಲ್ಲಿ ಬೀಳಿಸಿಕೊಂಡೆಯಾ?'' ನಾಸ್ರುದ್ದೀನ್ ಉತ್ತರಿಸಿದ, ''ಇಲ್ಲ, ಮನೆ ಒಳಗೆ, ನನ್ನ ಕೋಣೆಯಲ್ಲಿ.'' ಎದುರು ಮನೆಯವನಿಗೆ ಆಶ್ಚರ್ಯ ! ಕೇಳಿದ, ''ಅಲ್ಲಪ್ಪ ತಮ್ಮ, ಬೀಗದ ಕೈಯನ್ನು ಮನೆ ಒಳಗೇ, ನಿನ್ನ ಕೋಣೆಯಲ್ಲೇ ಕಳಕೊಂಡಿದ್ದೀನೀಂತ ಹೇಳ್ತೀಯ. ಮತ್ತೆ ಆಚೆ ಬಂದು ಬೀದಿಯಲ್ಲಿ ಹುಡುಕುತ್ತಿದ್ದೀಯಲ್ಲ ?!'' ನಾಸ್ರುದ್ದೀನನಿಗೆ ರೇಗಿತು. ಹೇಳಿದ, ''ನಂಗೆ ಬುದ್ಧಿ ಇಲ್ಲಾಂತ ತಿಳಕೋಬೇಡ ಕಣಯ್ಯ. ಮನೆ ಒಳಗೆ ಕತ್ತಲೆ, ಏನೂ ಕಾಣುತ್ತಿಲ್ಲ. ಆಚೆ ಬೆಳಕಿದೆಯಲ್ಲ, ಅದಕ್ಕೇ ಆಚೆ ಬಂದು ಹುಡುಕುತ್ತಿದ್ದೀನಿ.''

ಪೂರ್ವಾಗ್ರಹ ಪೀಡಿತ ವಿಮರ್ಶೆಯ ದೃಷ್ಟಿಕೋನವೂ ನಾಸ್ರುದ್ದೀನನ ಹಾಗೆ. ಮೇತರ್‌ಲಿಂಕ್‌ನ ರಚನೆಗಳನ್ನು ಅವಲೋಕಿಸಬೇಕೆಂದರೆ ಆ ರಚನೆಗಳಲ್ಲಿ ಬೇರು ಬಿಟ್ಟಿರುವ ನಿಗೂಢದ ಆಳಕ್ಕೇ ಹೋಗಬೇಕು. ಬೆಳಕನ್ನು ಜೊತೆಯಲ್ಲಿ ಕೊಂಡೊಯ್ದು ಅವಕ್ಕಾಗಿ ಹುಡುಕಾಡಬೇಕು. ಬದಲಾಗಿ ವಿಮರ್ಶೆಯ ಸಿದ್ಧ ಪರಿಭಾಷೆಯಲ್ಲಿ ಮೇತರ್‌ಲಿಂಕನನ್ನು ಅವಲೋಕಿಸಿದರೆ ಆ ರಚನೆಗಳ ಸವಿ ಸಿಗುವುದಾದರೂ ಹೇಗೆ ? ''ಅವನಲ್ಲಿ ಆ ಅಂಶ ಇಲ್ಲ, ಈ ಅಂಶ ಇಲ್ಲ; ಉ ಅಂಶ ಕಡಿಮೆಯಾಯ್ತು, ಋ ಅಂಶ ಹೆಚ್ಚಾಯ್ತು'' ಎಂದು ಪಟ್ಟಿಮಾಡುವುದೇನೂ ಕಷ್ಟವಾಗದು. ಅದೇನಿದ್ದರೂ ಪ್ರಯೋಗ ಶಾಲೆಯಲ್ಲಿ ಸಿದ್ಧಪಡಿಸಿ ಇಡುವ ಒಂದು ವಸ್ತುವಿನ ಬಗ್ಗೆ ಹಾಗೆ ಹೇಳಬಹುದೇನೂ!

ಮೇತರ್‌ಲಿಂಕನ ಕಾವ್ಯ ಅತಿ ಅಗ್ರಾಹ್ಯವಾದಂತೆ, ಅತಿ ಗ್ರಾಹ್ಯ ಪ್ರಪಂಚದ್ದೂ ಆಗಿದೆ ; ಅವನ ಗದ್ಯ ಆಲೋಚನಾ ಜಗತ್ತಿನದು. ವಿಶೇಷವೆಂದರೆ ಅವನ ನಾಟಕಗಳು ಈ ಮೂರೂ ಜಗತ್ತುಗಳ ಕೂಡಲ ಸಂಗಮ.

** ** **

ಮೇತರ್‌ಲಿಂಕ್‌ನ ಜಗತ್ತು ಎಷ್ಟೇ ವೈವಿಧ್ಯಮಯವಾದರೂ ಅದೊಂದು ಆದರ್ಶಗಳ ಜಗತ್ತು. ಅವನ ಲೌಕಿಕ ಜಗತ್ತಿಗೂ ಷೇಕ್ಸ್‌ಪಿಯರ್‌ನ ಅಥವಾ ಸ್ಟ್ರಿಂಡ್‌ಬರ್ಗ್‌ನ ವಾಸ್ತವ ಸಮೀಪದ ಲೌಕಿಕ ಜಗತ್ತಿಗೂ ಅಜಗಜಾಂತರ. ಮೇತರ್‌ಲಿಂಕ್‌ನ ಲೌಕಿಕವೂ ಒಂದು ಆದರ್ಶ. ಇನ್ನು ಅಲೌಕಿಕವನ್ನು ಆದರ್ಶ, ಅವಾಸ್ತವ ಎನ್ನದೇ ಅನ್ಯ ಮಾರ್ಗವಿಲ್ಲ. ಯಾಕೆಂದರೆ, ನೀಲಿ ಹಕ್ಕಿಯನ್ನು ಅಲೌಕಿಕದಲ್ಲಿ ಹುಡುಕುವ ಮಕ್ಕಳಿಗೆ ಕಡೆಗೆ ಸಿಕ್ಕುವುದು ತಮ್ಮದೇ ಆಗಿದ್ದ ತಮ್ಮಲ್ಲೇ ಇದ್ದ ನೀಲಿ ಹಕ್ಕಿ. ಆದರೆ ಅದೂ ಕೈಗೆ ಸಿಕ್ಕದೇ ಹೋಗುತ್ತದೆ.

ಇನ್ನು ಭೌತಿಕ ಮತ್ತು ಅತಿಭೌತಿಕ ಜಗತ್ತಿನ ಆತನ ಆಲೋಚನೆಗಳಲ್ಲೂ ಕಾಣುವುದು ಭೌತಿಕತೆಯ ಉತ್ತುಂಗದ ಆದರ್ಶಮಯ ಅವಾಸ್ತವಿಕ ಭೌತಿಕತೆಯೇ: ಅದು ಪ್ರಪಂಚ, ವಿಶ್ವ, ಬೆಳಕು, ವಸ್ತು, ಕಾಲ, ಆಕಾಶ ಮುಂತಾದ ಸದಸ್ಯರಿರುವ ಭೌತಿಕತೆ. ಅಲ್ಲಿ ಈ ಲೋಕದ ನಮ್ಮ ನಿಮ್ಮ ದೈನಂದಿನ ದಂದುಗಗಳ ಪ್ರಪಂಚವಿಲ್ಲ. ಕೊಲೆ, ಸುಲಿಗೆ, ಕಳ್ಳರು, ಕಾಕರು, ದಿನಸಿ, ಮಾರುಕಟ್ಟೆ, ರಾಜಕೀಯ, ಸಾಮಾಜಿಕ-ಇಂಥ ಯಾವುದೇ ವಿವರಗಳು ಇರುವುದಿಲ್ಲ. ನಾಟಕಗಳಲ್ಲಿ ಕೂಡ ಇವುಗಳು ಇಲ್ಲವೇ ಇಲ್ಲ. ಲೌಕಿಕ ಸಂಘರ್ಷಗಳೂ ಮೌಲ್ಯಗಳ ಕುರಿತದ್ದೇ ಆಗಿರುತ್ತವೆ; ಮ್ಯಾಗ್ಡಲೀನಳ, ವನ್ನಾಳ ಮಾನಸಿಕ ಸಂಘರ್ಷಗಳ ಹಾಗೆ.

ಯಾವುದೇ ಮೌಲಿಕ ಸಾಹಿತ್ಯದಲ್ಲಿ ಆ ಕಾಲದ ರಾಜಕೀಯ, ಸಾಮಾಜಿಕ, ಆರ್ಥಿಕ, ಚಾರಿತ್ರಿಕ ವಿವರ ನೇರವಾಗಿ ಅಥವಾ ಪರೋಕ್ಷವಾಗಿ ಬಂದು ಹೋಗಿರುತ್ತವೆ ಎಂದು ಕೇಳಿದ್ದೇವೆ. ಈ ಮಾತು ಮೇತರ್‌ಲಿಂಕನಿಗೆ ಎಷ್ಟರ ಮಟ್ಟಿಗೆ ಅನ್ವಯವಾಗುತ್ತದೆ ಎಂದು ಯೋಚಿಸಬೇಕಾಗಿದೆ. ಯಾಕಂದರೆ ಅವನ ಕಾರ್ಯಕ್ಷೇತ್ರ ಸಾಮಯಿಕವಾದಂತೆ ಸಾರ್ವಕಾಲಿಕವೂ ಆಗಿದೆ.

** ** **

ಮಾರಿಸ್ ಮೇತರ್‌ಲಿಂಕನನ್ನು ಕುರಿತು ಈ ಹೊತ್ತಿಗೆ ತಯಾರಿಸುವುದು ಸುಲಭದ ಕೆಲಸವೇನೂ ಆಗಲಿಲ್ಲ. ಮೊದಲನೆಯ ತೊಂದರೆಯೆಂದರೆ ಆತನ ಪುಸ್ತಕಗಳು ಸುಲಭವಾಗಿ ಸಿಗಲಿಲ್ಲ. ಸಿಕ್ಕಿದ್ದೂ ಕೆಲವೇ ಕೆಲವು : ಕವನ ಸಂಕಲನ, ಕತೆ, ಏಳು ನಾಟಕಗಳು, ಹತ್ತು ಗದ್ಯ ಕೃತಿಗಳು. ಅವನ ಕುರಿತ ಬರಹಗಳೇ ವಿರಳ.

ಎರಡನೆಯದಾಗಿ ಅವನ ನಾಟಕಗಳ ಆಕರ್ಷಣೆಯ ತೀವ್ರತೆ. ಅದು ಕೆಲವೊಮ್ಮೆ ನನ್ನನ್ನು ಪರವಶಳಾಗಿಸಿ ಆ ಕುರಿತು ಏನೂ ಬರೆಯಲಾಗದಂತೆ ಮಾಡುತ್ತಿತ್ತು. ನಾನೇ

ಅದರ ಸೆಳೆತದಿಂದ ಹುಷಾರಾಗಿ ಬಿಡಿಸಿಕೊಂಡು, 'ದೂರ'ವನ್ನು ಕಲ್ಪಿಸಿಕೊಳ್ಳ ಬೇಕಾಗುತ್ತಿತ್ತು.

ಅಲ್ಲದೆ, ಮೇತರ್‌ಲಿಂಕ್ ಸಾಮಾನ್ಯ ಓದುಗ ವರ್ಗಕ್ಕೆ ಅಷ್ಟು ಪರಿಚಿತನಲ್ಲ. ಅವನನ್ನು ಇತರ ಯೂರೋಪಿಯನ್ ನಾಟಕಕಾರರಂತೆ ಹೆಚ್ಚಾಗಿ ಚರ್ಚಿಸಿರುವ ಉದಾಹರಣೆ ಇಲ್ಲ. ಅವನನ್ನು ನಾನೇ ಸ್ವತಃ ಸಾಹಿತ್ಯ ಚರಿತ್ರೆಯಲ್ಲಿ, ಸಮಕಾಲೀನ ಜಗತ್ತಿನಲ್ಲಿ, ಮುಂತಾದ ವಿವಿಧ ಹಿನ್ನೆಲೆಗಳಲ್ಲಿಟ್ಟುಕೊಂಡು ಅಭ್ಯಾಸ ಮಾಡಬೇಕಾಯಿತು. ಹಾಗಾಗಿ ಅವನ ಕೃತಿಗಳನ್ನು ಒಂದಾದರ ನಂತರ ಒಂದಾಗಿ ವಿಶ್ಲೇಷಿಸದೆ, ಅರ್ಥಸಾಧ್ಯತೆಗಳ ಅಂತರ್ಜಾಲದ ಸಂಬಂಧವನ್ನು ಮನಸ್ಸಿನಲ್ಲಿಟ್ಟು ಕೊಂಡು ವಿಶ್ಲೇಷಿಸಿದ್ದೇನೆ.

ಇಷ್ಟು ಕಷ್ಟವಾದರೂ: ''ಬೀಗದ ಕೈಗಾಗಿ ಮನೆಯೊಳಗೇ ಹುಡುಕುತ್ತಿದ್ದೇನೆ : ಇಂದಲ್ಲ ನಾಳೆ ಸಿಗುತ್ತದೆ,'' ಎಂಬ ಭರವಸೆ ನನಗಿದೆ.

ಮೇತರ್‌ಲಿಂಕ್ ಬರೆದದ್ದು ಫ್ರೆಂಚ್ ಭಾಷೆಯಲ್ಲಿ; ಆದರೆ ನಾನು ಓದಬೇಕಾಗಿದ್ದು ಇಂಗ್ಲೀಷ್ ('ಮೊನ್ನ ವನ್ನಾ' ಮಾತ್ರ ಕನ್ನಡದಲ್ಲಿ ಲಭ್ಯವಿತ್ತು) ಅನುವಾದಗಳಲ್ಲಿ. ಹಾಗಾಗಿ ಫ್ರೆಂಚ್ ಬಲ್ಲವರು ನಾಟಕಗಳ ಅನುವಾದ ಭಾಗವನ್ನು ಅಕ್ಷರಮಟ್ಟಿಗೆ ಸಹಾನುಭೂತಿಯಿಂದ ನೋಡಬೇಕಾಗಿ ಪ್ರಾರ್ಥನೆ. ಅದೇ ಕಾರಣದಿಂದ ಕೃತಿಗಳ ಹೆಸರುಗಳನ್ನು ಲಭ್ಯವಿರುವ ಕಡೆ ಫ್ರೆಂಚ್ ರೂಪದಲ್ಲೂ ಇಲ್ಲದ ಕಡೆಗಳಲ್ಲಿ ಇಂಗ್ಲಿಷ್ ರೂಪದಲ್ಲೂ ಕೊಟ್ಟಿದ್ದೇನೆ. ಅದೇ ಕಾರಣದಿಂದ ಪಾತ್ರಗಳ ಮತ್ತು ಊರುಗಳ, ಹೆಸರುಗಳ ಉಚ್ಚಾರಣೆಯಲ್ಲೂ ಖಂಡಿತಾ ವ್ಯತ್ಯಾಸಗಳಾಗಿರುತ್ತವೆ. ಫ್ರೆಂಚ್ ಭಾಷೆಯ ಅಜ್ಞಾನಕ್ಕಾಗಿ ಓದುಗರು ಮನ್ನಿಸಬೇಕಾಗಿ ಕೋರಿಕೆ. ನನ್ನ ಇತ್ತೀಚಿನ ಇತಾಲಿಯಾ ಭಾಷೆಯ ಪರಿಚಯವನ್ನು ಸಕಾರಣ ಸದುದ್ದೇಶಗಳಿಂದ ಅಲ್ಲಲ್ಲಿ ಬಳಸಿಕೊಂಡಿದ್ದೇನೆ.

ಮೇತರ್‌ಲಿಂಕನ ಜೀವನ ಮತ್ತು ಕೃತಿಗಳನ್ನು ಕುರಿತು ಎಡ್ವರ್ಡ್ ಟಾಮಸ್ ಎಂಬುವನು ಕೃತಿ ರಚಿಸಿದ್ದಾನೆಂದೂ, ಗೆರಾಡ್ ಹ್ಯಾರಿ ಅವನ ಜೀವನ ಚರಿತ್ರೆಯನ್ನೇ ರಚಿಸಿದ್ದಾನೆಂದೂ ಬೇರೆ ಮೂಲಗಳಿಂದ ತಿಳಿದು ಬಂದಿತು. ಆದರೆ ಕೃತಿಗಳು ಸಿಗದೇ ಹೋದವು. ಅದು ಬಿಟ್ಟರೆ ಮೇತರ್‌ಲಿಂಕನ ಕುರಿತ ಕೆಲ ಬಿಡಿ ಲೇಖನಗಳು, ಅನುವಾದಕರ ಮುನ್ನುಡಿಗಳು ಸಿಕ್ಕಿದ್ದು ಅವನ ಜೀವನ ಕುರಿತ ವಿವರಗಳು ಸಿಕ್ಕಂತಾದವು.

ಇಂಥಾ ಒಂದು ಹೊತ್ತಿಗೆಯನ್ನು ಸಿದ್ಧಪಡಿಸುವ ದೊಡ್ಡ ಜವಾಬ್ದಾರಿಯನ್ನು ನನಗೆ ವಹಿಸಿದ್ದಕ್ಕಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಿಗೂ, ಮುದ್ರಣದ ಜವಾಬ್ದಾರಿ ಹೊತ್ತ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾದ ಶ್ರೀ ನೆಲಮನೆ ದೇವೇಗೌಡರಿಗೂ, ಪುಸ್ತಕ ಅಚ್ಚುಕಟ್ಟಾಗಿ ಬರಲಿ ಎಂದು ಪಟ್ಟುಹಿಡಿದು ನನ್ನ ಪರವಾಗಿ ಹೆಚ್ಚಿನ ಜವಾಬ್ದಾರಿ ಹೊತ್ತ ಸಹೋದರ ಲಿಂಗರಾಜು ಅವರಿಗೂ, ಮುದ್ರಕರಿಗೂ, ಸಂಬಂಧೆಪಟ್ಟ ಎಲ್ಲರಿಗೂ ನನ್ನ ಅನಂತಾನಂತ ಧನ್ಯವಾದಗಳು.

ಈ ಹೊತ್ತಿಗೆಯನ್ನು ಯೇಸುವಿನ ಪುಣ್ಯನಾಮಕ್ಕೆ ಅರ್ಪಿಸುತ್ತಾ,

ಬೆಂಗಳೂರು

೧-೧-೯೫

ಸಂಧ್ಯಾ ಎಸ್.

ಮಾರಿಸ್ ಮೇತರ್‌ಲಿಂಕ್‌ನ ಜೀವನ ಕುರಿತು

ಮಾರಿಸ್ ಮೇತರ್‌ಲಿಂಕ್ ಹುಟ್ಟಿದ್ದು ೧೮೬೨ ನೇ ಇಸವಿ ಆಗಸ್ಟ್ ೨೯ರಂದು ಬೆಲ್ಜಿಯಂನ ಘೆಂಟ್ ನಗರದಲ್ಲಿ. ಬಾಲ್ಯ ಉಸ್ತಾಕರ್ ಎಂಬ ಸೇತುವೆ-ಕಾಲುವೆಗಳ ಊರಿನಲ್ಲಿ. ಶಾಲೆ ಮಟ್ಟದ ವಿದ್ಯಾಭ್ಯಾಸ ಜೆಸುವಿಟ್ ಶಾಲೆಯೊಂದರಲ್ಲಿ. ಮನೆತನ ಸಾಕಷ್ಟು ಸ್ಥಿತಿವಂತರದ್ದು. ಮುಂದೆ ಕಲಿತದ್ದು ತಂದೆ ತಾಯಿಗಳ ಬಯಕೆಯಂತೆ ಕಾನೂನು ಶಾಸ್ತ್ರವನ್ನು. ಬಾಲ್ಯದಲ್ಲೇ ಅನುಭಾವ, ಕಾವ್ಯಗಳತ್ತ ತುಡಿತ. ಹಾಗಾಗಿ ಲಾಯರನಾಗಿ ಸೋತ; ಆದರೆ ಭಾವಜೀವಿಯಾದ ಅವನಲ್ಲಿ ಅನನ್ಯದ ಕಡೆಗಿನ ತುಡಿತ, ಸೆಳೆತ ವೃದ್ಧಿಯಾಯಿತು. ಪ್ಯಾರಿಸ್ ನಗರದ ಅಸಾಂಪ್ರದಾಯಿಕ ಜೀವನ ಶೈಲಿ ಅವನನ್ನು ಆಕರ್ಷಿಸಿತು: ಅಲ್ಲಿ ವಿಚಿತ್ರ ಸ್ವಭಾವಗಳನ್ನೇ ಹೊಸತನಗಳೆಂದು ಪರಿಗಣಿಸುವ ನಾಗರಿಕ ಜೀವನ ಶೈಲಿಯಿದ್ದುದರಿಂದ ಮೇತರ್‌ಲಿಂಕನಿಗೆ ಮುಜುಗರವಾಗದ ವಾತಾವರಣ ಕಂಡಿರಬೇಕು. ೧೮೮೬ರಲ್ಲಿ ಪ್ಯಾರಿಸ್ಸಿಗೆ ಬಂದು ಅಲ್ಲಿನ ಸಂಕೇತವಾದ (ಸಿಂಬಲಿಸ್ಟ್ ಸ್ಕೂಲ್) ದಿಂದ ಆಕರ್ಷಿತನಾದ . ಮರುವರ್ಷ ಘೆಂಟ್‌ಗೆ ವಾಪಸ್ಸಾದರೂ ಸಂಕೇತ ವಾದದ ಪ್ರಭಾವ ಅವನನ್ನು ಬಿಡಲಿಲ್ಲ. ಕಾವ್ಯ ರಚನೆಯಲ್ಲಿ ತೊಡಗಿ, ೧೮೮೯ರಲ್ಲಿ ತನ್ನ ಮೊದಲ ಮತ್ತು ಏಕಮೇವ ಕವಿತಾ ಸಂಕಲನ ಪ್ರಕಟಿಸಿದ. ಅಲ್ಲಿಂದ ಮುಂದೆ ನಾಟಕ ರಚನೆಯ ಕಡೆ ಮನ ಒಲಿಯಿತು. ಅದೇ ವರ್ಷ ಮೊದಲ ನಾಟಕ 'ಲ ಪ್ರಿನ್ಸೆಸ್ ಮೆಲಿಯೆನೆ ' ಪ್ರಕಟಿಸಿ ಪ್ಯಾರಿಸ್ಸಿನ ಗೆಳೆಯರಿಗೆ ಓದಲು ಕಳಿಸಿ, ಅವರ ಅಭಿಪ್ರಾಯಕ್ಕಾಗಿ ತವಕದಿಂದ ಭಯದಿಂದ ಕಾದು ಕೂತ. ಆ ಕೃತಿಯನ್ನು ಷೇಕ್ಸ್‌ಪಿಯರನದಕ್ಕಿಂತಾ ಸುಂದರವೆಂದು ವರ್ಣಿಸಿ ಅಂದಿನ ಹೆಸರಾಂತ ನಾಟಕ ವಿಮರ್ಶಕ ಆಕ್ಟೇವ್ ಮಿರಾಬೂ ತನ್ನ 'ಲೆ ಫಿಗಾರೊ' ಪತ್ರಿಕೆಯ ಮುಖಪುಟದಲ್ಲಿ ಬರೆದಂದಿನಿಂದ ಮಾರಿಸ್ ಮೇತರ್‌ಲಿಂಕ್‌ನ ಪಾಲಿಗೆ ಕೀರ್ತಿ ಬೆನ್ನಟ್ಟಿ ಬರಹತ್ತಿತು. ಹೆಸರಾಂತ ಕವಿ ಮಲಾರ್ಮೆ ಕೂಡ ಇವನ ನಾಟಕಗಳನ್ನು ಮೆಚ್ಚಿಕೊಂಡು ಬಿಟ್ಟ!

೧೮೯೦ ರಲ್ಲಿ ಮೂರು ನಾಟಕಗಳನ್ನು ಮೇತರ್‌ಲಿಂಕ್ ರಂಗಕ್ಕೆ ತಂದ. ಅಲ್ಲಿಂದ ಮುಂದೆ ವೈವಿಧ್ಯಮಯ ನಾಟಕಗಳ ರಚನೆ ಮಾಡಹತ್ತಿದ. ಅವನ ನಾಟಕಗಳು ಬೆಲ್ಜಿಯಂ ಮಾತ್ರವಲ್ಲ, ಫ್ರಾನ್ಸ್, ಸ್ವೀಡನ್ ಹಾಗೂ ಇಂಗ್ಲೆಂಡ್, ಅಮೆರಿಕಾಗಳಲ್ಲೂ ಅವನ ಜೀವಿತ ಕಾಲದಲ್ಲೇ ಪ್ರಯೋಗಗಳನ್ನು ಪ್ರದರ್ಶನಗಳನ್ನು ಕಂಡವು.

ಬೆಲ್ಜಿಯಂ ದೇಶದ ಸಾಹಿತ್ಯ ರಚನೆ ಮಧ್ಯಯುಗದಲ್ಲಿ ಮುಖ್ಯವಾಗಿ ಎರಡು

ಭಾಷೆಗಳಲ್ಲಿ ನಡೆದಿತ್ತು - ಉತ್ತರ ಬೆಲ್ಜಿಯಂನಲ್ಲಿ ಡಚ್ ಭಾಷೆಯಾದರೆ, ದಕ್ಷಿಣದಲ್ಲಿ ಹೆಚ್ಚಾಗಿ ಫ್ರೆಂಚ್; ಇದು ಬಿಟ್ಟರೆ ವಲ್ಲೂನ್ ಭಾಷೆ. ಭಾಷೆ ಯಾವುದಾದರೂ ಮೂಲದಲ್ಲಿ ಅದು ಬೆಲ್ಜಿಯಂ ದೇಶದ ಸಾಹಿತ್ಯವೇ ಆಗಿರುತ್ತಿತ್ತು. ಅದರಲ್ಲೂ ಜಾನಪದ ಶೈಲಿಯ ರಚನೆಗಳೇ ಹೆಚ್ಚಾಗಿದ್ದುವು. ನಂತರ ಫ್ರೆಂಚ್‌ನ ಪ್ರಭಾವ ಹೆಚ್ಚಾಗ ತೊಡಗಿತು. ಆದರೆ ಹದಿನೇಳು - ಹದಿನೆಂಟನೆ ಶತಮಾನದ ಹೊತ್ತಿಗೆ ಬೆಲ್ಜಿಯಂ ಯೂರೋಪಿನ ಇತರ ದೇಶಗಳೊಂದಿಗಿನ ಸಂಬಂಧ ಕಳೆದುಕೊಂಡು ಆರ್ಥಿಕವಾಗಿ ಕಷ್ಟದ ಪರಿಸ್ಥಿತಿಯಲ್ಲಿ ಸಿಕ್ಕಿಕೊಂಡಿತು; ಆ ಕಾಲದಲ್ಲಿ ಸಾಹಿತ್ಯ ಸೃಷ್ಟಿಗೂ ಬರ ಬಂದಿತು. ಹದಿನೆಂಟನೆಯ ಶತಮಾನದ ಕಡೆಯ ಭಾಗದಿಂದೀಚೆಗಷ್ಟೇ ಸೃಜನೇತರ ಸಾಹಿತ್ಯ ಬರತೊಡಗಿತು; ಇತರ ಯೂರೋಪಿಯನ್ ಸಾಹಿತ್ಯದ ನಕಲುಗಳೂ ಬರತೊಡಗಿದವು. ೧೮೩೦ ರಲ್ಲಿ ಸ್ವತಂತ್ರಗೊಂಡ ಬೆಲ್ಜಿಯಂ ಅಲ್ಲಿಂದಾಚೆಗೆ ಸಾಹಿತ್ಯದಲ್ಲೂ ಮುನ್ನಡೆ ಸಾಧಿಸತೊಡಗಿತು. ಹತ್ತೊಂಭತ್ತನೇ ಶತಮಾನದ ಕಡೆಯ ಹೊತ್ತಿಗೆ ಇಡೀ ವಿಶ್ವದಲ್ಲಿ ಪ್ರಖ್ಯಾತಿ ಪಡೆದ ಇಬ್ಬರು ಕವಿಗಳನ್ನು ಬೆಲ್ಜಿಯಂ ನೀಡಿತು. ಅವರಿಬ್ಬರೂ ಆ ನಾಡಿನ ಫ್ಲಾಂದರ್ಸ್ ಪ್ರಾಂತದವರೇ, ಮೊದಲನೆಯವ ಎಮಿಲಿ ವರ್ಹೆರೆನ್ (೧೮೫೫-೧೯೧೬)ನಾದರೆ, ಎರಡನೆಯವ ನೊಬೆಲ್ ಪಾರಿತೋಷಕ ಪಡೆದ ಮಾರಿಸ್ ಮೇತರ್‌ಲಿಂಕ್. ವರ್ಹೆರೆನ್‌ನ ಸಾಹಿತ್ಯ ಕೃಷಿ ೧೮೯೫ರಿಂದ ೧೯೦೮ ವರೆಗೆ ನಡೆಯಿತಾದರ ಮೇತರ್‌ಲಿಂಕ್‌ನದು ೧೮೮೯ರಿಂದ ೧೯೪೦ವರೆಗೂ, ಅಂದರೆ ಐದು ದಶಕಗಳ ಕಾಲ ನಡೆಯಿತು.

ಕಾನೂನು ಶಾಸ್ತ್ರ ಕಲಿತ ಮೇಲೆ ಮೇತರ್‌ಲಿಂಕ್ ಘೆಂಟ್‌ನಿಂದ ಪ್ಯಾರಿಸ್ಸಿಗೆ ಹೋಗಿ, ಮತ್ತೆ ಘೆಂಟ್‌ಗೆ ಮರಳಿದ. ಅಲ್ಲಿಂದ ಮುಂದೆ, ನಗರಗಳಾಚೆ ಪ್ರಕೃತಿಯ ಪರಿಸರದಲ್ಲಿ ಇರತೊಡಗಿದ. ಒಂದನೇ ಮಹಾಯುದ್ಧದ ಕಾಲದಲ್ಲಿ ಜರ್ಮನ್ ಆಕ್ರಮಣದಿಂದ ಬೆಲ್ಜಿಯಂ ತತ್ತರಿಸುತ್ತಿದ್ದಾಗ ಮೇತರ್‌ಲಿಂಕ್ ತನ್ನ ದೇಶದ ಪರವಾಗಿ ಜನರಲ್ಲಿ ಅರಿವು ಮೂಡಿಸುತ್ತಾ ಇಟಲಿ ಮತ್ತು ಸ್ಪೇನ್ ದೇಶಗಳಲ್ಲಿ ಅಲೆದಾಡಿದ. ಆಗ ಅವನ ವಯಸ್ಸು ಐವತ್ತು ಮೀರಿತ್ತು. ಮುಂದೆ ಎರಡನೆ ಮಹಾಯುದ್ಧದ ಕಾಲಕ್ಕೆ ತಾನೇ ತನ್ನ ದೇಶವನ್ನು ತೊರೆದು ನ್ಯೂಯಾರ್ಕಿಗೆ ಹೋದ. ಯುದ್ಧ ನಿಂತ ಮೇಲೆ ಇಟಲಿ ಮತ್ತು ಫ್ರಾನ್ಸಿನ ಗಡಿಯಲ್ಲಿದ್ದ ನೀಸ್ ಎಂಬ ಊರಿಗೆ ಮರಳಿದ. ರಂಗಕರ್ಮಿ ಜಾರ್ಜೆಟ್ ಲ ಬ್ಲಾಂಕ್ ಅವನ ಜೀವನ ಸಂಗಾತಿಯಾಗಿದ್ದಳು.

ಮೇತರ್‌ಲಿಂಕ್ ತನ್ನ ಜೀವಿತ ಕಾಲದಲ್ಲಿ ಅನೇಕ ಥರದ ಏಳುಬೀಳುಗಳನ್ನು ಕಂಡವ. ಮೊದಲನೆ ನಾಟಕದ ಬಗ್ಗೆ ಆತ್ಮವಿಶ್ವಾಸ ಮೂಡುವ ಮೊದಲೇ ಪ್ಯಾರಿಸ್ಸಿನಲ್ಲಿ

ಕೀರ್ತಿ ಶಿಖರ ಏರಿದ್ದ. ಮುಂದೆ 'ಮೊನ್ನ ವನ್ನಾ' ಬರೆದಾಗ, ಇಂಗ್ಲೆಂಡಿನಲ್ಲಿ ಅದರ ಪ್ರದರ್ಶನವನ್ನು ಸೆನ್ಸಾರ್‌ನವರು ರದ್ದು ಪಡಿಸಿದರು. ನಾಟಕ ಹಲವಾರು ರೀತಿಯ ಟೀಕೆಗ ಗುರಿಯಾಯಿತು. ಆಮೇಲೆ ಜಾರ್ಜ್ ಮೆರೆಡಿತ್, ಟಾಮಸ್ ಹಾರ್ಡಿ, ರುಡ್‌ಯಾರ್ಡ್ ಕಿಪ್ಲಿಂಗ್, ಮಾರಿಸ್ ಹುಲೆಟ್, ಎಡ್ಮಂಡ್ ಗಾಸ್, ಆರ್ಥರ್ ಸಿಮನ್ಸ್ ಮುಂತಾದ ಲೇಖಕರ ಪ್ರಯಾಸ, ಪ್ರಯತ್ನ, ಪ್ರಚಾರಗಳಿಂದಾಗಿ, ಹನ್ನೊಂದು ವರ್ಷಗಳ ನಂತರ ನಿಷೇಧವನ್ನು ಹಿಂತೆಗೆದುಕೊಳ್ಳಲಾಯಿತು. ಮುಂದೆ ೧೯೧೧ರಲ್ಲಿ ನೊಬೆಲ್ ಬಹುಮಾನ ಪಡೆದ; ಅಲ್ಲಿಂದ ಈಚೆಗೆ ಆತನ ಖ್ಯಾತಿ ಇಳಿಮುಖವಾಯಿತು.

೧೮೯೦ರಲ್ಲಿ 'ಲ ಪ್ರಿನ್ಸೆಸ್ ಮಲಿಯೆ'ಯ ಕೀರ್ತಿಯ ನಂತರ ಮೂರು ನಾಟಕ ('ದಿ ಇನ್‌ಟ್ರೂಡರ್', 'ದ ಬ್ಲೈಂಡ್' ಮತ್ತು 'ದಿ ಸೆವೆನ್ ಪ್ರಿನ್ಸೆಸ್')ಗಳ ಮೂಲಕ ನಾಟಕರಂಗಕ್ಕೆ ಪದಾರ್ಪಣೆ ಮಾಡಿದ ಮೇತರ್‌ಲಿಂಕ್ ೧೮೯೪-೯೫ರಲ್ಲಿ ಮೂರು ಚಿಕ್ಕ ಚಿಕ್ಕ ಬೊಂಬೆಯಾಟ ('ಆಲ್ಲಡೈನ್ ಅಂಡ್ ಪಾಲೊಮಿದೀಸ್', 'ಇಂಟೀರಿಯರ್' ಮತ್ತು 'ದಿ ಡೆತ್ ಆಫ್ ಟಿಂಟಗೈಲ್ಸ್')ಗಳನ್ನು ರಂಗಕ್ಕೆ ತಂದ. ಅಲ್ಲಿಂದ ಮುಂದೆ ೧೯೧೯ರಲ್ಲಿ ಬರೆದ 'ದಿ ಬೆಟ್ರಾತಲ್' ವರೆಗೂ ಒಟ್ಟು ಸುಮಾರು ೧೬ ನಾಟಕಗಳನ್ನು ರಚಿಸಿದ್ದಾನೆ. ನಾಟಕಗಳಿಗೂ ಮೊದಲು ಪ್ರಕಟಿಸಿದ್ದು ಕವನ ಸಂಕಲನ. ಮತ್ತೆ ಅವನ ಒಂದೇ ಕತೆ 'ದಿ ಮಸಾಕರ್ ಆಫ್ ದಿ ಇನಸೆಂಟ್ಸ್'. ಅವನ ಜೀವನ ಸಂಗಾತಿ ಜಾರ್ಜೆಟ್ ಲ ಬ್ಲಾಂಕ್‌ಗಾಗಿ ೧೯೧೦ರಲ್ಲಿ ಷೇಕ್ಸ್‌ಪಿಯರನ ನಾಟಕ 'ಮ್ಯಾಕ್‌ಬೆತ್' ಅನ್ನು ಅನುವಾದ ಮಾಡಿದ.

ತನ್ನ ಆಲೋಚನೆ, ಚಿಂತನೆಗಳ ಅಭಿವ್ಯಕ್ತಿಗಳಾದ ಗದ್ಯಕೃತಿಗಳನ್ನು ಮೇತರ್‌ಲಿಂಕ್ ೧೮೯೩ರಿಂದ ೧೯೩೪ರವರೆಗೂ ಅವ್ಯಾಹತವಾಗಿ ರಚಿಸಿದ. ಇವುಗಳಲ್ಲಿ ಖಗೋಳಶಾಸ್ತ್ರ, ಜೀವಶಾಸ್ತ್ರ, ಭೌತಶಾಸ್ತ್ರ, ಗಣಿತಶಾಸ್ತ್ರ, ತತ್ವಶಾಸ್ತ್ರ, ತತ್ವಜ್ಞಾನ, ಮಾನವ ಶಾಸ್ತ್ರಗಳ ಸಮ್ಮೇಳನವಿದೆ. ಇವುಗಳ ಮೂಲಕ ಮೇತರ್‌ಲಿಂಕ್ ಅನೇಕ ಕಾಲಘಟ್ಟಗಳ ಅನೇಕ ದೇಶ ಪ್ರದೇಶಗಳ, ವಿವಿಧ ವಿಜ್ಞಾನಿಗಳನ್ನು ಓದಿ ಅರಗಿಸಿಕೊಂಡಿದ್ದ ಮೇಧಾವಿ ಎನ್ನುವುದು ಸಿದ್ಧವಾಗುತ್ತದೆ.

ಮೇತರ್‌ಲಿಂಕ್‌ನ ಎಲ್ಲ ಕೃತಿಗಳೂ ಇಂಗ್ಲಿಷಿಗೆ ಅನುವಾದಗೊಂಡು ಪ್ರಕಟವಾಗಿವೆ. ಅವನ ನಾಟಕಗಳು ಹೆಚ್ಚಾಗಿ ಅಲೆಕ್ಸಾಂಡರ್ ಟೆಕ್ಸಿಯೆರಾ ಡಿ ಮಟ್ಟೋಸ್ ಮತ್ತು ಗದ್ಯವು ಆಲ್ಫ್ರೆಡ್ ಸುತ್ರೋನಿಂದ ಇಂಗ್ಲಿಷಿಗೆ ಅನುವಾದವಾಗಿದ್ದು, ಕವಿತೆಗಳು

ಬರ್ನಾರ್ಡ್ ಮಿಯಾಲ್‌ನಿಂದ ಭಾಷಾಂತರಗೊಂಡಿದ್ದು, ಈ ಎಲ್ಲ ಕೃತಿಗಳೂ ಲಂಡನ್ನಿನ ಪ್ರತಿಷ್ಠಿತ ಮೆಥುಯೆನ್ ಅಂಡ್ ಕೊ ಹಾಗೂ ಜಾರ್ಜ್ ಆಲೆನ್ ಪ್ರಕಾಶಕರಿಂದ ಪ್ರಕಟ ಗೊಂಡಿರುತ್ತವೆ.

ಮಾರಿಸ್ ಮೇತರ್‌ಲಿಂಕನ ಬಹುಮುಖ ಪ್ರತಿಭೆಯನ್ನು ಹಲವರು ಹಲವು ರೀತಿಯಾಗಿ ಕಾಣಬಹುದು; ಆತನು ನಾಟಕಕಾರ ಹೌದು, ಕವಿ ಹೌದು, ಪ್ರಬಂಧಕಾರ ಹೌದು, ಕತೆಗಾರ ಹೌದು, ಜೊತೆಗೆ ಅವನನ್ನು ತತ್ತ್ವಜ್ಞಾನಿ ಎನ್ನುವವರಿದ್ದಾರೆ, ಚಿಂತಕ, ವಿಜ್ಞಾನಿ ಎಂದು ಗುರುತಿಸುವವರಿದ್ದಾರೆ. ಸೌಂದರ್ಯ ಮೀಮಾಂಸಕ, ಆಧ್ಯಾತ್ಮಿಕ ಸಾಧಕ ಎಂದು ಹೇಳುವವರು ಇದ್ದಾರೆ. ಬಹುಶಃ ಇವನು ಇವೆಲ್ಲವೂ ಆಗಿದ್ದ. ಜೊತೆಗೆ ಮತ್ತೇನೋ ಆಗಿದ್ದ ಎಂದು ಅವನ ಕೃತಿಯನ್ನೇ ಓದಿ ಎಲ್ಲ ಓದುಗರೂ ಕಂಡು ಕೊಳ್ಳಬಹುದು.

** ** **

ಮೇತರ್‌ಲಿಂಕ್‌ನ ಕಾವ್ಯ ಕುರಿತು

ಮಾರಿಸ್ ಮೇತರ್‌ಲಿಂಕ್‌ನ ಕಾವ್ಯದ ಬಗ್ಗೆ ಮಾತಾಡುವುದು ಅವನ ನಾಟಕಗಳ ಬಗ್ಗೆ ಮಾತಾಡುವುದಕ್ಕಿಂತಲೂ ಕಷ್ಟ. ಆತ ಫ್ರೆಂಚ್ ಭಾಷೆಯಲ್ಲಿ ಬರೆದ, ನಿಜ. ಆದರೆ ಆತನ ಪರಂಪರೆ ಫ್ರಾನ್ಸ್‌ನ ಫ್ರೆಂಚ್ ಸಾಹಿತ್ಯವಲ್ಲ. ಮೇಲುನೋಟಕ್ಕೆ ಮಲಾರ್ಮೆ, ವರ್ಹರೆನ್ ಮೊದಲಾದ ಕವಿಗಳ ಮೂಲಕ ಚಾಲ್ತಿಗೆ ಬಂದ ಸಂಕೇತವಾದಿ (ಸಿಂಬಲಿಸ್ಟ್) ಕಾವ್ಯದ ಜಾತಿಗೆ ಸೇರಿದಂತೆ ಕಾಣುತ್ತವೆ ಈತನ ಕವಿತೆಗಳು. ಸಂಕೇತವಾದಿ ಕಾವ್ಯಪಂಥ ಕಾವ್ಯಸತ್ವಕ್ಕಿಂತ ಸೌಂದರ್ಯಕ್ಕೆ, ಅರ್ಥಕ್ಕಿಂತ ಸಂಗೀತಕ್ಕೆ ಹೆಚ್ಚಿನ ಒತ್ತುಕೊಟ್ಟಿತು. ಇದೇ ರೀತಿಯ ಪಂಥಗಳು ರಷ್ಯನ್ ಕಾವ್ಯದಲ್ಲೂ ಕಳೆದ ಶತಮಾನದ ಕೊನೆಯಿಂದ ಈ ಶತಮಾನದ ಮೊದಲವರೆಗೆ ಮೈತಾಳಿದವು. ರಷ್ಯಾದ ಹಿರಿಯ ಕವಿಗಳಾದ ಅಲೆಕ್ಸಾಂಡರ್ ಬ್ಲಾಕ್, ಅನ್ನಾ ಅಹಮತೋವಾ ಮೊದಲಾದವರ ಕಾವ್ಯಯಾತ್ರೆ ಶುರುವಾದದ್ದು ಸಂಕೇತವಾದೀ ಚೌಕಟ್ಟಿನಿಂದಲೇ. ಇದೇ ರೀತಿ ಐರ್ಲೆಂಡಿನ ಇಂಗ್ಲಿಷ್ ಕವಿ ಏಟ್ಸನ ಕವಿಜೀವನ ಶುರುವಾದದ್ದು ಸಂಕೇತವಾದದ ರೀತಿಯ ಅಂಶಗಳನ್ನ ಮೈಗೂಡಿಸಿ ಕೊಂಡಿದ್ದ ಪ್ರೀ ರ್‍ಯಾಫಲೈಟ್ ಕಾವ್ಯಪಂಥದ ಒಡನಾಟದಲ್ಲಿ. ಆದರೆ ಎರಡು ಮತ್ತು ಮೂರನೆ ಓದಿಗೆ ಮೇತರ್‌ಲಿಂಕ್‌ನ ಕಾವ್ಯದ ದಿಕ್ಕು ಈ ಪಂಥಕ್ಕಿಂತ ಬೇರೆಯದೇ ಎಂದು ಅನಿಸತೊಡಗುತ್ತದೆ. ಆತನ ಕಾವ್ಯದಲ್ಲಿ ಸಂಕೇತವಾದೀ ಮಾದರಿಯ ಪ್ರಜ್ಞಾಪೂರ್ವಕ ಕಲೆಗಾರಿಕೆ ಇರುವುದಿಲ್ಲ.

ಈತನ ಕವಿತೆಗಳ ತಿರುಳನ್ನು ಗುರುತಿಸುವಲ್ಲಿನ ಕಷ್ಟ ಬೆಲ್ಜಿಯನ್ ಪರಂಪರೆಯ ಅಪರಿಚಿತತೆಯಿಂದ ಉಂಟಾಯಿತೆಂದು ನನಗೆ ಮೊದಮೊದಲು ಅನಿಸಿದರೂ ಅದು ಅಷ್ಟು ನಿಜವಲ್ಲ. ಯಾಕೆಂದರೆ ಅವನ ನಾಟಕಗಳ ತಿರುಳನ್ನು ಹಿಡಿಯುವುದರಲ್ಲಿ ಅಂತಹ ಅಪರಿಚಿತತೆ ಅಡ್ಡಬರುವುದಿಲ್ಲ. ಮೇತರ್‌ಲಿಂಕ್‌ನ ನಾಟಕಗಳು ಅಂತಹ ಅಪರಿಚಿತತೆಯನ್ನು ಭೇದಿಸಿಕೊಂಡು ಬಂದು ನಮ್ಮನ್ನು ಮುಟ್ಟುತ್ತವೆ. ಆದರೆ ಅವನ ಕಾವ್ಯ ಹಾಗಲ್ಲ. ಹಲವು ಮೋಹಕ ಸಾಲುಗಳು, ಪ್ರಸಪುಂಜಗಳು, ಪ್ರತಿಮೆಗಳು ಅವುಗಳಲ್ಲುಂಟು. ಇಷ್ಟಾದರೂ, ಅವು ಬಿಡಿಬಿಡಿಯಾಗಿ ನಿಂತುಬಿಡುತ್ತವೆಯೇ ಹೊರತು ಒಟ್ಟಾಗಿ ಕಲೆತು ಪರಿಣಾಮ ನೀಡುವುದಿಲ್ಲ. ಅಂದರೆ, ಮೇತರ್‌ಲಿಂಕ್‌ನ ಕಾವ್ಯ ಮೇತರ್‌ಲಿಂಕ್‌ನ ನಾಟಕಗಳು ಪಡೆದುಕೊಂಡಷ್ಟು ಪೂರ್ಣ ಹಾಗೂ ಸ್ಪಷ್ಟ ಅರ್ಥ ದೇಹವನ್ನು ಪಡೆದುಕೊಂಡಿಲ್ಲವೆನಿಸುತ್ತದೆ. ಮೇತರ್‌ಲಿಂಕ್‌ನ ಕೃತಿಗಳ ಯಾದಿಯನ್ನು ಬಿಡಿಸಿ ನೋಡಿದಾಗ ಅವನು ಹದಿನಾರು ನಾಟಕ ಮತ್ತು ಹತ್ತಾರು ಗದ್ಯಕೃತಿಗಳ ಮಧ್ಯೆ ರಚಿಸಿದ್ದು

ಒಂದೇ ಒಂದು ಕವನ ಸಂಕಲನ 'ಸೆರೆಸ್ ಶಾಡೆಸ್' ಅನ್ನು. ಇನ್ನೊಂದು ಸೋಜಿಗ ವೆಂದರೆ ಆ ಕವನ ಸಂಕಲವೇ ಅವನ ಚೊಚ್ಚಿಲ ಕೃತಿ. ಮುಂದೆ ಅವನು ನಾಟಕ ಮತ್ತು ಗದ್ಯದ ಕಡೆ ಹೊರಳಿದ. ಮತ್ತೆ ಕಾವ್ಯದ ಕಡೆ ತಿರುಗಿ ನೋಡಲಿಲ್ಲ. ಬಹುಶಃ ತನ್ನ ಕಾವ್ಯದ ಬಗ್ಗೆ ಮಹತ್ವಾಕಾಂಕ್ಷಿಯಾಗಲು ಸಾಧ್ಯವಿಲ್ಲವೆಂದು ಅವನಿಗೇ ಹೊಳೆದಿರಬೇಕು. ಒಟ್ಟು ಬರಹಗಳಲ್ಲಿ ಆತನ ಕಾವ್ಯದ ಜಾಗ ಗೌಣ ಎಂಬುದು ನಿಜ. ಅವನ ಕಾವ್ಯಾತ್ಮಕ ಕೌಶಲ ಅವನ ಶ್ರೇಷ್ಠ ನಾಟಕಗಳ ಮೈಯಲ್ಲಿ ರಕ್ತದಂತೆ ಸೇರಿಹೋಗಿದೆ. ಅದೂ ಅವನ ವಿಶೇಷ ಕೃತಿ ಪ್ರಭೇದವಾದ ನೃತ್ಯಗೇಯ ರೂಪಕಗಳಲ್ಲಿ (ಅಪ್ರೆತೊಗಳಲ್ಲಿ).

ಮೇತರ್‌ಲಿಂಕ್‌ನ ಕವಿತೆಗಳು ಅಪೂರ್ಣ ಮತ್ತು ಅಸಮಗ್ರ ಅನಿಸಿದರೂ ಅವುಗಳಲ್ಲಿ ಕಾವ್ಯ ಸತ್ವ ಹುದುಗಿರುವುದನ್ನು ಅಲ್ಲಗಳೆಯಲಾಗದು. ಅವನು ಕೊಡುವ ಚಿತ್ರಗಳಿಗೆ ಮನಮುಟ್ಟುವ ಮತ್ತು ಕಾಡುವ ಮೋಹಕತೆ, ಗಾಢತೆಗಳಿವೆ. ಆ ಕವಿತೆಗಳು ಉತ್ತಮ ಕವಿಯೊಬ್ಬ ಕವಿತೆ ಕಟ್ಟಲು ತನ್ನ ಮುಂದೆ ಸೇರಿಸಿಕೊಂಡ ಸುಂದರ ಉಪಮೆ, ರೂಪಕಗಳ ರಾಶಿಯ ಹಾಗೆ ಕಾಣುತ್ತವೆ. ಆ ಕವಿತೆಗಳಲ್ಲಿ ಮತ್ತೆ ಮತ್ತೆ ಸುಳಿಯುವ ಆಸ್ಪತ್ರೆ, ಗಾಜುಲೋಟ, ಗಿಡಗಳ ಗಾಜುಮನೆ, ಇಂಥ ರೂಪಕಗಳಿಗೆ ಎಷ್ಟು ತಲೆಕೆಡಿಸಿಕೊಂಡರೂ ಅರ್ಥ ಹೊಳೆಯುವುದೇ ಇಲ್ಲ. ಕವಿ ಕೂಡ ಅವುಗಳ ಅರ್ಥತರಂಗಗಳನ್ನು ಬಹಳ ದೂರ ಹಿಂಬಾಲಿಸಿಕೊಂಡು ಹೋಗಿ ಆ ಎಲ್ಲ ತರಂಗಗಳನ್ನು ಅನುಕರಿಸುವ ಕೆಲಸ ಮಾಡಿದಂತೆ ತೋರುವುದಿಲ್ಲ.

ಇಂತಹ ಅಪೂರ್ಣತೆ ಮತ್ತು ಅಸಮಗ್ರತೆಗೆ ಹೊರತಾಗಿವೆ ಮೇತರ್‌ಲಿಂಕ್‌ನ ಹಾಡುಗಳು. ಅವನ ಕವಿತೆಗಳಲ್ಲಿ ಅಪರಿಹಾರ್ಯವಾದ ಗೋಜುಗಳಿದ್ದರೆ, ಅವನ ಹಾಡುಗಳಲ್ಲಿ ಭಾವದ ಮತ್ತು ಭಾಷೆಯ ಸ್ಪಷ್ಟ ಎಳೆಯೊಂದು ಸಂಕ್ಷಿಪ್ತವಾಗಿ ಮತ್ತು ಸ್ಮರಣೀಯವಾಗಿ ರೂಪುದಾಳುತ್ತದೆ. ಆದರೆ ಅವು ತಮ್ಮ ಹಿತಮಿತ ನುಡಿಮೈಯ್ಯ ಒಳಗಡೆ ಒಗಟಿನಂತೆ ಬಿಡಿಸಲಾಗದ ನಿಗೂಢತೆಯನ್ನು ಅಡಗಿಸಿಕೊಂಡಂತಿರುತ್ತವೆ. ಮಿತ ದ್ರವ್ಯಗಳ ಮೂಲಕ ಅಮಿತ ಭಾವವನ್ನು ಸೂಚಿಸುವ ಈ ಹಾಡುಗಳು ಬ್ಲೇಕನ 'ಸಾಂಗ್ಸ್ ಆಫ್ ಇನಸನ್ಸ್' ಮತ್ತು 'ಸಾಂಗ್ಸ್ ಆಫ್ ಎಕ್ಸ್‌ಪೀರಿಯನ್ಸ್' ಅನ್ನೂ, ಕವನಗಳ ವಾತಾವರಣ ಎಡ್ಗರ್ ಆಲೆನ್ ಪೋನ ಕಾವ್ಯವನ್ನೂ ನೆನಪಿಸುತ್ತವೆ.

ಈ ಮುಂದೆ ಮೇತರ್‌ಲಿಂಕ್‌ನ ಕೆಲವು ಕವಿತೆ ಮತ್ತು ಹಾಡುಗಳನ್ನು ತರ್ಜುಮೆ ಮಾಡಿ ಕೊಡಲಾಗಿದೆ. ಮೇಲ್ಕಾಣಿಸಿದ ಅನಿಸಿಕೆಗಳ ಯಥಾರ್ಥತೆಯನ್ನು ಓದುಗರು ಈ ಅನುವಾದಗಳ ಬೆಳಕಿನಲ್ಲಿ ಪರೀಕ್ಷಿಸಿಕೊಳ್ಳಬಹುದು:

ಐದು ಕವಿತೆಗಳು

ಮುಳುಗು ಗಂಟೆ

ಇಗೋ ನಾನು ಮುಳುಗುವಾತ ಸದಾ ಮುಳುಗು ಗಂಟೆಯೊಳಗೆ!
ನನಗೆ ಇಡೀ ಕಡಲು ಗಾಜಿನಂತೆ ಸದಾ ಬೆಚ್ಚಗೆ!
ಇಡೀ ಜಗತ್ತು ನಿಶ್ಚಲ, ಮಂದ ಮಂದ ಹಸಿರುಲಯ!
ಅದೆಷ್ಟು ವಿಚಿತ್ರ ಪ್ರಾಣಿಗಳು ಆ ಗಾಜು ಗೋಡೆಯಾಚೆ!
ಅವುಗಳೊಡನೆ ಸಂಪರ್ಕ ಪೂರ್ತಿ ನಿಷಿದ್ಧ!
ಆದರೂ ಎಂಥಾ ಜೀವಂತಿಕೆ ಹೊಳೆಯುವ ನೀರ ಆ ದೂರದಲ್ಲಿ!
ನೋಡು! ತೇಲುವ ಹಡಗಿನ ದೊಡ್ಡ ದೊಡ್ಡ ನೆರಳುಗಳು-
ಹಾಯುವುವು ಹೂಮೇಲೆ, ಕಡಲಿನಡಿಯ ದಟ್ಟ ಕಾಡ ಡೇರೆ ಹೂಮೇಲೆ!
ಕ್ಷಣಕಾಲ ನಾನು ನಿಂತೆ ಧೃವದ ಕಡೆ ಪಯಣಿಸಿರುವ
ತಿಮಿಂಗಿಲಗಳ ನೆರಳಿನಲ್ಲಿ!

ಇದೇ ಹೊತ್ತಿಗೆ ಸರಿಯಾಗಿ ನಿಸ್ಸಂಶಯವಾಗಿ ನನ್ನ ಜೊತೆಗಾರರು ರೇವಿನಲ್ಲಿ
ಮಂಜುಗಡ್ಡೆ ಹೇರಿ ಹೇರಿ ಜಹಜುಗಳನ್ನು ಹೊರಡಿಸುತ್ತಿದ್ದಾರೆ :
ಒಂದು ಮಂಜು ಚಪ್ಪಡಿ ಜುಲೈ ಹುಲ್ಲುಗಾವಲುಗಳಲ್ಲಿ!
ಝರಿಗಳ ಹಸಿಹಸಿರು ನೀರಿನಲ್ಲಿ ಈಜಿ ತೇಲುತಿದ್ದಾರೆ ಎಷ್ಟೋ ಜನ
ಮಧ್ಯಾಹ್ನಕ್ಕೆ ನೆರಳುಗವಿ ಹೊಗುತ್ತಾರೆ ಆ ಅವರೇ......
ಸಾಗರಗಳ ತಂಗಾಳಿಯ ಬೀಸಣಿಕೆ ಜಂತೆ, ಮಹಡಿಗಳ ಮೇಲೆ.
ಅಗೋ, ಕೊಲ್ಲಿಯ ಪ್ರವಾಹದ ಆ ಉರಿವ ನಾಲಗೆ;
ಹುಷಾರ್! ಮುದ್ದು ಕೊಟ್ಟಾವು ಅವು ಬಳಲಿಕೆಯ ಗೋಡೆಗಳಿಗೆ!
ಅವು ಜ್ವರ ಬಂದವರ ಹಣೆ ಮೇಲೆ ಮಂಜುಗಡ್ಡೆ ಮಡಗುತಿಲ್ಲ,
ರೋಗಿಗಳು ತಾವೇ ಕೊಂಡ ಹೊತ್ತಿಸಿದ್ದಾರೆ,
ಹಾಕುತ್ತಿದ್ದಾರೆ ಅದರೊಳಗೆ ಬೊಗಸೆ ಬೊಗಸೆ ಹಸಿರು ಲಿಲ್ಲಿ ಹೂಗಳನ್ನು
ಆನಿಸು ನಿನ್ನ ಹುಬ್ಬುಗಳನ್ನು ಇವಕಿನ್ನಾ ತಂಪಾದ ಕಿಟಕಿ ಗಾಜಿನ ಮೇಲೆ
ಚಂದ್ರರಶ್ಮಿ ಗಂಟೆಯೊಳಗೆ ಮೇಲಿಂದ ಹೋಗುವುದನ್ನೇ ಕಾಯುತ್ತಿರುವಾಗ
ಮುಚ್ಚಿಕೋ ಕಣ್ಣುಗಳನ್ನು ಬಿಗಿಯಾಗಿ, ಕುರುಡಾಗು ಆ ಬಣ್ಣಗಳ ಕಾಡಿಗೆ

ಭಾರವಾದ ನೀಲಿಗೆ ನೇರಳೆಗೆ,
ಕಿವುಡಾಗು ಉಗುರು ಬಿಸಿ ಜಲದ ಮರೆ ಮಾತುಗಳಿಗೆ

ಒಣಗಿಸಿಕೊ ಬಯಕೆಯ ಹುಬ್ಬುಗಳನ್ನು; ಬೆವರಿಂದ ಅವು ಬಳಲಿವೆ.
ಮೊದಲು ಹೋಗು ಮೂರ್ಛೆಯ ಅಂಚಲ್ಲಿ ಇರುವವರ ಕಡೆಗೆ.
ನೆಲಮಾಳಿಗೆಯ ಕರಿಕೋಣೆಯಲ್ಲಿ ಭರ್ಜರಿ ಮದುವೆ ಉಡಾಯಿಸುವವರ ಹಾಗೆ ಅವರು,
ಅಥವಾ ನಡು ಹಗಲೇ ದೀಪ ಉರಿವ ಅಂಡರ್‌ಗ್ರೌಂಡ್ ರಸ್ತೆ ಹೋಗುವವರ ಹಾಗೆ;
ಹಬ್ಬದ ಮೆರವಣಿಗೆಯಲ್ಲಿ ಸಾಗುತ್ತಾರೆ ಅವರು
ಅನಾಥವಾದ ಬಾಲ್ಯದಂಥ ನಾಡಿನ ಮೇಲಾಸಿ
ಹೋಗು ಸಾಯುತಿರುವವರ ಬಳಿಗೆ;
ಅವರು ನಡೆಯುತ್ತಿದ್ದಾರೆ ಉಪವಾಸದ ದಿವಸ ಬಿಸಿಲಿನಲ್ಲಿ ತೀರ ದೂರ ಬಂದ ಕುಮಾರಿಯ ಹಾಗೆ
ಬಿಳುಚಿಕೊಂಡು, ಆಸ್ಪತ್ರೆ ತೋಟದಲ್ಲಿ ಮಳೆ ಸದ್ದು ಆಲಿಸುವ ರೋಗಿಗಳ ಹಾಗೆ;

ಸಾಯದೇ ಬದುಕಿ ಬಂದ ಮುಖದ ಕಳೆಯವರು
ಯುದ್ಧಭೂಮಿ ಮೇಲೆ ನಾಷ್ಟಕ್ಕೆ ಕೂತಿದ್ದಾರೆ;
ತಮ್ಮ ಸೆರೆಮನೆ ಮೇಲ್ವಿಚಾರಕರು ನದಿಯೊಳಗೆ ಮೀಯುತ್ತಿದ್ದಾರೆ
ಎಂದು ತಿಳಿದ ಸೆರೆಯಾಳುಗಳಂತೆ ಅವರು,
ಜೈಲಿನ ತೋಟದಲ್ಲಿ ಜನ ಹುಲ್ಲು ಕೊಚ್ಚುವ ಸದ್ದು ಕೇಳಿಸಿಕೊಂಡವರ ಹಾಗೆ.

---

* *ಕವಿ ತಾನು ಗಾಜಿನ ಗೂಡೊಂದರೊಳಗೆ ಕೂತು ಅದರ ಸಮೇತ ಸಮುದ್ರದೊಳಗೆ ಮುಳುಗಿರುವವನಾಗಿ ಭಾವಿಸಿ ಈ ಕವನ ರಚಿಸಿದ್ದಾನೆ.*

ಪ್ರಾರ್ಥನೆ

ಗೊತ್ತು ನಿನಗೆ, ಪ್ರಭೂ, ನನ್ನ ಆತ್ಮದ ಕ್ಷಾಮ.
ಇಗೋ, ಇಷ್ಟೇ, ನನ್ನ ಕೊಡುಗೆಗಳ ಯೋಗ್ಯತೆ;
ನೆಲದ ಕೇಡು ಎಂಬ ಹೂವುಗಳು,
ಅಳಿದ ವಸ್ತುವಿನ ಮೇಲೆ ಬಿದ್ದ ಬೆಳಕು.

ನೋಡು, ನನ್ನ ಬೇಸತ್ತ, ರೋಗಗ್ರಸ್ತ ಮನಸನ್ನು
ಚಂದ್ರನ ಕರೀಬಣ್ಣ, ಉಷೆಯ ಕೊಲೆ
ನನ್ನ ಏಕಾಕಿತನದ ಮೇಲೆ ಸುರಿ
ನೀನೇ, ಆಗಿ ಫಲ ಕೊಡುವ ಮಳೆ.

ದೀಪಿಸೋ, ಪ್ರಭೂ, ನನ್ನ ಪಾದಗಳ ಕೆಳಗೆ
ನನ್ನ ಸೋತ ಜೀವ ಹಿಡಿಯ ಬೇಕಾದ ಹಾದಿಯನ್ನು;
ನೋವು ತುಂಬಿದೆ ಎಲ್ಲಾ ಸುಂದರ ವಸ್ತುಗಳೊಳಗೆ
ಅಯ್ಯೋ ಪಾಪ, ಕವಿದಂತೆ ಮಂಜುಗಡ್ಡೆ ಹಸಿರು ಹುಲ್ಲನ್ನು

ನೋಟಗಳು

ಓ, ಎಲ್ಲಾ ಸೋತ ನೋಟಗಳು ಪಾಪ!
ಜೊತೆಗೆ ನಿನ್ನ, ನನ್ನ ನೋಟಗಳು!
ಹೊರಟೇ ಹೋದವರ, ಇನ್ನೂ ಬರದವರ ನೋಟಗಳು!
ಎಂದೂ ಇರಲಾಗದ, ಆದರೂ ಜೀವ ಬೆರಸಿದವರ ನೋಟಗಳು!

ದರಿದ್ರರ ಮನೆಗೆ ವಿಶ್ರಾಂತಿ ದಿವಸ ಭೆಟ್ಟಿ ಕೊಟ್ಟಂತೆ ಮಾಡುವವರ ನೋಟಗಳು!
ಅದರಲ್ಲಿ, ಕೆಲವು ಜನ ಮನೆ ಗತಿಯಿಲ್ಲದವರ ಥರ ರೋಗಿಷ್ಟರು!
ಕೆಲವರು ಕುರಿಗಳಂತೆ, ಬಿಳೀ ಬಟ್ಟೆ ಹರಡಿದ ಹುಲ್ಲುಗಾವಲಲ್ಲಿ!
ಆಮೇಲೆ, ಓ, ಆ ವಿಚಿತ್ರ, ಅಪರೂಪದ ನೋಟಗಳು!
ಕೆಲವಕ್ಕೆ ಜಂತೆಗಳ ಕೆಳಗೆ ಕಾಣಿಸುತ್ತೆ-

ಮುಚ್ಚಿದ ಬಾಗಿಲಿನ ಕೋಣೆಯೊಳಗೆ ಒಬ್ಬ ಹುಡುಗಿಯ ಕಗ್ಗೊಲೆ!
ಕೆಲವು ನೋಟಗಳು ತರುತ್ತವೆ ಅರಿವಿನಾಚೆಗಿನ ಶೋಕಗಳ ಸ್ವಪ್ನಗಳನ್ನು;
ಫ್ಯಾಕ್ಟರಿ ಕಿಟಕಿಯಲ್ಲಿ ನಿಂತಿದ್ದ ರೈತರು,
ನೇಕಾರನಾಗಿ ಮಾರ್ಪಟ್ಟ ತೋಟ,
ಮೇಣಶಿಲೆ ವಸ್ತು ಪ್ರದರ್ಶನದ ಬೇಸಿಗೆ ಮಧ್ಯಾಹ್ನ,
ನಂದನದಲ್ಲಿ ರೋಗಿಷ್ಟನನ್ನ ಕಂಡ ರಾಣಿಯ ಮನಸ್ಸು,
ಕಾಡಲ್ಲಿ ಬಂದ ಕರ್ಪೂರ ಗಂಧ
ಸಂತೋಷದ ದಿವಸ ಗೋಪುರದೊಳಗೆ ಹಾಕಲ್ಪಟ್ಟ ರಾಜಕುಮಾರಿ
ಕಾಲುವೆಯ ನಿಂತ ನೀರಿನ ಮೇಲೆ ಇಡೀ ವಾರ ತೇಲಿದ ಜನ.

ಕರುಣೆ ತೋರಿಸು, ಸುಗ್ಗಿ ಹೊತ್ತಲ್ಲಿ ರೋಗ ಸುಧಾರಿಸುತ್ತಿರುವವರ
ಥರ ತೆವಳುತ್ತಾ ಬಂದವರಿಗೆ!
ಕರುಣೆ ತೋರಿಸು, ರಾತ್ರಿ ಊಟದ ಹೊತ್ತಿಗೆ ಸರಿಯಾಗಿ ಹಾದಿ ತಪ್ಪಿದ
ಮಕ್ಕಳ ಹಾಗೆ ಕಾಣುವವರ ಬಗ್ಗೆ!
ಕರುಣೆ ತೋರಿಸು, ಶಸ್ತ್ರವೈದ್ಯನ ಹತ್ತಿರ ಗಾಯಗೊಂಡು
ಬಿರುಗಾಳಿ ಜಾಡಿಸಿದ ಟೆಂಟಿನಂತಾದವರ ಬಗ್ಗೆ!
ಕರುಣೆ ತೋರಿಸು, ಬೇಸ್ತು ಬಿದ್ದ ಕೂಡಗೂಸಿನ ಬಗ್ಗೆ!
(ಕತ್ತಲಲ್ಲಿ ಹರಿದು ಹೋಗುತ್ತಿದೆ ಹಾಲಿನ ನದಿ,
ಸತ್ತಿದ್ದಾನೆ ಹಂಸ, ಸರ್ಪಗಳ ಮಧ್ಯೆ!)
ಅಗೋ, ಅವರು, ಜವುಗು ನೆಲದಲ್ಲಿ ಒಂಟಿಯಾಗಿ ಬಿಡಲಾದ ರಾಜಕುಮಾರಿಯರು!
ಇಗೋ, ಇವರು, ಹಾಲುಗಟ್ಟಿದ ಹಡುಗು ಪೂರ್ತಿ ಕಂಡು,
    ಮಳೆಗಾಳಿ ಮಿಂಚು ಹೊಳಪಿಂದ ಹೊತ್ತಿಸಿದ್ದ ಕಂಗಳವರು!
ಎಷ್ಟು ಅಯ್ಯೋ ಅನಿಸುತ್ತದೆ, ಬೇರೆ ಜಾಗದಲ್ಲಿಲ್ಲವಲ್ಲಾ ಎಂದು
    ಒದ್ದಾಡುವ ಆ ನೋಟಗಳು!
ಈ ಕೆಲವು ನೋಟಗಳಲ್ಲಿ ಆಸ್ಪತ್ರೆ ಮಾಡಿಟ್ಟ ದೊಡ್ಡ ಬಂಗಲೆಯಲ್ಲಿದ್ದೀರ
ಅಂದುಕೋಬಹುದು,
ಇನ್ನು ಕೆಲವು ಇರುತ್ತವೆ, ಆಶ್ರಮದ ಕೈಯಗಲ ಹುಲ್ಲಿನ ಮೇಲೆ

ಯುದ್ಧದ ಲಿಲ್ಲಿ ಹಾಗೆ, ಟೆಂಟುಗಳ ಹಾಗೆ!
ಇನ್ನೂ ಹಲವು, ಬಳ್ಳಿಮಾಡದಲ್ಲಿ ಬೆಳೆಸಿದ ಗಾಯಗೊಂಡ ಮನುಷ್ಯರ ಹಾಗೆ!
ರೋಗಿಗಳು ನಾಪತ್ತೆಯಾದ ಸಾಗರದಲ್ಲಿ ಆಸ್ಪತ್ರೆ ಸಿಸ್ಟರ್‌ಗಳ ಹಾಗೆ!
ಎಂಥಾ ಅನುಭವ, ಇಷ್ಟೊಂದು ನೋಟಗಳನ್ನು ಕಂಡಿದ್ದು,
ಅವುಗಳನ್ನೆಲ್ಲಾ ಬರಮಾಡಿಕೊಂಡಿದ್ದು,
ಹಾಗೆ ಮಾಡಿ, ನನ್ನ ನೋಟವನ್ನೆ ಖಾಲಿ ಮಾಡಿಕೊಂಡಿದ್ದು!
ಜೊತೆಗೆ, ಇನ್ನು ಮೇಲಾದರೂ ನನ್ನ ಕಣ್ಣು ಮುಚ್ಚಿಕೊಳ್ಳುವಂತೆ
ಮಾಡಿಕೊಂಡದ್ದು!

ಬಿಳೀ ಹಕ್ಕಿ

ಸೊಕ್ಕಿನಿಂದ, ಉದಾಸೀನವಾಗಿ, ನಿಧಾನಕ್ಕೆ ಹಾರಿದವೋ
ಮಂಜುಬಣ್ಣದ ಆ ಬಿಳೀ ನವಿಲು, ಆಯಾಸವಾದೀತೆಂದು,
ಮಂಜಿನ ಆ ಹಕ್ಕಿಗಳು, ಇಂದಿನ ಆ ಹಕ್ಕಿಗಳಾ ಕಂಡೆನೋ
ನಿದ್ದೆ ತಿಳಿಯುವ ಮುಂಚೆಯೇ ಹಾರಿ ಹೋದುದನ್ನು

ಸೊಕ್ಕಿನಿಂದ, ಉದಾಸೀನವಾಗಿ, ಸಾವಕಾಶವಾಗಿ ಹಾರಿದವೊ
ಸೂರ್ಯನಿರದ ಸರೋವರದ ದಂಡೆಯ ಕಡೆಗೆ
ಅಜಾಗ್ರತೆಯ ಯೋಚನೆಗಳ ಹಕ್ಕಿಗಳು ಹೋದ ಸದ್ದು ಕೇಳಿಸಿತೋ
ಸೋಂಬೇರಿಯಾಗಿ ಕಾಯುವಾಗ ಸೂರ್ಯನಿರದ ಮುಂಜಾವಿಗೆ

ಮೂರು ಹೊನ್ನಿನ ನಾಣ್ಯಗಳು

ಅವಳ ಬಳಿ ಇದ್ದವು ಮೂರು ಹೊನ್ನಿನ ನಾಣ್ಯಗಳು
ಆ ಮೂರು ಹೊನ್ನ ನಾಣ್ಯಗಳ ಯಾರಿಗವಳು ಕೊಟ್ಟಳು?

ಮೊದಲನೆಯದ ಕೊಟ್ಟಳು ಮುದ್ದು ತಾಯಿತಂದೆಗೆ
ಅದನು ತೆತ್ತು ಕೊಂಡರವರು ಹೊನ್ನ ಕಡ್ಡಿ ಮೂರು;
ಸಲುಹಿದರು ಅವಳನವರು ಚೈತ್ರ ಬರುವವರೆಗೂ

ಎರಡನೆಯದ ಕೊಟ್ಟಳಾ ಮುದ್ದು ಮಾಡುವವರಿಗೆ:
ಅದನು ತೆತ್ತು ಕೊಂಡರವರು ಚಿನ್ನದ ಬಲೆ ಮೂರು,
ಸಲುಹಿದರು ಅವಳನವರು ಸುಗ್ಗಿ ಮುಗಿವವರೆಗೆ

ಮೂರನೆಯದ ಕೊಟ್ಟಳು ತಾನು ಹಡೆದವರಿಗೆ;
ಅದನು ತೆತ್ತು ಕೊಂಡರು ಕಬ್ಬಿಣದ ಬೇಡಿ ಮೂರು
ಕಟ್ಟಿ ಹಾಕಿದರವಳನು ಮಾಗಿ ಮುಗಿವವರೆಗೆ.

ಮೂವತ್ತು ವರ್ಷ ಕಾಲ

ಅಕ್ಕದಿರಾ, ತಂಗಿಯರಾ, ಮೂವತ್ತು ವರ್ಷ ಕಾಲ
ನಾನು ಅವನ ಹುಡುಕಿದೆ;
ಮೂವತ್ತು ವರ್ಷ ಅವನ ಹುಡುಕಿಯೇ ಹುಡುಕಿದೆ,
ಎಲ್ಲೂ ಅವನ ಕಾಣದೆ.

ಮೂವತ್ತು ವರ್ಷ ದಾರಿಯ ತುಳಿದೆ;
ನೀಳ, ಉರಿವ ಆ ದಾರಿ
ಅಕ್ಕದಿರಾ, ತಂಗಿಯರಾ, ಎಲ್ಲೆಲ್ಲೂ ಅವನೆ
ಆದರೂ ಇಲ್ಲ ಅಲ್ಲಿ

ಅಕ್ಕ, ತಂಗಿಯರೆ, ಅಯ್ಯೋ ಹೊತ್ತಾಗಿದೆ
ಹರಿದವು ಈ ಜೋಡು,
ನನ್ನ ಹಾಗೆಯೇ ಸಂಜೆ ಸತ್ತು ಹೋಗಿದೆ
ನನಗೆ ರೋಗ, ಮೃತ್ಯು

ಹದಿನೇಳರ ಹರೆಯದವರೆ, ಹೋಗಿ ನೀವಾದರೂ
ಅವನ ಹುಡುಕ ತನ್ನಿರೆ
ಅಕ್ಕದಿರಾ, ತಂಗಿಯರಾ ಹಿಡಿಯಿರಿ ಈ ದಂಡವನ್ನು
ಹೋಗಿ ಜಗವ ಸೋಸಿರೆ.

ಮೇತರ್‌ಲಿಂಕ್‌ನ ಗದ್ಯ ಕುರಿತು

ಮೇತರ್‌ಲಿಂಕ್‌ನ ನಾಟಕಗಳಷ್ಟೇ ನಾಟಕೇತರ ಕೃತಿಗಳೂ ವೈವಿಧ್ಯಮಯವಾಗಿವೆ. ಆ ನಾಟಕಗಳನ್ನು ಹೇಗೆ ಪ್ರಕಾರಗಳೊಳಗೆ ಸೇರಿಸಲು ಕಷ್ಟವಾಗುವುದೋ ಹಾಗೇ ಅವನ ಗದ್ಯ ಬರಹಗಳನ್ನು ನಿರ್ದಿಷ್ಟ ಪ್ರಕಾರಗಳಾಗಿ ಗುರುತಿಸುವುದು ಪ್ರಯಾಸಕರವಾಗುತ್ತದೆ.

ಮೇತರ್‌ಲಿಂಕ್ ಒಂದು ಕತೆಯನ್ನು ಪ್ರಕಟಿಸಿರುವುದು ವಿದಿತ. ಅದನ್ನು ಹೊರತು ಪಡಿಸಿ, ಇತರೆ ಗದ್ಯಕೃತಿಗಳ ವೈವಿಧ್ಯತೆ ಕುತೂಹಲಕಾರಿಯಾಗಿದೆ. ಆತನ ಗ್ರಂಥಗಳ ಸೂಚಿ (Catalogue) ಮಾಡಿದರೆ ಹೇಗೆ? ೧೯೨೫ರಲ್ಲಿ ಪ್ರಕಟಗೊಂಡ 'ಏನ್‌ಶಿಯಂಟ್ ಈಜಿಪ್ಟ್' ಚರಿತ್ರೆಯ ಪುಸ್ತಕವಾದರೆ, 'ದುಂಬಿಯ ಜೀವನ' (೧೯೩೦), 'ಬಿಳಿ ಇರುವೆಯ ಜೀವನ' (೧೯೩೨), 'ಗೆದ್ದಲು ಹುಳುವಿನ ಜೀವನ' ಗಳು ಜೀವಶಾಸ್ತ್ರಕ್ಕೆ ಸಂಬಂಧಿಸಿದವು; 'ಓಲ್ಡ್ ಫ್ಯಾಷನ್ಡ್ ಹೂವುಗಳು ಮತ್ತು ಬಯಲುಗಾಳಿ', ಸಸ್ಯಶಾಸ್ತ್ರದ ಹೊತ್ತಿಗೆ; 'ಸುಪ್ರೀಂ ಲಾ', ಭೌತಶಾಸ್ತ್ರ, ಗಣಿತ, ಖಗೋಳಶಾಸ್ತ್ರಗಳಿಗೆ ಸಂಬಂಧಿಸಿರುವುದು. 'ದಿ ಗ್ರೇಟ್ ಬಿಯಾಂಡ್' 'ಅವರ್‌ಗ್ಲಾಸ್', 'ವಿಸ್ಡಂ ಅಂಡ್ ಡೆಸ್ಟಿನಿ', 'ದಿ ಟ್ರೆಶರ್ ಆಫ್ ದಿ ಹಂಬಲ್'. ಇತರ ಪುಸ್ತಕಗಳು ಲೇಖಕನ ಅನೇಕ ಜ್ಞಾನ ಶಾಖೆಗಳ ಸಾರಗಳೊಂದಿಗಿನ ಆಲೋಚನೆಗಳ ಬಿಡಿಭಾಗಗಳು; ಇವನ್ನು ಪ್ರಬಂಧ ಎನ್ನಲು ಬಾರದು, ಎನ್ನದಿರಲೂ ಬಾರದು.

ಇಷ್ಟೊಂದು ಜ್ಞಾನ ಶಾಖೆಗಳಿಗೆ ಕೊಡುಗೆ ನೀಡಬಲ್ಲ ಬಹುಮುಖಿ ಮೇತರ್‌ಲಿಂಕ್‌ನ ಮನಸ್ಸು ಇನ್ನೆಷ್ಟು ಉತ್ಕೃಷ್ಟವಾದ್ದಾಗಿರಬೇಕೆಂದು ಆಶ್ಚರ್ಯವಾಗುತ್ತದೆ. ನಾಟಕಗಳನ್ನು ಮಾತ್ರ ಓದಿ, 'ಇವನೇನು ಬರೀ ಪವಾಡ, ಮಾಂತ್ರಿಕತೆಗಳನ್ನು ಬಳಸಿ ನಾಟಕ ಮಾಡಿದ್ದಾನೆ ' ಎಂದು ಅವನ್ನು ತಳ್ಳಿ ಹಾಕಿಬಿಡಬಹುದು. ಆದರೆ ನಾಟಕ ರಚನೆಯ ಹಿಂದಿನ ಮನಸ್ಸಿನ ಪೂರ್ವಸಿದ್ಧತೆ ಯಾವ ಯಾವ ಕ್ಷೇತ್ರಗಳಲ್ಲಿ ಪಳಗಿದೆ ಎಂದು ಗಮನಿಸಿದರೆ, ಇಷ್ಟೆಲ್ಲಾ ಬಲ್ಲವ ಅಷ್ಟು ಸರಳವಾದ, ನೇರವಾದ ಕಾವ್ಯಾತ್ಮಕ ನಾಟಕಗಳನ್ನು ಹೇಗೆ ರಚಿಸಿದ ಎಂದು ಪ್ರಶ್ನಿಸುವಂತಾಗುತ್ತದೆ.

ಮೇತರ್‌ಲಿಂಕ್‌ನ ಬರಹಗಳು ಅವನ ಆಲೋಚನೆಗಳನ್ನು ಮತ್ತು ಅನಿಸಿಕೆಗಳನ್ನು ನೇರಮಾತಿನಲ್ಲಿ ಹೇಳಿದಂತಿವೆ. ಕೆಲವೊಮ್ಮೆ ಒಂದೇ ವಾಕ್ಯದಲ್ಲಿ, ಕೆಲವೊಮ್ಮೆ ನಾಲ್ಕಾರು ಸಾಲುಗಳಲ್ಲಿ ಇದ್ದು, ಮತ್ತೆ ಕೆಲವೊಮ್ಮೆ ಮೂರು ನಾಲ್ಕು ಪುಟಗಳಷ್ಟು ನೀಳವಾಗಿರುತ್ತವೆ. ಹಾಗಾಗಿ ಈ ಬರಹಗಳ ಶೈಲಿಯನ್ನು ಪ್ರಬಂಧ ಎನ್ನಲಾಗದು; ದಿನಚರಿಯೊಂದರಲ್ಲಿ ಸಿಗುವ 'ನೋಟ್ಸ್' ಗಳಂತೆ, ಗಪದ್ಯಗಳಂತೆ ಇವೆ ಎನ್ನಬಹುದು.

ಮೇತರ್‌ಲಿಂಕ್‌ನ ಮನಸ್ಸಿನ ವಿಶೇಷತೆ, ಅವನ ಹೆಸರಿನ ಶಬ್ದಾರ್ಥ ಬಿಡಿಸಿದರೆ ಒಡಪಿನಂತೆ ಹೊಳೆಯುತ್ತದೆ. 'ಮ್ಯಾಟರ್'= ಎಲ್ಲ ವಸ್ತುಗಳ ಮೂಲ; ಲಿಂಕ್=ಸಂಬಂಧ. ಮ್ಯಾಟರ್‌ಲಿಂಕ್‌ನಲ್ಲಿ ಎಲ್ಲ ಜ್ಞಾನಶಾಖೆಗಳ ಜ್ಞಾನ ಪರಸ್ಪರ ಸಂಬಂಧವುಳ್ಳದ್ದಾಗಿದೆ: ಆಧ್ಯಾತ್ಮಿಕ ಸಂದರ್ಭಗಳಲ್ಲಿ ಹೇಳುವ 'ಕಾಲ' ಮತ್ತು 'ಆಕಾಶ' (Time and Space)ಗಳು, ಬಾಹ್ಯಾಕಾಶ ವಿಜ್ಞಾನಗಳ 'ಕಾಲ' ಮತ್ತು 'ಆಕಾಶ' ಗಳಿಗೆ ವ್ಯತಿರಿಕ್ತವಾಗಿಲ್ಲ. 'ರೋಗ ರುಜಿನಗಳು' ಎಂಬ ಪಾತ್ರಧಾರಿಗಳು ಪವಾಡ ನಾಟಕದ ಹೊರಗಿನ ವೈಜ್ಞಾನಿಕ ಜಗತ್ತಿನ ಮೈಕ್ರೋಬ್‌ಗೆ ಸಂಬಂಧಿಸಿದವೇ ಆಗಿರುತ್ತವೆ. ಮೇತರ್‌ಲಿಂಕ್ ಚೈತನ್ಯದ ಕುರಿತು ಮಾತಾಡುವಾಗ ವೈಜ್ಞಾನಿಕ ಸಂಶೋಧನೆಗಳನ್ನು ದೂರ ಮಾಡುವುದಿಲ್ಲ, ವಿರೋಧ ಮಾಡುವುದಿಲ್ಲ; ಹಾಗೇ ವೈಜ್ಞಾನಿಕ ವಿಚಾರಗಳನ್ನು ಕುರಿತು ಮಾತಾಡುವಾಗ ಆಧ್ಯಾತ್ಮ ಹೊರಗುಳಿಯುವುದಿಲ್ಲ.

ಹಾಗಾಗಿ ಮೇತರ್‌ಲಿಂಕನ ಆಲೋಚನಾಕ್ರಮ ಈ ಶತಮಾನದ ಮುಖ್ಯ ವಿಜ್ಞಾನಿಗಳಾದ ಐನ್‌ಸ್ಟೀನ್ ಅಥವಾ ಸ್ಟೀವನ್ ಹಾಕಿಂಗ್‌ರ ಹಾಗೆ ವಿಶ್ವಾತ್ಮಕ ದೃಷ್ಟಿಯುಳ್ಳದ್ದಾಗಿದೆ. ಉದಾಹರಣೆಗಾಗಿ ಕೆಲವು ಭಾಗಗಳನ್ನು ಅನುವಾದಿಸಿ ನೀಡಿದ್ದೇನೆ:

'ನೀಲಿ ಹಕ್ಕಿ' ನಾಟಕದಿಂದ

(ರಾತ್ರಿಯ ಅರಮನೆಯಲ್ಲಿ....)

ಟಿಲ್ಟಿಲ್: *(ಇನ್ನೊಂದು ಬಾಗಿಲ ಬಳಿ ಹೋಗಿ) ಇದರ ಹಿಂದೆ ಏನಿದೆ?*

ರಾತ್ರಿ: *ಏನು ಪ್ರಯೋಜನ ತಿಳಕೊಂಡು? ಆಗಲೇ ಹೇಳಿದೆನಲ್ಲ, ನೀಲಿ ಹಕ್ಕಿ ಇಲ್ಲಿ ಯಾವತ್ತೂ ಬಂದಿಲ್ಲ. ನಿನ್ನಿಷ್ಟ; ಬೇಕಾದರೆ ಬಾಗಿಲು ತೆಗಿ. ಒಳಗಿರೋದು ರೋಗರುಜಿನಗಳು.*

ಟಿಲ್ಟಿಲ್: *(ಕೀಲಿಕೈಯನ್ನು ಬೀಗಕ್ಕೆ ಅಳವಡಿಸುತ್ತ) ತೆಗೀಬೇಕಾದರೆ ಹುಷಾರಾಗಿರಬೇಕಾ?*

ರಾತ್ರಿ: *ಬೇಕಿಲ್ಲ, ಅವರೆಲ್ಲ ಪಾಪದವರು; ಒಂದಿಷ್ಟೂ ಸುಖಿಗಳಲ್ಲ. ಕೆಲಕಾಲದಿಂದ ಮನುಷ್ಯ ಅವುಗಳ ಮೇಲೆ ಎಂಥಾ ಘೋರ ಯುದ್ಧ ಮಾಡುತ್ತಿದ್ದಾನೆ! ಅದೂ ಪರಮಾಣು ರೂಪ ಪ್ರಾಣಿಗಳನ್ನು ಕಂಡು*

ಹಿಡಿದ ಮೇಲಿಂದ! ತೆಗಿ, ನೀನೇ ನೋಡುವಿಯಂತೆ.

(ಟಿಲ್ಟಿಲ್ ಬಾಗಿಲನ್ನು ಸಾಕಷ್ಟು ದೊಡ್ಡದಾಗಿ ತೆರೆಯುತ್ತಾನೆ. ಏನೂ ಆಗುವುದಿಲ್ಲ)

ಟಿಲ್ಟಿಲ್ : ಅವು ಆಚೆ ಬರೋದಿಲ್ವೆ?

ರಾತ್ರಿ: ಹೇಳಿದೆನಲ್ಲ. ಅವುಗಳಲ್ಲಿ ಹೆಚ್ಚಿನವು ಜಡವಾಗಿ ಬಿಟ್ಟಿವೆ, ನಿರುತ್ಸಾಹಗೊಂಡಿವೆ. ವೈದ್ಯರು ಅವುಗಳನ್ನು ಬಹಳ ಕ್ರೂರವಾಗಿ ನಡೆಸಿಕೊಳ್ಳುತ್ತಾರೆ. ಒಂದು ನಿಮಿಷ ಒಳಕ್ಕೆ ಹೋಗಿ ನೀನೇ ನೋಡಿಕೊಂಡು ಬಾ.

'ದಿ ಅವರ್‌ಗ್ಲಾಸ್' ನಿಂದ ಆಯ್ದ ಭಾಗಗಳು:

ನಾನೂ ಯಾವಾಗಲೂ ದ್ವಂದ್ವಗಳಲ್ಲೇ ನುಡಿಯುತ್ತಿರುತ್ತೇನೆ ಎಂದು ನನ್ನ ಮೇಲೆ ಆರೋಪ ಆಗಾಗ್ಗ ಬರುತ್ತಿರುತ್ತದೆ...ನನಗೆ ಏನೂ ಗೊತ್ತಿಲ್ಲವೆಂದು ನಾನಂತೂ ಒಪ್ಪಿಕೊಳ್ಳುತ್ತೇನೆ.... ಅದನ್ನು (ಸತ್ಯವನ್ನು) ಇದುವರೆಗೂ ನಾನಂತೂ ಕಂಡಿಲ್ಲ; ಅದಿಕ್ಕೆ ನಾನಿನ್ನೂ ಅದನ್ನ ಹುಡುಕುತ್ತಿದ್ದೇನೆ, ನನ್ನ ಎಡ-ಬಲಗಳಲ್ಲಿ, ಮುಂದೆ, ಹಿಂದೆ; ಬೆಳಕಿನಲ್ಲಿ, ನೆರಳಿನಲ್ಲಿ.... ಒಂದು ಕ್ಷಣ ಅದು 'ಮ್ಯಾಟರ್' ನಲ್ಲಿ ಜೀವತಾಳಿದೆ ಅನ್ನಿಸುತ್ತೆ, ಇನ್ನೊಂದು ಕ್ಷಣ ಅದು ಚೈತನ್ಯದಲ್ಲಿ ತೋರುವುದೆಂದು ಅನ್ನಿಸುತ್ತೆ. ಇವತ್ತು, 'ಅದು ಆಕಸ್ಮಿಕದಲ್ಲಿ ಅಡಗಿದೆ' ಅನ್ನಿಸುತ್ತೆ; ನಾಳೆ ಒಂದು ಬಗೆಯ ಊಹಾತೀತ ದಲ್ಲಿ ಅದು ಪ್ರತಿಷ್ಠಾಪಿತವಾಗಿದೆ ಅನ್ನಿಸುತ್ತೆ.

** ** **

ದೊಡ್ಡ ದೊಡ್ಡ ಸಂದಿಗ್ಧಗಳ ಮೇಲೆ ರಿಲೆಟಿವಿಟಿ ಏನು ಬೆಳಕು ಚೆಲ್ಲಿದೆ? ಏನೇನೂ ಇಲ್ಲ. ರಿಲೆಟಿವಿಟಿ ಥಿಯರಿಯ ಪ್ರಕಾರ ಎಲ್ಲವೂ ಒಂದು ಜಗತ್ತಿನ ಬಾಗಿದ ರೇಖೆಯ ಮೇಲೆ ಅವಲಂಬಿತವಾಗಿದೆ (ಆ ಜಗತ್ತು ನಮ್ಮ ಅತ್ಯಾಧುನಿಕ ಟೆಲಿಸ್ಕೋಪ್‌ಗಳ ಮೂಲಕ ಕಾಣಬಲ್ಲ ಜಗತ್ತು); ಅದೂ ಮಹಾನ್ ಜಗತ್ತಿನೊಳಗಿನ ಒಂದು ಜಗತ್ತು; ಸರಿಯಾಗಿ ಹೇಳಬೇಕಂದರೆ ಅಪರಿಮಿತ ಜಗತ್ತಿನೊಳಗಿನ ಒಂದು ಜಗತ್ತು; ಅಪರಿಮಿತದ ಬಾಗಿದ ರೇಖೆ ಅನ್ನುವುದೇ ಊಹಿಸಿಕೊಳ್ಳಲಾಗದ ವೈಚಿತ್ರ್ಯ. ನಕ್ಷತ್ರಗಳ ಚಲನೆ, ಎಲ್ಲ ಜೀವಿಗಳ ಚಲನೆಗಳು ಇಂಥ ಅಪರಿಪೂರ್ಣವಾದ ಊಹೆಯಲ್ಲಿ ಮಾತ್ರ ಇರುವ ಬಾಗಿದ ರೇಖೆಯಲ್ಲಿ ಸುಗಮವಾಗಿದೆ. ಅಷ್ಟೇ ಅಲ್ಲ, ಅವುಗಳ ಪಥಗಳನ್ನು ನಿರ್ದಿಷ್ಟಗೊಳಿಸಿರುವುದೂ

ಇವೇ ಬಾಗಿದ ರೇಖೆಗಳು. ಈ ಥಿಯರಿ ನ್ಯೂಟನ್‌ನ ಥಿಯರಿಗಿಂತ ಕಡಿಮೆ ಒಪ್ಪತಕ್ಕದಾಗಿದೆ.

ಇನ್ನು ಜಗತ್ತಿನ ಶಕ್ತಿಯ ಮೂಲವಾದ ಅಣುವಸ್ತು ಕುರಿತು ಮ್ಯಾಥ್‌ಮೆಟಿಕಲ್ ಫಿಸಿಕ್ಸ್‌ನ ಮುಖವಾಣಿಯಾದ ಎಡಿಂಗ್‌ಟನ್ ತನ್ನ ಗಿಫರ್ಡ್ ಲೆಕ್ಚರ್ಸ್‌ನಲ್ಲಿ ಹೇಳುತ್ತಾನೆ: ಅಣು ಕುರಿತ ಥಿಯರಿಯನ್ನು ಹೀಗೆ ಒಟ್ಟು ಮಾಡಿ ಹೇಳಬಹುದು: ಅಣುವಿನೊಳಗೆ ನಮಗೆ ಗೊತ್ತಿಲ್ಲದ 'ಏನೋ ಒಂದು' , ಹೇಗೆಂದು ನಮಗೆ ಗೊತ್ತಿಲ್ಲದ ಏನೋ ಒಂದನ್ನು ಮಾಡುತ್ತದೆ.

** ** **

ನಿಜವಾಗಿಯೂ ಜೀವಂತವಾಗಿರುವ ಕ್ಷಣಗಳೆಂದರೆ ನಾವು ಚಿಂತನೆಯಲ್ಲಿ ತೊಡಗಿದ ಕ್ಷಣಗಳು ಮಾತ್ರ, ಯಾಕೆಂದರೆ ಚಿಂತನೆಯೊಂದೇ ನಮ್ಮ ಜೀವನದ ಸೂಕ್ಷ್ಮವಾದ ಭಾಗ. ಈಗ ಈ ಭೂಮಿಯಲ್ಲಿ ಮನುಷ್ಯನ ವಿಧಿ ದುರಂತವಾಗಿರುವುದರಿಂದ ದುಃಖ, ನೋವು ಸಾವುಗಳಲ್ಲಿ ಕೊನೆಗೊಳ್ಳುವುದರಿಂದ, ಎಲ್ಲ ಚಿಂತನೆಗಳೂ ಅನಿವಾರ್ಯವಾಗಿ ದುಃಖ ಮಯವೇ ಆಗಿರುತ್ತವೆ. ಆದರೂ ಅಮೆರಿಕದ ತತ್ವಜ್ಞಾನಿಯೊಬ್ಬ ಹೇಳಿದ ಹಾಗೆ, ಸಮಾಧಾನಿ ಯಾದ ಹಂದಿಯಾಗಿರುವುದಕ್ಕಿಂತ ಪ್ಲೇಟೋನ ಹಾಗೆ ದುಃಖಿಯಾಗಿರುವುದೇ ಮೇಲು.

** ** **

ಪರಿಪೂರ್ಣತೆ ಎಂದರೇನು? ಅದು ಜಡವಾಗುವುದಿಲ್ಲವೆ, ಅಚರವಾಗುವುದಿಲ್ಲವೆ, ಅದು ಸಾವೇ ಆಗುವುದಿಲ್ಲವೆ ? ಬಹುಶಃ 'ಪರಿಪೂರ್ಣತೆಗಾಗಿ ತುಡಿಯುವುದು' ಎಂದರೆ ಅದೊಂದು ನಮ್ಮ ಮನಸ್ಸಿನ ದುಃಖಕರವಾದ ಅಸ್ಥಿರ ಸ್ಥಿತಿಯಾಗಿರಬಹುದು ಒಂದು ಆದಾಗಿರಬಹುದು.

** ** **

ಮುಂಗಾಣ್ಕೆಗಳಲ್ಲಿ ಭವಿಷ್ಯವು ಭೂತದ ಜೊತೆ ಕಲಸಿ ಹೋಗಿರುವುದನ್ನು ಕಾಣುತ್ತೇವೆ. ಅಂದ ಮೇಲೆ ಭವಿಷ್ಯ ಮತ್ತು ಭೂತಗಳು ನೆರೆ ಹೊರೆಯವೆಂದೂ, ಸಹ ಜೀವಿಗಳೆಂದೂ ಮತ್ತು ಅವು ವರ್ತಮಾನದಲ್ಲಿ ಸಹಬಾಳ್ವೆ ನಡೆಸುತ್ತಿವೆಯೆಂದೂ ಸಾಬೀತಾಗಲಿಲ್ಲವೆ?

** ** **

ನಮ್ಮ ಪೂರ್ವಿಕರ ನೆನಪನ್ನು ಉಳಿಸಿಕೊಳ್ಳುವ ಆ ಅಗೋಚರ ಜೀವಿಗಳು ಅಥವಾ ಕಣಗಳು ಎಂದರೆ ಏನೆಂದು ನನ್ನನ್ನು ಆಗಾಗ್ಗೆ ಪ್ರಶ್ನಿಸುವವರಿದ್ದಾರೆ. ನಾನು ಹೇಳುತ್ತಿರುವುದು ಪೀಳಿಗೆಗೆ ಸಂಬಂಧಿಸಿದ ಗಂಡು ಹಾಗೂ ಹೆಣ್ಣುಗಳಲ್ಲಿ ಅಡಗಿರುವ ನಿಗೂಢವಾದ ಜೀವಕಣಗಳ ವಿಷಯ: ಕ್ರೋಮೋಜೋಮ್ಸ್ ಅನ್ನಿ, ಏನಾದರೂ ಅನ್ನಿ. ಜಾನ್ ರೋಸ್ಟಾಂ ಪ್ರಕಾರ ಇವು ವಂಶಪರಂಪರೆಯ ನಿರ್ದಿಷ್ಟ ಬಿಂದುಗಳು. ಅವು ನಮಗೆ ಅತಿ ದೂರದ ನಮ್ಮ ಪೂರ್ವಿಕರಿಂದಲೂ ನಮ್ಮೊಳಗೆ ಬಂದಿವೆ; ನಮ್ಮಿಂದಾಗಿ ಮುಂದಿನ ಅತಿದೂರದ ನಮ್ಮ ಸಂತತಿಯೊಳಗೂ ಇರುತ್ತವೆ. ಅವನ್ನೇ ಬಹುಶಃ ಜನ ಆತ್ಮಗಳು ಎಂದು ಕರೆದಿರಬೇಕು. ಆದರೆ ಅವು ಇನ್ನು ಅಗೋಚರವಾದ ಅಥವಾ ಪೂರ್ವಸೈದ್ಧಾಂತಿಕವಾದ ಆತ್ಮಗಳೇನಲ್ಲ. ಸೂಕ್ಷ್ಮದರ್ಶಕಗಳು ಅವನ್ನು ಈಗೀಗ ನೋಡಬಲ್ಲವಾದ ಮಾತ್ರಕ್ಕೆ ಅವುಗಳ 'ಆಧ್ಯಾತ್ಮಿಕತೆ' ಕಡಿಮೆಯಾಯ್ತು ಅನ್ನಲಾದೀತೆ? ನಿಗೂಢವೊಂದಕ್ಕೆ ಉಸಿರು ಎಂದು ಹೆಸರು ಕೊಟ್ಟ ಮಾತ್ರಕ್ಕೆ ಅದು ಕಡಿಮೆ ಆಧ್ಯಾತ್ಮಿಕ ಅನಿಸೀತೆ?

ಆ ಕಣಗಳಲ್ಲಿ ನಮ್ಮ ಹಿಂದಿನವರ ಎಲ್ಲ ಅನುಭವಗಳು, ಎಲ್ಲ ಗುಣಗಳು, ಅವಗುಣಗಳು, ಶಾರೀರಕ ಮತ್ತು ನೈತಿಕ ಗುಣಗಳು ಕೂಡಿರುತ್ತವೆ; ನಮ್ಮ ಮುಂದಿನವರ ಕಣಗಳಲ್ಲೂ ಅವು ಮುಂದುವರೆಯುತ್ತವೆ. ನಮ್ಮೊಳಗೆ ಇರುವ ಎಲ್ಲ ಪೂರ್ವಿಕರ ಸಂಕೇತ ಅದಾಗಿರುತ್ತದೆ; ಹಾಗೇ ನಮ್ಮ ಮುಂದಿನ ಪೀಳಿಗೆಯವರ ಸಂಕೇತವೂ ಅದಾಗಿರುತ್ತದೆ. ಮಾನವ ಜನಾಂಗದ ಇಡಿಯ ಭೂತವನ್ನು, ಇಡಿಯ ಭವಿಷ್ಯವನ್ನು ಅವು ಪ್ರತಿನಿಧಿಸುತ್ತವೆ. ಅವುಗಳಿಗೆ ಪ್ರತಿಯೊಬ್ಬನೂ ತನ್ನ ವೈಯಕ್ತಿಕ ನೆನಪುಗಳನ್ನು ಸೇರಿಸುತ್ತಾನೆ. ಈ ಜೀವಕಣಗಳ ಲೆಕ್ಕದಲ್ಲಿ ನಾವುಗಳು ಒಂದು ಕ್ಷಣ ಬಂದು ಹೋಗುವವರು ಮಾತ್ರ; ಅವು ಮಾತ್ರ ಭೂಮಿ ಇರುವವರೆಗೂ ಮುಂದುವರೆದಿರುತ್ತವೆ. ನಾವು ಒಂದು ವೇಳೆ ಮುಂದಿನ ಜನಾಂಗ ಸೃಷ್ಟಿಮಾಡದೆ ಸತ್ತರೆ ಆಗ ಅವು ಸಾಯುತ್ತವೆ. ಚರಿತ್ರೆಯಲ್ಲಿ ಚರಿತ್ರೆಪೂರ್ವದ ಕಾಲವನ್ನು ಮತ್ತು ಮನುಷ್ಯನ ಭವಿಷ್ಯದ ಚರಿತ್ರೆಯನ್ನು -ಇವೆರಡನ್ನೂ ಅವು ತುಂಬಿಕೊಂಡಿವೆ.

ಇದೇ ಸಂದರ್ಭದಲ್ಲಿ ಇನ್ನೊಂದು ಮಾತನ್ನು ನಾವು ಗಮನದಲ್ಲಿಟ್ಟುಕೊಳ್ಳಬೇಕು; ಮೇಲೆ ಹೇಳಿದ ವಿಷಯ ಮನುಷ್ಯನಿಗೆ ಮಾತ್ರ ಸೀಮಿತವಾದದ್ದಲ್ಲ ; ಈ ಪ್ರಪಂಚದ ಪ್ರತೀ ಜೀವಿಗೂ ಇದು ಅನ್ವಯವಾಗುವುದು. ಸುಮಾರು ೨೦ ವರ್ಷಗಳ ಹಿಂದೆ ನಮ್ಮ ಜೀವವನ್ನು ಮುನ್ನಡೆಸುವ ಅಗೋಚರ ಜೀವಿಗಳನ್ನು ರಂಗದ ಮೇಲೆ ತರುವ ಪ್ರಯತ್ನ

ಮಾಡಿದ 'ನೀಲಿಹಕ್ಕಿ' ನಾಟಕದ ಮುಂದುವರಿದ ಯಕ್ಷಿ ನಾಟಕ 'ಲಗ್ನ ನಿಶ್ಚಯ' ದಲ್ಲಿ. ಇದು ಇಂಗ್ಲೆಂಡ್ ಮತ್ತು ಅಮೆರಿಕಾಗಳಲ್ಲಿ ಪ್ರದರ್ಶನ ಕಂಡಿದೆ.

(ಸಂಬಂಧಿಸಿದ ಭಾಗವನ್ನು ಹೊತ್ತಿಗೆಯ ಮತ್ತೊಂದುಕಡೆ ಕೊಡಲಾಗಿದೆ)

** ** **

ಆಸ್ತಿಕನ ಆತ್ಮಕ್ಕೂ, ನಾಸ್ತಿಕನ ನೆನಪಿಗೂ ನಡುವೆ ಇರುವ ಅಂತರ ನಾವಂದು ಕೊಂಡಷ್ಟು ಹೆಚ್ಚಿಗೆಯೇನಲ್ಲ- ಅವರಿಬ್ಬರೂ ತೊಟ್ಟ ಬಟ್ಟೆ ಬೇರೆ ಬೇರೆ ಇರಬಹುದು, ಅಷ್ಟೇ!

** ** **

ಆತ್ಮವನ್ನೇ ದೇವರೆನ್ನಿ, ದೇವರನ್ನೇ ಆತ್ಮವೆನ್ನಿ. ಅವೆರಡೂ ಬೃಹತ್ ಅಜ್ಞಾತಗಳು ಪರ್ಯಾಯ ಪದಗಳೇ ಆಗಿವೆ.

** ** **

ಆಕಾಶ ಮತ್ತು ಕಾಲ - ಇವೆರಡೂ ಭಗವಂತನ ಸಹಭಾವ. ಇವೆರಡರ ಸಹಾಯ ದಿಂದ ಮಾತ್ರವೇ ನಾವು ವಿಶ್ವಾತ್ಮಕ ಸಹಭಾವ ಕುರಿತ ಒಂದು ಸ್ವರೂಪ ರಚಿಸಿಕೊಳ್ಳುವುದು ಸಾಧ್ಯವಾಗಿದೆ. ಆತ ಆಕಾಶ, ಕಾಲಗಳ ಕೇಂದ್ರ ಮಾತ್ರವಲ್ಲ, ಆತನೇ ಆಕಾಶ ಮತ್ತು ಕಾಲ; ಆತನೇ ಅತೀತ, ಅನಾದಿ. ಇನ್ನಾವುದೇ ರೂಪದಲ್ಲಿ ಆತನನ್ನು ಊಹಿಸಿಕೊಳ್ಳುವುದು ಸಾಧ್ಯವಿಲ್ಲ.

** ** **

ನಮ್ಮೊಳಗಿರುವ ನಮ್ಮ ಸತ್ತ ಪೂರ್ವಿಕರ ಜೀವನವೆಂದರೆ ನಮ್ಮ ಮನಸ್ಸಿನ ಗುಪ್ತ ಆಳಗಳಿಂದ ಅಗೋಚರ ಕಿರಣಗಳ ಮೂಲಕ ತೆಗೆದ ಚಿತ್ರಗಳ ನೆಗಟಿವ್ ಇದ್ದ ಹಾಗೆ. ಹುಟ್ಟಲಿರುವವರದು ಇನ್ನೊಂದು ನೆಗೆಟಿವ್.

ಆದರೆ, ಇನ್ನೊಂದು ಲೋಕವೆನ್ನುವುದು ಇದೆಯಾ? ಯಾಕಿರಬಾರದು? ಅದು ನಮಗೆ ಗೋಚರವಾಗದ ಲೋಕವಿರಬಹುದು; ನಾವು ಅದನ್ನು ನೋಡಿಲ್ಲವೆಂದಾಕ್ಷಣ, ಅದು ಇಲ್ಲವೇ ಇಲ್ಲ ಎನ್ನಲು ಬರುವುದಿಲ್ಲ.

** ** **

ಪ್ರತಿಭಾಶಾಲಿಯಾದವನ ಘನತೆ ಇರುವುದು, ಎಲ್ಲಕ್ಕಿಂತ ಹೆಚ್ಚಾಗಿ, ಪಿಸುಮಾತಾಡುತ್ತಿರುವ ತನ್ನ ಪೂರ್ವಿಕರ ಮತ್ತು ತನ್ನ ಮುಂದಿನವರ ದನಿಗಳನ್ನು ಕೇಳುವುದರಲ್ಲಿ.

** ** **

ನಾವು ಸತ್ತ ಕ್ಷಣದಿಂದ ನಮ್ಮನ್ನು ಜಗತ್ತಿನಿಂದ ಇನ್ನೆಂದಿಗೂ ಬೇರ್ಪಡಿಸಲಾಗುವುದಿಲ್ಲ.

** ** **

ಕಾಲಕ್ಕಿಂತ ಹಿಂದೆ ಏನಿತ್ತು ಎಂದು ಯಾರಾದರೂ ತಲೆಕೆಡಿಸಿಕೊಂಡಿದ್ದಾರಾ? ಶೂನ್ಯಕ್ಕೆ ಮುಂಚೆ ಯಾವ ಶೂನ್ಯವಿತ್ತು ಎನ್ನುವ ಪ್ರಶ್ನೆಯಂತೆ ಅದು; ಇಲ್ಲದಿರುವಿಕೆಗೆ ಮುಂಚೆ ಯಾವ ಇಲ್ಲದಿರುವಿಕೆ ಎನ್ನುವಂತೆ. 'ಏನೂ ಇಲ್ಲದಲ್ಲಿ' 'ಏನಾದರೂ' ಹೇಗೆ ಅಸ್ತಿತ್ವಕ್ಕೆ ಬಂತು? ಯಾಕಂದರೆ, ಏನೂ ಇಲ್ಲದ್ದು ಅನ್ನುವುದೇ 'ಏನಾದರೂ' ಆಗಿದ್ದೀತು.

** ** **

ಹಾಗೆ ನೋಡಿದರೆ ನಾವು ಬದುಕಿರುವುದು ಒಂದೇ ದಿನ, ಅದು ಯಾವ ದಿನವಾದರೂ ಒಂದೇ ದಿನ. ಈ ಭೂಮಿಯ ಮೇಲೆ ಹತ್ತು ಸಾವಿರ ದಿನಗಳನ್ನು ಕಳೆದರೂ ಒಂದೇ, ಇಪ್ಪತ್ತೈದು ಸಾವಿರ ದಿನಗಳನ್ನು ಕಳೆದರೂ ಒಂದೇ. ವುಡ್‌ಲೌಸ್ ಎಂಬ ಹುಳ ಹತ್ತು ಗಜವಾದರೂ ಕ್ರಮಿಸಲಿ ಇಪ್ಪತ್ತೈದು ಗಜವಾದರೂ ಕ್ರಮಿಸಲಿ, ಅದು ಕಡೆಗೆ ಅನುಭವಿಸುವುದು ವುಡ್‌ಲೌಸ್ ಹುಳುವಿನ ಸುಖ-ದುಃಖಗಳನ್ನು ಮಾತ್ರವೇ.

** ** **

ಆಕಾಶದ ಒತ್ತಡದಿಂದಾಗಿ ಆಕಾಶದ ಎಲ್ಲ ವಸ್ತುಗಳೂ ಗುಂಡಾಗಿರುತ್ತವೆ.

** ** **

ಚಲನೆ, ಆಕಾಶ, ವಸ್ತು-ಇವೆಲ್ಲಾ ಒಂದೇ. ಪವಿತ್ರವಾದ ಟ್ರನಿಟಿ (ಕ್ರಿಶ್ಚಿಯನ್‌ತ್ರಿಮೂರ್ತಿಗಳು) ಗಳ ಹಾಗೆ ಸಹಬಾಳ್ವೆ ಮಾಡುತ್ತಿರುವರು. ಆದ್ದರಿಂದಲೇ ಕೆಲವು Transmission ಗಳ ಶೀಘ್ರಗತಿಯು ಅರ್ಥವಾಗುವುದಿಲ್ಲ.

** ** **

ಹೊಸ ಪೂರ್ವಸಿದ್ಧಾಂತದ ಪ್ರಕಾರ ಆಕರ್ಷಣೆ ಎಂಬದೂ ಇಲ್ಲ, ಒತ್ತಡ ಎಂಬುದೂ ಇಲ್ಲ. ಇರುವುದು ವಿಶ್ವಾತ್ಮಕ ಪರಿಚಲನೆ (Universal projection) ಮಾತ್ರ. ಮೂಲ ಕಾರಣಗಳಿಗೆ ಹುಡುಕಿದರೆ ಅದೂ ಸಹ 'ಘನ'ಕ್ಕೆ ಪ್ರಧಾನ ಪಾತ್ರ ನೀಡುವುದಿಲ್ಲ; ಆದರೆ ಚಲನೆಯೇ ಘನದ ಮೂಲವೆಂದು ಎತ್ತಿ ಹಿಡಿಯುತ್ತದೆ. ತನ್ನ 'ಥಿಯರೀ ಡೆಲ್ ಇನರ್ಟಿಯ ಇಂಟರ್‌ಯೂನಿವರ್ಸೆಲ್ಲೆ' ಯಲ್ಲಿ ಜಾರ್ಜಸ್ ಬೊನ್ನೇಲ್ ಹೇಳುತ್ತಾನೆ: "ಕೇಂದ್ರ ಮುಖೀ ಮತ್ತು ಕೇಂದ್ರಪರಾಙ್ಮುಖೀ ನಿಶ್ಚಲತೆಗಳ ನಡುವಿನ ಅಂತರ ಕೇವಲ ಪ್ರಮಾಣದ್ದು. ಇದೇ ರೀತಿಯ ಸಂಬಂಧ ಕೇಂದ್ರದ ಕಡೆಗಿನ ಮತ್ತು ವಿರುದ್ಧ ದಿಕ್ಕಿನ ಮುಂಚಲನೆಗಳ ಸಂಬಂಧ. ಈಗ ನಾವು ಭೂಮಿಯ ವೇಗವನ್ನು ಹೆಚ್ಚಿಸಿ ನೋಡೋಣ. ಈಗ ಭೂಮಿಯ ಗುರುತ್ವ ಬದಲಾಗುತ್ತದೆ; ವೇಗವು co-efficient ೧೭ನ್ನು ಮುಟ್ಟಿತೆಂದರೆ ಕೇಂದ್ರೋದ್ದೇಶಿತ ಇನರ್ಷಿಯಾ, ಕೇಂದ್ರಾಭಿಮುಖ ಇನರ್ಷಿಯಾ ಆಗಿ ಮಾರ್ಪಡುತ್ತದೆ. ಆಗ ಜಗತ್ತು ಛಿದ್ರಛಿದ್ರವಾಗಿ ನಾಶವಾಗುತ್ತದೆ".

ಹೌದು, ಆದರೆ ಈ ಸಿದ್ಧಾಂತದ ಸತ್ಯಾಸತ್ಯತೆ ತಿಳಿದುಕೊಳ್ಳಲೆಂದು ಭೂಮಿಯ ವೇಗವನ್ನು ಹೆಚ್ಚಿಸಲು ನಮಗ್ಯಾವ ಹಕ್ಕಿದೆ? ಇಲ್ಲಾಂದರೆ, ಈ ಜಗತ್ತಿನ ನಕ್ಷತ್ರಗಳ ತಿರುಗಾಟದ ವೇಗವು ತಮ್ಮ ಕೇಂದ್ರೋದ್ದೇಶಿತ ವೇಗಕ್ಕೆ ಸಮನಾಗಿಯೇ ಇದೆ ಎಂದೂ, ಹಾಗಿಲ್ಲದ ನಕ್ಷತ್ರಗಳೆಲ್ಲ ಆಕಾಶದಲ್ಲಿ ಚದುರಿಹೋಗಿಬಿಟ್ಟವ ಎಂದು ನಂಬಿಕೊಂಡು ಇರೋಣವೆ. ಎಲ್ಲ ಥರದ ಆವರ್ತನಗಳೂ ಕೇಂದ್ರಾಭಿಮುಖವೇ ಅಲ್ಲವೆ? ಘನದಿಂದ ಅಲ್ಲದಿದ್ದರೆ ಈ ಕೇಂದ್ರೋದ್ದೇಶಿತ ಶಕ್ತಿ ಎಲ್ಲಿಂದ ಬಂತು? ಮತ್ತೆ ನಾವು 'ಆಕರ್ಷಣೆ' ವಿಚಾರಕ್ಕೇ ಬಂದವಲ್ಲ.

** **

ಹಾಗಾದರೆ ಕಣ್ಣಿಗೆ ಕಾಣುವ ಜಗತ್ತಿನಲ್ಲಿ ಕೇಂದ್ರೋದ್ದೇಶಿತ, ಕೇಂದ್ರಾಭಿಮುಖ ಶಕ್ತಿಗಳನ್ನು ಒಂದೇ ಸಲಕ್ಕೆ ಸಮಮಾಡಿ ನಿಲ್ಲಿಸಿರುವವರು ಯಾರು? ಈ ಸಮತೋಲ ವಿಲ್ಲದಿದ್ದರೆ ನಾವು ನೋಡುತ್ತಿರುವ ಈ ಜಗತ್ತಿನಲ್ಲಿ ಉಳಿದಿರುತ್ತಿತ್ತಾದರೂ ಏನು?

** ** **

ಆಸ್ತಿಕರಿಗೆ ಅರ್ಥವಿಲ್ಲದ ವಿಚಾರ ಬಿಟ್ಟರೆ ಹೇಳಲು ಇನ್ನೇನೂ ಇಲ್ಲ: ಆದರೆ ನಾಸ್ತಿಕರಲ್ಲಿ ಉತ್ತಮೋತ್ತಮನಾದವನಿಗೂ ನಮ್ಮೊಂದಿಗೆ ಮಾತಾಡಲು ಏನೂ ಇರುವುದಿಲ್ಲ.

** ** **

'ಮೌಂಟೇನ್ ಪಾಥ್ಸ್' ನಿಂದ ಆಯ್ದ ಭಾಗ

ರಾಷ್ಟ್ರದ ಆತ್ಮ : ದೇಶಕ್ಕೆ ತಾನೆಂದರೆ ಏನು ಎಂದು ಗೊತ್ತಿಲ್ಲ; ತನ್ನ ಕೆಲಸ ಕಾರ್ಯದಿಂದಾಗಿಯೇ ತಾನು ಉದ್ವಿಗ್ನತೆಯ ಸ್ಥಿತಿಯಲ್ಲಿ ಮುಳುಗಬೇಕಾಯ್ತು ಎಂದು ಗೊತ್ತಿಲ್ಲ; ಚರಿತ್ರೆಯೇ ದೀರ್ಘವಾದ ಅಥವಾ ಸಂಕ್ಷಿಪ್ತವಾಗಿ ಬಿಡಿಸಿ ಹೇಳದ ಹೊರತು ಅದರಿಂದ ಹೊರಬರುವ ಮಾರ್ಗವೂ ಅದಕ್ಕೆ ಗೊತ್ತಿರುವುದಿಲ್ಲ; ಇದು ಸ್ವಾಭಾವಿಕವೇ. ಅದೇ ರೀತಿ ರಾಷ್ಟ್ರವನ್ನು ಕಟ್ಟಿದ ಮನುಷ್ಯರಿಗೊ ತಮ್ಮ ಅರಿವು ಇರುವುದಿಲ್ಲ ; ಇನ್ನು ಇತರರ ಬಗ್ಗೆ ತಿಳಿದವರು ಯಾರಿದ್ದಾರು? ನಮ್ಮಲ್ಲಿ ಯಾರೊಬ್ಬನಿಗೂ ತಾನು ಯಾರು, ಆಕಸ್ಮಿಕ ಸಂದರ್ಭದಲ್ಲಿ ತಾನು ಹೇಗೆ ನಡಕೊಳ್ಳುತ್ತೇನೆ (ಆಕಸ್ಮಿಕಗಳೆಂದರೆ ಜೀವನದ ಯಾಂತ್ರಿಕತೆಗಿಂತ ಒಂದಿಷ್ಟು ಜಾಸ್ತಿ ಗಂಭೀರವಾದ ಸಂದರ್ಭಗಳು) ಎಂದು ಗೊತ್ತಿಲ್ಲ. ಪ್ರಶ್ನೆ ಮಾಡುವುದರಲ್ಲಿ, ನಮ್ಮನ್ನು ನಾವು ಹುಡುಕಿಕೊಳ್ಳುವುದರಲ್ಲಿ ನಾವು ನಮ್ಮ ಅಸ್ತಿತ್ವವನ್ನೇ ಕಳೆಯುತ್ತೇವೆ. ನಾವು ಮಾಡುವ ಕ್ರಿಯೆಗಳು ಇತರರಿಗೆ ಎಷ್ಟು ಸೋಜಿಗವೋ ನಮಗೂ ಅಷ್ಟೇ ಸೋಜಿಗ ಉಂಟು ಮಾಡುತ್ತವೆ. ಸಾವಿಗೆ ಹತ್ತಿರವಾದಷ್ಟೂ ನಾವು ಕಂಡುಕೊಂಡಿಲ್ಲದ ಆ ನಿಗೂಢದಿಂದ ದೂರವೇ ಉಳಿದಿರುತ್ತೇವೆ. ನಮ್ಮತನದಲ್ಲಿ ಬಹಳ ಕಡಿಮೆ ಅಂಶ ಮಾತ್ರ ನಿಜವಾಗಿಯೂ ನಮ್ಮದಾಗಿದೆ; ಉಳಿದದ್ದು, ಹೆಚ್ಚೂ ಕಮ್ಮಿ ಇಡಿಯಾಗಿ ಎಲ್ಲವೂ, ನಮ್ಮದಲ್ಲವೇ ಅಲ್ಲ; ಅದು ಭೂತಕ್ಕೂ ಭವಿಷ್ಯಕ್ಕೂ ಸೇರಿಕೊಳ್ಳುತ್ತದೆ. ಭೂತ ಭವಿಷ್ಯಕ್ಕಿಂತ ನಿಗೂಢವಾದುದರೊಂದಿಗೆ ಸೇರಿಕೊಳ್ಳುತ್ತವೆ.

ಪ್ರತಿ ವ್ಯಕ್ತಿಯ ವಿಷಯದಲ್ಲಿ ನಿಜವೆನಿಸಿಕೊಂಡ ಅಂಶ ಇಂಥ ಮಿಲಿಯಗಟ್ಟಲೆ ಜನರಿಂದಾದ ರಾಷ್ಟ್ರದ ವಿಷಯದಲ್ಲೂ ನಿಜವೇ. ಒಂದು ಮಾನವ ಜೀವನವನ್ನು ಮೀರಿ ಕೊಂಡಿರುವ ಭೂತ ಮತ್ತು ಭವಿಷ್ಯವನ್ನು ರಾಷ್ಟ್ರ ಪ್ರತಿಬಿಂಬಿಸುತ್ತದೆ. ಒಂದು ರಾಷ್ಟ್ರವು ತನ್ನ ಸತ್ತ ಪ್ರಜೆಗಳಿಂದಲೇ ಇಂದಿಗೂ ಮುನ್ನಡೆಯುತ್ತಿರುತ್ತದೆ ಎಂಬುದನ್ನು ನಾವು ಒಪ್ಪುತ್ತೇವೆ; ಅಷ್ಟೇ ಯಾಕೆ, ಅದನ್ನ ಪುನಃ ಪುನಃ ಹೇಳುತ್ತಿರುತ್ತೇವೆ. ಸಾಮಾನ್ಯವಾಗಿ ಇರುವ ನಂಬಿಕೆಗೆ ವಿರುದ್ಧವಾಗಿ ವ್ಯಕ್ತಿಗಳು ಸತ್ತನಂತರ ಮೊದಲಿಗಿಂತ ಹೆಚ್ಚು ಸಕ್ರಿಯ ಪಾತ್ರ ವಹಿಸುತ್ತಾರೆ ಎಂಬುದು ಖಂಡಿತ. ಅದಕ್ಕೆ ಗೊತ್ತಿಲ್ಲದಂತೆ ರಾಷ್ಟ್ರವನ್ನು ನಿಗ್ರಹಿಸುತ್ತಾರೆ. ಕಾಲದ ಮುಂಬರುವ ತುದಿಯಲ್ಲಿ ಇಂದಿನ ಮಟ್ಟಕ್ಕೆ ಇನ್ನೂ ಹುಟ್ಟಿಲ್ಲದವರು, ತನ್ನೊಳಗೆ ಮಾಡಿಕೊಂಡಿರುವ ಸತ್ತಿರುವವರು- ಇವರೆಲ್ಲ ರಾಷ್ಟ್ರದ ಪ್ರಮುಖ ನಿರ್ಧಾರಗಳಲ್ಲಿ ಪಾತ್ರ ವಹಿಸುತ್ತಾರೆ ಎಂದು ಕಂಡು ಬರುತ್ತದೆ. ಆದರೆ ಸದ್ಯಕ್ಕೆ, ಅದು ಜೀವಂತವಾಗಿದ್ದು, ಭೂಮಿಯ ಮೇಲೆ ಕೆಲಸಕಾರ್ಯಗಳಲ್ಲಿ ತೊಡಗಿರುವಾಗ ಇಲ್ಲದವರ ಶಕ್ತಿ ಮತ್ತು ಇನ್ನೂ ಆಗಿಲ್ಲದವರ ಶಕ್ತಿಗಳು ಮಾತ್ರವಲ್ಲದೆ, ರಾಷ್ಟ್ರದ ಆಚೆಗಿನ ತನ್ನ ಶರೀರ ಬುದ್ಧಿಗಳಾಚೆಗಿನ ಶಕ್ತಿಗಳು ಪ್ರಭಾವ ಬೀರುತ್ತಿರುತ್ತವೆ; ಅವುಗಳು ಇನ್ನೂ ತಮ್ಮ ಸ್ಥಾನಗಳನ್ನು ಕಂಡುಕೊಂಡಿಲ್ಲ ; ರಾಷ್ಟ್ರದ ಜೊತೆ ಯಾವಾಗಲೂ ಒಂದೇ ಪ್ರಮಾಣದಲ್ಲಿ ಕೈಮಿಲಾಯಿಸಿಲ್ಲ; ಆದರೂ ರಾಷ್ಟ್ರ ಅಂತರಂಗದೊಳಗೇ ಇವೆ; ರಾಷ್ಟ್ರದ ಅವಿಭಾಜ್ಯ ಅಂಗಗಳಷ್ಟೆ ಶಕ್ತವಾಗಿ ರಾಷ್ಟ್ರವನ್ನು ಮುನ್ನಡೆಸುತ್ತಿರುತ್ತವೆ. ನಮ್ಮ ಶರೀರವನ್ನು ಪ್ರತ್ಯೇಕವಾಗಿ ಗಮನಿಸಿದರೆ, ಇದರಲ್ಲಿ ಇರುವುದಕ್ಕಿಂತ ಇಲ್ಲದಿರುವ ವಿವರಗಳನ್ನು ಕಂಡು ಆಶ್ಚರ್ಯವಾಗುತ್ತದೆ. ನಮ್ಮ ಅಸ್ತಿತ್ವದಲ್ಲಿ ಅತಿ ಶಕ್ತವಾದ ಅಂಗ ಅನಿಸಿಕೊಂಡಿದ್ದು ಶರೀರಕ್ಕೆ ಸೇರಿಲ್ಲದ ಸೀಮೆಯಲ್ಲೇ ಇರುತ್ತವೆ! ಅದು ಪ್ರತಿದಿನ ಹೆಚ್ಚು ಹೆಚ್ಚು ಶಕ್ತವಾಗಿ ವೃದ್ಧಿಯಾಗುತ್ತಿರುತ್ತದೆ ಎನ್ನುವುದನ್ನು, ನಾವು ಒಂದು ಶಬ್ದದಿಂದ ಮಾತ್ರ ಅಸ್ತಿತ್ವಕ್ಕೆ ಬರುವುದಿಲ್ಲ, ಸಾಯುವುದಿಲ್ಲ ಎನ್ನುವುದನ್ನು ನಾವು ಪೂರ್ಣಸ್ವರೂಪದ ಅವತಾರಗಳಾಗಿಲ್ಲ ಎನ್ನುವುದನ್ನು, ನಮ್ಮ ದೇಹ ನಮ್ಮದಲ್ಲದ ವಸ್ತುವನ್ನೇ ಹೆಚ್ಚಾಗಿ ಒಳಗೊಂಡಿರುತ್ತದೆ ಎನ್ನುವುದನ್ನು ನಾವು ಮರೆಯಬಾರದು. ಇವೇ, ಹೀಗೆ ಗಾಳಿಯಲ್ಲಿ ಆಡುತ್ತಿರುವ ಇವೇ ಶಕ್ತಿಗಳು ಒಂದಾಗಿ ರಾಷ್ಟ್ರದ ಜನತೆಯ 'ಆತ್ಮ' ವೆಂದಾಗುತ್ತದೆ ; ಇದೇ ಹೆಚ್ಚು ಗಹನವಾಗಿದ್ದು ಎಣಿಕೆಗೆ ಸಿಗುವ ಶರೀರ-ಆತ್ಮಗಳಿಗಿಂತಲೂ ಹೆಚ್ಚಿನ ಸಂಖ್ಯೆಯಲ್ಲಿರುತ್ತದೆ. ದೈನಂದಿನ ಬದುಕಿನ ಕ್ಷುಲ್ಲಕ ಸಂದರ್ಭಗಳಲ್ಲಿ ಅವು ತಮ್ಮ ಇರುವಿಕೆಯನ್ನು ತೋರಿಸುವುದಿಲ್ಲ, ಯಾಕಂದರೆ ಅಂಥ ಸಂದರ್ಭಗಳಲ್ಲಿ ರಾಷ್ಟ್ರ ಸುಭದ್ರವಾಗಿರುತ್ತದೆ. ಆದರೆ ಆ ಶಕ್ತಿಗಳು ಒಗ್ಗೂಡಿ ತಮ್ಮ ಸಾಮರ್ಥ್ಯಗಳನ್ನು ಮೆರೆಯುವುದು ರಾಷ್ಟ್ರದ ವಿಧಿಯೂ ಗಂಭೀರವಾದ ಅಥವಾ

ದುರಂತಮಯ ಸನ್ನಿವೇಶದಲ್ಲಿ ಸಿಲುಕಿದಾಗ. ಆಗ ಚರಿತ್ರೆ ತನ್ನಲ್ಲಿ ದಾಖಲು ಮಾಡಿಕೊಳ್ಳುವಂತಹ ನಿರ್ಧಾರಗಳನ್ನು ಅವು ನೀಡುತ್ತವೆ ; ಆ ನಿರ್ಧಾರಗಳ ಹಿಂದಿನ ಘನತೆ, ಧಾರಾಳತನ ಮತ್ತ ಸಾಹಸಗಳು ಆ ನಿರ್ಧಾರ ತೆಗೆದುಕೊಂಡ ಪ್ರತ್ಯಕ್ಷ ವ್ಯಕ್ತಿಗಳಿಗೂ ಗೊತ್ತಿರುವುದಿಲ್ಲ. ತಮಗೇ ಗೊತ್ತಿಲ್ಲದೆ ಭವ್ಯವಾದ ನಿಗೂಢವಾದ ರೀತಿಯಲ್ಲಿ ತಮ್ಮತನದಿಂದಾಗಿ ಹೊರಹೊಮ್ಮಿ ರೂಪ ತಾಳಿರುತ್ತವೆ ಆ ನಿರ್ಧಾರಗಳು.

** ** **

ಕೀಟಗಳ ಜಗತ್ತು : ಸಗಣಿಹುಳವಿನ ನಂತರ, ಕೊಲಿಯೊಟೇರಾ ಗುಂಪಿನ ಕೀಟಗಳ ಶ್ರೇಣಿಯಲ್ಲಿ ಮುಂದೆ ಬರುವ ಮಿನೊಟಾರಸ್ ಟೈಪಾಯಿಸ್‌ನ ಮಾದರಿ ಮನೆತನವನ್ನು ಸ್ವಾಗತಿಸೋಣ. ಇದು ಸಾಕಷ್ಟು ಪರಿಚಿತವಾಗಿದ್ದು, ಹೆಸರಿಗೆ ತದ್ವಿರುದ್ಧವಾಗಿ ತುಂಬಾ ಸೌಮ್ಯವಾದ ಕೀಟ. ಹೆಣ್ಣು ಕೀಟವು ನೆಲದಾಳದಲ್ಲಿ ಎಂದರೆ ಒಂದೂವರೆ ಗಜಕ್ಕೂ ಹೆಚ್ಚು ನೀಳವಾದ ಸುರಂಗ ತೋಡುತ್ತದೆ; ಇದರಲ್ಲಿ ವೃತ್ತಾಕಾರದ ಮೆಟ್ಟಿಲುಗಳು, ನಡುನಡುವೆ ತಂಗುದಾಣಗಳು, ಪ್ಯಾಸೇಜ್‌ಗಳು, ಅನೇಕ ಕೋಣೆಗಳೂ ಇರುತ್ತವೆ. ಗಂಡು ಕೀಟವು ತನ್ನ ತಲೆಯ ಮೇಲಿರುವ ತ್ರಿಶೂಲದಂತಹ ಆಕಾರದ ಮೇಲೆ ಅಗೆದಾಗ ಬರುವ ಮಣ್ಣನ್ನು ಹೊತ್ತುಕೊಂಡು ಗಂಡು-ಹೆಣ್ಣುಗಳಿಬ್ಬರೂ ಸೇರಿದ್ದ ತಮ್ಮ 'ಮನೆ'ಯ ಬಾಗಿಲನಾಚೆಗೆ ಸಾಗಿಸುತ್ತದೆ. ಆಮೇಲೆ ಬಯಲಿಗೆ ಹೋಗಿ ಕುರಿಗಳ ಲದ್ದಿಗಾಗಿ ಹುಡುಕುತ್ತವೆ; ಗೂಡಿನ ಮೊದಲ ಮಹಡಿಯವರೆಗೂ ಅದನ್ನು ಹೊತ್ತು ತಂದು, ತನ್ನ ತ್ರಿಶೂಲದಂತಹ ಭಾಗದಿಂದ ಅದನ್ನು ಹಿಟ್ಟಿನ ಹಾಗೆ ಪುಡಿ ಪುಡಿ ಮಾಡುತ್ತದೆ; ಕೆಳಗಿನ ಮಹಡಿಯಲ್ಲಿರುವ 'ತಾಯಿ'ಯು ಕೆಳಗೆ ಬೀಳುತ್ತಿರುವ ಹಿಟ್ಟನ್ನು ಶೇಖರಿಸಿ, ಒಂದು ದೊಡ್ಡ ಮಾದರಿಯ ಅಚ್ಚನ್ನಾಗಿ ಅದನ್ನು ನಾದಿ ಇಡುತ್ತದೆ. ಮರಿಗಳ ಆಹಾರ ಅದಾಗುತ್ತದೆ. ಆಹಾರ ಸಾಕು ಎನ್ನುವವರೆಗೆ, ಅಂದರೆ ಸುಮಾರು ಮೂರು ತಿಂಗಳು ಕಾಲ ಆ ಪಾಪದ ಗಂಡ ತನಗಾಗಿ ಏನನ್ನೂ ಸೇವಿಸದೆ ಈ ಬೃಹತ್ ಪ್ರಮಾಣದ ಶ್ರಮದ ಕೆಲಸದಿಂದ ಸಾಕುಸಾಕಾಗಿ ಹೋಗುತ್ತಾನೆ. ಕಡೆಗೆ, ತನ್ನ ಕೆಲಸ ಮುಗಿಯಿತು ಅನ್ನುವ ವೇಳೆಗೆ, ತನ್ನ ಅಂತ್ಯ ಸಮೀಪ ಬಂತು ಎಂದು ತಿಳಿದು. ತನ್ನ ಶರೀರದ ಪಳಯುಳಿಕೆಯಿಂದ ಮನೆಯೊಳಗೆ ಗಲೀಜು ಆಗಬಾರದೆಂದು, ಉಳಿದ ಶಕ್ತಿಯನ್ನು ಬಳಸಿಕೊಂಡು ಮನೆಯಿಂದ ದೂರಕ್ಕೆ ತೆವಳಿ ಹೋಗುತ್ತಾನೆ; ಒಬ್ಬೊಂಟಿಯಾಗಿ, ತಾನಿನ್ನು ಯಾತಕ್ಕೂ ಬಾರದವನು ಎಂದು ಮನಗಂಡು ಕಲ್ಲು ಮಣ್ಣುಗಳ ನಡುವೆ ಜೀವ ಬಿಡುತ್ತಾನೆ.

** ** **

ಅಧ್ವಾನವಾಗುತ್ತಿರುವ ಸೌಂದರ್ಯ : ಅಯ್ಯೋ, ಈ ಜಗತ್ತಿನಲ್ಲಿ ಅದೆಷ್ಟು ಸೌಂದರ್ಯ ವ್ಯರ್ಥವಾಗಿ ಹೋಗುತ್ತಿದೆ! ಇಲ್ಲಿ (ಬಹುಶಃ ಪ್ರಾವಿಂಕಾಲ್ ತೀರದ ಹಸಿರು ಕಣಿವೆ) ಸಾಯುವವರೆಗೂ ನಮ್ಮ ಕಣ್ಣಿಗೆ ಉಣಿಸಬಹುದಾದಷ್ಟು ಸೌಂದರ್ಯವಿದೆ. ಗೋರಿಗೆ ಹೋದಮೇಲೂ ನಮ್ಮ ಆತ್ಮಗಳಿಗೆ ಬೆಂಬಲ ನೀಡುವಷ್ಟು ಸವಿನೆನಪುನ್ನು ಕೂಡಿಸಿಕೊಳ್ಳಬಹುದೇನೋ ಅನ್ನುವಷ್ಟು ಅಪಾರ ಸೌಂದರ್ಯ ಇಲ್ಲಿದೆ. ಸಾವಿರಾರು ಜೀವಿಗಳಿಗೆ ಚೈತನ್ಯ ನೀಡಬಲ್ಲ ವಿಶೇಷತೆ ಇಲ್ಲಿದೆ.

ಹಾಗೆ ನೋಡಿದರೆ ನಮ್ಮಲ್ಲಿ ಅತ್ಯುತ್ತಮವಾದುದೆಂಬ ಗುಣ, ಅತಿ ಪವಿತ್ರವಾದ, ಆನಂದದಾಯಕವಾದ ಗುಣ, ನಮ್ಮ ಆಲೋಚನೆಗಳಲ್ಲಿ ಭಾವನೆಗಳಲ್ಲಿ ಅಡಕವಾಗಿರುವ ಆ ಗುಣದ ಮೂಲ ಇರುವುದು ನಾವು ಕಂಡಿರುವ ಸುಂದರ ದೃಶ್ಯಗಳಲ್ಲೇ. ಸುಂದರ ವಸ್ತುಗಳನ್ನೇ ನೋಡಿರದಿದ್ದರೆ ನಮ್ಮಲ್ಲಿ ಕೇವಲ ಬಡವಾದ ಅಸಹ್ಯಕರವಾದ ಪ್ರತಿಮೆಗಳೇ ಇರುತ್ತವೆ ; ಅಂಥವುಗಳಿಂದಲೇ ನಮ್ಮ ಅನಿಸಿಕೆ, ಭಾವನೆಗಳಿಗೆ ರೂಪುಕೊಡುತ್ತೇವೆ- ಅವು ಚಳಿಗೆ ಹಾಗೂ ಬಡತನಕ್ಕೆ ತುತ್ತಾಗಿ ನಾಶವಾಗುವ ಕುರುಡನಂತೆ ನಾಶವಾಗಿ ಬಿಡುತ್ತವೆ. ಅಸ್ತಿತ್ವದ ಬಯಲುಗಳಿಂದ ಹೊರಟು ಮಾನವ ಪ್ರಜ್ಞೆಯೆಂಬ ಔನ್ನತ್ಯದವರೆಗೂ ಚಾಚಿರುವ ಆ ರಾಜಮಾರ್ಗಕ್ಕೆ ಮಂಕು ಕವಿದು, ಅದು ಬರಡಾಗಿ, ಖಾಲಿಖಾಲಿಯಾಗಿ, ನಮ್ಮ ಆಲೋಚನೆಗಳು ಆ ಮಾರ್ಗದಲ್ಲಿ ಕ್ರಮಿಸುವ ಧೈರ್ಯ ಸಾಮರ್ಥ್ಯಗಳನ್ನು ಕಳಕೊಳ್ಳುತ್ತವೆ. ನಮ್ಮ ಆಲೋಚನೆಗಳು ಆ ಮಾರ್ಗದಲ್ಲಿ ಕ್ರಮಿಸಲಿಲ್ಲವೆಂದರೆ ಅಲ್ಲಿ ಕಾಡಿನ ಭಯಾನಕತೆ ಬೆಳೆದುಕೊಳ್ಳುತ್ತದೆ. ನಾವು ಕಂಡಿರುವ ನಮ್ಮದಾಗಿಸಿಕೊಂಡಿರುವ ನಮ್ಮನ್ನು ಕೈ ಬೀಸಿ ಕರೆದ, ಒಂದು ಸುಂದರ ದೃಶ್ಯಕ್ಕೆ ಸಾಟಿಯಾಗುವುದೇನೂ ಇರಲಾರದು. ನಮ್ಮ ಬರುವಿಗಾಗಿ ಕಾದ ಅದರ ಜಾಗಗಳಲ್ಲಿ ಇನ್ನೇನೂ ಬೆಳೆಯುವುದಿಲ್ಲ. ಅದು ನಮ್ಮ ಆತ್ಮಗಳಲ್ಲೂ ಒಂದು ಖಾಲಿ ಜಾಗ ಉಂಟುಮಾಡುತ್ತವೆ; ಅಲ್ಲಿ ನಾವು ರೋಜಾ ಹೂ ಬಯಸಿದರೆ ಸಿಗುವುದು ಬರೀ ಮುಳ್ಳುಗಳು. ನಮ್ಮ ಆಲೋಚನೆಗಳು ನಮ್ಮ ಕ್ರಿಯೆಗಳು ತಮ್ಮ ರೂಪಗಳನ್ನು ಸಾಮರ್ಥ್ಯಗಳನ್ನು ನಮ್ಮ ಕಣ್ಣುಗಳು ಕಂಡ ದೃಶ್ಯಗಳಿಂದ ಹೀರುತ್ತವೆ. ಒಬ್ಬ ವ್ಯಕ್ತಿ ಮಾಡಿದ ಮಹಾನ್ ಕಾರ್ಯಕ್ಕೂ ಪೂರೈಸಿದ ಕರ್ತವ್ಯಕ್ಕೂ, ತ್ಯಾಗಕ್ಕೂ ಮತ್ತು ಆತ ಹಿಂದೆ ಕಂಡಿರುವ ಪ್ರಕೃತಿ ಸೌಂದರ್ಯದ ದೃಶ್ಯಗಳಿಗೂ, ನಮ್ಮ ನೆನಪಿನ ಶಕ್ತಿಗೂ ತಿಳಿಯದ ಆತ್ಮೀಯ ಸಂಬಂಧ ಇದ್ದೇ ಇರುತ್ತದೆ. ಸುಂದರ ವಸ್ತುಗಳನ್ನ ಹೆಚ್ಚು ಹೆಚ್ಚು ನೋಡಿದಷ್ಟೂ ನಾವು ಸತ್ಕಾರ್ಯಗಳನ್ನು ಮಾಡಲು ಹೆಚ್ಚು ಹೆಚ್ಚ ತಕ್ಕವರಾಗುತ್ತೇವೆ. ನಮ್ಮ ಅಂತರಂಗಗಳು ಅರಳಬೇಕೆಂದರೆ ಸುಂದರ ದೃಶ್ಯಗಳ ಖಜಾನೆಯೇ ನಮ್ಮಲ್ಲಿ ಇರಬೇಕು.

** ** **

'ಬಿಫೋರ್ ದಿ ಗ್ರೇಟ್ ಸೈಲೆನ್ಸ್ ' ನಿಂದ ಆಯ್ದ ಭಾಗಗಳು:

ನಾವು ಸತ್ತು ಎರಡು ಮೂರು ದಿನಗಳ ನಂತರ ನಾವೇ ನಮ್ಮ ಮನೆಗಳಿಗೆ ಮತ್ತೆ ಬಂದೆವು ಅಂದಿಟ್ಟುಕೊಳ್ಳಿ; ಸೀಮಾತೀತತೆ ಮತ್ತು ಕಾಲಾತೀತತೆಯಲ್ಲಿ ಮಿಂದು ನಮ್ಮ ಸಣ್ಣತನ, ಸಣ್ಣ ಬುದ್ಧಿಗಳನ್ನು ತೊಳಕೊಂಡಮೇಲೆ, ಅಭೇಧ್ಯವಾದ ವ್ಯಾಪಕತೆಯ ಆಚೆ ಮುಖ ಕಂಡು ಅದಕ್ಕೆ ಹೆದರುವ ಕಾರಣವಿಲ್ಲ ಎಂದು ತಿಳಕೊಂಡ ಮೇಲೆ ಯಾರು ತಾನೆ ಇಂಥ ಪ್ರಿಯ ಆದರೂ ಅನಾಸಕ್ತಿ ಜನ್ಯ ಜಾಗದಲ್ಲಿ ಜೀವನವನ್ನು ಪುನಃ ಪ್ರಾರಂಭಿಸಲು ಇಷ್ಟಪಡುತ್ತಾರೆ?

ಭೂಮಿ ತಾಕಿದ ಮೇಲೆ ಬೀಳುತ್ತಿದ್ದ ಕಲ್ಲು ಇನ್ನೂ ಬೀಳುತ್ತಲೇ ಇರುವುದಿಲ್ಲ ; ಭೂಮಿ ಅದು ಬೀಳುವುದನ್ನು ತಡೆದು ಆ ಕಲ್ಲನ್ನು ತನ್ನ ಆಕಾಶದಲ್ಲಿ ಸೇರಿಸಿಕೊಂಡು ಬಿಡುತ್ತೆ. ಕಲ್ಲಿನ ಭಾರ ಎಂದಿನಂತೆ, ಎಂದೆಂದಿನಂತೆ ಅಷ್ಟೇ, ಹಾಗೇ ಇರುತ್ತದೆ. ಆದರೆ ಆ ಕ್ಷಣದಿಂದ ನಮ್ಮ ಸೀಮಿತ ಪದ ಸಂಗ್ರಹದೊಳಗೆ ಅದನ್ನು 'ನಿಶ್ಚಲತೆ' ಎಂದು ಕರೆಯತೊಡಗುತ್ತೇವೆ. ಇನರ್ಷಿಯಾ ಅಂದರೆ ಅಡ್ಡಬರುವ ವಸ್ತುವಿನಿಂದ ಆದ ಗುರುತ್ವಾಕರ್ಷಣೆಯೆ.

** ** **

ನಮ್ಮ ದುಗುಡಗಳನ್ನು ಭ್ರಮಾರೂಪಗಳಿಂದ ಮುಚ್ಚಿಹಾಕಿಕೊಳ್ಳುವ ಪ್ರಯತ್ನವನ್ನು ನಾವು ಮಾಡದಂತಿರಬೇಕು.

** ** **

ಸತ್ತವರ ಜೀವನವನ್ನು ಹಿಗ್ಗಿಸಲು ಸಾಧ್ಯವಾದದ್ದನ್ನೆಲ್ಲ ಈಜಿಪ್ಷಿನವರು ಮಾಡಿದರು. ಅವರಿಗೆ ಅನುಭವದಿಂದಲೋ ಮತೀಯೇತರ ಸಂಪ್ರದಾಯದಿಂದಲೋ ಅಥವಾ ಸ್ವಾಭಾವಿಕವಾಗಿಯೋ - ಅಂತೂ, ಸತ್ತವರು ಪರಿಸರದಲ್ಲಿ ಮತ್ತು ತಮ್ಮ ನೆನಪುಗಳಲ್ಲಿ ಹೆಚ್ಚು ಕಾಲ ಇದ್ದಷ್ಟೂ ತಮ್ಮ ಜೀವಿತಗಳು ಹೆಚ್ಚು ಬುದ್ಧಿವಂತಿಕೆಯಿಂದಲೂ ಆನಂದದಿಂದಲೂ ತುಂಬಿರುತ್ತೆ ಎಂದು ಗೊತ್ತಿತ್ತು.

** ** **

ನಾವು-ನೀವೆಲ್ಲ ದೇವರ ಸಮಕಾಲೀನರೇ; ಆತ ಇರುವವರೆಗೂ ಬದುಕಿರುತ್ತೇವೆ. ಇಷ್ಟೊಂದು ವಿಚಿತ್ರ ಮತ್ತು ಅನ್ಯಾಯಗಳನ್ನು ನಿಮ್ಮ ದೇವರ ಕೈಲಿ ಮಾಡಿಸಿದ್ದೀರಲ್ಲ, ಆ ದೇವರೂ, ಮತ್ತು ನಾನು ನನ್ನೊಳಗೆ ಕಾಣುತ್ತಿರುವ, ನನಗೆ ನಿಜವಾದ ಈ ದೇವರೂ ಸಮ ಸಮ ಶಕ್ತಿಯುಳ್ಳವರೆ? ಯಾಕಂದರೆ, ಪ್ರತಿಯೊಬ್ಬನಲ್ಲೂ ಅವನಿಗೆ ತಕ್ಕನಾದ ಒಬ್ಬ ದೇವರಿರುತ್ತಾನೆ: ತನ್ನ ಅಂತರಾಳದಿಂದ, ತನ್ನೊಳಗಿನ ಎಲ್ಲದರಿಂದ ಸೃಷ್ಟಿಸುವ ಸಾಮರ್ಥ್ಯಕ್ಕೆ ತಕ್ಕನಾದ ದೇವರಿರುತ್ತಾನೆ.

** . ** **

ಮನುಷ್ಯರೆಲ್ಲಾ ಒಳ್ಳೆಯವರೆಂದುಕೊಂಡು ಕಾನೂನು ಮಾಡು; ಕೇಡಿಗಳು ಗೆಲ್ಲುತ್ತಾರೆ, ಒಳ್ಳೆಯವರು ನಲುಗಿ ಹೋಗುತ್ತಾರೆ.

ಮನುಷ್ಯರೆಲ್ಲಾ ಕೆಟ್ಟವರೆಂದುಕೊಂಡು ಕಾನೂನು ಮಾಡು: ಕೇಡಿಗಳು ಅದರೊಳಗಾಸಿ ತೂರಿಕೊಳ್ಳುತ್ತಾರೆ ಅಥವಾ ಅದನ್ನ ಸುತ್ತಿ ಬಳಸಿ ಹೋಗಿಬಿಡುತ್ತಾರೆ. ಒಳ್ಳೆಯವರು ಮಾತ್ರ ಅವನ್ನು ಅನುಸರಿಸುತ್ತಾರೆ. ಒದ್ದಾಡುತ್ತಾರೆ.

** ** **

ಈ ಜಗತ್ತಿನ ಬಗ್ಗೆ ಇಂದು ನಮಗಿರುವ ಅಜ್ಞಾನ ಹಿಂದೆಂದಿಗಿಂತಲೂ ಹೆಚ್ಚು - ಇದು ಎಲ್ಲಿಂದ ಬಂತು, ಎಂದು ಬಂತು, ಎತ್ತ ಸಾಗುತ್ತಿದೆ, ಇದರೊಳಗೆ ನಮ್ಮ ಪಾತ್ರ ಏನು; ಗೊತ್ತಿಲ್ಲ. ಬಹುಶಃ ವಿಜ್ಞಾನ ಮುಂದುವರಿದಂತೆಲ್ಲ ಈ ಅಜ್ಞಾನ ಹೆಚ್ಚುತ್ತಲೇ ಹೋಗಬಹುದು. ಆದರೆ ಈ ಒಗಟು ಹೆಚ್ಚು ನಿಗೂಢವೂ, ಕುತೂಹಲಕಾರಿಯೂ ಆಗುತ್ತಲೇ ಹೋಗುವುದು. ಒಂದು ವೇಳೆ ಈ ಜಗತ್ತಿನ ಬಗ್ಗೆ ಎಲ್ಲವೂ ತಿಳಿದುಬಿಟ್ಟರೆ ನಮಗೆ ಕುತೂಹಲದ ಬದಲು ಎಂಥಾ ಬೇಸರಿಕೆ ಉಂಟಾಗಬಹುದು!

** ** **

ನಮ್ಮ ಪುರಾತನ ಕಾಲದ ನೆನಪುಗಳೇ ಭವಿಷ್ಯದ ಧರ್ಮಕ್ಕೆ ನಾಂದಿಯಾಗ ಬಹುದು...ಎಲ್ಲ ಮನುಷ್ಯರಿಗೂ ಪುರಾತನ ನೆನಪುಗಳಿರುತ್ತವೆ. ಆ ನೆನಪುಗಳು ಹೆಚ್ಚಾಗಿ ಇರುವಾತ ಗುಣದಲ್ಲಿ ಹಿರಿಯನಾಗಿರುತ್ತಾನೆ: ಅಂಥ ನೆನಪುಗಳನ್ನು ಮರುಕಳಿಸಿ ಕೊಳ್ಳುವಲ್ಲಿ ಸಫಲನಾದವನಿಗೆ ಜ್ಞಾನ ಸಿದ್ಧಿಸುವುದರ ಜೊತೆಗೆ ಜೀವನದ ಸಮೃದ್ಧತೆ ಮತ್ತು ಸಂತೋಷ ವೃದ್ಧಿಯಾಗುತ್ತದೆ.

** ** **

ದೇವರು ಬಂದು ನಮ್ಮನ್ನು, 'ಆಯಿತು, ನಿನಗೇನು ಬೇಕು?' ಎಂದು ಕೇಳಿದರೆ, ಅದಕ್ಕೆ ಉತ್ತರಿಸುವಷ್ಟು ಸಿದ್ಧತೆ ನಮ್ಮಲ್ಲಿರಬೇಕಾದ ಕಾಲ ಬಂದಿದೆ. ಬನ್ನಿ ಸಿದ್ಧರಾಗಿರೋಣ.

** ** **

'ಸುಪ್ರೀಂ ಲಾ' ದಿಂದ ಆಯ್ದ ಭಾಗಗಳು:

'ಆಕಾಶ್ (ಈಥರ್) ಅಧ್ಯಾಯದಿಂದ : ಹಳೆಯ ಕಾಲಕ್ಕೆ ಒಂದೇ ವಸ್ತು ಬಗ್ಗೆ ಮಾತ್ರ ಗೊತ್ತಿತ್ತು; ಅದು(ಮ್ಯಾಟರ್); ಬೆಳಕಿನ ಕುರಿತ ಅಧ್ಯಯನದಿಂದಾಗಿ 'ಆಕಾಶ' ದ ಬಗ್ಗೆ ಜ್ಞಾನ ಉಂಟಾಯಿತು. ಆದರೆ ಗಾಳಿ ಮತ್ತು ಬೆಳಕನ್ನು ತೂಗಿ ನೋಡುವ ಹಾಗೆ 'ಆಕಾಶ 'ವನ್ನು ತೂಗಿ ನೋಡಲಾಗದು. ಯಾಕಂದರೆ ಕೆಲವರು ಹೇಳುವ ಹಾಗೆ ಆಕಾಶಕ್ಕೆ ಇರುವಿಕೆ ಇಲ್ಲ, ಅಥವಾ ಅದಕ್ಕೆ ಬೇಕಾದ ಸಲಕರಣೆಗಳು ನಮ್ಮಲ್ಲಿಲ್ಲ; ಅಥವಾ ಕೆಲವೊಂದು ಮೂಲಭೂತ ವಿಚಾರಗಳ ಕುರಿತು ವಿಶ್ಲೇಷಿಸುವಾಗ ಅಗತ್ಯವಾಗಿ 'ಆಕಾಶ' ವನ್ನು ಪರಿಗಣಿಸಬೇಕಾಗಿರುವುದರಿಂದ, ಅವರ ಪ್ರಕಾರ ಭೂಮಿಯ ಗುರುತ್ವಾಕರ್ಷಣೆ 'ಆಕಾಶ 'ದ ಮೇಲೆ ಪರಿಣಾಮ ಬೀರುವುದಿಲ್ಲ.

'ಯೂನಿವರ್ಸಲ್ ಗ್ರಾವಿಟೇಷನ್' ಅಧ್ಯಾಯದಿಂದ: ಈ ಜಗತ್ತು ಆಕಾಶದಲ್ಲಿ ಬೀಳುತ್ತಿದೆಯಂತೆ, ಹೌದೆ? ಅದರ ಬಗ್ಗೆ ನಮಗೇನೂ ತಿಳಿಯದು. ಬೀಳುವುದು ಎಂದು ನಾವಂದಿದ್ದು ಬಹುಶಃ ಏರುವುದೊ, ಸುತ್ತುವುದೊ, ಎಡಕ್ಕೊ ಬಲಕ್ಕೊ ಹೊರಳುವುದೋ ಆಗಿರುತ್ತದೆ. ಅನಂತತೆಯಲ್ಲಿ ಮೇಲೆ ಕೆಳಗೆ ಎಂಬುದಿಲ್ಲ. ಏರುವುದು, ಇಳಿಯುವುದೆಂಬುವಿಲ್ಲ; ಅಥವಾ ಹೇಳಬಹುದಾದ ದಿಕ್ಕುಗಳೂ ಇಲ್ಲ; ಬಹುಶಃ ಯಾವುದೋ ಊಹಾತೀತವಾದ ಅನಂತತೆಯಲ್ಲಿ ಕಳೆದು ಹೋಗಿರುವ ಅನಂತತೆಯ 'ಮ್ಯಾಟರ್'ನ ಮೂಲದ್ರ್ಯವದ ದಿಕ್ಕಿನಲ್ಲಿ ನಾವು ಸೆಳೆಯಲ್ಪಡುತ್ತಿದ್ದೇವೆ; ಈ ಮೂಲದ್ರವ್ಯ ಬಹುಶಃ ಮಿಲಿಯಗಟ್ಟಲೆ ಶತಮಾನಗಳ ನಂತರ ನಮ್ಮ ದೃಷ್ಟಿಗೆ ಗೋಚರವಾಗಬಹುದು. ಇಷ್ಟೇ ಅಲ್ಲ, ಆ ದ್ರವ್ಯವೇ ತಂಗುದಾಣವಾಗಿ, ತಲುಪಬೇಕಾದ ಗುರಿಯಲ್ಲದಿರಬಹುದು. ಅದು ತಾನೇ ಇನ್ನೊಂದು, ಅದಕ್ಕಿಂತಲೂ ದೊಡ್ಡದಾದ ದ್ರವ್ಯದ ದಿಕ್ಕಿನಲ್ಲಿ ಹೋಗುತಿದ್ದಿರಬಹುದು. ಹೀಗೆ, ಅಂತ್ಯವಿಲ್ಲದ ಕಾಲ ಮತ್ತು ಅನಂತತೆಯಲ್ಲಿ ಇದು ಅನಿರ್ದಿಷ್ಟವಾಗಿ ನಡೆಯುತ್ತಲೇ ಇದ್ದಿರಬಹುದು.

** ** **

'ಲೈಫ್ ಆಫ್ ದಿ ಬೀ' ಯಿಂದ ಆಯ್ದ ಭಾಗಗಳು:

ನಾವು ಇನ್ನೊಂದು ಪ್ರಪಂಚದ ಎತ್ತರದಿಂದ ಕೂಲಂಕುಷವಾಗಿ ದಿಟ್ಟಿಸುವ ಈ ಜೇನುಗೂಡು ನಮ್ಮ ಮೊದಲ ಪ್ರಶ್ನಾರ್ಥಕ ನೋಟಕ್ಕೆ ಇಷ್ಟು ನಿಖರವಾದ ಹಾಗೂ ಅರ್ಥಗರ್ಭಿತ ಉತ್ತರವೀಯುತ್ತದೆಂದರೆ ಆಶ್ಚರ್ಯವಲ್ಲವೆ? ಇಷ್ಟೊಂದು ನಿಷ್ಠೆಯಿಂದ ಕಟ್ಟಿಕೊಂಡ ಮನೆಗಳನ್ನು; ಆ ಜೇನುಹುಳುಗಳ ಪದ್ಧತಿ, ಕಾನೂನು, ರಾಜಕೀಯ ಮತ್ತು ಆರ್ಥಿಕ ವ್ಯವಸ್ಥೆ; ಸುದ್ಗುಣ ಹಾಗೂ ಕ್ರೂರತನ - ಇವುಗಳನ್ನು ನೋಡಿದರೆ ಅವು ತಮ್ಮ ಆಲೋಚನೆ ಅಥವಾ ದೇವರನ್ನು ಅಷ್ಟು ಕಟ್ಟುನಿಟ್ಟಾಗಿ ಪಾಲಿಸುತ್ತವೆ ಎಂದು ಪ್ರಶಂಸಿಸದೆ ಇರಲಾಗುವುದೆ? ಈ ದೇವರೂ ಸಹ- ಬಹುಶಃ ಮನುಷ್ಯ ಮಾತ್ರ ದೇವರಿಗೆ ಸಂಪೂರ್ಣ ನಿಷ್ಠೆ ತೋರಿಲ್ಲ - ತಿಳುವಳಿಕೆ ಇಲ್ಲದ್ದಲ್ಲ, ನ್ಯಾಯವಿಲ್ಲದ್ದಲ್ಲ. ಜೇನುಹುಳುಗಳ ದೇವರೆಂದರೆ ಭವಿಷ್ಯತ್ತು. ನಾವು ಮನುಷ್ಯರ ಚರಿತ್ರೆ ಅಭ್ಯಾಸ ಮಾಡುವಾಗ ಒಂದು ಜನಾಂಗದ ಅಥವಾ ಜನರ ನೈತಿಕಮಟ್ಟ ಅಥವಾ ಹಿರಿತನವನ್ನು ಅಳೆಯುವುದಕ್ಕೆ ಒಂದೇ ಅಳತೆಗೋಲನ್ನು ಇಟ್ಟುಕೊಂಡಿರುತ್ತೇವೆ- ಅವರ ಆದರ್ಶಗಳ ಹಿರಿಮೆ ಮತ್ತು ಬಾಳಿಕೆ ಮತ್ತು ಯಾವುದನ್ನು ವಿವೇಚನೆ. ಆದರೆ, ಜಗತ್ತಿನ ಬೇಕು ಬೇಡಗಳಿಗೆ ಸರಿಹೊಂದುವ ಆದರ್ಶಗಳು ಯಾವುವು; ಹೆಚ್ಚು ವೈಶಾಲ್ಯವುಳ್ಳ ಹೆಚ್ಚು ಪಕ್ಷಭೇದವಿಲ್ಲದ, ಅಲೌಕಿಕವಾದ ಆದರ್ಶಗಳು ಯಾವುವು; ಕೈಬಿಡಬೇಕಾದ ಮೌಲ್ಯಗಳನ್ನು ಎಷ್ಟು ಸಫಲವಾಗಿ, ದಿಟ್ಟತನದಿಂದ ವಿವೇಚನೆಯಿಂದ ಕೈಬಿಡಲಾಗಿದೆ - ಈ ದಿಟ್ಟಿನಲ್ಲಿ ಎಂದಾದರೂ ಯೋಚಿಸಿದ್ದೇವೆಯೆ?

** ** **

ಇದಕ್ಕೆ ಪುರಾವೆ ಬೇಕೆಂದರೆ, ನಿಮ್ಮ ಕಿಟಕಿಯ ಮೇಲೊ, ಟೇಬಲ್ಲಿನ ಮೂಲೆಯಲ್ಲೊ ಒಂದೆರಡು ಹನಿ ಜೇನನ್ನು ಹಾಕಿರಿ. ಜೇನುನೊಣ ಅದನ್ನು ಆಗತಾನೇ ಕಾಣುವಂತಾಗಬೇಕು. ಅವಳು ತಕ್ಷಣ ಅದನ್ನ ಹನಿಹನಿಯಾಗಿ ಹೀರಿ ಬಿಡುತ್ತಾಳೆ. ಅವಳಿಗೆ ತೊಂದರೆ ಉಂಟು ಮಾಡದಂತೆ ನೀವು ಅವಳ ಸಣ್ಣ ಬೆಲ್ಟಿನ ಮೇಲೆ ಒಂದಿಷ್ಟು ಗುರುತು ಮಾಡಬಹುದು, ಅಷ್ಟು ಅವಕಾಶವಂತೂ ಸಿಗುತ್ತದೆ. ಆದರೆ ಅವಳು ನುಂಗಿದ್ದೆಲ್ಲ ಮುಂಭಾಗದಲ್ಲೇ ಇರುತ್ತದೆ. ಅವಳ 'ಸ್ವಂತ ಹೊಟ್ಟೆ' ಯೊಳಕ್ಕೆ ಹೋಗಿರದೆ ಚೀಲದಂತಿರುವ ಮೊದಲ ಹೊಟ್ಟೆಗೆ ಹೋಗಿರುತ್ತದೆ - ಈ ಹೊಟ್ಟೆ ತನ್ನ ಇಡೀ ಕುಟುಂಬಕ್ಕೆ ಸೇರಿದ್ದು. ಈ 'ಟ್ಯಾಂಕು' ತುಂಬಿದ ಕೂಡಲೆ ಅವಳು ಹೊರಡುತ್ತಾಳೆ.

ಆದರೆ ಚಿಟ್ಟೆಗಳಂತೆ ಸುಮ್ಮನೆ, ಆಲೋಚಿಸದೇ ಹಾರಿ ಹೋಗುವುದಿಲ್ಲ. ಬದಲಾಗಿ ಇವಳು ಕೆಲವು ಕ್ಷಣಗಳು ಟೇಬಲ್ ಅಥವಾ ಕಿಟಕಿಯ ಸುತ್ತಮುತ್ತವೇ ಹಿಂದೆ ಹಿಂದಕ್ಕೆ ಹಾರಾಡುತ್ತಿರುತ್ತಾಳೆ. ತಲೆ ಕೋಣೆಯ ದಿಕ್ಕಿನಲ್ಲೇ ಇರುತ್ತದೆ. ಆವಳು ಸ್ಥಳ ಪರೀಕ್ಷೆ ಮಾಡುತ್ತಿರುತ್ತಾಳೆ, ಆ ನಿಧಿಯ ನಿರ್ದಿಷ್ಟ ಜಾಗವನ್ನು ನೆನಪಿನಲ್ಲಿ ಊರಿಕೊಳ್ಳುತ್ತಾಳೆ. ಅಲ್ಲಿಂದ ಮುಂದೆ ಗೂಡಿಗೆ ಹೋಗಿ, ಕೊಳ್ಳೆಯನ್ನು ಗೂಡಿನ ನಿರ್ದಿಷ್ಟ ಮನೆಯೊಂದರಲ್ಲಿ ಹೊರಹಾಕಿ, ಎರಡು ಮೂರು ನಿಮಿಷಗಳಲ್ಲಿ ತಿರುಗಿ ಅದೇ ಕೋಣೆಗೆ ಬಂದು ಅದೇ ಕಾರ್ಯಾಚರಣೆಯಲ್ಲಿ ತೊಡಗುತ್ತಾಳೆ. ಹೀಗೆ ಜೇನು ಪೂರ್ತಿ ಖಾಲಿಯಾಗುವವರೆಗೆ, ಸಂಜೆವರೆಗೂ ಬೇಕಾದರೆ, ಐದ್ಹೈದು ನಿಮಿಷ ಅಂತರದಲ್ಲಿ ಬಂದು ಹೋಗುತ್ತಲೇ ಇರುತ್ತಾಳೆ. ಅವ್ಯಾಹತವಾಗಿ, ಆಯಾಸ ಪರಿಹರಿಸಿಕೊಳ್ಳದೆಯೇ, ಗೂಡಿಂದ ಕಿಟಕಿಗೂ, ಕಿಟಕಿಯಿಂದ ಗೂಡಿಗೂ ಹೋಗುತ್ತ ಬರುತ್ತಲೇ ಇರುತ್ತಾಳೆ.

** ** **

'ದಿ ಟ್ರೆಶರ್ ಆಫ್ ದಿ ಹಂಬಲ್' ನಿಂದ ಆಯ್ದ ಭಾಗ

ಮತ್ತೆ ಮುಂಚಿನ ವಿಷಯಕ್ಕೆ ಬರುತ್ತೇನೆ : ತಾನು ಮತ್ತು ಆದರ್ಶ- ಇವೆರಡೂ ಸಮಭಾಗಿಗಳಾಗಿರುವ ಒಂದು ನೈತಿಕ ವ್ಯಕ್ತಿತ್ವವನ್ನು ತಾನು ಆರಿಸಿಕೊಂಡಿಲ್ಲದ ದೈವಿಕತೆಯ ಮಾದರಿಯ ಒಂದು ಮಹಾನ್ ವ್ಯಕ್ತಿತ್ವವನ್ನು ತನ್ನದಾಗಿಸಿಕೊಳ್ಳಲು ಅತಿ ದೈನ್ಯನಾದ ವ್ಯಕ್ತಿಗೆ ಮಾತ್ರ ಸಾಧ್ಯ ಎನ್ನುವುದನ್ನು ಎಲ್ಲ ಮನುಷ್ಯರೂ ನೆನಪಿಟ್ಟುಕೊಳ್ಳಬೇಕು. ಜೀವನದ ಆಳಗಳಲ್ಲಿ ಮಾತ್ರ ಇಂಥ ಮಹಾನ್ ನೈತಿಕ ವ್ಯಕ್ತಿತ್ವ ರೂಪುಗೊಳ್ಳಲು ಸಾಧ್ಯ. ನಮಗೆಲ್ಲ ಆವಶ್ಯಕವಾಗಿರುವ ಈ ಆದರ್ಶದ ತುಡಿತ ಹೆಚ್ಚಬೇಕೆಂದರೆ ದೈವೀಕತೆಯ ಅವ್ಯಾಹತ ಹೊರಹೊಮ್ಮುವಿಕೆಯಾಗಬೇಕು. ಉತ್ತಮ ಜೀವನದ ಔನ್ನತ್ಯವನ್ನು ಸಾಧಿಸಲು, ತನ್ನ ರೀತಿ ನೀತಿ ಹೇಗಿರಬೇಕೆಂದು ತಿಳಿದುಕೊಳ್ಳಲು ಮತ್ತು ತಾನು ಸಾಧುವಿನಂತೆ ಅಥವಾ ಯೋಧನಂತೆ ನಡಕೊಳ್ಳಬೇಕೋ ಎನ್ನುವುದನ್ನು ನಿರ್ಧರಿಸಲು ಎಲ್ಲ ಮನುಷ್ಯರ ಚೈತನ್ಯಕ್ಕೂ ಸಾಧ್ಯವಿದೆ. ನಮ್ಮ ಆಧ್ಯಾತ್ಮಿಕ ಪರಿಸರವು ಸ್ವೀಡನ್ ಬೋರ್ಗ್‌ನ ಸುಂದರವಾದ ಸುವರ್ಣಯುಗದ ದೇಶವನ್ನು ಹೋಲುವಲ್ಲಿ ಕಡೆಯಾಗಬೇಕು; ಅಲ್ಲಿ ಒಂದು ಸುಳ್ಳೂ ಬಾಯಿಂದ ಹೊರಬರಲು ಆ ಗಾಳಿಯೇ ಬಿಡುತ್ತಿರಲಿಲ್ಲ. ಆಗ, ನಾವು ಮಾಡದಿದ್ದರೂ ಮನಸ್ಸಿನಲ್ಲಿ ಮೂಡಿದ ಒಂದು ಕೆಡಕೂ ಸಹ ಕಂಚಿನ ತಟ್ಟೆಗೆ ಬೀಳುವ ಸೀಸದ ಗುಂಡಿನಂತೆ ನಮ್ಮ ಕಾಲಿಗೇ ಬಡಿಯುತ್ತದೆ. ನಮಗರಿವಿಲ್ಲದಂತೆ ಎಲ್ಲವೂ ಸತ್ಯ, ಪ್ರೇಮ, ಸೌಂದರ್ಯಗಳಾಗಿ ಮಾರ್ಪಡುತ್ತವೆ. ಆದರೆ ಯಾರು ತಮ್ಮ ಜೀವನಗಳನ್ನು

ಪಗುರಮಾಡಿಕೊಳ್ಳಬಯಸಿ ಅಲೌಕಿಕದ ಬಾಗಿಲುಗಳನ್ನು ಆಗಾಗ್ಗ ತೆರೆಯುತ್ತಿರುತ್ತಾರೋ ಅವರ ಸುತ್ತಲು ಮಾತ್ರ ಇಂಥ ವಾತಾವರಣ ಉಂಟಾಗುತ್ತದೆ. ಅಂಥಾ ಮಹಾತ್ಮಾಗದ ಸನ್ನಿವೇಶದಲ್ಲೂ ನಾವು ಒಮ್ಮೊಮ್ಮೆ ಒಳ್ಳೆಯವರೂ ಆಗಿರಲಾರೆವು, ಉದಾತ್ತರೂ ಆಗಿರಲಾರೆವು. ಸುಂದರವಾಗಿಯೂ ಇರಲಾರೆವು........ ನೆರೆಯುವನನ್ನು ಮನದಾಳದಲ್ಲಿ ಪ್ರೀತಿಸು ಎಂದರೆ ಇತರರಲ್ಲಿ ಇರುವ ನಶ್ವರವಾದದ್ದನ್ನು ಪ್ರೀತಿಸು ಎಂದರ್ಥ. ನಿಜವಾದ ಅರ್ಥವಲ್ಲಿ ನೆರೆಯುವ ಅಂದರೆ ಭಗವಂತನಿಗೆ ಅತಿ ಹತ್ತಿರವಾಗುವವ ಎಂದು ; ಬೇರೆ ಮಾತಲ್ಲಿ ಹೇಳಬೇಕೆಂದರೆ, ಮನುಷ್ಯನಲ್ಲಿ ಇರುವ ಅತಿ ಉತ್ತಮವಾದ ಅತಿ ಪವಿತ್ರವಾದ ಎಲ್ಲ ಗುಣಗಳು. ನಾನು ಮೇಲೆ ಹೇಳಿದ 'ಬಾಗಿಲು'ಗಳ ಆಸುಪಾಸಿನಲ್ಲೇ ಸದಾ ವಿಹರಿಸುವುದಾದರೆ ಮಾತ್ರ ನೀವು ಆತ್ಮದಲ್ಲಿರುವ ದೈವತ್ವವನ್ನು ಕಂಡುಕೊಳ್ಳಬಲ್ಲಿರಿ.

** ** **

ಮೇತರ್‌ಲಿಂಕ್‌ನ ಬರಹಗಳ ವೈವಿಧ್ಯತೆ ಒಂದು ವಿಶೇಷವಾದರೆ, ಆ ಬರಹಗಳ ಅಂತರಂಗ ಇನ್ನೂ ವಿಶೇಷವಾಗಿ ತೋರುತ್ತದೆ. ಇತ್ತ ನೂರಾರು ವಿಜ್ಞಾನಿಗಳ ಸಂಶೋಧನೆಗಳನ್ನು ಉದ್ಧರಿಸಿ ಚರ್ಚೆ ಮಾಡುತ್ತಿದ್ದರೂ, ನ್ಯೂಟನ್‌ನ ವಾದ ಇವನ ಗ್ರಹಿಕೆಗಳಿಗೆ ಪೂರಕವಾಗಿದೆ. ಅತ್ತ ಅನೇಕ ತತ್ವಜ್ಞಾನಿಗಳನ್ನು ಕೂಲಂಕುಷವಾಗಿ ತಿಳಿದುಕೊಂಡು ಮೇತರ್‌ಲಿಂಕ್‌ನ ತತ್ವಜ್ಞಾನ ಪ್ಲೋತಿನಸ್‌ನದರ ಜೊತೆ ಕೈಮಿಲಾಯಿಸುತ್ತದೆ. ಇನ್ನು ಜೇನುನೊಣ, ಬಿಳೀ ಇರುವೆ, ಗೆದ್ದಲುಗಳ ಕುರಿತ ಪುಸ್ತಕಗಳನ್ನು ಓದಿದರೆ ಇವನೇನು ಸಮಾಜ ವಿಜ್ಞಾನಿಯೇ, ಜೀವಶಾಸ್ತ್ರ ಸಂಶೋಧಕನೇ ಎನ್ನಿಸುತ್ತದೆ. ಇವನ ಆಲೋಚನೆಗಳು ಇವನ ಮನಸ್ಸಿನಲ್ಲಿ ಸ್ಫುರಿಸಿದವಾದರೂ ಅವು ಬರೀ ಊಹೆಯಲ್ಲ ಎನ್ನುವುದಕ್ಕೆ, ಅಗಾಧ ಅಧ್ಯಯನ ಈ ಲೇಖನಗಳಲ್ಲಿ ಎತ್ತಿ ಕಾಣುತ್ತದೆ. ಐನ್‌ಸ್ಟೀನ್‌ನ ವಾದ, ಗಣಿತಶಾಸ್ತ್ರದ ಪ್ರಗತಿ, ನಾಸ್ತಿಕತೆಗಳು ಇವನಿಗೆ ಒಪ್ಪಿಗೆಯಾಗದ ವಿಚಾರಗಳು. ಜೇನುಗೂಡಿನ ಚಿಕ್ಕ ಆಕಾರ, ಜಗತ್ತಿನ ಗುರಿಯಾದ ಇನ್ನೊಂದು ಜಗತ್ತಿನ ಇನ್ನೊಂದು ಗುರಿಯಾದ ಮತ್ತೊಂದು ಜಗತ್ತು...... ಇದರ ಆಕಾರ ಇವೆರಡೂ ಮೇತರ್‌ಲಿಂಕ್‌ನ ಬುದ್ಧಿಶಕ್ತಿಯ ಹಿಗ್ಗುವ ಕುಗ್ಗುವ ಸಾಮರ್ಥ್ಯ ತೋರಿಸುತ್ತದೆ. ಜೇನು ನೊಣಗಳ ಸಮಾಜ, ಮಾನವ ಸಮಾಜ, ಜಡ ವಸ್ತುಗಳ ಅಸ್ತಿತ್ವ, ಭಾವನೆ, ಅನಿಸಿಕೆಗಳ ಅಸ್ತಿತ್ವಗಳೆಲ್ಲದರ ನಡುವಿನ ಸಂಬಂಧ ಮೇತರ್‌ಲಿಂಕನಿಗೆ ಗ್ರಾಹ್ಯವಾಗಿದೆ, ಅರ್ಥವುಳ್ಳದ್ದಾಗಿದೆ.

ತನ್ನ ಪ್ರತಿಭೆಗೆ ತಕ್ಕನಾದ ಅಭ್ಯಾಸ ಮೇತರ್‌ಲಿಂಕನ ಸೃಜನಶೀಲತೆಗೆ ಹಿನ್ನೆಲೆಯಾಗಿದೆ.

ಈತನ 'ಸಣ್ಣಕತೆ' ಇನ್ನೊಂದು ವಿಚಿತ್ರ. ಕತೆಗಿರಬೇಕಾದ ಯಾವುದೇ ಸಾಂಪ್ರದಾಯಿಕ ಗುಣಗಳಿಲ್ಲದ ಈ ಕತೆಯ ಸಾರಾಂಶವಿಷ್ಟು : ಡಿಸೆಂಬರ್ ೨೬ರಂದು (ಕ್ರಿಸ್‌ಮಸ್ ಮಾರನೆ ದಿನ) ಸ್ಪೇನಿನ ಕೆಲವು ಸೈನಿಕರು ನಜರೆತ್ ಒಳಕ್ಕೆ ನುಗ್ಗುತ್ತಾರೆ. ಅವರಿಂದ ಕಿರುಕುಳ ಶುರುವಾಗುವ ಮುನ್ನ ಹಳ್ಳಿಯವರೆಲ್ಲ ಕೂಡಿ ಅವರೆಲ್ಲರನ್ನು ಕಾರ್ನಲಿಜ್‌ನ ಮುಂದಾಳತ್ವದಲ್ಲಿ ಸಾಯಿಸಿಬಿಡುತ್ತಾರೆ. ಕೆಲದಿನಗಳ ನಂತರ ಸ್ಪೇನಿನ ಸೈನಿಕರ ದೊಡ್ಡ ತುಕಡಿಯೊಂದು ಕುದುರೆ, ಕಾಲಾಳುಗಳೊಂದಿಗೆ ಬಂದು, ಮನೆ ಮನೆಗೆ ನುಗ್ಗಿ ಎರಡು ವರ್ಷಕ್ಕೂ ಕಿರಿಯ ಮಕ್ಕಳನ್ನೆಲ್ಲಾ ಹೊರತಂದು ಕೊಂದು ಹಾಕುತ್ತಾರೆ. ಸೈನಿಕರು ತಿರುಗಿ ಹೋದಮೇಲೆ ಅಳುವವರು ಅಳತೊಡಗುತ್ತಾರೆ. ಮನೆ ಮಠ ಸರಿಮಾಡಿಕೊಳ್ಳುವವರು ಹಾಗೆ ಮಾಡಿಕೊಳ್ಳತೊಡಗುತ್ತಾರೆ.

ಈ ರಕ್ತಮಯ ಕತೆಯ ಒಂದೇ ಒಂದು ಪ್ಯಾರಾ:

''ಕಟುಕ, ತನ್ನ ಎಳೇ ಹೆಣ್ಣು ಮಗುವನ್ನು ಬಿಟ್ಟಿಟ್ಟು, ತನಗೇನೂ ಚಿಂತೆಯಿಲ್ಲ ವೆಂಬಂತೆ ಅಂಗಡಿಯ ಮುಂದಕ್ಕೆ ಒರಗಿನಿಂತ. ಒಬ್ಬ ಕಾಲಾಳು, ಒಬ್ಬ ಕುದುರೆಯಾಳು ಶಸ್ತ್ರಾಸ್ತ್ರದೊಂದಿಗೆ ಅವನ ಮನೆ ಹೊಕ್ಕರು. ಮಗುವನ್ನು ತಾಮ್ರದ ಪಾತ್ರೆಯೊಳಗೆ ಕಂಡರು. ಕಟುಕ ಕೂಡಲೆ ತನ್ನ ಚಾಕು ಎತ್ತಿಕೊಂಡು ಸೈನಿಕರ ದಿಕ್ಕಿನಲ್ಲಿ ನುಗ್ಗಿದ. ಆದರೆ ಸೈನಿಕರು ಅವನನ್ನು ನಿಶಸ್ತ್ರಗೊಳಿಸಿ, ಗೋಡೆಯ ಮೇಲಿದ್ದ ಗೂಟವೊಂದಕ್ಕೆ ಅವನನ್ನು ಕೈಯ್ಯಿಗಳಿಂದ ನೇತು ಹಾಕುತ್ತಾರೆ. ಕಟುಕ ಸಾಯಂಕಾಲದ ವರೆಗೂ ತನ್ನ ಕಸಾಯಿಖಾನೆ ಸತ್ತು ನೇತಾಡುತ್ತಿದ್ದ ಇತರ ಪ್ರಾಣಿಗಳ ಮಧ್ಯೆ ಕೈಕಾಲು ಬಡಿಯುತ್ತಾ ನೇತುಕೊಂಡೇ ಇದ್ದ.''

''ದಿ ರ್‍ಯಾಕ್ ಆಫ್ ದಿ ಸ್ಟಾರ್ಮ್'' ನಲ್ಲಿ ಸೇರ್ಪಡೆಯಾದ ಮೇಲಿನ ಕತೆ ಕಲ್ಪನೆಯಿಂದ ಮೂಡಿ ಬಂದ ಕತೆಯೇನಲ್ಲ. ಎರಡು ಮಹಾಯುದ್ಧಗಳ ಪ್ರತ್ಯಕ್ಷದರ್ಶಿಯಾಗಿದ್ದ ಮೇತರ್‌ಲಿಂಕ್ ಆ ಯುದ್ಧಗಳ ಭಯಾನಕ ಮುಖವನ್ನು ತನ್ನ ಈ ಹೊತ್ತಿಗೆಯಲ್ಲಿ ದಾಖಲಿಸಿದ್ದಾನೆ. ಈ ಹೊತ್ತಿಗೆ ಆತನ ಮಿಕ್ಕೆಲ್ಲ ಬರಹಗಳಿಗಿಂತ ಬಹು ಭಿನ್ನವಾಗಿದೆ. ಆ ವಿಭಿನ್ನತೆಯನ್ನು ಮತ್ತು ಅದಕ್ಕಾಗಿ ಕ್ಷಮಾಪಣೆ ಬೇಡುವುದನ್ನು ಅವನ ಮುನ್ನುಡಿಯಲ್ಲಿ ಕಾಣಬಹುದಾಗಿದೆ.

ಈ ಪುಸ್ತಕವನ್ನು ಕೈಗೆತ್ತಿಕೊಂಡವನಿಗೆ ಇದುವರೆಗೂ ದ್ವೇಷ ಕುಹಕಗಳ ಭಾಷೆ ಬಳಸದ ಈ ಲೇಖಕ ಅಂಥಾ ಭಾಷೆಯನ್ನು ಇಲ್ಲಿ ಬಳಸಿರುವುದು ಕಂಡು ಬರುತ್ತದೆ. 'ನಾನು ಆ ಪದಗಳನ್ನು ಸಂತೋಷದಿಂದಲೇ ದೂರವಿಡಲು ಬಯಸಿದ್ದೆ'. ಯಾಕಂದರೆ ಬರವಣಿಗೆಗೆ ಒಬ್ಬ ತೊಡಗಿದನೆಂದರೆ 'ಮನಷ್ಯ ಮನುಷ್ಯನಿಗೆ ತೋರಬೇಕಾದ ಪ್ರೇಮ,

ಮರ್ಯಾದೆಗಳಿಗೆ ಚ್ಯುತಿ ತರುವ ಬರವಣಿಗೆ ಮಾಡಲಾರೆ' ಎಂದು ತನಗೆ ತಾನೇ ಪ್ರಮಾಣ ಮಾಡಿಕೊಂಡಿರುತ್ತಾನೆ. ಆದರೆ ನಡೆದ ಘಟನೆಗಳು ಸತ್ಯವೆಂದು ಕಂಡಿರುವುದರಿಂದ ಇಂಥ ಭಾಷಾ ಪ್ರಯೋಗ ಮಾಡಬೇಕಾಗಿದ್ದು ನನಗೆ ದುಃಖವುಂಟುಮಾಡಿದೆ. ನನಗೆ ಜರ್ಮನಿ ಬಗ್ಗೆ ಯಾವಾಗಲೂ ಪ್ರೇಮ ಇದ್ದೇ ಇದೆ... ಆದರೆ ಇದು (ಯುದ್ಧ) , ಭೂತವನ್ನು ಮುಸುಕು ಮಾಡುವ ಮತ್ತು ಭವಿಷ್ಯವನ್ನು ಮುಸುಕು ಮಾಡುವ ಮತ್ತು ಭವಿಷ್ಯವನ್ನು ಮುಚ್ಚಿ ಹಾಕುವ ಅಪರಾಧ. ಹಾಗಿರುವಾಗ ದ್ವೇಷ ಎನ್ನುವುದು ' ಇಲ್ಲವೇ ಎಲ್ಲ ಎಂದು ಕೊಂಡ ನಾನು 'ಪ್ರೇಮ' ಕ್ಕೆ ವಂಚನೆ ಮಾಡಿದಂತಾಗುತ್ತದೆ.

ಈ (ಅರಿವಿನ) ಸ್ತರದಿಂದ ಮೇಲೆ ಹೋಗಲು ಪ್ರಯತ್ನಿಸಿದೆ. ಆದರೂ ಒಂದು ಉದ್ವೇಗದ ಹಿಂದಿನ ನ್ಯಾಯ, ಇನ್ನೊಂದು ಉದ್ದೇಶದ ಕುಹಕತನಗಳ ಹುಚ್ಚುತನ ಭಯಾನಕತೆಗಳು ಹೆಚ್ಚಿದಂತೇ ತೋರಿದವು. ಮುಂದೊಂದು ದಿನ ಕಾಲದ ನೆನಪಿನ ಶಕ್ತಿ ಕ್ಷೀಣವಾದ ಮೇಲೆ, ಜ್ಞಾನಿಗಳು ಬಂದು, 'ನೀವು ತಪ್ಪು ತಿಳಿದಿದ್ದಿರಿ,' 'ನಿಮ್ಮ ನಿಲುವುಗಳು ಉದಾತ್ತವಾಗಿರಲಿಲ್ಲ ಎಂದು ತಿಳಿ ಹೇಳಿಯಾರು! ಆದರೂ ನಾವು ಇಂದು ತಿಳಿದಿರುವುದು ಅವರಿಗೆ ಗೊತ್ತಿರುವುದಿಲ್ಲವಲ್ಲ' ನಾವು ನೋಡಿದ್ದನ್ನು ಅವರು ನೋಡಿರುವುದಿಲ್ಲವಲ್ಲ !

ಮೇತರ್‌ಲಿಂಕ್‌ನ ಈ ಕೆಲವು ಗದ್ಯ ಭಾಗಗಳನ್ನು ಓದಿದ ಮೇಲೆ ಇಂದು ನಾಗರೀಕತೆಯನ್ನು ಕಾಡುವ ಅನೇಕ ಪ್ರಶ್ನೆಗಳಿಗೆ ಉತ್ತರ ಹೊಳೆಯುತ್ತದೆ. ಇಂದಿನ ದಿನಗಳಲ್ಲಿ ಜ್ಞಾನ ಎಂಬ ಹೆಸರನ್ನು ಹೊತ್ತ ಒಂದೊಂದು ಶಾಖೆಯೂ ವಿಶೇಷತೆ, ಪರಿಣತಿಗಳನ್ನು ಹೆಚ್ಚಿಸಿ ಕೊಳ್ಳುತ್ತಲೆ ಇದೆ. ಎಂಜಿನಿಯರಿಂಗ್ ಅಂದರೇ ಅದೆಷ್ಟು ಥರದ ಎಂಜಿನಿಯರಿಂಗ್ ಸಾಧ್ಯವೋ ಲೆಕ್ಕ ಮಾಡಿ ನೋಡಬೇಕು; ಪ್ರಪಂಚದ ಎಲ್ಲ ಎಂಜಿನಿಯರಿಂಗ್ ವಿಭಾಗಗಳಿಂದ ಕ್ಷೇತ್ರಗಳ ಹೆಸರನ್ನು ತರಿಸಿಕೊಂಡು ಎಣಿಸಬೇಕಾಗಬಹುದು. ಇದೇ ಎಲ್ಲ ವಿಜ್ಞಾನ ಸಂಬಂಧೀ, ಸಮಾಜ ವಿಜ್ಞಾನ ಸಂಬಂಧೀ ಶಾಸ್ತ್ರಗಳ ಕತೆಯಾಗಿದೆ. ಆದರೆ ಇವುಗಳ ಸಮನ್ವಯ ಎಲ್ಲಿ ಆಗುವುದು?

ಮೇತರ್‌ಲಿಂಕ್‌ನ ಉತ್ಕೃಷ್ಟ ಮನಸ್ಸು ಕೆಲಸ ಮಾಡುವುದು ಶಾಸ್ತ್ರಶಾಸ್ತ್ರಗಳಲ್ಲಿ ಮತ್ತು ಅವುಗಳ ಸಂಧಿ ಸ್ಥಾನಗಳಲ್ಲಿ; ವಸ್ತು ಮತ್ತು ಅಗೋಚರವಾದದ್ದರ ಸಂಬಂಧವೇ ಹೆಚ್ಚು ಅನುಭವ ಸತ್ಯವೆನ್ನುವಂತೆ.

ಇಂಥ ಇಹ-ಪರಗಳ ಬೆಸುಗೆ ಭಕ್ತಿ ಪರಂಪರೆಯ ಸಾಹಿತ್ಯದಲ್ಲಿಯೂ ಕಾಣಸಿಗುತ್ತದೆ. ಉದಾಹರಣೆಗೆ ಬಾಹ್ಯಾಕಾಶ ವಿಜ್ಞಾನಿಯ ಈ ಭೂಮಿಯಾಚೆಗಿನ ಕಾಲ ಮತ್ತು ಆಕಾಶದ ವೈಜ್ಞಾನಿಕ 'ಕ್ಷೇತ್ರ'ಕ್ಕೂ, ಕೆಳಗಿನ ವಚನ ಭಾಗದ ಕರ್ತೃ ಬಸವಣ್ಣನ ಭಾವನೆಯ 'ಕ್ಷೇತ್ರ' ಕ್ಕೂ ಸಾಮ್ಯ ಕಾಣಬಹುದಾಗಿದೆ.

ಆಕಾಶದಿಂದತ್ತತ್ತ ನಿಮ್ಮ ಶ್ರೀಮಕುಟ
ಪಾತಾಳದಿಂದತ್ತತ್ತ ನಿಮ್ಮ ಶ್ರೀಚರಣ

ಎಲ್ಲ ವಸ್ತುಗಳ ಮೂಲ 'ಮ್ಯಾಟರ್' ಎನ್ನುವ ವೈಜ್ಞಾನಿಕ ನಿರ್ಣಯಕ್ಕೂ ಲಲ್ಲ ಯೋಗೀಶ್ವರಿಯ ಸರ್ವವ್ಯಾಪಿ ಶಿವನ ಕಲ್ಪನೆಗೂ ಸಾಮ್ಯ ಕಾಣಬಹುದಾಗಿದೆ:

ಗಗನ ನೀನೆ ಭೂತಲ ನೀನೆ
ನೀನೆ ಪವನ, ದಿನ ರಾತ್ರಿ ನೀನೆ
ದವಸ ಚಂದನ ಹೂ ಜಲ ನೀನೆ
ನಿನ್ನ ಪೂಜೆಗೆ ಏನನು ತರಲಿ

ಇಂಥ 'ಸಾಮ್ಯ'ವನ್ನು ಭಕ್ತಿಸಾಹಿತ್ಯದಲ್ಲಿ ಮಾತ್ರವಲ್ಲ, ಬೇರೆ ಕಡೆಗಳಲ್ಲೂ ಕಾಣಬಹುದು. ಬೆಸಗರಹಳ್ಳಿ ರಾಮಣ್ಣನವರ ಕತೆ 'ಆಳುಮಗ' ದಲ್ಲಿ ಆಳುಮಗ ತಾನು ಸತ್ತಮೇಲೆ ತನ್ನನ್ನು ಸುಡಬೇಡಿ, ಹೂತುಬಿಡಿ; ಹೂತ ಜಾಗದಲ್ಲಿ ನೇರಿಳೆಮರ ನೆಡಿ ಎಂದು ಕೇಳಿಕೊಳ್ಳುತ್ತಾನೆ. ಮರದ ಕೆಳಗಿನ ನೆರಳು ಇತರರಿಗೆ ಉಪಯೋಗಕ್ಕೆ ಬರುವಂತೆ, ಹಣ್ಣನ್ನು ಊರ ಮಕ್ಕಳು ತಿಂದು ನಲಿಯಲಿ ಎಂದು ಬಯಸುತ್ತಾನೆ. ಆಳುಮಗನ ಈ ಬಯಕೆಯಲ್ಲಿ ಕಾಣುವುದೂ ಎಲ್ಲ ವಸ್ತುಗಳ ಮೂಲವಾದ ಭೂತಗಳೊಂದಿಗೆ ಸೇರಿ ಹೋಗಬೇಕೆಂಬ ಹಂಬಲ. ಒಂದೇ ವ್ಯತ್ಯಾಸವೆಂದರೆ, ಬಸವಣ್ಣ, ಲಲ್ಲೇಶ್ವರಿಯಂಥವರು 'ಮೂಲ'ವನ್ನು ದೇವರು, ದೈವತ್ವಗಳ ರೂಪದಲ್ಲಿ ಅಥವಾ 'ಪ್ರಜ್ಞೆ'ಯೆಂಬ ಭಾವದಲ್ಲಿ ತಂದಿರುತ್ತಾರೆ; ಸಮಕಾಲೀನ ಸಾಹಿತ್ಯದಲ್ಲಿ ನಾಸ್ತಿಕ ರಂಗು ಹೆಚ್ಚಾಗಿರುತ್ತದೆ. ಮೇತರ್‌ಲಿಂಕ್ ಸ್ವತಃ ಯಾವ ಗುಂಪಿಗೂ ಸೇರದೆ ಇದ್ದರೂ, ಹೆಚ್ಚು ಸಾಮ್ಯ ಹೊಂದಿರುವುದು ಆಸ್ತಿಕರ ಅಭಿಪ್ರಾಯದೊಂದಿಗೇ.

'ಇದು ವಿಜ್ಞಾನಯುಗ' ಎಂದು ಯಾರೋ ಎಲ್ಲೋ ಹೇಳಿದ್ದಾರೆ. ಈ ಮಾತು ಕೇಳಲು ಚೆನ್ನವೆಂದೊ, ಹೇಳಿ ಬಿಡಲು ಸುಲಭವೆಂದೊ, ಅಥವಾ ಸಂಕುಚಿತ ಮನಸ್ಸುಗಳಿಗೆ 'ಇಷ್ಟೇ ಸತ್ಯ' ಎನಿಸಿಯೋ- ಅಂತೂ, ಈ ಮಾತನ್ನು ಪದೇ ಪದೇ ಅನೇಕ ಕಡೆ ಅನೇಕ ಜನ ಹೇಳುತ್ತಾ, ಇದು ಅನೇಕ ಕಡೆ ಸರ್ವಮಾನ್ಯವಾಗಿ ನಿಂತುಬಿಟ್ಟಿದೆ.

ಆಗಲಿ, ಆದರೆ ಈ ಭ್ರಮೆ ಸಾಹಿತ್ಯ ಲೋಕಕ್ಕೆ ಹೊರತಾಗಿಲ್ಲದಿರುವುದು ಇಂದಿನ ದುರಂತ. ಅದಕ್ಕೂ ದುರಂತವೆಂದರೆ 'ವೈಚಾರಿಕತೆ' ಎಂಬ ಹೆಸರಿನಲ್ಲಿ ಇನ್ನೂ ಮೇಲಿನ ಸ್ಥಾನದಲ್ಲಿರುವ ಆಲೋಚನೆಗಳೂ ಇದೇ ಭ್ರಮೆಯಲ್ಲಿರುವುದು. ವಿಜ್ಞಾನಿಗಳಾದರೂ ವೈಜ್ಞಾನಿಕ ಪರಿಭಾಷೆಯಲ್ಲಿ ಹೇಳಲಾಗದ, ವಿವರಿಸಲಾಗದ ವಿಚಾರಗಳಿವೆ ಎಂದು ಒಪ್ಪುತ್ತಾರೆ. ಸ್ಟೀವನ್ ಹಾಕಿಂಗ್ ಭಗವಂತನ ಗುಣಲಕ್ಷಣಗಳನ್ನು ತಾನು ಅಭ್ಯಾಸ ಮಾಡುತ್ತಿರುವುದಾಗಿ ಹೇಳುತ್ತಾನೆ. ಆದರೆ ಕೆಲ ವಿಚಾರವಾದಿಗಳ ಪಾಲಿಗೆ ಕಣ್ಣಿಗೆ ಗೋಚರ ಪ್ರಪಂಚ ಮಾತ್ರ ಸತ್ಯ ಎನ್ನುವ ಕುರುಡು ನಂಬಿಕೆ. ಕ್ರಿಸ್ತಪೂರ್ವದಿಂದ ಇಂದಿನವರೆಗೆ ಯಾವುದೇ ದೇಶದ ಯಾವುದೇ ಮೂಲೆಯ ಲೋಕಹಿತ ಬಯಸಿದ ಪ್ರಸಿದ್ಧ ವ್ಯಕ್ತಿಗಳನ್ನು ಉದ್ಧರಿಸಿ: ಹೆರಾಕ್ಲಿತೂಸ್, ಸಾಕ್ರಟೀಸ್, ಪ್ಲೇಟೊ, ಅರಿಸ್ಟಾಟಲ್, ಯೇಸು, ಪ್ರವಾದಿ ಮಹಮದ್, ಕಾಳಿದಾಸ, ದಾಂತೆ, ಮಿಲ್ಟನ್, ವರ್ಡ್ಸ್‌ವರ್ತ್, ಬ್ಲೇಕ್, ಲಿಯೊನಾರ್ಡೋ, ಮೈಕೆಲ್ಯಾಂಜೆಲೊ, ಬಸವ, ಕಬೀರ, ರಾಮಕೃಷ್ಣಪರಮಹಂಸ, ವಿವೇಕಾನಂದ, ರವೀಂದ್ರನಾಥ ಠಾಕೂರ್, ರಾಜಾರಾಮ್‌ಮೋಹನ್‌ರಾಯ್, ಐನ್‌ಸ್ಟೀನ್, ಶ್ರಾಡಿಂಗರ್, ಅಬ್ದುಲ್‌ಸಲಾಮ್, ಮಾರ್ಟಿನ್ ಲೂಥರ್, ಗಾಂಧಿ..... ಸಂತೋಷದ ಸಂಗತಿಯೆಂದರೆ, ಕಾಲದ ಪರೀಕ್ಷೆ ಗೆದ್ದುಕೊಂಡು ಅಜರಾಮರರಾಗಿರುವ ವ್ಯಕ್ತಿ-ಚೈತನ್ಯಗಳಲ್ಲಿ ಹೆಚ್ಚಿನವರು ಆಸ್ತಿಕರೆ. ನಾಸ್ತಿಕರಾದ ಲೋಕದ ಹಿತ ಬಯಸಿದ ಬುದ್ಧ ಆದಿಯಾಗಿ ಮಹಾನ್ ಚೈತನ್ಯಗಳು ಇಲ್ಲವೆಂದಲ್ಲ. ಆದರೆ, ಮೊದಲ ಗುಂಪಿನವರ ಸಂಖ್ಯೆ ಗಣನೀಯವಾದ್ದು; (ದೇವರು ದೈವತ್ವಗಳ ಸ್ವರೂಪ ಕಾಲ -ದೇಶಗಳಲ್ಲಿ ಒದಲಾಗಬಹುದು) ಹಾಗಾಗಿ ಅವರ ನಂಬಿಕೆ, ಆದರ್ಶಗಳನ್ನು ಅಸತ್ಯ ಎನ್ನಲಾಗದು ಎಂದು ವಸ್ತುನಿಷ್ಠವಾಗಿ ಹೇಳಬಯಸುತ್ತೇನೆ.

ಈ ನಂಬಿಕೆ ಪ್ರೇಮದಂತೆ ಅಮೂರ್ತವಾದದ್ದು. ಸಾಹಿತ್ಯ, ವಿಮರ್ಶೆಯ ಕ್ಷೇತ್ರಗಳಲ್ಲಿ ಪ್ರೇಮ ಕುರಿತು ವ್ಯವಹರಿಸಬಲ್ಲ ಪರಿಕರಗಳು ವೈಚಾರಿಕ ಸಂದರ್ಭಗಳಲ್ಲೂ ಲಭ್ಯವಾಗಿವೆ, ಮಾನ್ಯವೂ ಆಗಿವೆ. ಇಷ್ಟು ಮಾತ್ರ ಪ್ರಗತಿ ಆಂತರಿಕ ನಾಗರೀಕತೆಯ ಮುನ್ನಡೆಯ ಪ್ರತೀಕವೆಂದು ಹರ್ಷಿಸಬೇಕು. ಆದರೆ ಇಷ್ಟೊಂದು ಸಂಖ್ಯೆಯ ಶ್ರೇಷ್ಠ ವ್ಯಕ್ತಿಗಳಲ್ಲಿ ಶಕ್ತಿ, ಪ್ರೇರಣೆಯಾಗಿರುವ ದೇವರು ದೈವತ್ವಗಳನ್ನು ವೈಚಾರಿಕ ಜಗತ್ತು ಯಾಕೆ ದೂರವಿಟ್ಟಿದೆಯೊ ತಿಳಿಯದಾಗಿದೆ. ದೇವರು ದೈವತ್ವಗಳನ್ನು ಮೂಢನಂಬಿಕೆ, ಪ್ರತೀಗಾಮೀ ಧೋರಣೆ, ಕೋಮುವಾದ, ಮೂಲಭೂತವಾದಗಳೊಂದಿಗೆ ಮಾತ್ರ ಸಂಯೋಜಿಸುತ್ತಿರುವುದು ಅಂಥ ಆಂತರಿಕ ನಾಗರೀಕತೆಯ ಕುಂಠಿತ ಬೆಳವಣಿಗೆಯನ್ನು

ತೋರಿಸುತ್ತಿದೆ. ಮೇತರ್‌ಲಿಂಕ್‌ನ ಗದ್ಯ ಕೃತಿಗಳು ಲಭ್ಯವಾಗದೇ ಹೋಗಿದ್ದಲ್ಲಿ ಅವನ ಬಹುತೇಕ ಉತ್ಕೃಷ್ಟ ನಾಟಕಗಳನ್ನು ಹಾಗೇ ಕರೆದು ಅವನ್ನು ವೈಚಾರಿಕ ಜಗತ್ತು ಮಿಕ್ಕೆಲ್ಲ ಓದುಗರಿಂದ ದೂರವಿಟ್ಟು ಬಿಡುತ್ತಿತ್ತೇನೊ. ದೇವರು-ದೈವತ್ವಗಳನ್ನು ಬಿಟ್ಟು ಉಳಿದದ್ದು ಮಾತ್ರ ಮಾನವೀಯ ವಿಚಾರ ಎನ್ನುವ ಹಾಗೆ.

ಸಾಹಿತ್ಯ ಕೃತಿ ಕುರಿತ ಅಭ್ಯಾಸಗಳು ಈ 'ಅಗೋಚರ' ವಾದದ್ದನ್ನು ಹೀಗೆ ಕೈಬಿಟ್ಟಿರುವುದು ದುಃಖಕ್ಕೆ ಒಂದು ಕಾರಣವಾದರೆ, ಸೃಜನಶೀಲರೂ ಈ 'ಅಗೋಚರ' ವನ್ನು ಕಣ್ಣಲ್ಲಿ ಕಣ್ಣಿಟ್ಟು ನೋಡಲು, ಕೃತಿಗಳಲ್ಲಿ ಅನುಭವದ ಮಟ್ಟದಲ್ಲಿ ಬಳಸಲು ಹಿಂಜರಿಯುತ್ತಿರುವುದು, ನಾಚುತ್ತಿರುವುದು, ಹೆದರುತ್ತಿರುವುದು - ಅಥವಾ 'ನಂಬಬಾರದೆಂಬ' ಧೋರಣೆ ತಾಳುವುದು- ಇನ್ನೊಂದು ಕಾರಣ. ಮೇತರ್‌ಲಿಂಕ್ ತನ್ನ ಸೃಜನಶೀಲ ಹಾಗೂ ಸೃಜನೇತರ ಕೃತಿಗಳಲ್ಲಿ ಈ ಯಾವ ಹಿಂಜರಿಕೆಗಳಿಗೂ ಆಸ್ಪದ ಕೊಡದೆ 'ನೇರ ಅಭಿವ್ಯಕ್ತಿ' ಯಲ್ಲಿ ತೊಡಗುತ್ತಾನೆ.

ನಾಡಿನ ಜಾನಪದ, ಪುರಾಣ, ಸಂಸ್ಕೃತಿಗಳನ್ನು ಬಳಸಿಕೊಂಡು ನಿರ್ಮಾಣ ವಾಗುತ್ತಿರುವ ನವಸಾಹಿತ್ಯ ಕೃತಿಗಳಲ್ಲಿಯೂ ಈ ಧೋರಣೆ ಹೆಚ್ಚಾಗುತ್ತಿದೆ. ಆಯಾ ಜಾನಪದ, ಪುರಾಣ, ಸಂಸ್ಕೃತಿಗಳ ಹಿಂದೆ ಆಯಾ ಜನರ ದೇವರು, ದೇವರುಗಳ ಬಗ್ಗೆ ನಂಬಿಕೆ, ಶ್ರದ್ಧೆ, ಭಯ, ಕಲ್ಪನೆ, ಭಾವನೆಗಳಿರುತ್ತವೆ ಎನ್ನುವುದನ್ನು ನವ ಸಾಹಿತ್ಯ ದೂರ ಮಾಡುತ್ತದೆ. ಅವುಗಳ ಲಯ, ಛಂದ, ಕತೆ, ಉಪಕತೆಗಳನ್ನು ಎರವಲು ಪಡೆದು ಸಾಹಿತ್ಯವನ್ನು ಪುನಾರಚಿಸುವಾಗ ಕಾಣುವುದು ಮಾಲುಕಳ್ಳತನ ಮಾಡುವ ಧೋರಣೆ ಯೇ ವಿನಾ ಸಂಸ್ಕೃತಿ-ಸಂಸ್ಕೃತಿಗಳ ಅಂತರಾಳದ ವಿನಿಮಯವಲ್ಲ.

ಮೇತರ್‌ಲಿಂಕ್ ಮಾತ್ರ ತಾನು ನಿಚ್ಚಳವಾಗಿ ಕಂಡದ್ದನ್ನು ತನ್ನ ಓದುಗರೂ ನಿಚ್ಚಳವಾಗಿ ಕಾಣಲಿ ಎನ್ನುವಂತೆ, ಇದಕ್ಕೆ ಬೇಕಾದ ಮಾರ್ಗವನ್ನು ತಾನೇ ನಿರ್ಮಿಸಿಕೊಂಡು ಕೃತಿರಚನೆಯಲ್ಲಿ ತೊಡಗಿದ್ದಾನೆ. ಹಾಗಾಗಿ ಇವನ ಅಭಿವ್ಯಕ್ತಿ ಕ್ರಮವನ್ನು 'ಡೈರೆಕ್ಟ್ ಸ್ಪೀಚ್' ಎನ್ನಬಹುದು.

** ** **

ಮೇತರ್‌ಲಿಂಕ್‌ನ ನಾಟಕಗಳ ಕುರಿತು

ಮಾರಿಸ್ ಮೇತರ್‌ಲಿಂಕನಿಗೆ ೧೯೧೧ರಲ್ಲಿ ನೊಬೆಲ್ ಪಾರಿತೋಷಕ ಸಿಕ್ಕಿದುದರಿಂದ ಅವನ ನಾಟಕಗಳ ಓದುಗರ ಸಂಖ್ಯೆ ಏರಿತು ಎಂದರೆ ತಪ್ಪೇನಿಲ್ಲ. ಕಾರಣ ಮೇತರ್‌ಲಿಂಕನ ಸಾಹಿತ್ಯವನ್ನು ಇಂದಿನ ಹುಸಿ ವಿಚಾರವಾದೀ ಪ್ರವೃತ್ತಿ ಸಾರಾಸಗಟಾಗಿ ದೂರವಿಡುತ್ತಿದ್ದದರಲ್ಲಿ ಸಂಶಯವಿಲ್ಲ; ಕಾರಣ ಆತನವು ವಿಚಿತ್ರ ನಾಟಕಗಳು. ಅವನ ಸಾಹಿತ್ಯ ಅನುಭವದ ಅನೇಕ ಮಜಲುಗಳನ್ನು ಒಂದೇ ಸಲಕ್ಕೆ ಒಳಗೊಂಡಿರುತ್ತದೆ. ಅಗೋಚರವಾದದ್ದನ್ನೇ ಒಪ್ಪದ ಇಂದಿನ ಮನೋಭಾವಕ್ಕೆ, ಮೇತರ್‌ಲಿಂಕ್ ಅಗೋಚರವಾದುದಕ್ಕೆ ಜೀವಕೊಟ್ಟು ರಂಗದ ಮೇಲೆ ತರುವುದು ಗ್ರಾಹ್ಯವಾಗಲಾರದು. 'ಸಕ್ಕರೆ' ಒಂದು ಪಾತ್ರವಂತೆ ! ಜೊತೆಗೆ 'ಸಕ್ಕರೆಯ ಆತ್ಮ' ಸಕ್ಕರೆಯಿಂದ ಮೇಲೇಳುವ ಇನ್ನೊಂದು ಪಾತ್ರವಿದೆ !

ಮೇತರ್‌ಲಿಂಕನ ನಾಟಕಗಳಲ್ಲಿ ಅವಿಭಾಜ್ಯವಾಗಿ ಕಾಣುವುದು ಅವನ ಮುಗ್ಧ ಧಾರ್ಮಿಕತೆ, ಅದರೊಳಗೆ ಆಧ್ಯಾತ್ಮಿಕ ಹುಡುಕಾಟ; ಧಾರ್ಮಿಕ ಚೌಕಟ್ಟಿನೊಳಗೂ ಆಧ್ಯಾತ್ಮಿಕತೆ ಕಾಣಬಲ್ಲ ಅಥವಾ ಅರಸಬಲ್ಲ ಕವಿಯ ಗುಣ. ಓದುಗನಿಗೆ ತನ್ನ ನಂಬಿಕೆಯನ್ನು ಮನವರಿಕೆ ಮಾಡುವ ತುಡಿತವೇನೂ ಇವನ ನಾಟಕಗಳಲ್ಲಿರುವುದಿಲ್ಲ; ಕಾರಣ ತನ್ನ ನಂಬಿಕೆಗಳು ಅಷ್ಟೊಂದು ಸಹಜವಾದ ಭಾವನೆಗಳು ಎಂದು ಮೇತರ್‌ಲಿಂಕ್ ಅಂದುಕೊಂಡಂತಿದೆ. ಆ ನಂಬಿಕೆಯ ಜಗತ್ತು ಅವನ ಪಾಲಿಗೆ ನಮ್ಮ ವಾಸ್ತವ ಅನುಭವದಷ್ಟೇ ವಾಸ್ತವ. ಆದರೂ ಮೇತರ್‌ಲಿಂಕ್‌ನ ನಾಟಕಗಳು ಸಮಕಾಲೀನ ಅಭಿರುಚಿಗೆ ದೂರವಾಗುವುದಿಲ್ಲ. ಧಾರ್ಮಿಕ ಪ್ರವೃತ್ತಿಯವನಾದರೂ ಈತ ತನ್ನ ಸುತ್ತಲ ಜಗತ್ತನ್ನು ಸೂಕ್ಷ್ಮವಾಗಿ ಗಮನಿಸುತ್ತಲೇ ಇರುತ್ತಾನೆ. ಕೇವಲ ಇತರ ಜನರನ್ನಲ್ಲ, ಪ್ರಾಣಿ, ಪಕ್ಷಿ, ಕ್ರಿಮಿ, ಕೀಟಗಳನ್ನೂ ಸಹ. ಕಡೆಗೆ ನಿರ್ಜೀವ ವಸ್ತುಗಳ ಆತ್ಮಗಳನ್ನೂ ಕಾಣಬಲ್ಲ. ಅಸ್ತಿತ್ವಕ್ಕೆ ಬಂದಿರುವ ಎಲ್ಲ ಜೀವ, ನಿರ್ಜೀವ ವಸ್ತುಗಳಿಗೂ ಆತ್ಮಗಳಿರುವುದೆಂದೂ, ಅದೇ ರೀತಿ ಅಸ್ತಿತ್ವಕ್ಕೆ ಬರುವ ಎಲ್ಲ ಭಾವನೆಗಳಿಗೂ ಆತ್ಮಗಳಿರುವುದೆಂದು ಮೇತರ್‌ಲಿಂಕ್ ನಂಬಿದ್ದ. ಸೃಷ್ಟಿಯೆಲ್ಲವೂ ಪ್ರಜ್ಞೆಯೇ; ಒಂದೊಂದು ವಸ್ತುವಿನಲ್ಲೂ ಬೇರೆ ಬೇರೆ ಪ್ರಮಾಣದ ಪ್ರಜ್ಞೆ ಒಳಗೊಂಡಿರುತ್ತದೆ; ಇದು ಜೀವಿ-ನಿರ್ಜೀವಿ ವಸ್ತುಗಳೆಲ್ಲಕ್ಕೂ ಅನ್ವಯಿಸುತ್ತದೆ. ಈ ಅಭಿಪ್ರಾಯ ಭಾರತೀಯ

ತತ್ವಶಾಸ್ತ್ರಗಳಲ್ಲೂ ಇಂಥ ಆತ್ಮ ಆಯಾ ವಸ್ತು, ಭಾವನೆಗಳ ಮೂಲ ಸ್ವರೂಪವಾಗಿರುತ್ತದೆ. ಆದರೂ ಆಯಾ ವಸ್ತು, ಭಾವನೆಗಳ ಮೂರ್ತರೂಪಕ್ಕೆ ಇರಬಹುದಾದ ಯಾವ ನಿರ್ಬಂಧಗಳೂ ಅವಕ್ಕೆ ಇರುವುದಿಲ್ಲ; ಆದ್ದರಿಂದಲೇ 'ನೀಲಿಹಕ್ಕಿ' ಯಲ್ಲಿ 'ನಾಯಿ' ಮಾತಾಡಬಲ್ಲದು; ಮರಗಳೂ ಮಾತಾಡಬಲ್ಲವು. ಬೆಳಕು, ಬೆಂಕಿ ಮಾತಾಡಬಲ್ಲವು. ವೈಭೋಗಗಳು ಮಾತಾಡಬಲ್ಲವು. ಆನಂದಗಳು ಮಾತಾಡಬಲ್ಲವು.

ಯೇಸು, ವರ್ಜಿನ್‌ಗಳಾಗಲಿ, ಜಾನಪದ ಕತೆಗಳಾಗಲಿ ಮೇತರ್‌ಲಿಂಕ್‌ನ ಕೈಯಲ್ಲಿ ಅಲಂಕಾರವಾಗಿ ಪ್ರತಿಮೆ, ರೂಪಕವಾಗಿ ಬಳಕೆಯಾಗಿರುವುದಿಲ್ಲ. ಇಟಲಿಯ ಸಮಕಾಲೀನ ನಾಟಕಕಾರ ಡೇರಿಯೊ ಫೊ ಕೂಡ ಯೇಸುವನ್ನು ಪಾತ್ರಧಾರಿಯನ್ನಾಗಿಸಿ ಸಣ್ಣನಾಟಕ ಕೃತಿಗಳನ್ನು ರಚಿಸಿದ್ದಾನೆ. ಕ್ರಿಶ್ಚಿಯನ್ ಹಬ್ಬ ಆಚರಣೆಗಳು ಮನುಷ್ಯಮಾತ್ರರ ಉತ್ಕಟ ಭಾವನೆಗಳ ಸುತ್ತ ಇರುತ್ತವೆ: ಯೇಸು ಹುಟ್ಟಿದ ಸಂಭ್ರಮ ಅಥವಾ ಯೇಸುವನ್ನು ಶಿಲುಬೆಗೇರಿಸಿದ ದುರಂತ- ಹೀಗೆ. ಇದು ಭಾರತೀಯ ಅಥವಾ ಪುರಾತನ ಗ್ರೀಕರ ತಾತ್ವಿಕ ದೇವ ದೇವತೆಗಳ ಆರಾಧನೆಗೆ ತದ್ವಿರುದ್ಧವಾದುದು. ಉತ್ಕಟ ಭಾವನೆಗಳನ್ನು ಕೈಬಿಟ್ಟು ಶಿಲುಬೆಗೇರಿಸಿದ ಯೇಸುವಿನ ರೂಪವನ್ನು ಮತಾಂಧರು ಕ್ರೂರತನ, ದುಷ್ಟತನಗಳನ್ನು ಪೊರೆಯಲು ಉಪಯೋಗ ಮಾಡುತ್ತಿರುವ ಈ ಸಂದರ್ಭದಲ್ಲಿ ಡೇರಿಯೊ ಫೋ ವಿಡಂಬನೆ ಮತ್ತು ಕ್ರೂರ ಹಾಸ್ಯಗಳ ಮೂಲಕ ನಾಟಕ ರಚಿಸಿ ಆ ಭವ್ಯ, ಉದಾತ್ತ ಭಾವನೆಗಳನ್ನು ಮತ್ತೆ ಮನದಲ್ಲಿ ಉಕ್ಕೇರಿಸುವ ಪ್ರಯತ್ನ ಮಾಡುತ್ತಾನೆ. ಯೇಸು ಲಾಜರಸ್‌ನನ್ನು ಗೋರಿಯಿಂದೇಳಿಸಿ ಜೀವದಾನ ಮಾಡುವ ದಾರುಣ ಕತೆಯನ್ನು ನಾಟಕ ಮಾಡುವಾಗ ಒಬ್ಬ ಜಾದೂಗಾರನ ಆಟ ನೋಡಲು ಜನ ನೆರೆದಂತೆ ತೋರಿಸುತ್ತಾನೆ. ಇನ್ನೊಂದು ನಾಟಕದಲ್ಲಿ ಯೇಸುವನ್ನು ಶಿಲುಬೆಗೇರಿಸುವ ಇಬ್ಬರು ವ್ಯಕ್ತಿಗಳು ಯಾವುದೋ ಯಾಂತ್ರಿಕ ಕೆಲಸ ಮಾಡುವಾಗ ಬೇಸರ ಕಳೆಯಲು ಹಾಸ್ಯದಲ್ಲಿ ತೊಡಗುವಂತೆ ತಮಾಷೆಯಾಗಿ ಮಾತಾಡಿಕೊಳ್ಳುತ್ತಿರುತ್ತಾರೆ. ಒಬ್ಬ ತಾನು ಏಳು ಏಟಿಗೇ ಅಂಗೈಯನ್ನು ಶಿಲುಬೆಗೆ ಸೇರಿಸಿ ಮೊಳೆ ಹೊಡೆಯಬಲ್ಲನೆಂದು ಕೊಚ್ಚಿಕೊಂಡರೆ, ಇನ್ನೊಬ್ಬ, ತಾನು ಆರೇ ಏಟಿಗೆ ಹಾಗೆ ಮಾಡಬಲ್ಲನೆಂದು ಹೇಳಿಕೊಳ್ಳುತ್ತಾನೆ. ಇಬ್ಬರೂ ಪಣಕಟ್ಟಿ, ಉತ್ಸಾಹದಿಂದ ಕೂಗಾಡುತ್ತಾ ಮೊಳೆ ಜಡಿಯುತ್ತಾರೆ. ನಂತರ ಅವರ ಹಿರಿಯ ಬಂದು, ಮುಂಗೈಗೆ ಕಟ್ಟಿದ್ದ ಹಗ್ಗ ಬಿಚ್ಚಿ, ಆಗಲೂ ಜಗ್ಗದೇ ಸರಿಯಾಗಿ ಕೂತಿರುವ ಅಂಗೈ

ವೊಳೆಗಳನ್ನು ಪರೀಕ್ಷಿಸಿದಾಗ ತಮ್ಮ ಕಾರ್ಯ ಕೌಶಲ್ಯದಿಂದ ಹಿಗ್ಗಿ ಹೆಮ್ಮೆ ಪಟ್ಟುಕೊಳ್ಳುತ್ತಾರೆ. ಯೇಸುವಿನ ಸೊಂಟಕ್ಕೆ ಶಿಲುಬೆಗೆ ಸೇರಿಸಿ ಪಟ್ಟಿಕಟ್ಟಿ, ನಂತರ ಮಲಗಿದ್ದ ಶಿಲುಬೆಯನ್ನು ನೆಟ್ಟಗೆ ಮಾಡುತ್ತಾರೆ- ಹಾಗೆ ಪಟ್ಟಿಕಟ್ಟದಿದ್ದರೆ 'ಆ ಯಪ್ಪ ತಮ್ಮ ಮೇಲೆ ಬಿದ್ದರೆ ಏನು ಗತಿ' ಎಂದುಕೊಳ್ಳುತ್ತಾ ! ಮೂರ್ಖನೊಬ್ಬ ತಾನಾದರೂ ಯೇಸುವನ್ನು ರಕ್ಷಿಸಲು ಹೋದಾಗ ಯೇಸು ಮಾನವಕೋಟಿಯ ಮೋಕ್ಷಕ್ಕಾಗಿ ತಾನು ಸಾವಿಗೆ ತುತ್ತಾಗುವುದಾಗಿಯೂ, ಶಿಲುಬೆಯಿಂದ ಇಳಿಯುವುದಿಲ್ಲವೆಂದೂ ತಿಳಿಸಿದಾಗ, ಆ ಮೂರ್ಖ ಯೇಸುವನ್ನು 'ಮಹಾ ಮೂರ್ಖ'ನೆನ್ನುತ್ತಾನೆ. ಹೀಗೆ, ಕ್ರೂರತನ ಹಾಸ್ಯಗಳೆರಡೂ ಸೇರಿ, ನೋಡುಗನ ಮನ ಮಿಡಿಯುವಂತೆ ಮಾಡುತ್ತದೆ. - ಘೋನ ನಾಟಕ.

ಮೇತರ್‌ಲಿಂಕನ ಯೇಸು (ರಂಗದ ಮೇಲೆ ಬರುವುದಿಲ್ಲ) ಇನ್ನೂ ಸಹಜವಾಗಿ, ಮುಗ್ಧತನದಿಂದ, ನೇರವಾಗಿ ಮೂಡಿಬರುತ್ತಾನೆ. ಆದರೂ, ಇಲ್ಲಿ ಮೂಲಭೂತ ವಾದಿಯ ಗಟ್ಟಿದನಿಯಾಗಲಿ, ಧರ್ಮಪ್ರಚಾರಕರ ಉತ್ಸಾಹ, ಹುರುಪಾಗಲಿ ಇಲ್ಲ. ಇರುವುದೇನಿದ್ದರೂ ಅಂತರಂಗ ತಟ್ಟುವ ಉದ್ದೇಶ.

ಮೇತರ್‌ಲಿಂಕನ ನಾಟಕಗಳಲ್ಲಿ ಒಂದೇ ಸಲಕ್ಕೆ ಮೂರು ನಾಲ್ಕು ಜಗತ್ತುಗಳು ಒಂದರೊಳಗೊಂದು ಹೆಣೆದುಕೊಂಡಿರುತ್ತವೆ: ಒಂದು, ನಾವು-ನೀವು ಕಾಣುವ ವಸ್ತು ಪ್ರಪಂಚ. ಎರಡು, ಅವುಗಳ ನಡುವೆ ಸುಳಿಯುತ್ತಿರುವ ಹೆಚ್ಚು ಸೂಕ್ಷ್ಮವಾದ ಪವಾಡ, ಮಾಂತ್ರಿಕತೆಯ ಪ್ರಪಂಚ; ಮೂರು, ದೈವತ್ವದ ಪ್ರಪಂಚ; ಹಾಗೂ ನಾಲ್ಕು, ವಿಚಾರ, ವೈಜ್ಞಾನಿಕತೆಗೆ ಹತ್ತಿರವಾದ ಅರಿವಿನ ಪ್ರಪಂಚ. ಇಲ್ಲಿನ ಅನುಭವ ಎಷ್ಟೇ ಸೂಕ್ಷ್ಮತರ ವಾದದ್ದಾದರೂ ಮೇತರ್‌ಲಿಂಕ್ ಎಲ್ಲ ಥರದ ಓದುಗರಿಗೆ ಗ್ರಾಹ್ಯವೆನಿಸುವುದು ಅವನ ಈ ವೈವಿಧ್ಯಮಯ ಜಗತ್ತುಗಳಿಂದಾಗಿಯೇ. ಇದೇನು ಆಕಸ್ಮಿಕವಲ್ಲ. ಮೇತರ್‌ಲಿಂಕ್‌ನ ಚೈತನ್ಯ ಎಲ್ಲ ಜಗತ್ತುಗಳ ಹಿಂದಿನ ಒಂದುತನವನ್ನು ಅರಸುತ್ತಿರುವ ಚೈತನ್ಯವಲ್ಲದಿದ್ದಲ್ಲಿ ಆತ ತನ್ನ 'ಮರಿಯೆ ಮಗ್ದಲೀನೆ' ನಾಟಕದ ಮುನ್ನುಡಿಯಲ್ಲಿ ಹೀಗೆ ಬರೆಯುತ್ತಿರಲಿಲ್ಲ. ಈ ಪ್ರಪಂಚದ ಸಹ ಲೇಖಕನೊಬ್ಬ ಬೈಬಲ್ಲಿನಿಂದ ಉದ್ಧರಿಸಿ ಬರೆದ ಕೃತಿಯನ್ನು ತಾನು ರೂಪಾಂತರ ಮಾಡುತ್ತೇನೆಂದಾಗ ಆತ ಅನುಮತಿ ಕೊಡದ್ದನ್ನು ಅರಿತುಕೊಳ್ಳದ ಪೆದ್ದು ಮುಗ್ಧತನ ಮೇತರ್‌ಲಿಂಕ್‌ನದಲ್ಲ. ಬದಲಾಗಿ ಯೇಸುವನ್ನು ಕುರಿತು ಭಕ್ತ್ಯಾದರಗಳ ನ್ನಿಟ್ಟುಕೊಂಡು, ಅಭಿಸಾರಿಕೆ ಕುರಿತು ಈ ಪವಾಡ ನಾಟಕ ಬರೆಯುವಾಗ ಆತನಲ್ಲಿ

ದೈವತ್ವದ ಅನುಗ್ರಹದಂತೆ ವೈಚಾರಿಕತೆಯ ಒಪ್ಪಿಗೆಯೂ ಆಗಬೇಕಿತ್ತು -ಎಂದರೇ ತಿಳಿಯುತ್ತದೆ, ಮೇತರ್‌ಲಿಂಕನ ವ್ಯಕ್ತಿತ್ವ ಅಸಾಮಾನ್ಯವಾದ್ದು ಎಂದು. ಒಂದೇ ಕಾಲಕ್ಕೆ ಇಹ ಪರಗಳಲ್ಲಿ ಸುಳಿದಾಡುವಂಥದ್ದು ಎಂದು.

** ** **

ಈ ನಾಟಕದ ಮೊದಲ ಅಂಕದ ಕೊನೆಯಲ್ಲಿ, ಜನರ ಗುಂಪು ಮರಿಯೆ ಮುಗ್ದಲೀನೆಯ ವಿರುದ್ಧ ಕೂಗಾಡುತ್ತಿರುವಾಗ ಯೇಸು ರಂಗದ ಹಿಂದಿಂದ, 'ನಿಮ್ಮಲ್ಲಿ ಒಂದೂ ಪಾಪವೆಸಗಿಲ್ಲದಾತನೇ ಮೊದಲು ಕಲ್ಲು ತೂರಲಿ ' ಎಂದು ಮಧ್ಯಪ್ರವೇಶ ಮಾಡುವುದು, ಮತ್ತು ಆ ಮಹಾನ್ 'ಪಾಪಿ' (ಮರಿಯೆ ಮುಗ್ದಲೀನೆ) ತನ್ನನ್ನು ತಾನು ರೋಮನ್ನನಿಗೆ ಅರ್ಪಿಸಿಕೊಂಡು ದೇವರ ಪುತ್ರನನ್ನು ಉಳಿಸುವುದೋ ಅಥವಾ ಹಾಗೆ ಮಾಡದೆ ಆತನನ್ನು ಸಾವಿಗೆ ಒಪ್ಪಿಸುವುದೋ ಎಂಬ ತೊಳಲಾಟದಲ್ಲಿ ಸಿಕ್ಕಿಕೊಳ್ಳುವುದು - ಈ ಎರಡು ಸಂದರ್ಭಗಳನ್ನು ನಾನು ಶ್ರೀ ಪಾಲ್ ಹೇಯ್ಸ್ ಅವರ ನಾಟಕ ''ಮರಿಯ ವಾನ್ ಮಗ್ದಾಲ'' ದಿಂದ ಎರವಲು ಪಡೆದಿದ್ದೇನೆ.

ಬರೆಯಲು ತೊಡಗುವ ಮುಂಚೆ ಮಾನ್ಯ ಜರ್ಮನ್ ಕವಿಯವರನ್ನೆ ಆ ಎರಡು ಸಂದರ್ಭಗಳನ್ನು ನಾನು ಬಳಸಿಕೊಳ್ಳಲು ಅನುಮತಿ ಕೊಡಿರೆಂದು ಕೇಳಿದ್ದೆ. ಅವರ ನಾಟಕಗಳ ಪ್ಲಾಟ್ ನನ್ನದಕ್ಕಿಂತಾ ಗಾಢವಾದ್ದು; ಆ ಸಂದರ್ಭಗಳು ಅಲ್ಲಿ ಕೆಲ ಚಿತ್ರಗಳಾಗಿ ಮಾತ್ರ ಬಂದಿದ್ದಾವೆ. ಅವರ ಹಕ್ಕುಗಳನ್ನು ಅವರು ಬಯಸಿದ ರೀತಿಯಲ್ಲಿ ಮಾನ್ಯಮಾಡಲು ನಾನು ತಯಾರಿದ್ದೆ ಎಂದು ಕೂಡ ತಿಳಿಸಿದ್ದೆ. ನನ್ನ ಬೇಡಿಕೆಯನ್ನು ಬೆದರಿಕೆಯ ದನಿಯಲ್ಲಿ ನಿರಾಕರಿಸಲಾಯಿತು ಎಂದು ಇಲ್ಲಿ ತಿಳಿಸಲು ವಿಷಾಧಿಸುತ್ತೇನೆ.

ಆ ಕ್ಷಣದಿಂದ, ಆ ಮಾತುಗಳು ಗಾಸ್ಪೆಲ್‌ನವಾದ್ದರಿಂದ ಅವು ಎಲ್ಲರ ಆಸ್ತಿಯೆಂದೂ ಮತ್ತೆ ಆ ತೊಳಲಾಟ ಎಲ್ಲ ನಾಟಕ ಸಾಹಿತ್ಯಗಳಲ್ಲೂ ಕಂಡು ಬರುವಂಥ ಸಾಮಾನ್ಯ ಅಂಶವೆಂದೂ ಭಾವಿಸಿಕೊಳ್ಳುವುದು ಅನಿವಾರ್ಯವಾಯಿತು.

ಇಷ್ಟು ಹೇಳಿದ ಮೇಲೂ, ನಾನು ಆ ಹಿರಿಯ ನಿಸ್ಸೀಮರಿಗೆ ನನ್ನ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ. ಯಾಕಂದರೆ ಉದ್ದೇಶ ಪೂರ್ವಕವಲ್ಲದಿದ್ದರೂ ಅವರು ನೀಡಿರುವ ಬೌದ್ಧಿಕ ಲಾಭ ಅಪಾರವಾದದು.

ಪವಾಡ,ಮಾಂತ್ರಿಕತೆಗಳು ನಾಟಕಗಳಲ್ಲಿವೆ ಎಂದ ಮೇಲೆ ಅದರ ತಾಂತ್ರಿಕತೆಯನ್ನು ಕುರಿತು ಚರ್ಚಿಸುವುದು ಬಹಳವೇ ಇದೆ. ಆದರೆ ಯಾವ ಒಂದು ಹುಡುಕಾಟವನ್ನು ಮನವರಿಕೆ ಮಾಡಲು ಈತ ಪವಾಡ, ಮಾಂತ್ರಿಕತೆಗಳನ್ನು ತಂತ್ರವನ್ನಾಗಿ ಮಾಡಿಕೊಂಡಿದ್ದಾನೆ ಎನ್ನುವುದು ಮುಖ್ಯವಾಗುತ್ತದೆ.

'ಸಿಸ್ಟರ್ ಬೀಟ್ರಿಸ್' ಮತ್ತು 'ಮರಿಯೆ ಮಗ್ದಲೀನೆ' ಧಾರ್ಮಿಕತೆಯನ್ನು ಹಿನ್ನೆಲೆಯಾಗಿಟ್ಟುಕೊಂಡಿರುವ ಪವಾಡ ನಾಟಕಗಳು. 'ಫೆಲಿಯಾಸ್ ಎತ್ ಮೆಲಿಸಾಂದೆ ' 'ಆರ್ದಿಯನ್ ಎತ್ ಬಾರ್ಬಬ್ಲೂ' ಮತ್ತು 'ಅಗ್ಲವೇನೆ ಎತ್ ಸೆಲಿಸೆತ್ತೆ' 'ನೀಲಿಹಕ್ಕಿ' 'ಲಗ್ನನಿಶ್ಚಯ' ಗಳಲ್ಲಿ ಪವಾಡ, ಮಾಂತ್ರಿಕತೆಗಳು ಅಲೌಕಿಕ ಅಥವಾ ತಾತ್ವಿಕ ಅರ್ಥಗಳಿಗಾಗಿ ಬಳಕೆಯಾಗಿದೆ. 'ಸಿಸ್ಟರ್ ಬೀಟ್ರಿಸ್' ಮತ್ತು 'ಆರ್ದಿಯನ್ ಎತ್ ಬಾರ್ಬಬ್ಲೂ' ಲೇಖಕನೇ ಹೇಳುವಂತೆ ಲಿಬ್ರೆತೋ ಅಥವಾ ಗೇಯ ನಾಟಕಗಳು. 'ಇಂಟೀರಿಯರ್' ಪ್ರಾಯೋಗಿಕವೆನ್ನುವಂಥ ಸಮಕಾಲೀನವಾಗಬಲ್ಲ ಸಾಮಾಜಿಕವೆನ್ನಬಹುದಾದ ನೇರ ನಾಟಕವಾದರೆ, 'ಮೊನ್ನವನ್ನ' ಐತಿಹಾಸಿಕ ನಾಟಕವೆನಿಸಿಕೊಳ್ಳುತ್ತದೆ.

ಮೇತರ್‌ಲಿಂಕ್‌ನ ಮುಖ್ಯ ನಾಟಕಗಳಲ್ಲಿ ಮುಖ್ಯ ಪಾತ್ರಧಾರಿಗಳು ಸಾಮಾನ್ಯವಾಗಿ ಹೆಣ್ಣುಮಕ್ಕಳೇ ಆಗಿರುತ್ತಾರೆ: ಸನ್ಯಾಸಿನಿ ಬೀಟ್ರೀಸ್‌ನಿಂದ ಹಿಡಿದು, ಕ್ರೂರ ಪಾಳೆಗಾರನಿಗೆ ಮತ್ತು ಅವನ ಐದು ಜನ ಹೆಂಡತಿಯರಿಗೆ ಬಿಡುಗಡೆ ಕಾಣಿಸುವ ಪ್ರಿಯತಮೆ ಆರ್ದಿಯೆನ್, ಜನರ ಪ್ರಾಣಕ್ಕಾಗಿ ತನ್ನ ಮಾನ ತೊರೆಯಲು ಸಿದ್ಧಳಾಗುವ ಗರತಿ ಮೊನ್ನವನ್ನ, ಇದಕ್ಕೆ ವಿರುದ್ಧವಾದ ರೀತಿಯಲ್ಲಿ ಯೇಸು ಪ್ರಾಣ ರಕ್ಷಿಸಲು ತನ್ನ ಮಾನವನ್ನು ಪಣವಾಗಿಸಲು ಒಪ್ಪದ ಅಭಿಸಾರಿಕೆ ಮಗ್ದಲೀನೆ, ಕಿನ್ನರ ಲೋಕದ ನಿವಾಸಿಗಳಾದಂಥ ಮೆಲಿಸಾಂದೆ, ಸೆಲಿಸೆತ್ತೆ - ಹೀಗೆ ಹೆಣ್ಣುಮಕ್ಕಳೇ ಮುಂಚೂಣಿಯಲ್ಲಿರುತ್ತಾರೆ.

ಮೇತರ್‌ಲಿಂಕ್‌ನ ವಿಶೇಷತೆ ಅವನ ರಂಗ ತಂತ್ರಗಳಲ್ಲೂ ಎದ್ದು ಕಾಣುತ್ತದೆ. ಅವನ ಬಹುತೇಕ ನಾಟಕಗಳಲ್ಲಿ ಬಹಳ ದೀರ್ಘವಾದ ರಂಗ ನಿರ್ದೇಶನಗಳಿರುತ್ತವೆ. ಕೆಲವು ಸಲ ರಂಗದ ಮೇಲೆ ಇದ್ದಹಾಗೇ ತರಲಾಗದಷ್ಟು ವಿವರಗಳು ಅಲ್ಲಿರುತ್ತವೆ. ಉದಾಹರಣೆಗೆ 'ಆರ್ದಿಯೆನ್ ಎತ್ ಬಾರ್ಬಬ್ಲೂ' ನಾಟಕದ ಮೊದಲಲ್ಲಿ ಬರುವ ರಂಗ ನಿರ್ದೇಶನದ ಪ್ರಕಾರ ಎರಡು ಮಹಡಿ, ಎರಡಕ್ಕೂ ಹಲವಾರು ಬಾಗಿಲುಗಳು ; ಒಂದಂತೂ ಕೋಣೆಯೊಳಗೆ ಕೋಣೆ! ಹೀಗಿರುತ್ತದೆ. ಮೇತರ್‌ಲಿಂಕ್ ತಾನೇ ಪ್ರಯೋಗ

ಮಾಡಿದ್ದರೂ ನಿರ್ದೇಶನವನ್ನು ಯಥಾವತ್ತು ಪಾಲಿಸುತ್ತಿದ್ದನೊ ಇಲ್ಲವೊ. 'ನೀಲಿ ಹಕ್ಕಿ' ಯಲ್ಲಿ ಒಂದು ಬ್ರೆಡ್ಡಿನ ತುಂಡಿಗೆ ಅದರ ಪಾತ್ರೆಯೊಳಗೆ ಹೋಗಲು ಯಕ್ಷಿ ಜಾಗಮಾಡಿ ಕೊಡುತ್ತಾಳೆ; ಅದು ಹೋಗಿ ಅಲ್ಲಿ ಸೇರಿಕೊಳ್ಳುತ್ತದೆ ! ಇದನ್ನು ಯಥಾವತ್ತಾಗಿ ರಂಗದ ಮೇಲೆ ತರಬೇಕೆಂದರೆ ರಂಗ ಎಷ್ಟು ಚಿಕ್ಕದಾಗಿರಬೇಕು, ಈ ಕ್ರಿಯೆಯ ನೋಡುಗರ ಸಂಖ್ಯೆ, ಕತ್ತು, ಕಣ್ಣುಗಳು ಹೇಗಿರಬೇಕು? ತಕ್ಷಣ ಮುಂದಿನ ದೃಶ್ಯ ಭಾಗದ ಕಾರಣ ರಂಗ ವಿಸ್ತಾರವಾಗಬೇಕು! ಅಷ್ಟೇ ಯಾಕೆ, ಬ್ರೆಡ್ಡಿನ ತುಂಡುಗಳಿಂದ ಸಕ್ಕರೆ ಅಚ್ಚಿನಿಂದ ಆಯಾ ಆತ್ಮಗಳು ಎದ್ದು ಬರುವುದೆಂದು ನಾಟಕಕಾರ ಹೇಳಿ ಬಿಡುತ್ತಾನೆ. ಅದನ್ನು ಪ್ರಯೋಗಿಸುವವರ ಕಲ್ಪನಾ ಶಕ್ತಿಯಂತೂ ನಾಟಕಕಾರನದಕ್ಕೆ ಹೋಲುವಂತಿದ್ದರೆ ಸರಿ. ಜೊತೆಗೆ ಆ ಪರಿಕರಗಳೂ ನಾಟಕದಲ್ಲಿ ಜೀವಂತವಾಗಿ ಪಾಲ್ಗೊಳ್ಳಲು ಸಿದ್ಧವಿದ್ದರೆ ಇನ್ನೂ ಸರಿ !

ಎ. ಬಿ. ವಾಕ್ಲೀ ಎನ್ನುವವನು ಹೇಳುತ್ತಾನೆ : ''ಮೇತರ್‌ಲಿಂಕನ 'ನಿಶ್ಚಲ' ಥಿಯೆಟರ್ ನಿಜವಾಗದ ಕನಸಿನಂತೆ; ಆದರೂ ವಾಸ್ತವತೆಗೆ ವಿರುದ್ಧವಾದ ಮೋಹಕತೆ ಇರುವ ಕನಸದು''.

'ಸಿಸ್ಟರ್ ಬೀಟ್ರಿಸ್' ನಾಟಕದ ಕತೆ ಬಹಳ ಸರಳ : ಬೀಟ್ರಿಸ್ ಎಂಬ ಸನ್ಯಾಸಿನಿ ರಾಜಕುಮಾರನಲ್ಲಿ ಅನುರಕ್ತಳಾಗಿ ಕಾನ್ವೆಂಟ್ ಬಿಟ್ಟು ಅವನೊಂದಿಗೆ ಹೋಗಿ ಬಿಡುತ್ತಾಳೆ; ಅವಳ ತೆರವಾದ ಜಾಗದಲ್ಲಿ ವರ್ಜಿನ್ ಮೇರಿ ಸ್ವತಃ ಜೀವತಳೆದು ಬರುತ್ತಾಳೆ. ಕಾಲಾನಂತರ ಮುದಿ ವಯಸ್ಸಿನಲ್ಲಿ ಅವಳು ಕಾನ್ವೆಂಟಿಗೆ ಮರಳಿದಾಗ ವರ್ಜಿನ್ ಪುನಃ ವಿಗ್ರಹವಾಗುತ್ತಾಳೆ. ಹೆದರಿದ್ದ ಬೀಟ್ರಿಸ್‌ಗೆ ಕಾದಿರುವುದು ಅವಮಾನವಲ್ಲ, ಬದಲಾಗಿ ಮರ್ಯಾದೆ; ಯಾಕೆಂದರೆ ಬೀಟ್ರೀಸ್ ಪಾಪಿಯಲ್ಲ, ವರ್ಜಿನ್ ಮನಸ್ಸು ಗೆದ್ದವಳು 'ಕ್ಷಮೆಗೆ ಅನರ್ಹವಾದ ಪಾಪ ಯಾವುದೂ ಇಲ್ಲ'.

ಈ ನಾಟಕ ವೈಚಾರಿಕ ವಿವೇಚನೆಗೆ ಸಿಗದು. ಯಾಕಂದರೆ ಇಲ್ಲಿನ ಪವಾಡಕ್ಕೆ ಯಾವುದೇ ಮಾರ್ಮಿಕ ಅರ್ಥವಾಗಲಿ ರೂಪಕಾತ್ಮಕ (ಮೆಟಫಾರಿಕ್) ವ್ಯಾಖ್ಯಾನಗಳಾಗಲಿ ಇಲ್ಲ. ಅಗೋಚರ ದೈವತ್ವವನ್ನು ಯಾವುದೇ ತಾತ್ವಿಕ ದೃಷ್ಟಿಕೋನದಿಂದ ನಾಟಕ ಹೊರಹಾಕುತ್ತಿಲ್ಲ ; ಬದಲಾಗಿ ಆಸ್ತಿಕ ಜನಪದರು ತಾವು ನಂಬಿದ ದೇವರುಗಳ ಪವಾಡಗಳ ಬಗ್ಗೆ ಮುಗ್ಧತನದಿಂದ ಕತೆ ಹೇಳುವ ರೀತಿಯಲ್ಲೇ ಮೇತರ್‌ಲಿಂಕ್ ವರ್ಜಿನ್ ಮೇರಿಯ ಪವಾಡದ ಕತೆಯನ್ನು ನಾಟಕ ಮಾಡಿದ್ದಾನೆ. ಇಲ್ಲಿ ಯಾವ ನಂಬಿಕೆ ಅಪನಂಬಿಕೆಯನ್ನೂ ಕೊಂಚಕಾಲಕ್ಕೂ ನಾವು ಪಕ್ಕಕ್ಕೆ ಸರಿಸಿಡಬೇಕಿಲ್ಲ !

'ಸಿಸ್ಟರ್ ಬೀಟ್ರಿಸ್' ಕಾನ್ವೆಂಟೊಂದರ ಮುಂಭಾಗದಲ್ಲಿ ನಡೆಯುತ್ತದೆ. ಗೇಟಿನ ಬಳಿ ಇರುವ ವರ್ಜಿನ್‌ಳ ಮುಖ ಲಕ್ಷಣಗಳು ಬೀಟ್ರಿಸ್‌ನ್ನು ಹೋಲುವುದರಿಂದ ರಂಗದ ಮೇಲೆ 'ಪವಾಡ' ಸಾಧ್ಯವೆನಿಸುತ್ತದೆ. ಬೀಟ್ರಿಸ್ ರಾಜಕುಮಾರನ ಜೊತೆ ಹೋಗುವ ಮೊದಲು ದುಕೂಲವನ್ನು ವರ್ಜಿನ್ ವಿಗ್ರಹದ ಬಳಿ ತೆಗೆದಿಟ್ಟಿರುತ್ತಾಳೆ. ವರ್ಜಿನ್ ಅದನ್ನೇ ತೊಟ್ಟುಕೊಂಡು ತಾನೇ 'ಬೀಟ್ರಿಸ್' ಆಗುತ್ತಾಳೆ. ವರ್ಜಿನ್ ವಿಗ್ರಹದ ಚಿನ್ನದ ಡಾಬು ಕದ್ದ ಆರೋಪ ಈ 'ಬೀಟ್ರಿಸ್' ಗೆ ಬಂದು, ಅವಳನ್ನು ಶಿಕ್ಷೆಗೆ ಗುರಿಪಡಿಸಿದಾಗ 'ಬೀಟ್ರಿಸ್' ಪವಾಡ ಮೆರೆದು, ತಾನು ಕಳ್ಳಿಯಲ್ಲವೆಂದು ಸಾಬೀತು ಮಾಡುತ್ತಾಳೆ. ಕಡೆಯಲ್ಲಿ ನಿಜವಾದ ಬೀಟ್ರಿಸ್ ಬಂದಾಗ ವರ್ಜಿನ್ ಮತ್ತೆ ವಿಗ್ರಹವಾಗಿ ಬಿಡುತ್ತಾಳೆ.

ಮೇತರ್‌ಲಿಂಕ್‌ನ ಭಾಷೆ ಕಾವ್ಯಾತ್ಮಕವಾದದ್ದು. ರಂಗ ನಿರ್ದೇಶನ ಕೂಡ ಅದೇ ಮಾದರಿಯ ಕಾವ್ಯಗುಣ ಹೊಂದಿರುತ್ತದೆ ಎನ್ನುವುದು ಗಮನಾರ್ಹ.

'ಸಿಸ್ಟರ್ ಬೀಟ್ರಿಸ್' ನಾಟಕದ ಮೊದಲ ಅಂಕದ ಕಡೇ ಭಾಗ ಮತ್ತು ಎರಡನೆ ಅಂಕದ ಮೊದಲನೆ ಭಾಗಗಳನ್ನು ಒಳಗೊಂಡ ಆಯ್ದ ಭಾಗ ಇಲ್ಲಿದೆ. ಇದರಿಂದ ಮೇತರ್‌ಲಿಂಕ್‌ನ ಮನಸ್ಸಿನ ಪರಿಶುದ್ಧತೆ, ಮಾಧುರ್ಯ, ಕಾವ್ಯಾತ್ಮಕತೆಗಳ ಪರಿಚಯ ಸಾಧ್ಯವಾಗಬಹುದು.

'ಸಿಸ್ಟರ್ ಬೀಟ್ರಿಸ್'ನಿಂದ ಆಯ್ದ ಭಾಗ

ಸಂದರ್ಭ : ***ಪ್ರಿಯತಮ ಬೆಲಿದೋರ್ ಸಿಸ್ಟರ್ ಬೀಟ್ರಿಸ್‌ನ ಕಾನ್ವೆಂಟ್‌ಗೆ ರಾತ್ರಿ ಬಂದಿದ್ದಾನೆ. ಅವನೊಂದಿಗೆ ಹೊರಟು ಹೋಗಲೂ ಆಗದೆ, ಕಾನ್ವೆಂಟಿನಲ್ಲಿ ಇರಲೂ ಆಗದೆ ಸಿಸ್ಟರ್ ಬೀಟ್ರಿಸ್ ತೊಳಲುತ್ತಿದ್ದಾಳೆ.***

ಬೆಲಿದೋರ್: *ಪ್ರಿಯೆ, ನೀನು ತತ್ತರಿಸಿ ಹೋಗುತ್ತಿದ್ದೀಯ!*
ನನ್ನ ಮುತ್ತುಗಳೆಲ್ಲ ತಣ್ಣೀರ ಮೇಲೆ ಕಿಡಿಗಳು ನಂದುವ ಹಾಗೆ
ನಿನ್ನ ತುಟಿಗಳ ಮೇಲೆ ಸಾಯುತ್ತಿವೆ
ನಿನ್ನ ಸುಂದರ ಮೊಗವನ್ನೆತ್ತು, ಮುಗಳ್ನಗದಿರಲೆತ್ನಿಸುತ್ತಿರುವ
ಆ ತುಟಿಗಳನ್ನು ತೋರು
ಓ! ಇದೊಂದು! ಈ ದುಕೂಲ....
ನಿನ್ನ ಕೊರಳ ಬಳಸಿರುವ ಭಾರದ ದುಕೂಲ
ನಿನ್ನ ಹೃದಯ ಜಗ್ಗುತ್ತಿರುವ ದುಕೂಲ,
ಇದನ್ನು ಮಾಡಿರುವುದೇ ಸಾಯುವವರಿಗಾಗಿ,
ಬದುಕುವವರಿಗಾಗಿ ಅಲ್ಲ!

ಬೀಟ್ರಿಸ್‌ಳ ಮುಖ ಮುಚ್ಚಿರುವ ದುಕೂಲವನ್ನು ಮೆಲ್ಲಗೆ ಬಿಡಿಸುತ್ತಾನೆ. ತಕ್ಷಣ ಅವಳ ಕೂದಲು ತುರುಬಿನಿಂದ ಹಂತಹಂತವಾಗಿ ಇಳಿಯ ತೊಡಗುತ್ತದೆ. ಕೂಡಿಹಾಕಿದ್ದ ಜ್ವಾಲೆ ಹೊರಬಂದಂತೆ ಭಗ್ಗೆಂದು ಅವಳ ಮುಖದ ಮೇಲೆ ಎರಗುತ್ತದೆ. ಬೀಟ್ರಿಸ್‌ಗೆ ಎಚ್ಚರವಾಗುತ್ತದೆ.

ಬೆಲಿದೋರ್: *(ಉನ್ಮತ್ತನಾಗಿ) ಓ!*

ಬೀಟ್ರಿಸ್ : *(ಕನಸಿನ ಲೋಕದಿಂದ ಆದೇ ಬಂದವಳಂತೆ)*
ಇದೇನು ಮಾಡಿಬಿಟ್ಟೆ ಬೆಲಿದೋರ್?
ನನ್ನ ಕೈಗಳು ಮುಟ್ಟುತ್ತಿರುವುದೇನು?
ಇಷ್ಟು ಮೃದುವಾದ್ದು...... ನನ್ನ ಮುಖದ ಬಳಿಯಲ್ಲಿ..?

ಬೆಲಿದೋರ್ : *(ಉನ್ಮತ್ತನಾಗಿ, ಅವಳ ಕೂದಲನ್ನು ಚುಂಬಿಸುತ್ತ)*
ಹೌದು! ನೋಡು! ನಿನ್ನದೇ ಸೌಂದರ್ಯದ ಕಿಚ್ಚು
ನಿನ್ನ ಮೈದಡವಿ ಎಬ್ಬಿಸಿದೆ! ನಿನ್ನ ಸೌಂದರ್ಯಕ್ಕೆ ನೀನೇ
ಅಚ್ಚರಿಗೊಂಡಿದ್ದೀಯೆ! ಈಗ ನೋಡು, ನಿನ್ನ ಸೌಂದರ್ಯದ
ಜಾಲರಿಯಲ್ಲಿ ನೀನೇ ಬಂಧಿಯಾಗಿಬಿಟ್ಟಿದ್ದೀಯ!
ನಿನಗೇ ಗೊತ್ತಿರಲಿಲ್ಲ .... ನನಗೂ ಗೊತ್ತಿರಲಿಲ್ಲ
ನೀನೆಷ್ಟು ಸುಂದರಿಯೆಂದು !
ನಿನ್ನ ನೋಡಿದ್ದೇನೆ, ನಿನ್ನ ಪ್ರೀತಿಸುತ್ತೇನೆ ಎಂದಷ್ಟೇ ತಿಳಿದಿದ್ದೆ!
ಅರೆ, ಒಂದೇ ಕ್ಷಣದ ಹಿಂದೆ .... ನನ್ನ ಹುಡುಗುತನದ
ಕನಸಿನ ರಾಣಿ ನೀನೇ ಆಗಿದ್ದೆ.
ಆದರೀಗ, ಎಚ್ಚೆತ್ತ ನನ್ನ ಕಣ್ಣುಗಳಿಗೆ ನಿನ್ನ ಸೋಕುತ್ತಿರುವ ಈ ಕೈಗಳಿಗೆ
ನಿನ್ನ ಕಂಡುಕೊಂಡಿರುವ ನನ್ನ ಅಂತರಂಗಕ್ಕೆ..
ಅತಿ ಸುಂದರವಾದ ಎಲ್ಲಕ್ಕಿಂತ ನೀನೇ ಸುಂದರಿ !
ತಾಳು! ತಾಳು! ತಾಳು!
ನಿನ್ನ ಮುಖದಷ್ಟೇ ನಿನ್ನ ಮೈಯ್ಯೂ ಸುಂದರವಾಗಿರಬೇಕು..
ಅದನ್ನೂ ಈಗ ಬಿಡುಗಡೆಗೊಳಿಸುತ್ತೇನೆ, ಓ ನನ್ನ ರಾಣಿ !

ತಕ್ಷಣ ಬೀಟ್ರಿಸ್‌ಳ ಸನ್ಯಾಸಿನಿಯರ ಸಮವಸ್ತ್ರವನ್ನು ಜಗ್ಗಿಬಿಡುತ್ತಾನೆ. ಒಳಗೆ ಅವಳು ಉಣ್ಣೆ ವಸ್ತ್ರ ತೊಟ್ಟಿರುತ್ತಾಳೆ. ಬಾಗಿಲ ಕಡೆ ಕೈ ಮಾಡುತ್ತಾನೆ ; ಆ ದೃಶ್ಯದ ಮೊದಲಲ್ಲಿ ಅವನ ಜೊತೆ ಇದ್ದ ಹುಡುಗ, ಬಹುಬೆಲೆಬಾಳುವ ಉಡುಗೆ, ಚಿನ್ನದ ಡಾಬು, ಮುತ್ತಿನಹಾರ ಹಿಡಿದುಕೊಂಡು ಮುಂದೆ ಬರುತ್ತಾನೆ. ಬೀಟ್ರಿಸ್ ಮೊಣಕಾಲ ಮೇಲೆ ಕುಸಿದು ತನ್ನ ಸಮವಸ್ತ್ರ ಮತ್ತೆ ದುಕೂಲಗಳನ್ನೆತ್ತಿ ಮುಖಕ್ಕೆ ಒತ್ತಿಕೊಂಡು ಅಳುತ್ತಾಳೆ

ಬೀಟ್ರಿಸ್: ಇಲ್ಲ! ನಾನವನ್ನು ತೊಡಲಾರೆ !
(ಮೊಣಕಾಲ ಮೇಲೇ ಜರಗುತ್ತಾ ವರ್ಜಿನ್ ಮೇರಿಯ ವಿಗ್ರಹದ ಬಳಿ ಬರುತ್ತಾಳೆ)
ನೋಡಿದೆಯಾ ತಾಯಿ ! ನನ್ನ ಕೈಲಿ ಇನ್ನು ಆಗದು !
ನಿನ್ನ ಸಹಾಯವಿಲ್ಲದೆ ಹೋರಾಡಲು ನನ್ನ ಕೈಲಾಗದು !
ಇನ್ನು ನೀನೂ ನನ್ನ ಕೈಬಿಟ್ಟರೆ...... ಪ್ರಾರ್ಥಿಸಲೂ ನನ್ನಿಂದಾಗದು !

ಬೆಲಿದೋರ್: *(ಬೀಟ್ರಿಸ್ ಬಳಿಸಾರಿ, ಬೆಲೆಬಾಳುವ ಉಡುಗೆಯನ್ನು ಅವಳಿಗೆ ಹೊದಿಸುತ್ತಾ)*
ಹೊತ್ತಾಯಿತು ಬೀಟ್ರಿಸ್! ಈ ಉಡುಗೆ ನೋಡು.
ಇನ್ನು ಮುಂದಿನ ಜೀವನದ ಉಡುಗೆಯನ್ನು ನೋಡು
ನೀನು ಒಡೆಯನಿಂದ ರಕ್ಷಿಸಲ್ಪಟ್ಟ ದಾಸಿಯೇನಲ್ಲ,
ಸುಖ ಸಂತೋಷಗಳಿಗೆ ಪಕ್ಕಾಗುತ್ತಿರುವ ರಾಣಿ ನೀನು.

ಬೀಟ್ರಿಸ್: *(ವಿಗ್ರಹದ ಪೀಠದ ಸುತ್ತ ಇರುವ ಜಾಲರಿಯನ್ನು ಹಿಡಿದು ಕೊಂಡಿದ್ದಾಳೆ. ಮೊಣಕಾಲ ಮೇಲೇ ಇದ್ದಾಳೆ)*
ನನ್ನ ತಾಯೆ, ದಯಮಾಡಿ ನನ್ನ ಮಾತನ್ನು ಆಲಿಸು
ಇನ್ನು ಮಾತಾಡಲಾರೆ, ಪ್ರಾರ್ಥನೆ ಮಾಡಲಾರೆ....
ಕೇವಲ ಅಳಬಲ್ಲೆ.... ನಾನು ಇವನನ್ನು ಇಷ್ಟು ಪ್ರೀತಿಸುತ್ತೇನೆ
ಎಂದು ನನಗೇ ಗೊತ್ತಿರಲಿಲ್ಲ; ನಿನ್ನನ್ನೂ ಇಷ್ಟು ಪ್ರೀತಿಸುತ್ತೇನೆ
ಎಂದೂ ಗೊತ್ತಿರಲಿಲ್ಲ. ದಯವಿಟ್ಟು ಆಲಿಸು, ನನ್ನ ಕಡೆ ನೋಡು !
ನಿನ್ನನ್ನು ನಾನು ಬೇಡುವುದಿಷ್ಟೆ: ಒಂದು ಕುರುಹು, ಒಂದೇ ಒಂದು !
ಕೈಯ್ಯ ಮೂಲಕವಾದರೂ ಸರಿ, ಕಣ್ಣ ಮೂಲಕ ಮುಗುಳ್ನಗು
ವುದಾದರೂ ಸರಿ.... ನಾನೊಬ್ಬಳು ಮುಗುದೆ.....
ನೀನು ಕೇಳಿದ್ದೆಲ್ಲಾ ಕೊಡುತ್ತೀಯೆಂದು ಜನ ಹೇಳುತ್ತಾರೆ
ನೀನು ದಯಾಳುವಂತೆ..... ದಯಾಮಯಿಯಂತೆ

ಬೆಲಿದೋರ್ : (ಅವಳನ್ನು ಎಬ್ಬಿಸಲು ಪ್ರಯತ್ನಿಸುತ್ತಾ)
ಹೌದು, ಆಕೆ ದಯಾಮಯಿ... ಅವಳು
ಪ್ರೇಮದಿಂದಾದ ಸ್ವರ್ಗದ ರಾಣಿಯಲ್ಲವೆ!
ತಣ್ಣಗೆ ಕೊರೆಯುತ್ತಿರುವ ಈ ಜಾಲರಿಯಿಂದ
ಬೆರಳುಗಳನ್ನು ಬಿಡಿಸು; ಆಕೆಯ ಮುಖವನ್ನೊಮ್ಮೆ ನೋಡು
ಆಕೆ ಸಿಟ್ಟನ್ನೇನೂ ತೋರುತ್ತಿಲ್ಲ..... ಮುಗುಳ್ನಗುತ್ತಿದ್ದಾಳೆ...
ಹೊಳೆಯುತ್ತಿದ್ದಾಳೆ, ಬೆಳಗುತ್ತಿದ್ದಾಳೆ.... ನಿನ್ನ ಪ್ರಾರ್ಥನೆ
ನಿನ್ನ ಕಣ್ಣುಗಳಲ್ಲಿ ಮಿನುಗುತ್ತಿರುವುದನ್ನು ಆಕೆ ಗಮನಿಸಿದ್ದಾಳೆ.
ನಿನ್ನ ಕಣ್ಣೀರಿನಿಂದಾಗಿ ಮುಗುಳ್ನಗುತ್ತಿರುವ ಅವಳ
ಕಣ್ಣುಗಳು ಬೆಳಗುತ್ತಿದ್ದಾವೆ.
ಬೇಡುವವಳು ಇವಳು, ಕ್ಷಮಿಸುವವಳು ಅವಳಲ್ಲವೆ?
ನನ್ನ ದೃಷ್ಟಿಯಲ್ಲಿ ಇಲ್ಲಿ ಏನೋ ಗಲಿಬಿಲಿಯಾಗಿದೆ.
ಇಲ್ಲಿ ನನಗೆ ಕಾಣುತ್ತಿರುವುದು ಇಬ್ಬರು ಸೋದರಿಯರು
ಇಲ್ಲಿರುವ ಪ್ರಶ್ನೆ ಪ್ರೇಮದ್ದು..,.......
ಇಬ್ಬರೂ ಒಬ್ಬರಿಗೊಬ್ಬರು ಶುಭ ಹಾರೈಸುತ್ತಿದ್ದಾರೆ.

ಬೀಟ್ರಿಸ್ : (ತಲೆಯೆತ್ತಿ ವಿಗ್ರಹ ನೋಡುತ್ತಾ)
ತುಂಬಾ ಜನ ಹೇಳುತ್ತಿದ್ದರು
ನಾನು ತಾಯಿಯನ್ನು ತುಂಬಾ ಹೋಲುತ್ತೇನೆ ಎಂದು

ಬೆಲಿದೋರ್: ನೋಡು! ಸರಿಯಾಗಿ ನೋಡು! ನಿನ್ನ ಉಡುಗೆಗಳು, ಅವಳ
ಉಡುಗೆಗಳು.... ಇಷ್ಟನ್ನು ಬಿಟ್ಟರೆ..... ಅದೇ ಬೆಳಕಿನ ಕಿರಣಗಳಲ್ಲವೆ
ಎರಡೂ ?

(ಅವನು ಮಾತಾಡುತ್ತಿರುವಂತೆಯೆ ಗಡಿಯಾರದಲ್ಲಿ ಮೂರು ಗಂಟೆ ಬಾರಿಸುತ್ತದೆ)

ಬೀಟ್ರಿಸ್ : (ಧಡ್ಡಂದು ಏಳುತ್ತಾ) ಕೇಳಿಸಿಕೊ!

ಬೆಲಿದೋರ್: ಮೂರುಗಂಟೆ!

ಬೀಟ್ರಿಸ್ : ಮುಂಜಾನೆಯ ಈ ಗಂಟೆ ನಾನು ಬಾರಿಸಬೇಕಾದ್ದು!

ಬೆಲಿದೋರ್: ಬಾ, ಬೆಳಕು ಹರಿಯೊ ಹೊತ್ತಾಯಿತು ಕಂದು ಕಿಟಕಿಗಳು
ನೀಲಿಯಾಗತೊಡಗಿವೆ!

ಬೀಟ್ರಿಸ್ : ಮುಂಜಾವಿನ ತಂಗಾಳಿ, ಬೆಳಕು, ಹಕ್ಕಿ ಹಾಡುಗಳು
ನಿದ್ದೆ ತಿಳಿಯುತ್ತಿರುವ ನನ್ನ ಸೋದರಿಯರನ್ನು ಸ್ವಾಗತಿಸಲಿ
ಎಂದು ಆ ಕಿಟಕಿಗಳನ್ನು ನಾನೇ ಮುಂಜಾನೆಗೆ
ಮುಂಚೆ ತೆರೆಯುತ್ತಿದ್ದುದು. ಅಲ್ಲಿದೆ ಅಗೊ,
ರಾತ್ರಿ ಕಳೆಯಿತು, ನಿದ್ದೆ ಮುಗಿಯಿತು ಎಂದು ಅವರಿಗೆ ತಿಳಿಸಲು
ಬಾರಿಸುವ ಗಂಟೆಯ ಹಗ್ಗ ಅಲ್ಲಿದೆ.
ಅಲ್ಲಿ, ನಾನಿನ್ನು ಬೆಳಗನ್ನು ಸ್ವಾಗತಿಸಲು
ತೆರೆಯದ ಗುಡಿಯ ಬಾಗಿಲ ಪಕಳೆಗಳು....
ಇನ್ನು ಬೇರೆ ಕೈಗಳಿಂದ ಹೊತ್ತಿಕೊಳ್ಳುವ
ಪೀಠದ ಮೇಲಿನ ಮೇಣ ಬತ್ತಿಗಳು....
ಇಲ್ಲಿದೆ ಬಡವರ ಬುಟ್ಟಿ: ಓ, ಇನ್ನೇನು
ಅವರೆಲ್ಲ ಇಲ್ಲಿ ಬಂದು ನನ್ನ ಹೆಸರು ಕೂಗುತ್ತಾರೆ.
ನನ್ನ ಸೋದರಿಯರು ಶಾಂತಿಯಿಂದ ಪ್ರಾರ್ಥನೆ ಮಾಡುತ್ತ
ಆ ಭವ್ಯ ಮಂದಿರಗಳಲ್ಲಿ ಹೊಲಿದಿಟ್ಟ ಆ ಬಟ್ಟೆಗಳನ್ನು
ನೀಡುತ್ತಿದ್ದ ನನ್ನ ಕೈಗಳನ್ನ
ಅವರು ಆಶೀರ್ವದಿಸುತ್ತಿದ್ದ ಈ ಕೈಗಳನ್ನ
ಹುಡುಕುತ್ತಾರೆ.... ಹುಡುಕುತ್ತಾರೆ....
ಆದರೆ ಯಾರೂ ಕಾಣಿಸುವುದಿಲ್ಲ..

ಬೆಲಿದೋರ್: ಬಾ, ಹಗಲು ಸಮೀಪಿಸುತ್ತಿದೆ
ನಿನ್ನ ಸೋದರಿಯರೆಲ್ಲ ಎಚ್ಚರಾಗುತ್ತಾರೆ
ಓ, ಅವರ ಹೆಜ್ಜೆ ಸಪ್ಪಳ ಕೇಳಿದಂತಾಗುತ್ತಿದೆ.

ಬೀಟ್ರಿಸ್ : ಹೌದು, ಬರುತ್ತಿದ್ದಾರೆ, ನನ್ನ ಸೋದರಿಯರು ಬರುತ್ತಿದ್ದಾರೆ
ನನ್ನನ್ನು ಎಷ್ಟು ಪ್ರೀತಿಸುತ್ತಿದ್ದರು.....
ಎಷ್ಟು ಪವಿತ್ರಳೆಂದು ಭಾವಿಸಿದ್ದರು !
ಬಂದಿಲ್ಲಿ ಈ ಕೀಳಾದ ಬೀಟ್ರಿಸ್

ಬಿಟ್ಟು ಹೋಗಿರುವ ಈ ದುಕೂಲ, ಮೇಲುವಸ್ತ್ರ
ಕಲ್ಲ ಮೇಲೆ ಚೆಲ್ಲಿರುವುದನ್ನು ನೋಡುತ್ತಾರೆ.
(ತಕ್ಷಣ ದುಕೂಲ, ಮೇಲುವಸ್ತ್ರವನ್ನು ಎತ್ತಿ ವಿಗ್ರಹದ ಕಾಲಬಳಿ ಇಡುತ್ತಾಳೆ)
ಆದರೆ, ನಾನು ಈ ಶಾಂತಿದ್ಯೋತಕ ವಸ್ತ್ರಗಳನ್ನು
ಕಾಲ ಕೆಳಗೆ ಹಾಕಿಕೊಂಡು ತುಳಿದೆ
ಎಂದು ಅವರುಭಾವಿಸದಿರಲಿ. ತಾಯಿ, ನೋಡಿಲ್ಲಿ.
ನಾನಿವನ್ನು ನಿನಗೆ ಕೊಡುತ್ತೇನೆ.
ನೀನಿವನ್ನು ಇಟ್ಟುಕೊಳ್ಳಬೇಕು
ನನ್ನೆಲ್ಲವನ್ನೂ, ನಾನೀ ನಾಲ್ಕು ವರ್ಷ
ಪಡೆದುದ್ದೆಲ್ಲವನ್ನೂ ನಿನ್ನ ಕೈಲಿರಿಸುತ್ತೇನೆ
ಈ ಜಪಮಾಲೆಯನ್ನು... ಬೆಳ್ಳಿಯ ಶಿಲುಬೆ
ಇರುವ ಈ ಮಾಲೆಯನ್ನು
ಇಲ್ಲಿಡುತ್ತೇನೆ... ಇಲ್ಲಿ, ನಾನು ಕಲಿತದ್ದೆಲ್ಲವನ್ನೂ,
ಇಲ್ಲಿ, ನನ್ನ ಸೊಂಟಕ್ಕೆ ಕಟ್ಟಿಕೊಂಡಿದ್ದ ಈ ಮೂರೂ
ದೊಡ್ಡ ಕೀಲಿಕೈಗಳನ್ನು ; ಇದು ಮುಂಬಾಗಿಲನ್ನು
ತೆಗೆಯುವುದು; ಇದು ತೋಟಕ್ಕೆ; ಮತ್ತೆ ಇದು
ಗುಡಿಯ ಬಾಗಿಲಿನ ಕೀಲಿಕೈ.
ಇನ್ನು ಹಸಿರಾಗಿ ಹುಲುಸಾಗಿ ಬೆಳೆಯುವ ತೋಟವನ್ನು
ನೋಡಲಾರೆ ; ಊದುಗಡ್ಡಿ ಪರಿಮಳ ಸವಿಯುತ್ತ
ಹಾಡುತ್ತಾ ಗುಡಿಯ ಬಾಗಿಲ ಬೀಗ
ತೆಗೆಯಲಾರೆ. ತಾಯಿ, ನಿನಗೆ ಎಲ್ಲ ಗೊತ್ತಿದೆ
ನನಗೇನೂ ತಿಳಿಯದು
ಅಲ್ಲಿ, ಎತ್ತರದಲ್ಲಿ ಬರೆದಿರುವುದೇನು?
ಕ್ಷಮಿಸಲರ್ಹವಲ್ಲದ್ದೇನೂ ಇಲ್ಲವೆಂದೆ?
ಪ್ರೇಮ ಒಂದು ಶಾಪವೆಂದೆ?
ಅದಕ್ಕೆ ಪ್ರಾಯಶ್ಚಿತ್ತ ಇಲ್ಲವೆಂದೆ?
ಹೇಳು, ಹೇಳು, ದಯವಿಟ್ಟು ಹೇಳು.

ಯಾಕೆಂದರೆ ನೀನು ಬಯಸದ ಹೊರತು
ನಾನಂತೂ ಪಾಳಾಗಲಾರೆ ! ನೀನೊಂದು ಕುರುಹು
ತೋರಿದೆಯೆಂದರೆ ನಾನು ಹಾಳಾಗಿಲ್ಲ;
ಅಸಾಧ್ಯ ಪವಾಡ ಮಾಡೆಂದು ಬೇಡುತ್ತಿಲ್ಲ
ಇಷ್ಟೇ - ಒಂದೇ ಒಂದು ಸಂಜ್ಞೆ ಸಾಕು
ಯಾರಿಗೂ ಕಾಣದಷ್ಟು ಚಿಕ್ಕದಾದರೂ ಚಿಂತೆಯಿಲ್ಲ....
ಬುದ್ಧಿಯ ಬೆಳಕಿಂದಾಗಿ ನಿನ್ನ ಹುಬ್ಬಿನ ಮೇಲೆ
ನಿದ್ರಿಸುತ್ತಿರುವ ಆ ಚಿಕ್ಕ ಕಪ್ಪು ಛಾಯೆ
ಒಂದು ಗೆರೆಯಷ್ಟು ಅಲುಗಿದರೂ
ನಾನು ಹೋಗುವುದಿಲ್ಲ !

ನಾನು ಹೋಗುವುದಿಲ್ಲ ! ತಾಯಿ, ನನ್ನತ್ತ ನೋಡು !
ನಾನು ನಿನ್ನ ನೋಡುತ್ತಿದ್ದೇನೆ... ಕಾಯುತ್ತಿದ್ದೇನೆ !

(ವರ್ಜಿನ್ ಮೇರಿಯತ್ತ ಸುಮಾರು ಹೊತ್ತು ದಿಟ್ಟಿಸುತ್ತಾಳೆ. ಮಿಕ್ಕಿದ್ದೆಲ್ಲ ಸ್ತಬ್ಧ, ನಿಶ್ಶಬ್ದ)

ಬೆಲಿದೋರ್: *(ಭಾವುಕನಾಗಿ ಅವಳನ್ನು ಬಳಸಿ ತುಟಿಯ ಮೇಲೆ ಚುಂಬಿಸುತ್ತಾ)*
ಬಾ ಇನ್ನು!

ಬೀಟ್ರಿಸ್: *(ಮೊದಲ ಬಾರಿ ಪ್ರತಿಚುಂಬಿಸಿ)* ಹುಂ!

ಒಬ್ಬೊಬ್ಬರ ತೋಳಿನಲ್ಲಿ ತೋಳು ಹೆಣೆದುಕೊಂಡು ಇಬ್ಬರೂ ಬೆಳಕಾಗುತ್ತಿರುವ ಪ್ರಪಂಚದತ್ತ ಹೋಗುತ್ತಾರೆ. ಬಾಗಿಲು ತೆರೆದೇ ಉಳಿಯುತ್ತದೆ. ದೂರ ಹೋಗುತ್ತಿರುವ ಕುದುರೆ ಖರಪುಟ ಕೇಳಿಸುತ್ತದೆ. ಪರದೆ ಬೀಳುತ್ತದೆ. ಸ್ವಲ್ಪ ಹೊತ್ತಿನಲ್ಲಿ ಬೆಳಗಿನ ಗಂಟೆ ಕಾನ್ವೆಂಟಿನಿಂದ ಕೇಳಿಬರುತ್ತದೆ.

-ಮೊದಲ ಅಂಕ ಮುಗಿಯುತ್ತದೆ. -

-ಎರಡನೆ ಅಂಕ-

ಬೆಳಗಿನ ಗಂಟೆಯ ಕಡೆಯ ಢಣ್‌ಢಣ್‌ಗಳು ಕೇಳುತ್ತವೆ. ಪರದೆ ಮೇಲೇರುತ್ತದೆ. ಹಿಂದಿನ ಅಂಕದ್ದೇ ದೃಶ್ಯ. ಒಂದೇ ವ್ಯತ್ಯಾಸ- ಮುಂಬಾಗಿಲು ಮುಚ್ಚಿದೆ. ಪಡಸಾಲೆ ಕಿಟಕಿಗಳು ಸೂರ್ಯಕಿರಣಗಳಿಗೆ ತೆರಕೊಂಡಿವೆ. ಪರದೆ ಇನ್ನೂ ಪೂರ್ತಿ ಮೇಲೇರಿಲ್ಲ, ಆಗಲೆ ವರ್ಜಿನ್ ಮೇರಿಯ ವಿಗ್ರಹ, ಬಹುಕಾಲದ ನಿದ್ದೆ ತಿಳಿದು ಎದ್ದಂತೆ ಜೀವ ತಳೆಯುತ್ತದೆ. ವರ್ಜಿನ್ ನಿಧಾನವಾಗಿ ಪೀಠದಿಂದ ಕೆಳಗಿಳಿದು, ಜಾಲರಿ ಬಳಿಬಂದು, ತನ್ನ ಭವ್ಯ ಉಡುಗೆಯ ಮೇಲೇ ಬೀಟ್ರಿಸ್ ಬಿಟ್ಟು ಹೋಗಿದ್ದ ದುಕೂಲ, ನಿಲುವಂಗಿಗಳನ್ನು ತೊಡುತ್ತಾಳೆ. ಮೆಲ್ಲಗೆ ಹಾಡತೊಡಗುತ್ತಾಳೆ. ಬಲಕ್ಕೆ ತಿರುಗಿ, ಕೈಚಾಚುತ್ತಾಳೆ; ಗುಡಿಯ ಬಾಗಿಲು ತಂತಾನೆ ತೆರೆದುಕೊಳ್ಳುತ್ತವೆ. ಪೀಠದ ಮೇಲಿನ ಮೇಣದ ಬತ್ತಿಗಳು ತಂತಾನೆ ಹೊತ್ತಿಕೊಳ್ಳುತ್ತವೆ. ಹಾಡು ಮುಂದುವರಿಸುತ್ತಾಳೆ, ದೀಪ ಹೊತ್ತಿಸುತ್ತಾಳೆ. *ಬಡವರಿಗೆ ಹಂಚಬೇಕಿದ್ದ ಬಟ್ಟೆ ಇರುವ ಬುಟ್ಟಿಯನ್ನು ಎತ್ತಿ, ಕಟ್ಟೆಯ ಮೇಲಿಟ್ಟು, ಕಾನ್ವೆಂಟಿನ ಮುಂಬಾಗಿಲ ಕಡೆ ಬರುತ್ತಾಳೆ.*

ವರ್ಜಿನ್ *(ಹಾಡುತ್ತಿದ್ದಾಳೆ)*

ಮೊಗೆದುಕೊಂಬೆ ಬೊಗಸೆ ತುಂಬ
ಚಿಕ್ಕೆಗಡಲಿನಾಳದಿಂದ
ಕ್ಷಮೆಯ ಜಲವ; ಕೊಡುವೆ ಪ್ರತಿ ಪಾಪ ಜೀವಿಗೆ
ಪ್ರತಿ ನೊಂದ ಜೀವಿಗೆ

ಪ್ರೀತಿ ನೋಟ ಬಿದ್ದ ಬಳಿಕ
ಉಳಿಯುವಂಥ ಪಾಪವಿಲ್ಲ
ಸಾಯದಮ್ಮ ಯಾವ ಜೀವ ಲೋಕದೊಳಗಡೆ
ಪ್ರೀತಿ ತಮ್ಮ ಸಲುವಾಗಿ ಒಮ್ಮೆ ಅತ್ತರೆ

ಜಗದ ಹಲವು ಪಥಗಳಲ್ಲಿ
ಪ್ರೀತಿ ದಿಶೆಯು ತಪ್ಪಬಹುದು
ನನ್ನ ಕಣ್ಣ ನೀರು ನನ್ನ ದಾರಿಗೆಳೆವುದು
ಅಡ್ಡದಾರಿ ಹಿಡಿಯದಂತೆ ನನ್ನ ಪೊರೆವುದು

ಹಾಡಿನ ಕಡೇ ಭಾಗ ಕೇಳುತ್ತಿರುವಾಗ ಗೇಟನ್ನು ಒಂದು ಕೈ ಮೆಲ್ಲಗೆ ತಟ್ಟುತ್ತದೆ. ವರ್ಜಿನ್ ಗೇಟು ತೆಗೆಯುತ್ತಾಳೆ; ಹೊಸ್ತಿಲಲ್ಲಿ ಹರಕಲು ಬಟ್ಟೆಯಲ್ಲಿರುವ ಬರಿಗಾಲ ಬಡ ಹುಡುಗಿ ಇರುತ್ತಾಳೆ. ಬಾಗಿಲ ಹಿಂದೆ ಅರ್ಧ ಅಡಗಿ ನಿಂತಿರುತ್ತಾಳೆ. ಮೊದಲು ತನ್ನ ತಲೆ ಮಾತ್ರ ಮುಂದೆ ಮಾಡಿ, ವರ್ಜಿನ್ ಕಡೆ ಆಶ್ಚರ್ಯಚಕಿತಳಾಗಿ ನೋಡುತ್ತಾಳೆ.

ವರ್ಜಿನ್: *ಶುಭ ಬೆಳಗು, ಅಲೆಟ್ಟೆ . ಹಾಗ್ಯಾಕೆ ಅಡಗುವೆ?*

ಅಲೆಟ್ಟೆ : *(ಭಯಾಶ್ಚರ್ಯಗಳಿಂದ ಶಿಲುಬೆಯ ಸಂಜ್ಞೆ ತನ್ನ ಮೇಲೆ ಮಾಡಿಕೊಳ್ಳುತ್ತಾ ಮುಂದೆ ಬರುತ್ತಾ)*
ನಿನ್ನ ಉಡುಗೆಯ ಮೇಲೆ ಬೆಳಕನ್ನು ಯಾಕೆ ತೊಟ್ಟಿದ್ದೀಯ?

ವರ್ಜಿನ್: *ಬೆಳಕು ಹರಿದ ಮೇಲೆ ಎಲ್ಲೆಲ್ಲೂ ಬೆಳಕೇ !*

ಅಲೆಟ್ಟೆ : *ಆ ನಕ್ಷತ್ರಗಳನ್ನು ನಿನ್ನ ಕಣ್ಣಲ್ಲಿ ಯಾಕಿಟ್ಟು ಕೊಂಡಿದ್ದೀಯಾ?*

ವರ್ಜಿನ್: *ಪ್ರಾರ್ಥಿಸುವವರ ಕಣ್ಣುಗಳ ಆಳದಲ್ಲಿರುವುದು ನಕ್ಷತ್ರಗಳೇ!*

ಅಲೆಟ್ಟೆ : *ಆ ಬೆಳಕನ್ನು ನಿನ್ನ ಕೈಗಳೊಳಗೂ ಯಾಕೆ ಇಟ್ಟುಕೊಂಡಿದ್ದೀಯಾ?*

ವರ್ಜಿನ್: *, ಭಿಕ್ಷೆ ನೀಡುವ ಕೈಗಳಲ್ಲಿ ಬೆಳಕು ಇದ್ದೇ ಇರುತ್ತದೆ!*

ಅಲೆಟ್ಟೆ : *ಮತ್ತೇ, ಇವತ್ತು ನಾನೊಬ್ಬಳೇ ಬಂದಿದ್ದೇನೆ.*

ವರ್ಜಿನ್: *ನಮ್ಮ ಬಡ ಸೋದರರೆಲ್ಲಿ ಮತ್ತೆ?*

ಅಲೆಟ್ಟೆ : *ಜನ ಹೇಳೋದನ್ನ ಕೇಳಿ ಅವರು ಬರುವ ಧೈರ್ಯ ಮಾಡಲಿಲ್ಲ.*

ವರ್ಜಿನ್: *ಏನು ಹೇಳುತ್ತಾರೆ ಜನ?*

ಅಲೆಟ್ಟೆ : *ಅವರು ಹೇಳುತ್ತಾರೆ, ಬೀಟ್ರಿಸ್ ರಾಜಕುಮಾರನ ಜೊತೆ ಕುದುರೆಯೇರಿ ಹೋದದ್ದನ್ನು ಕಂಡರಂತೆ.*

ವರ್ಜಿನ್: *ನಾನು ಆ ಕೀಳು ಬೀಟ್ರಿಸ್ ಥರ ಕಾಣುವುದಿಲ್ಲವೆ?*

ಅಲೆಟ್ಟೆ : *ಅವಳನ್ನು ನೋಡಿದರಂತೆ, ಅವರೊಂದಿಗೆ ಮಾತಾಡಿದಳಂತೆ.*

ವರ್ಜಿನ್: *ದೇವರು ಮಾತ್ರ ಅವಳನ್ನು ನೋಡಲಿಲ್ಲ, ಏನನ್ನೂ ಕೇಳಲಿಲ್ಲ.*

(ನಾಟಕ ಮುಂದುವರಿಯುತ್ತದೆ)

ಮೇತರ್‌ಲಿಂಕನ ಬೆಳಕಿನ ಜೊತೆಗಿನ ಆಟ ಅದ್ಭುತವಾದ್ದು. ಮೇಲಿನ ಭಾಗದಲ್ಲಿ ಕಾಣಬಹುದು: ಕತ್ತಲೆಯಲ್ಲಿ ಬೀಟ್ರಿಸ್ ಕರಗಿಹೋದರೆ ಬೆಳಕನ್ನು ತೊಟ್ಟ ವರ್ಜಿನ್, ಬೀಟ್ರಿಸ್ ಆಗುತ್ತಾಳೆ, ಬೆಳಕಿನ ಬಟ್ಟೆ, ಬೆಳಕು ತುಂಬಿದ ಕೈಗಳು....!

ಅವನ ಬಹುತೇಕ ನಾಟಕಗಳಲ್ಲಿ ಬೆಳಕೇ ಒಂದು ಮುಖ್ಯ ಪಾತ್ರಧಾರಿಯಾಗಿ ಬಿಡುತ್ತದೆ. ರಂಗದ ಮೇಲೆ ನಾಟಕಗಳನ್ನು ತರುವಾಗ ನಿರ್ದೇಶಕರು ಕೆಲವೊಮ್ಮೆ ಮೂಲ ಲೇಖಕನ ಸಂಭಾಷಣೆಗಳನ್ನು ಮಾತ್ರ ಆಧಾರ ಮಾಡಿಕೊಂಡು ರಂಗ ನಿರ್ದೇಶನಗಳನ್ನು ಪಕ್ಕಕ್ಕಿಡುತ್ತಾರೆ. ಉದಾಹರಣೆಗೆ ಷೇಕ್ಸ್‌ಪಿಯರ್‌ನ ನಾಟಕಗಳ ಭಿನ್ನ ಭಿನ್ನ ಪ್ರಯೋಗ ಸಾಧ್ಯತೆಗಳಿರುವುದೇ ರಂಗ ನಿರ್ದೇಶನದ ನಿರ್ಧಿಷ್ಟತೆ ಇಲ್ಲದಿರುವುದರಿಂದ. ಆದರೆ ಮೇತರ್‌ಲಿಂಕನಲ್ಲಿ ಹಾಗೆ ಮಾಡುವುದು ಅಷ್ಟು ಸಲೀಸಲ್ಲ. ಕಾರಣ, ರಂಗದ ಮೇಲೆ ವಸ್ತುಗಳಲ್ಲಿ ಆಗಬೇಕಾದ ಪರಿವರ್ತನೆ ನಾಟಕದ ಅವಿಭಾಜ್ಯ ಅಂಗವಾಗಿರುತ್ತದೆ. ಅಂಥ ಕಡೆಗಳಲ್ಲಿ ಮೇತರ್‌ಲಿಂಕ್ ಬೆಳಕಿನ ಆಟದಲ್ಲಿ, ಬಣ್ಣದ ಆಟದಲ್ಲಿ ಮಗ್ನನಾಗಿ ಬಿಡುತ್ತಾನೆ ಎನ್ನಿಸುತ್ತದೆ. ಉದಾಹರಣೆಗೆ:'ಆರ್ದಿಯೆನ್ ಎತ್ ಬಾರ್ಬೆಬ್ಲೂ' ನಾಟಕದಲ್ಲಿ ಪರಿಚಾರಿಕೆ ಆರು ಬಾಗಿಲುಗಳನ್ನು ತೆರೆದಾಗ ಆರೂ ಕೋಣೆಗಳಲ್ಲಿ ಬಿಳಿ ಹರಳು, ಕೆಂಪು ಹರಳು, ನೀಲಮಣಿ, ಹವಳ, ಪಚ್ಚೆ, ಮುತ್ತುಗಳ ರಾಶಿರಾಶಿಯೇ ಇರುತ್ತವೆ. ಅವು ಆಕೆಯ ಮೈಮೇಲೆಲ್ಲಾ ಹರಿದಾಡುತ್ತವೆ. ಅವಳೋ, ಕಾವ್ಯಾತ್ಮಕವಾಗಿ, ಉನ್ಮತ್ತಳಾಗಿ ನುಡಿಯ ತೊಡಗುತ್ತಾಳೆ:

ಅರೆ, ಇದೇನು!?
ಬೆಂಕಿ ಮಳೆ! ಹುಷಾರು! ಹುಷಾರು!
ನನ್ನ ಕೈಮೇಲೂ ಬೀಳುತ್ತಿದೆ
ಮುಖದ ಮೇಲೆ ಬೊಬ್ಬೆ ಏಳಿಸುತ್ತಿದೆ

....

....

ಹರಳಿನ ಆಭರಣಗಳು!
ಎತ್ತಿಕೊ, ಆರಿಸಿಕೊ
ತುಂಬಾ ಚೆನ್ನಾಗಿರುವವನ್ನೇ ಆರಿಸಿಕೊ,

ಒಂದು ಸಾಮ್ರಾಜ್ಯಕ್ಕೆ ಸಾಕಾಗುವಷ್ಟು ಐಶ್ವರ್ಯ ಇಲ್ಲಿದೆ!
ಇನ್ನೂ.... ಇನ್ನೂ ಇದೆ!
ನನ್ನ ಹೆರಳಿನಲ್ಲೂ ಸೇರಿಕೊಳ್ಳುತ್ತಿವೆ
ಕೈಮೇಲೆ ಮಳೆಗರೆಯುತ್ತಿವೆ
ನೋಡು! ಹೆಸರೇ ಗೊತ್ತಿಲ್ಲದ ಹರಳುಗಳು!
ಮಾಳಿಗೆಯಿಂದಲೂ ಮಳೆಗರೆಯುತ್ತಿವೆ!
ಬಣ್ಣ ಬಣ್ಣ ಕಿರಣಗಳ ಹರಳುಗಳು!
ನೀನೂ ಒಂದು ಕೈ ಹಾಕು
ಎಲ್ಲಿ, ಸ್ವಲ್ಪ ಕಣ್ಣು ಮುಚ್ಚಿಕೊ, ನನ್ನ ಬಟ್ಟೆಯ ಒಳಗೂ ತುಂಬಿಕೊಳ್ಳಬೇಕು!

ಇನ್ನು 'ನೀಲಿಹಕ್ಕಿ' ಯಲ್ಲಿ ಬೆಳಕಿನದು ಅನೇಕ ಬಗೆಯ ಪಾತ್ರ. ಬೆಳಕು ಅನೇಕ ಸಲ ಮಾಂತ್ರಿಕ ಸನ್ನಿವೇಶಗಳಲ್ಲಿ ಬರುವಂತೆ ಕಂಡರೂ ಅದಕ್ಕೆ ಒಮ್ಮೊಮ್ಮೆ ತಾತ್ವಿಕ ಅರ್ಥಗಳಿರುತ್ತವೆ. 'ನೀಲಿಹಕ್ಕಿ' ಯಲ್ಲಿ ಬೆಳಕಿನ ಆತ್ಮ, 'ಬೆಳಕು' ಎಂಬ ಹೆಸರಿನಲ್ಲಿ ತಾನೂ ಮಕ್ಕಳ ಜೊತೆ ನೀಲಿ ಹಕ್ಕಿಯನ್ನು ಹುಡುಕಲು ಯಾತ್ರೆ ಹೊರಡುತ್ತದೆ. 'ರಾತ್ರಿಯ ಲೋಕ' ದಲ್ಲಿ ಮಕ್ಕಳಿಬ್ಬರೂ ಹೋಗಿ ನೀಲಿಹಕ್ಕಿಯನ್ನು ಹಿಡಿದು ಆ ಲೋಕದಿಂದ ಹೊರಕ್ಕೆ ಸಂಗಾತಿ 'ಬೆಳಕಿ'ನ ಕಡೆ ಬರುವಷ್ಟರಲ್ಲಿ ನೀಲಿಹಕ್ಕಿಯ ನೀಲಿ ಬಣ್ಣವೇ ಹೋಗಿಬಿಟ್ಟಿರುತ್ತದೆ, ಎನ್ನುವ ಸಂದರ್ಭದಲ್ಲಿ ಬೆಳಕಿನ ತಾತ್ವಿಕ ಅರ್ಥಸಾಧ್ಯತೆಗಳು ಓದುಗನಿಗೆ ಹೊಳೆಯುತ್ತದೆ. ಇನ್ನು ನಾಟಕದ ಪರಿಕರವಾಗಿ, ಅಲಂಕಾರವೂ ಆಗಿ ಕಂಡು ಬಂದಾಗ ನೆನಪಿಗೆ ಬರುವುದು ಚರ್ಚುಗಳ ಎತ್ತರದ ಗಾಜಿನ ಕಿಟಕಿಗಳು, ಅವುಗಳ ಮೇಲಿನ ಬಣ್ಣಗಳಲ್ಲಿ ಬಿಡಿಸಿರುವ ಯೇಸು ಜೀವನ ಕುರಿತ ಚಿತ್ರಗಳು. ಅವುಗಳನ್ನು ಎತ್ತಿ ತೋರಿಸುವ ಆಚೆಯ ಬೆಳಕು....!

ಹಾಗೇ ಧ್ವನಿಯೊಂದಿಗೆ ಮೇತರ್‌ಲಿಂಕ್ ಮಾಡುವ ಪ್ರಯೋಗಗಳೂ ಕುತೂಹಲಕಾರಿ. 'ಆರ್ದಿಯೆನ್ ಎತ್ ಬಾರ್ಬೆಬ್ಲೂ' ನಾಟಕದಲ್ಲಿ ಸುಂದರಿ ಆರ್ದಿಯೆನ್ ಕ್ರೂರಿ ಬಾರ್ಬೆಬ್ಲೂನನ್ನು ವರಿಸಿ ದೂರ ನಾಡಿನಿಂದ ಬಂದಿದ್ದಾಳೆ. ಅವಳ ಬಗ್ಗೆ ಕನಿಕರ ಪಡುವ ಊರ ಮಂದಿಯ ಮಾತುಗಳು ಖಾಲಿ ರಂಗದ ಹಿಂದೆ ಕೇಳಿಬರುವುದು- ಅದೂ ನಾಟಕದ ಆರಂಭದಲ್ಲಿ-ವಿಚಿತ್ರ ಅನುಭವ ನೀಡುತ್ತದೆ. ನೀಳ ರಂಗನಿರ್ದೇಶನದ ಕೊನೆಗೆ ಓದುಗನ ಮನಸ್ಸಿನಲ್ಲಿ ರಂಗ ಸಜ್ಜಾದ ಮೇಲೆ ಪಿಸುಮಾತಿನಿಂದ ಆರಂಭವಾಗಿ ಉಗ್ರಗೊಳ್ಳುವ ಜನರ ಮಾತುಗಳು ಓದುಗನಿಗೆ ಪರಿಣಾಮಕಾರಿ ಎನಿಸುವಷ್ಟೇ ನೋಡುಗನಿಗೂ ಅನ್ನಿಸುವುದರಲ್ಲಿ ಸಂಶಯವಿಲ್ಲ.

'ಆರ್ದಿಯೆನ್ ಎತ್ ಬಾರ್ಬೆಬ್ಲೂ' ಯಿಂದ ಆಯ್ದ ಭಾಗ

ಬಾರ್ಬೆಬ್ಲೂನ ಕೋಟೆಯೊಳಗೆ ಅರ್ಧಚಂದ್ರಾಕಾರದ ಒಂದು ದೊಡ್ಡ ಪಡಸಾಲೆ, ಎದುರಿಗೆ ಹೆಬ್ಬಾಗಿಲು. ಅದರ ಅತ್ತಿತ್ತ ಮೂರು ಮೂರು ಚಿಕ್ಕದಾದ ಮರದ ಬಾಗಿಲುಗಳು. ಅವಕ್ಕೆ ಬೆಳ್ಳಿಬೀಗ ಜಡಿದಿದೆ. ಈ ಬಾಗಿಲುಗಳ ಮೇಲೆ ಒಂದು ಮಾಡ. ಮಾಡದಲ್ಲಿ ಬಾಗಿಲುಗಳಿಂದ ಹಿಂದಕ್ಕೆ ಆರು ದೊಡ್ಡ ಕಿಟಕಿಗಳಿವೆ. ಈ ಮಾಡಕ್ಕೆ ಹೋಗಲು ಪಡಸಾಲೆಯ ಎರಡು ಬದಿಗಳಲ್ಲೂ ಗೋಡೆಗೆ ಆತುಕೊಂಡಿರುವ ಮೆಟ್ಟಿಲುಗಳಿವೆ.

ಸಂಜೆಹೊತ್ತು, ದೊಡ್ಡ ಕಿಟಕಿಗಳು ತೆರೆದಿವೆ. ಮೊಂಬತ್ತಿಗಳು ಬೆಳಗುತ್ತಿವೆ. ರಂಗದ ಹಿಂದೆ ಮಾಡದ ಕಿಟಕಿಯಾಚೆ ಸಿಟ್ಟಿಗೆದ್ದ ಜನರ ಗುಂಪು; ಅವರು ಭಯಂಕರವಾಗಿ ಕೂಗುತ್ತಾರೆ, ಬೆದರಿಕೆ ಹಾಕುತ್ತಾರೆ; ಒಳಕ್ಕೆ ನುಗ್ಗುವ ಪ್ರಯತ್ನ ಮಾಡುತ್ತಾರೆ. ಅವರ ಹೆಜ್ಜೆಯ ದಡದಡ ಸದ್ದು ಮತ್ತು ಮಾತುಗಳು ಕಿಟಕಿ ಮೂಲಕ ಸ್ಪಷ್ಟವಾಗಿ ಕೇಳಿಸುತ್ತಿದೆ. ಪರದೆ ಮೇಲೇರುತ್ತಲೇ ಕಣ್ಣಿಗೆ ಕಾಣದ ಗುಂಪಿನವರ ದನಿಗಳು ಜೋರಾಗಿ ಕೇಳಿಸುತ್ತವೆ.

ಗುಂಪಿನವರ ಧ್ವನಿಗಳು: *ಹಾಗಾದರೆ ಅವಳು ಆ ರಥದಲ್ಲಿದ್ದಳೆ?*
ನಿಜವಾಗೂ ನೋಡಿದೆಯಾ?
ಹಳ್ಳಿಗೆ ಹಳ್ಳಿನೇ ನೆರೆದಿತ್ತು
ಅವಳನ್ನು ನೋಡೋದಿಕ್ಕೆ.
ಅವಳೇನು ಅಂಥಾ ಸುಂದರೀನಾ?
ಹೋಗೋವಾಗ ಅವಳು ನನ್ನ ಕಡೆ ನೋಡಿದಳು
ನನ್ನ ಕಡೆ ಕೂಡ...
ನನ್ನ ಕಡೆ ಕೂಡ......
ಪಾಪದ ಹುಡುಗಿ !
ಆದರೂ ಅವಳು ನಗುನಗುತ್ತಾ ಇದ್ದಳು
ಯಾರವಳು ? ಎಲ್ಲಿಂದ ಬಂದವಳು?
ತುಂಬಾ ದೂರದ ಊರಿಂದ
ಇಲ್ಲಿ ಅವಳಿಗಾಗಿ ಏನು ಕಾದುಕೂತಿದೆಯಂತೆ
ಮೂವತ್ತು ದಿನ ಪ್ರಯಾಣ ಮಾಡಿ ಬರುವುದಕ್ಕೆ.....?
ಈಗ ಕೂಗಿ ಹೇಳು
ಅವನು ಕಾಣಿಸುತ್ತಿಲ್ಲ !

ಎಲ್ಲರೂ ಒಟ್ಟಿಗೆ : ಹಿಂತಿರುಗು! ಹಿಂತಿರುಗು!
ಇನ್ನು ಮುಂದೆ ಹೋಗಬೇಡ
ಕೋಟೆ ಹತ್ತಿರ ಸುಳಿಯಬೇಡ
ಅಲ್ಲಿರುವುದು ಸಾವು ಮಾತ್ರ ! ಸಾವು !

ಒಂದೊಂದೇ ದನಿಗಳು: ಅವಳಿಗೆ ಅರ್ಥವಾಗುತ್ತಿಲ್ಲ....
ಅವಳ ಮನೆ ಸುತ್ತಮುತ್ತ ಇದ್ದ
ಇಪ್ಪತ್ತು ಮೂವತ್ತು ಗಂಡಸರು
ಅವಳ ಹಿಂದೆ ಮುಂದೆ ಬಂದರಂತೆ.
ಯಾಕಿರಬಹುದೂಂತೀಯ?
ಅವರೆಲ್ಲ ಅವಳನ್ನ ಪ್ರೀತಿಸುತ್ತಾರಂತೆ, ಅದಿಕ್ಕೆ
ದಾರಿಯುದ್ದಕ್ಕೂ ಅಳುತ್ತಾ ಬಂದರಂತೆ
ಅವಳು ಇಲ್ಲಿಗ್ಯಾಕೆ ಬಂದಳು?
ಓ, ಯಾಕೆ ಬಂದಳೊ!
ಅವಳಿಗೆ ಗೊತ್ತಿತ್ತಂತೆ- ಅವಳನ್ನು ಅವನು ಒಪ್ಪೋದಿಲ್ಲಾಂತ
ಆದರೆ.... ನೀನಂತೂ ಅವಳ ಜೋಡಿಯಾಗಲು ತುಂಬಾ ಸಪ್ಪೆ
ಇಲ್ಲ, ಅವನು ಅವಳನ್ನು ವರಿಸೋದಿಲ್ಲ.
ನೋಡಿ ನೋಡಿ, ಅಲ್ಲಿ ಹೋಗುತ್ತಿದ್ದಾಳೆ....
ಕೆಂಪು ಗೇಟನಾಸಿ ! ಇಲ್ಲ, ಇಲ್ಲ !
ಬೀದಿಯಲ್ಲಿ ಅವರ ಕೈದೀಪ ಕಾಣಿಸುತ್ತಿದೆ
ಗಿಡ ಮರಗಳ ಮಧ್ಯೆ ಹಾಯುತ್ತಿದ್ದಾರೆ.....
ಅವನು ಹೆದರಿದ್ದಾನೆ....
ಇಲ್ಲ, ಅವಳನ್ನು ಅವನು ವರಿಸೋದಿಲ್ಲ
ಅವನಿಗೆ ತಲೆ ಕೆಟ್ಟಿದೆ ! ಅವನಿಗೆ ಹುಚ್ಚು ಹಿಡಿದಿದೆ!
ಯಾಕೋ ಅವನ ಆಟ ಅತಿಯಾಯಿತು !
ಸಾಕು ಸಾಕಾಯಿತು !
ಇವಳು ಆರನೆಯವಳು....
ಕೊಲೆಗಡುಕ! ಕಟುಕ!
ಕತ್ತರಿಸಿ ಹಾಕಿ ಆ ಕಟುಕನನ್ನು !

ಒಣಹುಲ್ಲು ತಂದು ಹಾಕಿದ್ದೇನೆ, ಅದಕ್ಕೆ ಬೆಂಕಿ ಇಕ್ಕಿ
ನಾನು ಕೊಡಲಿ ತಂದಿದ್ದೇನೆ.
ಅರೆ, ಅಂಗಳದೊಳಕ್ಕೆ ಹೋಗಿಬಿಟ್ಟರು.
ಎಲ್ಲಿ, ನಾನೂ ನೋಡಬೇಕು.... ಹುಷಾರು....
ಗೇಟನ್ನು ಮುಚ್ಚಿಬಿಟ್ಟರು
ಹಿಂದಿದ್ದವರು ವಾಪಸ್ಸು ಬರಬಹುದು
ಇಲ್ಲೇ ನಿಂತು ಕಾಯಿ
ಅವಳಿಗೆ ವಿಷಯವೆಲ್ಲಾ ಗೊತ್ತಿದೆಯಂತೆ
ಯಾವ ವಿಷಯ?
ನನಗೆ ನಿನಗೆ ಎಲ್ಲರಿಗೂ ಗೊತ್ತಿರೋ ವಿಷಯ
ನಿನಗೇನು ಗೊತ್ತು?
ಅವರೆಲ್ಲ ಸತ್ತಿದ್ದಾರೆ ಅಂತ ನನಗೆ ಗೊತ್ತು
ಸತ್ತಿದ್ದಾರಾ? ಇಲ್ಲ...
ನಾನೇ ಹೂತು ಹಾಕಿದ್ದು
ಆದರೆ ಒಂದು ದಿನ ಸಾಯಂಕಾಲ
ನಾನು ಆ ಕಡೆ ಹೋಗುವಾಗ
ಹೆಂಗಸರು ಹಾಡೋದು ಕೇಳಿಸಿತಲ್ಲ....
ನನಗೂ ಒಮ್ಮೆ ಕೇಳಿಸಿತು
ನನಗೂ ಸಹ... ನನಗೂ ಸಹ....
ಹೌದು, ಅವರು ಗೋರಿಯಿಂದ ಎದ್ದು ಬರುತ್ತಾರಂತೆ
ಆದರೆ ಅವನು ನಮಗೂ ಕೇಡು ಮಾಡಬಲ್ಲ ನೋಡಿ -
ಕಿಟಕಿಗಳು ತಾವಾಗೇ ಮುಚ್ಚಿಕೊಳ್ಳುತ್ತಿವೆ
ಈಗ ಅವರು ಒಳಕ್ಕೆ ಹೋಗುತ್ತಿದ್ದಾರೆ
ಹೋಗಿ ಬಿಟ್ಟರು.....
ಇನ್ನು ಒಳಗಿನದೇನೂ ಕಾಣೋದಿಲ್ಲ
ಅಯ್ಯೋ, ಅವನು ನೆಗೆದು ಬೀಳಬಾರದೆ!
ಅವನು ನೆಗೆದು ಬೀಳ!

ಇಷ್ಟರಲ್ಲಿ ಮಾಡಿನ ಆರು ಕಿಟಕಿಗಳೂ ತಾವಾಗೇ ಮುಚ್ಚಿಕೊಳ್ಳುತ್ತವೆ. ದನಿಗಳು ಕ್ರಮೇಣ ಕಡಿಮೆಯಾಗುತ್ತ ಕೊನೆಗೆ ನಿಶ್ಶಬ್ದದಂತೆ ಭಾಸವಾಗುವ ಪಿಸಪಿಸ ಮಾತುಗಳು ಮಾತ್ರ ಕೇಳಿಸುತ್ತದೆ...

ನಾಟಕ ಮುಂದುವರೆಯುತ್ತದೆ

** ** **

ಮೇತರ್‌ಲಿಂಕನ ಇನ್ನೊಂದು ವಿಶಿಷ್ಟ ಬಗೆಯ ಕಿರುನಾಟಕ ಮತ್ತೊಂದು ರೀತಿಯಲ್ಲಿ ಶಬ್ದಗಳ ಬಳಕೆ ಮಾಡುತ್ತದೆ. 'ಇನ್‌ಟೀರಿಯರ್' ಅನ್ನು 'ನೀಲಿಹಕ್ಕಿ' ಬರೆದ ಪ್ರಬುದ್ಧನೇ ಬರೆದನಾ? ಅನ್ನುವಷ್ಟು ವಿಭಿನ್ನ ನಾಟಕ ಅದು.

ಮನೆಮಂದಿ ಕಿಟಕಿಯ ಒಳಗಿಂದ ಕಾಣುತ್ತಿದ್ದಾರೆ; ಎಲ್ಲರೂ ದಿನನಿತ್ಯದಂತೆ ತಮ್ಮ ತಮ್ಮ ಸಣ್ಣಪುಟ್ಟ ಕೆಲಸಗಳಲ್ಲಿ ನಿರತರಾಗಿದ್ದಾರೆ. ಆ ಮನೆಗೆ ಸೇರಿದ ಒಬ್ಬ ಹುಡುಗಿ ನದಿಯಲ್ಲಿ ಮುಳುಗಿ ಸತ್ತಿದ್ದಾಳೆ ; ವಿಷಯ ಅವರ್‍ಯಾರಿಗೂ ತಿಳಿಯದು. ಒಬ್ಬ ವೃದ್ಧ ಮತ್ತೊಬ್ಬ ಆಗಂತುಕ ಅವರಿಗೆ ಈ ವಿಷಯ ತಿಳಿಸಲು ಮನೆವರೆಗೂ ಬಂದು, ತಿಳಿಸುವುದೋ ಬೇಡವೋ ಎಂದು ಒಬ್ಬರಿಗೊಬ್ಬರು ಕೇಳಿಕೊಳ್ಳುತ್ತಿರುವುದು, ಕಡೆಯಲ್ಲಿ ವೃದ್ಧ ತಿಳಿಸಿ ಬರುವುದು -

ಇಷ್ಟೇ ನಾಟಕದ ಕತೆ. ಇಡೀ ನಾಟಕ ಬರೀ ಸಂಭಾಷಣೆಯ ಮೇಲೆ ನಿಂತಿರುವುದು ಈ ನಾಟಕದ ವಿಶೇಷತೆ.

ಇನ್ನು ಮೇತರ್‌ಲಿಂಕನ ಧಾರ್ಮಿಕತೆ ಮತ್ತು ತಂತ್ರಗಳನ್ನು ಬೇರ್ಪಡಿಸಲು ಅಸಾಧ್ಯವೆಂದೇ ತೋರುತ್ತದೆ. 'ಮರಿಯೆ ಮಗ್ದಲೀನೆ' ಮತ್ತು 'ಸಿಸ್ಟರ್ ಬೀಟ್ರಿಸ್'ನಲ್ಲಿ ಸಾಮಾನ್ಯ ಹಿನ್ನೆಲೆಯೆಂದರೆ ಕ್ರೈಸ್ತಧರ್ಮದಲ್ಲಿ ಮುಖ್ಯರೆನಿಸಿರುವ ವರ್ಜಿನ್ ಮತ್ತು ಯೇಸು. ಮೊದಲ ನಾಟಕದಲ್ಲಿ ಯೇಸು ರಂಗದ ಮೇಲೆ ಬರುವುದಿಲ್ಲ, ಬದಲಾಗಿ ಆತನ ವಾಣಿಯಷ್ಟೇ ಕೇಳುವುದು. ಇದನ್ನು ಧಾರ್ಮಿಕತೆ ಎನ್ನುತ್ತೀರೊ, ತಂತ್ರ ಎನ್ನುತ್ತೀರೊ? ಇವರೆಡೂ ನಾಟಕಗಳು ನಂಬಿಕೆಯ ನೇರ ಪ್ರತಿಪಾದನೆಯಾದರೂ, ಕ್ರಿಸ್ತನ ಜೀವನದಲ್ಲಿ ಬರುವ ಪವಾಡದ ಕತೆಯೇ ಮೊದಲನೆಯದರ ವಸ್ತು; 'ಸಿಸ್ಟರ್ ಬೀಟ್ರಿಸ್', ಡೇವಿಡ್‌ಸನ್ ಎಂಬ ಇಂಗ್ಲಿಷ್ ಕವಿಯ ಬ್ಯಾಲಡ್ (ಜನಪದ ಶೈಲಿಯ ಕಾವ್ಯ) 'ದಿ ಬ್ಯಾಲಡ್ ಆಫ್ ಸಿಸ್ಟರ್ ಬೀಟ್ರಿಸ್)ನಿಂದ ಓದುವ ವರ್ಗಕ್ಕೂ ಪರಿಚಿತವಾದ ಪ್ರಚಲಿತ ವರ್ಜಿನ್ ಮೇರಿಯ ಪವಾಡ ಕುರಿತ ಕತೆಯ ನಾಟಕದ ರೂಪವಾಗಿದೆ.

'ಮರಿಯೆ ಮಗ್ದಲೀನೆ' ಯಲ್ಲಿ ಅಭಿಸಾರಿಕೆಯಿಂದಾಗಿ ಸಾಮಾಜಿಕ ಆಯಾಮವೂ ಬರುವುದರಿಂದ ಇದು 'ಸಿಸ್ಟರ್ ಬೀಟ್ರಿಸ್'ಗಿಂದ ಭಿನ್ನವಾಗುತ್ತದೆ. ಆದರೆ ಮೇತರ್‌ಲಿಂಕನ ಧಾರ್ಮಿಕತೆಗೆ ಆಧ್ಯಾತ್ಮದ ಶಕ್ತಿಯಿದೆ; ಅದು ಅಂಧಶ್ರದ್ಧೆಯಿಂದ ಬಹಳ ದೂರ. 'ಸಿಸ್ಟರ್ ಬೀಟ್ರಿಸ್' ಸನ್ಯಾಸಿಯಾಗಿದ್ದವಳು. ಧಾರ್ಮಿಕ ಭಾಷೆಯಲ್ಲಿ 'ಪಾಪ' ಎಂದು ಕರೆಯಲಾಗುವುದರ ಬೆನ್ನಟ್ಟಿ ಹೋಗುತ್ತಾಳೆ. ಪ್ರೇಮದಲ್ಲಿ ಸಿಲುಕಿ ಪ್ರೇಮಿಯೊಂದಿಗೆ ಹೋಗುತ್ತಾಳೆ. ಆದರೆ ಸ್ವತಃ ವರ್ಜಿನ್ ಮೇರಿಯೇ ಅವಳ ಅಂತರಂಗ ತಿಳಿದವಳಾಗಿ ಅವಳನ್ನು ಆಧ್ಯಾತ್ಮಕ್ಕೆ ಹೆಚ್ಚು ಅರ್ಹಳನ್ನಾಗಿ ಮಾಡುತ್ತಾಳೆ. ಇದು ಕಾಲ ಮತ್ತು ದೇಶಗಳು ನೀಡುವ ಧರ್ಮದ ವ್ಯಾಖ್ಯಾನವನ್ನು ಮೀರಿದ ಧಾರ್ಮಿಕತೆಯ ಆಧ್ಯಾತ್ಮಿಕ ನಾಟಕವಾಗುವುದು. ಇಂಥ ಕಾರಣದಿಂದಲೇ, 'ಮರಿಯೆ ಮಗ್ದಲೀನೆ' ನಾಟಕದಲ್ಲಿ ಮುಖ್ಯಪಾತ್ರಧಾರಿ ಯಾರೆಂದರೆ, ಸಮಾಜಬಾಹಿರ ವೃತ್ತಿಯಲ್ಲಿ ತೊಡಗಿರುವ ಅಭಿಸಾರಿಕೆ ಮರಿಯೆ ಮಗ್ದಲೀನೆ. 'ಸೂಳೆ' ಎಂದರೆ, ಮತ್ತೆ 'ಪಾಪ'ದಲ್ಲಿ ತೊಡಗಿರುವವಳು. ಸಮಾಜ ಅವಳನ್ನು ಕೀಳಾಗಿ ಕಾಣುತ್ತದೆ. ಅವಳು ಕಣ್ಣಿಗೆ ಬಿದ್ದರೇ ಯಹೂದಿಗಳು ಕಲ್ಲು ತೂರುತ್ತಾರೆ. ಹೀಗಿರುವಾಗ ಅವಳ ರಕ್ಷಣೆಗೆ ಬರುವಾತ ಸ್ವತಃ ಯೇಸು: 'ಯಾವ ಪಾಪವನ್ನೂ ಮಾಡಿಲ್ಲದಾತನೇ ಮೊದಲು ಕಲ್ಲು ತೂರಲಿ' ಎಂದು ಹೇಳಿದ ಮೇಲೆ ಜನರಲ್ಲಿ ಜಾಗೃತಿ ಮರಿಯೆ ಮನದಲ್ಲಿ ದಿವ್ಯ ಪ್ರೇಮ ಮೂಡುತ್ತದೆ. ಇವಳಲ್ಲಾದ ಬದಲಾವಣೆ ಆಂತರಿಕವಾದುದು. ಅದಕ್ಕೆ ಪುರಾವೆ ಕಡೆಯಲ್ಲಿ ಸಿಗುತ್ತದೆ. ಆದರೆ ನಾಟಕದಲ್ಲಿ ಮತ್ತೊಂದು ಪವಾಡವಿದೆ, ಅದನ್ನು ಇತರ ಪಾತ್ರಧಾರಿಗಳು ನಿರೂಪಣೆ ಮಾಡುತ್ತಾರೆ; ಅದು ಸತ್ತ ಲಜರಸ್‌ನನ್ನು ಯೇಸು ಮತ್ತೆ ಬದುಕಿಸುವುದು. ಈ ಪವಾಡ ಕೂಡ ವ್ಯಾಖ್ಯಾನದ ಮಟ್ಟದಲ್ಲಿ ಅಪರೋಕ್ಷವಾಗಿ ಬರುವುದಿಲ್ಲ, ಬದಲಾಗಿ ನೇರಮಾತಿನಲ್ಲೇ ಬರುತ್ತದೆ. ಅಪನಂಬಿಕೆಯನ್ನು ಪ್ರಜ್ಞಾಪೂರ್ವಕವಾಗಿ ಪಕ್ಕಕ್ಕಿಡಬೇಕು ಎನ್ನುವ ಚಾಣಾಕ್ಷ ಬುದ್ಧಿ ಮತ್ತು ಹುಸಿಧಾರಾಳತನಗಳು ಮೇತರ್‌ಲಿಂಕ್‌ನ ಕೃತಿಗಳ ಅಭ್ಯಾಸಕ್ಕೆ ತೊಡಕುಗಳಾದಾವು!

ಎರಡು ನಾಟಕಗಳ ಇಂಥ ನೇರ ಅರ್ಥವುಳ್ಳ ಪವಾಡಗಳನ್ನು ಒಟ್ಟಾಗಿ ನೋಡಿದಾಗ ಮೇತರ್‌ಲಿಂಕನ ಉದ್ದೇಶವೇನೆಂದು ತಿಳಿಯಲು ಸಾಧ್ಯವಾಗಬಹುದೇನೊ. ಮೇತರ್‌ಲಿಂಕ್‌ನ ಅನುಭವದಲ್ಲಿ ಜೀವವು ಲೌಕಿಕವಾಗಿ ವಿಕಾಸ ಹೊಂದುತ್ತಾ ಹೊಂದುತ್ತಾ ದೈವತ್ವದ ಕಡೆ ತುಡಿಯುತ್ತದೆ. ಇದೇ ಅರ್ಥದಲ್ಲಿ ಬೀಟ್ರಿಸ್ ಪ್ರೇಮಪಾಶದಲ್ಲಿ ಸಿಲುಕಿ, ಸಂಪೂರ್ಣವಾಗಿ, ಸತ್ಯವಾಗಿ ಪ್ರೇಮದಲ್ಲಿ ತೊಡಗಿದ್ದರಿಂದ

ಮುಂದೆ ದೈವತ್ವಕ್ಕೆ ಹತ್ತಿರವಾಗುತ್ತಾಳೆ;ಮಗ್ದಲೀನೆ ಕೂಡ ಸರಳ ಮತ್ತು ನೇರ ವ್ಯಕ್ತಿತ್ವ ಉಳ್ಳವಳು; ಸ್ವಂತ ಅನುಭವದಿಂದ ಯೇಸುವಿನ ಮಹತ್ವ ಅರಿತುಕೊಂಡವಳು. ವಿವೇಚನೆಯಿಂದಾಗಿ ದೈವತ್ವಕ್ಕೆ ಅರ್ಹಳಾದವಳು. ಹೀಗೆ, ಜೀವ ಅನುಭವಸ್ಥಿತಿಯನ್ನು ಮೀರುವ ಘಟ್ಟದಲ್ಲಿ ದೈವತ್ವಕ್ಕೆ ಹತ್ತಿರವಾಗುವ ಪ್ರಕ್ರಿಯೆಯನ್ನು ಮೇತರ್‌ಲಿಂಕ್ ಇಂಥ ನೇರ ಪವಾಡ ನಾಟಕಗಳಲ್ಲಿ ಸೂಚಿಸುತ್ತಾನೆ.

ಇನ್ನು 'ಮರಿಯೆ ಮಗ್ದಲೀನೆ' ನಾಟಕದ ಇತರೆ ಪರಿಕರಗಳ ಬಗ್ಗೆ ಮಾತಾಡ ಬಹುದು: ಇದು ಯೇಸು ಜೀವಿತವಿದ್ದ ಕಾಲದ ಯೂರೋಪ್. ಇಲ್ಲಿ ಗ್ರೀಕ್‌ನ ವೈಭವದ ಸಂಸ್ಕೃತಿಯಿದೆ, ಬೀದಿ ಬದಿಯ ಯಹೂದಿಗಳ ಸಂಸ್ಕೃತಿಯೂ ಇದೆ. ಇವೆರಡು ಸಂಸ್ಕೃತಿಗಳ ಚಿತ್ರಣ ನಾಟಕದಲ್ಲಿ ಮನಮುಟ್ಟುವಂತೆ ಮೂಡಿಬರುತ್ತವೆ. ಯೇಸುವಿನ ಜೀವಿತದ ಅಂತಿಮಘಟ್ಟವೇ ನಾಟಕದ ಕಾಲ. ಸತ್ಯ ನುಡಿದುದಕ್ಕಾಗಿ ಯೇಸುವನ್ನು ಶಿಲುಬೆಗೇರಿಸಿ ಶಿಕ್ಷಿಸಿದ್ದು ಗೊತ್ತಿರುವ ವಿಷಯ. ಪವಾಡ ಪುರುಷನಾದ ಯೇಸು ಮೇಲಿನವರ ಕ್ರೂರದೃಷ್ಟಿಗೆ ಪಾತ್ರನಾಗಿದ್ದು, ಯೇಸು ಕುರಿತ ಅಪರಿಮಿತ ಪವಿತ್ರ ಪ್ರೇಮ ಮೂಡಿಸಿಕೊಂಡ ಅಭಿಸಾರಿಕೆ ಆತನನ್ನು ಶಿಕ್ಷೆಯಿಂದ ತಪ್ಪಿಸಬಲ್ಲವಳಾಗಿದ್ದು, ಅವಳ ಪ್ರಿಯಕರನಾದ ವೀರುಸ್‌ನೇ ಶಿಕ್ಷೆಯನ್ನು ಈಡೇರಿಸಬೇಕಾಗಿ ಬಂದದ್ದು ನಾಟಕದ ನಾಟಕೀಯ ಅಂಶಗಳು. ಪ್ರಿಯಕರ ರೋಮಿನ ಯೋಧ ವೀರುಸ್ ಮರಿಯೆಗೆ ಪಣವೊಡ್ಡುತ್ತಾನೆ: ಆತನನ್ನು ಶಿಕ್ಷೆಯಿಂದ ತಪ್ಪಿಸಬೇಕೆಂದರೆ ಆಕೆ ಆ ಕೂಡಲೇ ವೀರುಸ್‌ಗೆ ತನ್ನನ್ನು ಒಪ್ಪಿಸಿಕೊಳ್ಳಬೇಕು. ಅಭಿಸಾರಿಕೆಯಾಗಿದ್ದ ಅವಳ ಮನಸ್ಸು ಈಗ ತೊಳಲಾಡುತ್ತದೆ, ತೊಯ್ದಾಡುತ್ತದೆ : ಇವನ ಬಯಕೆ ಈಡೇರಿಸಿ ಯೇಸುವಿನ ಪ್ರಾಣ ಉಳಿಸಲು ಬರುತ್ತದೆ. ಆದರೆ ಯೇಸು ಯಾವ ಪವಿತ್ರತೆಗಾಗಿ ಪ್ರಾಣಾರ್ಪಣೆ ಮಾಡುತ್ತಿದ್ದಾನೋ ಅದನ್ನೇ ಕೊಂದಂತೆ ಆಗುತ್ತದೆ. ಕಡೆಗೆ, ಶರಣಾಗತಿಗೆ ಒಪ್ಪದ ಮಗ್ದಲೀನೆ ಯೇಸುವಿನ ಶರೀರದ ಮರಣಕ್ಕೆ ಕಾರಣವಾಗುತ್ತಾಳೆ.

ಇಂದು ಪ್ರಪಂಚವೇ ಆರಾಧಿಸುತ್ತಿರುವ ಯೇಸು ಮನುಷ್ಯ ಶರೀರದಲ್ಲಿ ಭೂಮಿಯಲ್ಲಿದ್ದಾಗ ನಡೆದದ್ದನ್ನು ವಾಸ್ತವ ಶೈಲಿಗೆ ಹತ್ತಿರವಾಗೇ ಮೇತರ್‌ಲಿಂಕ್ ಚಿತ್ರಿಸಿದ್ದರೂ, ಯಾವುದೇ 'ತಂತ್ರವು' ಆಧ್ಯಾತ್ಮವನ್ನು ಒಳಗೊಳ್ಳದಷ್ಟು ಚಿಕ್ಕದಾದ್ದರಿಂದ ನಾಟಕವನ್ನು ರಿಯಲಿಸ್ಟಿಕ್ ಅಥವಾ ಇನ್ನೊಂದು ಹೆಸರಲ್ಲಿ ಕರೆಯಲಾಗದು.

ಇಂಥದೇ ಸಂದಿಗ್ಧಕ್ಕೆ ಸಿಲುಕುವವಳು ಮೊನ್ನವನ್ನಾ. ಆದರೆ ನಿರ್ಧಾರದಲ್ಲಿ ಮಗ್ದಲೀನೆ ಮತ್ತು ವನ್ನಾ ಬೇರೆಯಾಗುತ್ತಾರೆ. 'ಮರಿಯೆ ಮಗ್ದಲೀನೆ' ಅರ್ಥ

ಚಾರಿತ್ರಿಕವಾದರೂ, ನಾಟಕೀಯ ಸಂದಿಗ್ಧಗಳು ಸೃಷ್ಟಿಯಾದುವು; 'ಮೊನ್ನವನ್ನಾ' ಚಾರಿತ್ರಿಕ ಹಿನ್ನಲೆಯನ್ನು ಇಟ್ಟುಕೊಂಡಿದೆಯಾದರೂ ಇದೂ ಚಾರಿತ್ರಿಕ ನಾಟಕವೇನಲ್ಲ. (ಇದು ಇಂಗ್ಲಿಷಿನ ರಾಬರ್ಟ್ ಬ್ರೌನಿಂಗ್ ಕವಿಯ 'ಲೂರಿಯಾ' ಖಂಡಕಾವ್ಯದ ಸ್ಫೂರ್ತಿಯಿಂದ ಬರೆದದ್ದು) ಬರ್ಟೋಲ್ಟ್ ಬ್ರೆಕ್ಟ್‌ನ 'ಮದರ್ ಕರೇಜ್'ನಂತೆ, 'ಕಕೇಷಿಯನ್ ಚಾಕ್‌ಸರ್ಕಲ್'ನಂತೆ, ಷೇಕ್ಸ್‌ಪಿಯರನ ದುರಂತ ನಾಟಕಗಳಂತೆ. ನಾಟಕದ ಉತ್ಕಟ ಭಾವನೆಯೆಂದರೆ ತೊಳಲಾಟ, ಸಂದಿಗ್ಧಗಳು. ಎರಡರಲ್ಲೂ ಹೆಣ್ಣಿನ ಮಾನದ ಪ್ರಶ್ನೆ ಮುಖ್ಯವಾಗುತ್ತದೆ. ಯೋಧನ ಮಡದಿ ವನ್ನಾಗೆ ತನ್ನನ್ನು ನಂಬಿದ ಜನರ ಜೀವ ರಕ್ಷಣೆ ಮುಖ್ಯವಾಗುತ್ತದೆ. ಈ ದೃಷ್ಟಿಯಲ್ಲಿ 'ಮೊನ್ನವನ್ನಾ' ನಾಟಕದಲ್ಲಿ ಪ್ಲಾಟಿಗೆ ಹತ್ತಿರವಾದ ಕೃತಕ ಎಳೆಯೊಂದು ಇರುವುದು ಗೋಚರವಾಗುತ್ತದೆ.

'ಮೊನ್ನವನ್ನಾ'ದಲ್ಲಿ ಪೀಸಾದ ಸೇನಾನಿ ಗ್ವಿದೋನ ಮಡದಿ ವನ್ನಾ ನಗರ ರಕ್ಷಣೆಗಾಗಿ ಶತ್ರು ಪಿನ್ಸೆಲ್‌ವಲೆಗೆ ತನ್ನನ್ನು ಅರ್ಪಿಸಿಕೊಳ್ಳಲು ನಿರ್ಧರಿಸುತ್ತಾಳೆ. ಹಾಗೇ ಶತ್ರು ಪಾಳೆಯಕ್ಕೆ ಹೋಗಿ, ಮರುದಿನ ತನ್ನ ನಗರ ಪ್ರವೇಶ ಮಾಡುತ್ತಾಳೆ. ಜೊತೆಗೆ ಶತ್ರು ಕೂಡಾ ಇದ್ದಾನೆ ;ಗಾಯಗೊಂಡ ಮುಖವನ್ನು ಬಟ್ಟೆಯಿಂದ ಬಿಗಿಯಲಾಗಿದೆ. ನಗರವನ್ನು, ಜನರನ್ನು ಕಾಪಾಡಲು ತನ್ನನ್ನೇ ಅರ್ಪಿಸಿಕೊಂಡ ವನ್ನಾ ಬರುವುದನ್ನು ಜನ ಜಯಘೋಷಗಳಿಂದ (ರಂಗದ ಹಿಂದೆ) ಸ್ವಾಗತಿಸುತ್ತಿರುತ್ತಾರೆ. ಮಾನ ಕೊಡಲು ಹೋದವಳು ಶತ್ರುವನ್ನೂ ಜೊತೆಗೆ ಕರೆದುಕೊಂಡು ಹಿಂತಿರುಗಿದ್ದಾಳೆ. ಅವನಿಗೆ ಜೀವರಕ್ಷಣೆ ನೀಡಲು ಸಿದ್ಧಳಾಗಿದ್ದಾಳೆ. ಯಾಕಂದರೆ ಆಕೆ ಪರಿಶುದ್ಧಳಾಗಿಯೇ ಇದ್ದಾಳೆ. ಪುರಾಣಗಳಲ್ಲಿ ಜ್ಯೂಡಿತ್ ತನ್ನ ಮಾನ ಕಾಪಾಡಲು ಹಾಲೊಫಾರ್ನೆಸ್‌ನನ್ನೇ ಕೊಲ್ಲಬೇಕಾಯ್ತು; ಲೂಕ್ರೀಸಿ ತನ್ನನ್ನೇ ಕೊಂದುಕೊಂಡಳು, ಆದರೆ ವನ್ನಾ ಗ್ವಿದೋನ ಮಾತಿನಂತೆ ''ಅವರಿಬ್ಬರಿಗಿಂತಾ ಮಿಗಿಲಾದವಳು''. ಮಾನಾರ್ಪಣೆ ಅವಳ ನಿರ್ಧಾರವಾದರೂ, ಘಟಿಸುವುದೇ ಬೇರೆ. ಅಹಿತಕರವಾದ್ದನ್ನು ನಾಟಕಕಾರ ಆಗಗೊಡುವುದಿಲ್ಲ . ಆದರೂ ಮೇತರ್‌ಲಿಂಕ್‌ನ ಇತರ ನಾಟಕಗಳಂತೆ ಇಲ್ಲಿ 'ಪವಾಡ'ಗಳ್ಯಾವುದೂ ನಡೆಯುವುದಿಲ್ಲ.

ಮೇತರ್‌ಲಿಂಕನ ಬಹುಚರ್ಚಿತ ಬಹುವಿಖ್ಯಾತ ನಾಟಕ 'ನೀಲಿಹಕ್ಕಿ' ಮತ್ತು ಅದರ ಮುಂದುವರಿದ ಭಾಗ 'ಲಗ್ನ ನಿಶ್ಚಯ' ಇನ್ನೊಂದು ಗುಂಪಿಗೆ ಸೇರುತ್ತವೆ. ಇದರಲ್ಲಾಗಲಿ 'ಆರ್ದಿಯೆನ್ ಎತ್ ಬಾರ್ಬೆಬ್ಲೂ'ನಲ್ಲಾಗಲಿ ಮಾಂತ್ರಿಕತೆ ಇದೆಯೆ ಹೊರತು ಧಾರ್ಮಿಕತೆ ಪವಾಡಗಳಿಲ್ಲ. ಆದಾಗ್ಯೂ ಇವುಗಳೆಲ್ಲದರಲ್ಲೂ ಒಂದಲ್ಲಾ ಒಂದು

ರೀತಿಯ ಹುಡುಕಾಟ ಇದೆ. 'ಆರ್ಡಿಯೆನ್ ಎತ್ ಬಾರ್ಬ್‌ಬ್ಲೂ' ಅಂತರಂಗದ ಹುಡುಕಾಟದ ಪ್ರತೀಕವಾದರೆ, 'ನೀಲಿಹಕ್ಕಿ' ಮತ್ತು 'ಲಗ್ನನಿಶ್ಚಯ' ನೇರವಾದ ಅಂತರಂಗದ ಹುಡುಕಾಟವೇ ಆಗಿವೆ. ಮೊದಲ ನಾಟಕವು ಇಡಿಯಾಗಿ ರೂಪಕವಾದರೆ, ಎರಡನೆಯವು ಅಗೋಚರವಾದದ್ದನ್ನು ಇನ್ನೂ ಹತ್ತಿರದಲ್ಲಿ - ಹತ್ತಿರವೆಂದರೆ ಕಾಲ ದೇಶಗಳೆರಡರಲ್ಲೂ ಹತ್ತಿರದಲ್ಲಿ - ನೋಡುವ ಪ್ರಯತ್ನ ; ಇದರಲ್ಲಿ ಪ್ರತೀಕಗಳು ಅಸಂಭವ ಪಾತ್ರಗಳು ಅನೇಕ.

'ಆರ್ಡಿಯೆನ್ ಎತ್ ಬಾರ್ಬ್‌ಬ್ಲೂ' ಯೂರೋಪಿನ ವಿವಿಧ ದೇಶಗಳಲ್ಲಿ ಪ್ರಚಲಿತವಿದ್ದ ಜಾನಪದ ಕತೆಯೊಂದರಿಂದ ಸ್ಫೂರ್ತಿ ಪಡೆದದ್ದು. ಹಾಗಾಗಿ ನಾಟಕದಲ್ಲಿ ಕಾಲಾತೀತವಾದ, ಪುರಾತನವಾದ, ಕಲ್ಪನಾಲೋಕಕ್ಕೆ ಹತ್ತಿರವಾದ ಕೋಟೆಯೊಂದಿದೆ. ಅದರ ಒಡೆಯ ಕ್ರೂರಿ ಬಾರ್ಬ್‌ಬ್ಲೂ - ನೀಲಿ ಗಡ್ಡದವ. ಒಂದು ವಿಧದಲ್ಲಿ ಇದು ಸಾಹಸಕತೆಯೂ ಆಗಿರುವುದರಿಂದ ನಿಗೂಢಗಳಿಗೂ ಇಲ್ಲಿ ಆಸ್ಪದವಿದೆ. ಅವನಿಗೆ ಈಗಾಗಲೇ ಐದು ಮಂದಿ ಸುಂದರ ಹೆಂಡತಿಯರಿದ್ದಾರೆ; ಜಗತ್ತಿನ ವಿವಿಧ ಭಾಗಗಳಿಂದ ಬಂದವರು. ಬಾರ್ಬ್‌ಬ್ಲೂನನ್ನು ಮೋಹಿಸಿದವರು. ಪ್ರತಿಸಲ ಆತ ಬಂದ ಹೆಂಡತಿಗೆ ಏಳು ಕೀಲಿಕೈಗಳನ್ನು ಕೊಡುತ್ತಾನೆ. ಆದರೆ ಆರನ್ನು ಮಾತ್ರ ಬಳಸಲು ಅನುಮತಿ ನೀಡುತ್ತಾನೆ. ಆ ಆರು ಕೀಲಿಕೈಗಳು ತೆಗೆಯಬಹುದಾದ ಎಲ್ಲ ಖಜಾನೆಗೂ ಆಕೆಯೇ ಒಡತಿ. ಅವುಗಳಲ್ಲಿ ಬೆಲೆಬಾಳುವ ರತ್ನಗಳಿರುತ್ತವೆ. ಆದರೆ ಏಳನೆ ಬಾಗಿಲನ್ನು ತೆಗೆಯುವ ಹಾಗಿಲ್ಲ. ತೆಗೆದು ವ್ರತಗೆಟ್ಟ ಐದೂ ಮಂದಿಯನ್ನು ಆತ ನೆಲಮಾಳಿಗೆಯ ಕತ್ತಲಲ್ಲಿ ವರ್ಷಗಳಿಂದ ಕೂಡಿಹಾಕಿರುತ್ತಾನೆ. ಆರ್ಡಿಯೆನ್ ಆತನನ್ನು ವರಿಸಿ, ತನ್ನ ಪರಿಚಾರಿಕೆಯೊಂದಿಗೆ ಬಂದಿರುತ್ತಾಳೆ. ಪರಿಚಾರಿಕೆ ಆರೂ ಕೋಣೆಗಳ ನಿಧಿಯಿಂದ ಸಂತೃಪ್ತಳಾದರೆ, ಆರ್ಡಿಯೆನ್ ಮೊದಲು ತೆರೆಯ ಬಯಸುವುದೇ ನಿಷಿದ್ಧವಾದ ಏಳನೇ ಬಾಗಿಲನ್ನು. ಅದನ್ನು ತೆಗೆದು ಅವಳೂ ಶಿಕ್ಷೆಗೆ ಗುರಿಯಾಗುತ್ತಾಳೆ. ಆದರೆ ತನ್ನ ಐದು ಜನ ತಂಗಿಯರನ್ನು ಕತ್ತಲಿಂದ ಬೆಳಕಿಗೆ, ಕೂಪದಿಂದ ಬಯಲಿಗೆ ಬಿಡುಗಡೆ ಕಾಣಿಸುತ್ತಾಳೆ. ಕ್ರೂರಿ ಬಾರ್ಬ್‌ಬ್ಲೂಗೆ ಹಳ್ಳಿಜನ ಹೊಡೆದು ಬುದ್ಧಿ ಕಲಿಸಿದರೂ ಆರ್ಡಿಯೆನ್ ಪ್ರೀತಿಯ ಮೂಲಕ ಮಾರ್ಪಡಿಸುತ್ತಾಳೆ.

ಆರ್ಡಿಯೆನ್ ಪಾತ್ರ ಬಹಳ ವಿಶಿಷ್ಟವಾದ್ದು; ಅವಳ ಕೆಲವೊಂದು ಮಾತುಗಳಿಂದ ಅದು ಸ್ವಯಂ ಸಿದ್ಧವಾಗುತ್ತದೆ. ಆಕೆ ಇತರರ ಹಾಗಲ್ಲ:

ಅವು ನಿನಗೆ ಖುಷಿಕೊಡುವುದಾದರೆ
ನೀನೇ ಆ ಖಜಾನೆಗಳನ್ನ ತೆಗೆದು ನೋಡಿಕೊ
ನಾನು ತೆಗೆಯ ಬಯಸುವುದು
ಅವನು ನಿಷೇಧ ಹಾಕಿದ ಬಾಗಿಲನ್ನು ಮಾತ್ರ
ಮಿಕ್ಕವನ್ನು ಬೇಕಾದರೆ ನೀನೇ ತೆಗೆದುಕೊ
ಅವನು ತೂಗೊ ಎಂದು ಕೊಟ್ಟಿರುವ ಜಾಗದಲ್ಲಿ
ನಮಗೆ ಯಾವ ಸುಳಿವೂ ಸಿಗುವುದಿಲ್ಲ.

ಪರಿಚಾರಿಕೆ: *ಯಾವುದನ್ನು ಮೊದಲು ತೆಗೆಯಲಿ'?*

ಆರ್ಡಿಯನ್: *ಯಾವುದನ್ನ ಯಾವಾಗ ತೆಗೆದರೂ ಏನು ವ್ಯತ್ಯಾಸ?*

ಇವೆಲ್ಲ ಇರುವುದು ನಮ್ಮನ್ನ ಗುರಿಯಿಂದ ಹೊರಳಿಸಲಿಕ್ಕೆ.
ಏನಿದು,
ಹುಡುಕಿದರೂ ಏಳನೇ ಬಾಗಿಲು ಕಾಣುತ್ತಿಲ್ಲವಲ್ಲ...?

ಆರ್ಡಿಯನ್ ದಿಟ್ಟ ಹೆಣ್ಣು, ನಿರ್ದಿಷ್ಟ ಗುರಿಯಿಟ್ಟುಕೊಂಡು ಅದನ್ನು ತಲುಪುವ ಛಲ ಉಳ್ಳವಳು. ಆದರೆ ಅಷ್ಟೇ ಕೋಮಲೆ, ಸೌಂದರ್ಯಾರಾಧಕಿ. ತಂಗಿಯರನ್ನು ಕತ್ತಲಿನ ಗೋರಿಯಿಂದ ಬಿಡುಗಡೆ ಮಾಡುತ್ತಾಳೆ; ಅವರೆಲ್ಲ ತಮ್ಮ ಪ್ರಿಯಕರ ಬ್ಲೂಬಿಯರ್ಡ್‌ನನ್ನು ಎದುರುಗೊಳ್ಳಲು ಸಿಂಗರಿಸಿಕೊಂಡಿದ್ದಾರೆ; ನಿಜವಾದ ಬೆಳಕು, ಸ್ವಾತಂತ್ರವನ್ನು ತಲುಪುವ ಗುರಿಯುಳ್ಳ ಆರ್ಡಿಯನ್‌ಗೆ ಸೌಂದರ್ಯವೂ ಸ್ವಾತಂತ್ರ್ಯಕ್ಕೆ ಹತ್ತಿರವಾಗಿರಬೇಕು, ಅಲಂಕಾರದಿಂದ ಬಂಧಿತವಾಗಿರಬಾರದು:

ನಾವು ಸುಂದರಿಯರಾಗೇ ಕಾಣಬೇಕು
ಏನಿದು, ನಿಮಗೆ ಬೇಕಾದ ಹಾಗೆ ಅಲಂಕಾರ ಮಾಡಿಕೊಳ್ಳುತ್ತಿದ್ದೀರ?
ಓ ಮೆಲಿಸಾಂದೆ, ನಿನ್ನ ಕೂದಲು ಎಷ್ಟು ಮಾಟವಾಗಿತ್ತು
ಬೆಳಕನ್ನೇ ಬಿಂಬಿಸುತ್ತಿತ್ತು
ಗೋರಿಯೊಳಗಿನ ಇರುಳನ್ನು ಅಣಕಿಸಿ ನಗುತ್ತಿತ್ತು.
ಈಗ ನಿನ್ನ ಕೂದಲಿನ ಹೊಳಪನ್ನು ನೀನೇ ನಂದಿಸಿಬಿಟ್ಟಿದ್ದೀಯ!
ತಾಳು, ನಾನು ಬಂದು ಬಂಧಿಯಾಗಿರುವ ಬೆಳಕನ್ನು
ನಿನ್ನ ತುರುಬಿನಿಂದ ಬಿಡುಗಡೆ ಮಾಡುತ್ತೇನೆ.

(ತುರುಬನ್ನು ಬಿಚ್ಚುತ್ತಾಳೆ)

ನೀನು. ನೀನೂ ಕೂಡ. ನಿನ್ನ ಸುಂದರ ತೋಳುಗಳು...
ಎಲ್ಲಿ ಅವು ಸಲಿಸತ್ತೆ ? ಅವಕ್ಕೇನು ಮಾಡಿದ್ದೀಯೆ?
(ತೋಳ್ಬಂದಿ ಬಳೆಗಳಿಂದಾಗಿ)
ತೋಳುಗಳೇ ಕಾಣುತ್ತಿಲ್ಲ, ಇಲ್ಲ

..

ನೋಡು, ನಾನೀಗ ನಿನ್ನ ಸುಂದರ ತೋಳುಗಳಿಗೆ
ಬಿಡುಗಡೆ ಕೊಡಿಸುತ್ತೇನೆ
(ತೋಳ್ಬಂದಿ ಮುಂತಾದ ಅಲಂಕಾರಗಳನ್ನು ತೆಗೆದು ಹಾಕುತ್ತಾಳೆ)

ಕಡೆಗೆ ಪರಿವರ್ತಿತನಾದ ಬಾರ್ಬ್‌ಬ್ಲೂ ಜೊತೆ ಐವರು ತಂಗಿಯರು ಉಳಿದುಕೊಂಡರೆ, ಆರ್ಡಿಯೆನ್ ಹೊರಟು ಹೋಗಿಬಿಡುತ್ತಾಳೆ.

ಮೇತರ್‌ಲಿಂಕನಿಗೆ ಬಹುಶಃ ಈ ನಾಟಕ ಅಂತರಂಗದ ಹುಡುಕಾಟಕ್ಕೆ ಮಾತ್ರ ದ್ಯೋತಕವಾಗಿತ್ತೆಂದು ತೋರುತ್ತದೆ ; ಅವನ ವಿಶಾಲ ದೃಷ್ಟಿಯಲ್ಲಿ ಕ್ರೂರ ಬದಲಾದ ; ಪ್ರಿಯತಮೆಯರು ಗೋರಿಯಿಂದ ಬಿಡುಗಡೆ ಪಡೆದರು ; ಆರ್ಡಿಯೆನ್ ಇವೆರಡರ ಹಿಂದಿನ ಶಕ್ತಿಯಾಗಿದ್ದಳು. ಕಡೆಯಲ್ಲಿ ಐವರೂ ಆತನ ಜೊತೆಯಲ್ಲಿ - ದಂತಕತೆಗಳು ಮುಕ್ತಾಯವಾಗುವ ಹಾಗೆ - ಒಟ್ಟಿಗೆ ಸುಖವಾಗಿ ಬಾಳಿದರು.

ನಾಟಕದುದ್ದಕ್ಕೂ ಆರ್ಡಿಯೆನ್ ಪಾತ್ರ ಇಂದಿನ ಸ್ತ್ರೀಪರ ಹೋರಾಟಗಾರರಿಗೆ ಸಹನೀಯವಾಗಿ, ಸಮರ್ಪಕವಾಗಿ ಕಾಣುತ್ತದೆ. ಸಾಹಸದ ಮಂಚೂಣಿಯಲ್ಲಿರುವ ಅವಳು ಸುಂದರಿ, ತಿಳುವಳಿಕಸ್ಥೆ, ಧೈರ್ಯಶಾಲಿ, ವಿವೇಕಿ; ಅಷ್ಟೇ ಕೋಮಲೆ, ಮೃದುಸ್ವಭಾವ ಹೊಂದಿದವಳು. ಹೀಗೆ ಕಥಾನಾಯಕಿಗಿರುವ ಎಲ್ಲ ಗುಣಗಳೂ ಇವಳಲ್ಲಿವೆ, ಗಂಡು ಸಮಾಜಕ್ಕೆ ಸಡ್ಡು ಹೊಡೆಯಬಲ್ಲ ಎಲ್ಲ ಗುಣಗಳೂ ಇವೆ. ಆದರೆ ಈ ವ್ಯಾಖ್ಯಾನವನ್ನು ಕತೆಯ ಪ್ರತೀ ಘಟನೆಯೊಂದಿಗೆ ತಾಳೆ ಹಾಕಲು ಬರುವುದಿಲ್ಲ. ಕಡೆಯಲ್ಲಿ ಐದೂ ಜನ ಹೆಣ್ಣುಮಕ್ಕಳು ನಾಯಕನ ಸೇವೆಯಲ್ಲಿ ನಿರತರಾಗುವುದು ಅಷ್ಟು ಸಮರ್ಪಕವಾಗಿ ತೋರುವುದಿಲ್ಲ.

ಮೇತರ್‌ಲಿಂಕ್ ತನ್ನ ನಾಟಕಗಳ ಹೊರಮೈನಲ್ಲಿ ನಡೆಯುವುದೆಲ್ಲಕ್ಕೂ ಗಾಢವಾದ ಅರ್ಥವಿಟ್ಟುಕೊಂಡಿರುತ್ತಾನೆ; ಅದು ಮೇಲ್ಪೈ ಅರ್ಥಸಾಧ್ಯತೆಗಳಲ್ಲಿ ಒಪ್ಪುವಂತಾಗಿರುವುದಿಲ್ಲ ಎನ್ನುವುದಕ್ಕೆ ಅವನ ಇನ್ನೊಂದು ನಾಟಕ 'ಲಗ್ನ ನಿಶ್ಚಯ'ವೂ ಉದಾಹರಣೆ. ಇದರಲ್ಲಿ ಹದಿವಯಸ್ಸಿನ ಟಿಲ್ಟಿಲ್, ತಾನು ಮದುವೆಯಾಗಬೇಕಾದ ಹುಡುಗಿಯನ್ನು ಆರಿಸಿಕೊಳ್ಳುವ ವಿಚಾರವನ್ನು ಯಕ್ಷಿ ಬೆಲ್ಯೂನ್ ಹೇಳುತ್ತಾಳೆ: ''ಅದು ನಿನ್ನ ಜವಾಬ್ದಾರಿಯಲ್ಲ ; ಹುಡುಗಿಯನ್ನು ಆರಿಸಬೇಕಾದ್ದು ಅವನ ಹಿರಿಯರು ಮತ್ತು ಹುಟ್ಟಲಿರುವ ಅವನ ಮಕ್ಕಳು ಮೊಮ್ಮಕ್ಕಳು'' ಎನ್ನುತ್ತಾಳೆ. ಸಮಕಾಲೀನ ಸಂದರ್ಭದಲ್ಲಿ, ಅದೂ ಯೂರೋಪ್‌ನಲ್ಲಿ ಹುಡುಗ ಹುಡುಗಿಯರ ಆಯ್ಕೆಯನ್ನು ಹಿರಿಯರೇ ಮಾಡಬೇಕೆನ್ನುವುದು ಸಮಂಜಸ ಎನಿಸುವುದಿಲ್ಲ. 'ವನ್ನಾ' ಳಂಥ ಪಾತ್ರಗಳನ್ನು ಸೃಷ್ಟಿಮಾಡಿರುವ ಮೇತರ್‌ಲಿಂಕ್ ಇವೆರಡರಲ್ಲಿ ಹೀಗೇಕೆ ಮಾಡುತ್ತಾನೆ?

ಮುಂದೆ, ತನ್ನ ಗದ್ಯಕೃತಿ 'ದಿ ಅವರ್‌ಗ್ಲಾಸ್' ನಲ್ಲಿ ಆ ನಾಟಕದ ಬಗ್ಗೆ ಬರೆಯುತ್ತಾನೆ; ಮೇತರ್‌ಲಿಂಕನ ಗ್ರಹಣಶಕ್ತಿ ಜ್ಞಾನಶಾಖೆಗಳ ಮಿತಿಗಳನ್ನು ದಾಟಿದ್ದು ಎಂದು ತಾನೇ ತಿಳಿಯುತ್ತದೆ.

''ನಮ್ಮ ಜೀವಿತಗಳನ್ನು ಮುನ್ನಡೆಸುವ ಈ ಅದೃಶ್ಯ ಜೀವಿಗಳನ್ನು ರಂಗದ ಮೇಲೆ ತರುವ ಪ್ರಯತ್ನವನ್ನು ಒಂದು ಇಪ್ಪತ್ತು ವರ್ಷಗಳ ಹಿಂದೆ 'ನೀಲಿಹಕ್ಕಿ'ಯ ಮುಂದಿನ ಭಾಗವಾಗಿ ಬರೆದ ಯಕ್ಷಿ ನಾಟಕ 'ಲಗ್ನನಿಶ್ಚಯ'ದಲ್ಲಿ ಮಾಡಿನೋಡಿದೆ. ಇದು ಇಂಗ್ಲೆಂಡ್ ಮತ್ತು ಅಮೆರಿಕಾದಲ್ಲಿ ಪ್ರದರ್ಶನ ಕಂಡಿತು.

ಅದನ್ನು ನೋಡಿಲ್ಲದವರಿಗಾಗಿ, ಆ ನಾಟಕ ಓದಿಲ್ಲದವರಿಗಾಗಿ ಅದರ ಹಿಂದಿನ ವಾದವನ್ನು ಮತ್ತೆ ಮಂಡಿಸುತ್ತೇನೆ.''

''ದಿ ಬೆಟ್ರಾತಲ್'' ನಿಂದ ಆಯ್ದ ಭಾಗ

'ಟಿಲ್ಟಿಲ್ ವಯಸ್ಸಿಗೆ ಬಂದಿದ್ದಾನೆ. ಒಂದು ರಾತ್ರಿ ಪ್ರೇಮದ ಬಗ್ಗೆ ಕನಸುಕಾಣುತ್ತಾ ಮಲಗಿದ್ದಾನೆ; ಯಕ್ಷಿ ಬೆರಿಲ್ಯೂನ್ ಅವನನ್ನು ಎಚ್ಚರ ಮಾಡಿ, ಮದುವೆ ಬಗ್ಗೆ ಯೋಚನೆ ಮಾಡುವ ಹೊತ್ತಾಯಿತು ಎನ್ನುತ್ತಾಳೆ; ಅವನು ಪ್ರೀತಿಸುವ ಹುಡುಗಿಯ ಹೆಸರೇನೆಂದು ಕೇಳುತ್ತಾಳೆ. ತನಗೆ ಹೆಚ್ಚು ಜನ ಹುಡುಗಿಯರೇ ಗೊತ್ತಿಲ್ಲವೆಂದು ಅವನು ಉತ್ತರಿಸುತ್ತಾನೆ.

'ದಾರಿಯಲ್ಲಿ ಓಡಾಡುವ ಮುದ್ದಾದ ಹುಡುಗಿಯರನ್ನು ಕಂಡೇ ಇಲ್ಲವಾ?'

'ಹುಂ, ಯಾವಾಗಲೋ ಒಮ್ಮೆಮ್ಮೆ... (ಎಷ್ಟು ಸಲ ಎಂದು ಎಣಿಸುತ್ತಾನೆ) ಆದರೆ ಅವರಿಗೂ ನಾನು ಗುರುತಿಲ್ಲ...'

'ಅದೇನೂ ಬೇಕಾಗಿಲ್ಲ; ನೀನು ಅವರನ್ನು ನೋಡಿದ್ದೀಯ ಅಂದರೆ ಸಾಕು; ನೀನು ಬೇಕೆಂದು ಬಯಸಿದರೆ ಅವರೇ ಇಲ್ಲಿಗೆ ಬರುತ್ತಾರೆ. ಬೇಕಾದರೆ ನೋಡುವಿಯಂತೆ; ಟೋಪ್ಪಿ ಧರಿಸಿ ಹರಳನ್ನು ತಿರುಗಿಸು, ಒಂದು ಕ್ಷಣದಲ್ಲಿ ಅವರೆಲ್ಲ ಇಲ್ಲಿ ಬಂದಿರುತ್ತಾರೆ.'

ಕೂಡಲೆ ಬಾಗಿಲಾಸಿ, ಹೂಗೆಗೂಡಾಸಿ, ಕಿಟಕಿಯಾಸಿ, ಗೋಡೆ, ಮಾಳಿಗೆಗಳಾಸಿ ಆರು ಜನ ಹುಡುಗಿಯರು ಬರುತ್ತಾರೆ; ಅವರೆಲ್ಲ ಮಲಗಿಯೋ, ಕೆಲಸ ಮಾಡುತ್ತಿದ್ದೋ ಇದ್ದವರು ಟಿಲ್ಟಿಲ್‌ನ ಚಮತ್ಕಾರದಿಂದಾಗಿ ಹಾಗಾಗೇ ಬಂದಿರುತ್ತಾರೆ. ತಬ್ಬಿಬ್ಬಾಗಿ ದಂಗು ಬಡಿದವನಾದ ಟಿಲ್ಟಿಲ್ ಯಕ್ಷಿಗೆ ತಾನು, ತನ್ನ ಹೆಂಡತಿಯಾಗಬೇಕಾದವಳನ್ನು ಒಂದು ಕ್ಷಣದಲ್ಲಿ ಆರಿಸಲಾರೆ ಎನ್ನುತ್ತಾನೆ.

'ಸ್ವಾಭಾವಿಕವೇ' ಯಕ್ಷಿ ಉತ್ತರಿಸುತ್ತಾಳೆ, 'ನೀನಲ್ಲ ಆರಿಸಬೇಕಾದವನು. ಅದು ನಿನಗೆ ಸೇರಿದ ವಿಷಯವಲ್ಲ'.

'ಏನು, ನನಗೆ ಸೇರಿದ ವಿಷಯವಲ್ಲವೆ?'

'ಖಂಡಿತಾ ಅಲ್ಲ. ಸತ್ತಿರುವ ನಿನ್ನ ತಾತ, ಅಜ್ಜಿ ಮತ್ತು ಹಿರಿಯರ ಅಭಿಪ್ರಾಯ ತಿಳಿಯಲು ಈಗ ಮತ್ತೊಂದು ದೀರ್ಘಯಾತ್ರೆ ಹೊರಡಬೇಕು. ಆಮೇಲೆ ಇನ್ನೂ ಹುಟ್ಟಿಲ್ಲದ ನಿನ್ನ ಮಕ್ಕಳನ್ನು ನೋಡಿ ಬರಬೇಕು ಅವರುಗಳೇ ನಿನಗಾಗಿ 'ಆಯ್ಕೆ' ಮಾಡುವರು.

ಮುಂದೆ ಯಕ್ಷಿಯ ನಿರ್ದೇಶನದಲ್ಲಿ ಬೆಳಕು ಮತ್ತು ವಿಧಿಯ ಜೊತೆ ಆರು ಜನ ಹುಡುಗಿಯರು ಮತ್ತು ಟಿಲ್ಟಿಲ್ ಯಾತ್ರೆ ಹೊರಡುತ್ತಾರೆ. ಜೊತೆಗೆ ಮುಖಲಕ್ಷಣಗಳೇ ಇಲ್ಲದ ಮುಸುಕುದಾರಿ ಹುಡುಗಿಯೊಬ್ಬಳೂ ಹೊರಡುತ್ತಾಳೆ. ಅವರೆಲ್ಲ 'ನೀಲಿಹಕ್ಕಿ'ಯಲ್ಲಿ ಕಂಡ ಸತ್ತವರ ಲೋಕಕ್ಕೆ ಹೋಗಿ ತಾತ-ಅಜ್ಜಿಯರನ್ನ ಭೇಟಿಯಾಗುತ್ತಾರೆ. ಆಮೇಲೆ ಇನ್ನೂ ಹುಟ್ಟಿಲ್ಲದವರನ್ನು ಭೇಟಿಯಾಗುತ್ತಾರೆ. ಅವರೆಲ್ಲ ನಿಶ್ಚಯಿಸಿದಂತೆ ಟಿಲ್ಟಿಲ್ ಕೊನೆಯವಳನ್ನು ಆರಿಸಬೇಕಾಗುತ್ತದೆ. ಈ ಸಂದರ್ಭ ನೋಡಿದಾಗ ಆಫ್ರಿಕಾ ಸಂಸ್ಕೃತಿಯ ನಂಬಿಕೆಗಳು ಆಫ್ರಿಕನ್ ಸಾಹಿತ್ಯದಲ್ಲಿ ವ್ಯಕ್ತವಾಗಿರುವುದು ನೆನಪಾಗುತ್ತದೆ. ಭಾರತೀಯರಿಗೆ ಸತ್ತ ನಂತರದ ಲೋಕದ ಕಲ್ಪನೆ ಹೊಸದಲ್ಲ.

ಆಫ್ರಿಕಾದಲ್ಲಿ ಸತ್ತ ನಂತರದ ಲೋಕದ ಕಲ್ಪನೆಯಂತೆ ಹುಟ್ಟಲಿರುವವರ ಲೋಕದ ಕಲ್ಪನೆ ಕೂಡ ಇದೆ. ನೈಜೀರಿಯಾದ ಅಮೋಸ್ ಟಟುಓಲಾನ ಕಾದಂಬರಿ 'ದಿ ಪಾಮ್‌ವೈನ್ ಡ್ರಂಕರ್ಡ್'ನಲ್ಲಿ ಇನ್ನೂ ಹುಟ್ಟಲಿರುವವರ ಲೋಕದ ಯಾತ್ರೆಯ ಚಿತ್ರಣ ಬರುತ್ತದೆ. ಮೇತರ್‌ಲಿಂಕನ ನಾಟಕದಲ್ಲಿ ಆಫ್ರಿಕಾ ಸಂಸ್ಕೃತಿಯಲ್ಲಿರುವಂತೆ ಈ ಪರಿಕಲ್ಪನೆಗಳು ಮೂರ್ತರೂಪದಲ್ಲಿ ಬಂದಿವೆ. ಇಷ್ಟು 'ಸಂಸ್ಕೃತಿ'ಯನ್ನು ಹಿಂದಿಟ್ಟುಕೊಂಡು ಹೇಳಬಹುದಾದ ಸತ್ಯ . ಆದರೆ ಮೇತರ್‌ಲಿಂಕನಿಗೆ ಇದು ಪರಿಕಲ್ಪನೆ ಮಾತ್ರವಲ್ಲ, ನಂಬಿಕೆ ಮಾತ್ರವೂ ಅಲ್ಲ; ವೈಜ್ಞಾನಿಕ ಸತ್ಯದ ವ್ಯಕ್ತರೂಪ.

ಮೇತರ್‌ಲಿಂಕನ ಪ್ರಕಾರ ವಿಜ್ಞಾನ ಜ್ಞಾನದ ಪ್ರತ್ಯೇಕ ಶಾಖೆಯೇನಲ್ಲ. ಅವನ ಗದ್ಯಭಾಗಗಳ ಕುರಿತ ಅಧ್ಯಾಯದಲ್ಲಿ ಈ ವಿಚಾರ ವಿಶದವಾಗಿ ಬಂದಿದೆ. ವೈಜ್ಞಾನಿಕ ಪರಿಭಾಷೆಯಲ್ಲಿ ಕ್ರೊಮೊಜೋಮ್ಸ್ ಎಂದು ಕರೆಯುವುದು, ಮೈಕ್ರೋಸ್ಕೋಪ್ ಕಂಡುಹಿಡಿದ ನಂತರ ಸೃಷ್ಟಿಯಾದುದ್ದಲ್ಲ; ಪರಂಪರೆಯ ವಾಹಕ ಎಂದು ಆತನ ನಂಬಿಕೆ, ವಾದ. ಹಾಗಾಗಿ ಕೆಲವು ಸಲ ಇವನ ನಾಟಕಗಳು ಸದ್ಯದ ಅರ್ಥಸಾಧ್ಯತೆಗಳಿಗಿಂತ ಸದಾಕಾಲಕ್ಕೆ ಸಲ್ಲುವ ಅರ್ಥಗಳನ್ನು ಹೇಳುತ್ತಿರುತ್ತವೆ.

'ನೀಲಿಹಕ್ಕಿ' ಇಂಥದೇ ನಾಟಕವಾದರೂ, 'ಆರ್ದಿಯೆನ್ ಎತ್ ಬಾರ್ಬೆಬ್ಲೂ'ಗೆ ಇರುವ ಕತೆಯ ಹೊರರೂಪ ಇದಕ್ಕಿಲ್ಲ. 'ಆರ್ದಿಯೆನ್...'ಗೆ ಪ್ಲಾಟ್ ಮತ್ತು ಪಾತ್ರಗಳೆಂಬ ಪರಿಚಿತ ಪರಿಕರಗಳಿವೆ. 'ನೀಲಿಹಕ್ಕಿ'ಯದು ಮಾತ್ರ ನಾಟಕ ಎನ್ನುವ ವಿಶ್ಲೇಷಣೆಗಳೆಲ್ಲವನ್ನೂ ಮೀರುವ ಗುಣ. ಅದರ ಮುಖ್ಯ ಕಳಕಳಿಯೇ ಅತಿ ಮಾರ್ಮಿಕವಾದ ಅಗ್ರಾಹ್ಯವಾದ ಸತ್ಯದ ಅನ್ವೇಷಣೆ;ಆದ್ದರಿಂದ 'ನೀಲಿಹಕ್ಕಿ'ಯನ್ನು ಉದ್ದೇಶ, ಕಥಾವಸ್ತು, ಕಥೆ ಮುಂತಾದ್ದರಿಂದ ಮೊದಲು ಮಾಡಿ ಅರ್ಥ ಮಾಡಿಕೊಳ್ಳಲು ಬರುವುದಿಲ್ಲ. ಅದರ ಕೆಲವು ವಿಚಿತ್ರ ಗುಣಗಳನ್ನು ಪಟ್ಟಿ ಮಾಡುತ್ತಾ ಹೋಗುತ್ತೇನೆ. ಮೊದಲು, ಪಾತ್ರವರ್ಗ ಹೀಗಿದೆ:

(ಎಲ್ಲಾ ಪಾತ್ರಗಳ ಹೆಸರುಗಳನ್ನು ಕೊಟ್ಟಿಲ್ಲ; ಒಟ್ಟು ಪಾತ್ರಗಳ ಸಂಖ್ಯೆ ೧೧೩)

೧. ರಾತ್ರಿಯ ಗಂಧಗಳು

೨. ಶ್ರೀಮಂತಿಕೆಯ ಸುಖ

೩. ಜಮೀನ್ದಾರನಾದವನ ಸುಖ

೪. ಬಾಯಾರಿಲ್ಲದಾಗಲೂ ಕುಡಿಯಬಲ್ಲ ಸುಖ

೫. ಹಸಿವಿಲ್ಲದಾಗಲೂ ತಿನ್ನಬಲ್ಲ ಸುಖ
೬. ನೀಲಿಯಾಕಾಶದ ಆನಂದ
೭. ಸೂರ್ಯಾಸ್ತದ ಆನಂದ
೮. ಒಂಭತ್ತು ಗ್ರಹಗಳ ರಾಜ
೯. ತಾಸುಗಳು
೧೦. ಬ್ರೆಡ್ಡು
೧೧ ಬೆಂಕಿ
೧೨ ನಾಯಿ
೧೩ ಬೆಕ್ಕು
೧೪. ಬರ್ಚ್‌ಮರ
೧೫. ಮಿಂಚುಹುಳುಗಳು
೧೬. ಮುಗ್ಧ ಆಲೋಚನೆಯ ಆನಂದ
೧೭. ಕೆಲಸ ಮುಗಿಸಿದ ಸಮಾಧಾನ
೧೮. ಪಿತೃಪ್ರೇಮದ ಆನಂದ

ಎಂದಿನಂತೆ ನಾಟಕ ದೀರ್ಘವಾದ ರಂಗ ನಿರ್ದೇಶನದೊಂದಿಗೆ ಶುರುವಾಗುತ್ತದೆ. ಮಕ್ಕಳನ್ನು ಮಲಗಿಸಿ ತಾಯಿ ಆಚೆ ಹೋಗುತ್ತಾಳೆ. ಅದು ಕ್ರಿಸ್‌ಮಸ್ ರಾತ್ರಿ. ಸ್ವಲ್ಪ ಹೊತ್ತಿನ ಮೇಲೆ ಮಕ್ಕಳಿಗೆ ಎಚ್ಚರವಾಗಿ ಕಿಟಕಿಯಾಸಿ ಶ್ರೀಮಂತರ ಮಕ್ಕಳು ಕ್ರಿಸ್‌ಮಸ್ ಹಬ್ಬವನ್ನು ಆಚರಿಸುವುದನ್ನು ನೋಡುತ್ತಿರುತ್ತಾರೆ. ಇಲ್ಲಿಯವರೆಗೆ ಎಲ್ಲವೂ ಸ್ವಾಭಾವಿಕ, ನಾಟಕೀಯವಾಗಿರುತ್ತದೆ. ಇನ್ನು ಮುಂದಿಂದಲೇ ಶುರುವಾಗುವುದು ವಿಚಿತ್ರ ಘಟನೆಗಳು. ಯಕ್ಷಿ ಪಕ್ಕದ ಮನೆಯಾಕೆಯ ವೇಷತೊಟ್ಟು ಬಂದು ಮಕ್ಕಳನ್ನು 'ನೀಲಿಹಕ್ಕಿ ಇದ್ದರೆ ಕೊಡಿ' ಎನ್ನುತ್ತಾಳೆ. ಇಲ್ಲವೆಂದರೆ ನೀಲಿಹಕ್ಕಿಯನ್ನು ಹುಡುಕಿ ತರಲು ಹೊರಡಿ ಎನ್ನುತ್ತಾಳೆ. ಮಾಂತ್ರಿಕ ಟೊಪ್ಪಿ, ವಜ್ರವನ್ನು ಕೊಟ್ಟು ಜೊತೆಗಿರಲು ನಾಯಿ, ಬೆಕ್ಕು, ಸಕ್ಕರೆ, ಬ್ರೆಡ್ಡಿನ ಆತ್ಮಗಳನ್ನು ಹೊರಡಿಸುತ್ತಾಳೆ. ಇಲ್ಲಿಂದ ಶುರು ಈ ಮಕ್ಕಳ ಯಾತ್ರೆ.

** ** **

''ನೀಲಿ ಹಕ್ಕಿ'' ಯಿಂದ ಆಯ್ದ ಭಾಗ

ಅಂಕ - ೧

(ಮರ ಕಡಿಯುವವನ ಗುಡಿಸಲು)

ಮರಕಡಿಯುವವನ ಮನೆಯ ಒಳಭಾಗ ; ಸರಳವಾದರೂ ಬಡತನವನ್ನೇನೂ ತೋರುತ್ತಿಲ್ಲ. ಒಂದು ಪಕ್ಕ ಆರುತ್ತಿರುವ ಬೆಂಕಿ ಅಗ್ಗಿಷ್ಟಿಕೆಯಲ್ಲಿ. ಅಡಿಗೆಮನೆ ಪಾತ್ರೆ ಪಡಾಸು, ಬೀರು, ಬ್ರೆಡ್ಡಿನ ಪಾತ್ರೆ, ತಾತನ ಕಾಲದ ಗಡಿಯಾರ, ನೂಲುವ ಚರಕ, ನೀರಿನ ನಲ್ಲಿ ಇತ್ಯಾದಿ. ಟೇಬಲ್ ಮೇಲೆ ಉರಿಯುತ್ತಿರುವ ದೀಪ, ಬೀರು. ಕಾಲಹತ್ತಿರ ಎರಡೂ ಕಡೆ ನಾಯಿ ಮತ್ತು ಬೆಕ್ಕು ಮೂತಿಯನ್ನು ಬಾಲದೊಳಗೆ ಸೇರಿಸಿ, ಮುದುರಿ ಮಲಗಿವೆ. ಇವೆರಡರ ನಡುವೆ ನೀಲಿ - ಬಿಳಿ ಪ್ಯಾಕೆಟ್ಟಿನಲ್ಲಿ ಸಕ್ಕರೆ ಅಚ್ಚು, ಗೋಡೆ ಮೇಲೆ ಪಾರಿವಾಳವಿರುವ ಒಂದು ಗುಂಡನೆ ಪಂಜರ. ಹಿಂದೆ, ಎರಡು ಕಿಟಕಿಗಳು; ಮುಚ್ಚಿವೆ. ಒಂವರ ಕೆಳಗೆ ಒಂದು ಸ್ಟೂಲು, ಎಡಕ್ಕೆ ಮನೆಯ ಮುಂದಿನ ಬಾಗಿಲು, ದೊಡ್ಡ ಚಿಲಕ. ಬಲಕ್ಕೆ ಮತ್ತೊಂದು ಬಾಗಿಲು, ಅಟ್ಟಕ್ಕೆ ಹೋಗುವ ಏಣಿ. ಬಲಕ್ಕೆ ಎರಡು ಮಕ್ಕಳ ಮಂಚಗಳು; ಅದರ ತಲೆಯ ಬಳಿ ಎರಡು ಕುರ್ಚಿಗಳು; ಅವುಗಳ ಮೇಲೆ ಮಡಚಿಟ್ಟ ಬಟ್ಟೆಗಳು. ಪರದೆ ಮೇಲೇರಿದಾಗ, ಟಿಲ್ಟಿಲ್ ಮತ್ತು ಮೈಟಿಲ್ ಮಂಚಗಳ ಮೇಲೆ ಆರಾಮಾಗಿ ಮಲಗಿದ್ದಾರೆ. ಅಮ್ಮ ಟಿಲ್ ಅವರ ಹೊದಿಕೆ ಸರಿಮಾಡಿ, ಮೈತಟ್ಟಿ, ಅಪ್ಪ ಟಿಲ್‌ಗೆ ಸಂಜ್ಞೆ ಮಾಡುತ್ತಾಳೆ; ಅಪ್ಪಟಿಲ್ ಅರ್ಧ ತೆರೆದ ಬಾಗಿಲಿಂದ ತಲೆ ತೂರಿಸುತ್ತಾನೆ. ಅಮ್ಮಟಿಲ್ ತನ್ನ ಬಾಯಿಮೇಲೆ ಬೆರಳಿಟ್ಟು ಸುಮ್ಮನಿರುವಂತೆ ಸೂಚಿಸುತ್ತಾಳೆ; ಶಬ್ದ ಮಾಡದ ಮೆಲ್ಲನೆ ಬಲಕ್ಕೆ ಹೋಗುತ್ತಾಳೆ, ದೀಪವಾರಿಸುತ್ತಾಳೆ. ದೃಶ್ಯ ಕೆಲಕಾಲ ಕತ್ತಲಲ್ಲಿ ಉಳಿಯುತ್ತದೆ. ಆಮೇಲೆ ಬರಬರುತ್ತಾ ಹೆಚ್ಚಾಗುವ ಬೆಳಕು ಕಿಟಕಿಯಾಸಿ ತೂರಿ ಬರತೊಡಗುತ್ತದೆ. ಟೇಬಲ್ಲಿನ ಮೇಲಿನ ದೀಪ ತಾನಾಗೇ ಹೊತ್ತಿಕೊಳ್ಳುತ್ತದೆ. ಮಕ್ಕಳಿಬ್ಬರಿಗೂ ಎಚ್ಚರವಾಗಿ, ಹಾಸಿಗೆಯಲ್ಲೇ ಎದ್ದು ಕೂರುತ್ತಾರೆ.

ಟಿಲ್ಟಿಲ್ : ಮೈಟಿಲ್?

ಮೈಟಿಲ್: ಟಿಲ್ಟಿಲ್?

ಟಿಲ್ಟಿಲ್ : ನಿದ್ದೆ ಮಾಡ್ತಿದ್ದೀಯ?

ಮೈಟಿಲ್: ನೀನು?

ಟಿಲ್ಟಿಲ್ : ಇಲ್ಲ, ನಿನ್ನ ಹತ್ರ ಮಾತಾಡ್ತಿದೀನಿ, ನಿದ್ದೆ ಮಾಡಿರಕ್ಕೆ ಹೇಗೆ ಸಾಧ್ಯ?

ಮೈಟಿಲ್: ಅಲ್ಲ, ಇವತ್ತು ಕ್ರಿಸ್‌ಮಸ್ ದಿನನಾ?

ಟಿಲ್ಟಿಲ್ : ಇನ್ನೂ ಇಲ್ಲ; ನಾಳೆವರೆಗೂ ಕ್ರಿಸ್‌ಮಸ್ ಶುರುವಾಗಲ್ಲ. ಆದರೆ ಕ್ರಿಸ್‌ಮಸ್ ತಾತ ನಮಗೆ ಈ ಸಲ ಏನೂ ತರಲ್ಲ.

ಮೈಟಿಲ್: ಯಾಕೆ ತರಲ್ಲ?

ಟಿಲ್ಟಿಲ್ : ಅಮ್ಮ ಹೇಳ್ತಿದ್ಲು, ಈ ಸಲ ಊರಿಗೆ ಹೋಗಿ ತಾತನಿಗೆ ಹೇಳಿ ಬರಕ್ಕೆ ಆಗಲಿಲ್ಲವಂತೆ. ಮುಂದಿನ ವರ್ಷ ಬರ್ತಾರಂತೆ.

ಮೈಟಿಲ್: ಮುಂದಿನ ವರ್ಷ ಅಂದ್ರೆ ತುಂಬಾ ದೂರನಾ?

ಟಿಲ್ಟಿಲ್ : ಸಾಕಷ್ಟು ದೂರ. ಈ ಸಲ ಅವರು ಸಾಹುಕಾರ್ರು ಮನೆ ಮಕ್ಕಳ ಹತ್ರ ಹೋಗ್ತರಂತೆ.

ಮೈಟಿಲ್: ನಿಜವಾಗ್ಲೂ?

ಟಿಲ್ಟಿಲ್ : ಅಗೊ, ಅಮ್ಮ ದೀಪ ಆರಿಸೋದನ್ನ ಮರ್ತಿದ್ದಾಳೆ! ನಂಗೆ ಏನೋ ಒಂದು ವಿಚಾರ ಹೊಳೀತಿದೆ!

ಮೈಟಿಲ್: ಏನದು?

ಟಿಲ್ಟಿಲ್ : ಏಳೋಣ ಮೊದ್ಲು.

ಮೈಟಿಲ್: ಏಳಬಾರದಂತೆ!

ಟಿಲ್ಟಿಲ್ : ಯಾಕೆ, ಸುತ್ತ ಯಾರೂ ಇಲ್ಲವಲ್ಲ. ಕಿಟಕಿ ಕಾಣುತ್ತಾ ನಿಂಗೆ?

ಮೈಟಿಲ್: ಅರೆ, ಎಷ್ಟು ಪ್ರಕಾಶಮಾನವಾಗಿದೆ!

ಟಿಲ್ಟಿಲ್ : ಅದು ಸಂತೋಷಕೂಟದ ಬೆಳಕು.

ಮೈಟಿಲ್: ಯಾವ ಕೂಟ?

ಟಿಲ್ಟಿಲ್ : ಅದೆ, ಎದುರಿಗಿರುವ ಶ್ರೀಮಂತ ಮಕ್ಕಳದು. ಅಗೋ, ಕ್ರಿಸ್‌ಮಸ್ ಮರ! ಕಿಟಕಿ ತೆಗೆಯೋಣ ಬಾ.

ಮೈಟಿಲ್: ತೆಗೀಬಹುದಾ?

ಟಿಲ್ಟಿಲ್ : ಓಹೋ, ನಮ್ಮನ್ನ ತಡೀಯೋಕೆ ಯಾರಿದ್ದಾರೆ? ಸಂಗೀತ ಕೇಳಿಸುತ್ತಾ? ಎದ್ದೇಳಣ ಬಾ.

ಮಕ್ಕಳಿಬ್ಬರೂ ಏಳುತ್ತಾರೆ, ಕಿಟಕಿ ಕಡೆ ಓಡುತ್ತಾರೆ; ಸ್ಟೂಲಿನ ಮೇಲೆ ಹತ್ತಿ, ಕಿಟಕಿ ತೆರೆದು ಬಿಡುತ್ತಾರೆ. ಪ್ರಕಾಶಮಾನವಾದ ಬೆಳಕು ಕೋಣೆಯಲ್ಲಾ ತುಂಬುತ್ತದೆ. ಮಕ್ಕಳು ಆಸೆಗಣ್ಣಿಂದ ಆಚೆ ನೋಡುತ್ತಾರೆ

ಟಿಲ್ಟಿಲ್ : ಎಲ್ಲಾನೂ ಕಾಣಿಸುತ್ತೆ!

ಮೈಟಿಲ್: (ಸ್ಟೂಲಿನ ಮೇಲೆ ಜಾಗ ಸಿಗದರಿಂದ) ನನಗೆ ಕಾಣಿಸುವುದಿಲ್ಲ?

ಟಿಲ್ಟಿಲ್ : ಮಂಜು ಬೀಳುತ್ತಿದೆ! ಆರಾರು ಕುದುರೆಗಳಿರೊ ಎರಡು ಬಂಡಿಗಳಿವೆ!

ಮೈಟಿಲ್: ಹನ್ನೆರಡು ಜನ ಸಣ್ಣ ಹುಡುಗರು ಆಚೆ ಬರುತ್ತಿದ್ದಾರೆ!

ಟಿಲ್ಟಿಲ್ : ಪೆದ್ದಿ, ಅದು ಹುಡುಗಿಯರು ಕಣೆ!

ಮೈಟಿಲ್: ನಿಕ್ಕರ್ ಹಾಕ್ಕೊಂಡಿದ್ದಾರೆ!

ಟಿಲ್ಟಿಲ್ : ನಿಂಗೇನು ಗೊತ್ತಾಗುತ್ತೆ? ಹಾಗೆ ನನ್ನ ನೂಕಬೇಡ.

ಮೈಟಿಲ್: ನಾನು ನಿನ್ನ ಮುಟ್ಟಿಸಿಕೊಳ್ಳಲೂ ಇಲ್ಲ.

ಟಿಲ್ಟಿಲ್ : (ಸ್ಟೂಲಿನ ತುಂಬಾ ತಾನೇ ನಿಲ್ಲುತ್ತಾ) ಎಲ್ಲ ಜಾಗ ನೀನೇ ತೊಕ್ಕೊಂಡಿದ್ದೀಯ.

ಮೈಟಿಲ್: ಯಾಕೊ, ನಂಗೆ ಒಂಚೂರೂ ಜಾಗ ಇಲ್ಲ.

ಟಿಲ್ಟಿಲ್ : ಶ್, ಸುಮ್ಮನಿರೆ, ನನಗೆ ಆ ಮರ ಕಾಣಿಸ್ತಾ ಇದೆ.

ಮೈಟಿಲ್: ಯಾವ ಮರನೊ?

ಟಿಲ್ಟಿಲ್ : ಅದೆ ಕ್ರಿಸ್‌ಮಸ್ ಮರ ಕಣೆ! ನೀನು ಗೋಡೆ ನೋಡ್ತಿದ್ದೀಯ!

ಮೈಟಿಲ್: ನಂಗೆ ನಿಲ್ಲಕ್ಕೆ ಜಾಗ ಇಲ್ಲ, ಆದಿಕ್ಕೆ ಗೋಡೆ ನೋಡ್ತಿದ್ದೀನಿ.

ಟಿಲ್ಟಿಲ್ : (ಜಿಪುಣನಂತೆ ಚೂರೇಚೂರು ಜಾಗಬಿಟ್ಟು) ತೊಗೊ, ಸಾಕಾ ? ಈಗ ನನಗಿಂತ ನೀನೇ ವಾಸಿ! ಅಲ್ಲಿ ನೋಡೇ, ಎಷ್ಟೊಂದು ದೀಪಗಳು!

ಮೈಟಿಲ್: ಅಷ್ಟೊಂದು ಗಲಾಟೆ ಮಾಡ್ತಿದಾರಲ್ಲ ಆ ಜನ, ಅವರೆಲ್ಲ ಏನು ಮಾಡ್ತಿದಾರೆ?

ಟಿಲ್ಟಿಲ್ : ಅವರು ಹಾಡುಗಾರರು ಕಣೆ.

ಮೈಟಿಲ್: ಅವರಿಗೆ ಸಿಟ್ಟು ಬಂದಿದೆಯಾ?

ಟಿಲ್ಟಿಲ್ : ಇಲ್ಲ, ಹಾಡೋದು ಬಹಳ ಕಷ್ಟದ ಕೆಲಸ ಕಣೆ.

ಮೈಟಿಲ್: ಬಿಳೀಕುದುರೆಗಳ ಇನ್ನೊಂದು ಬಂಡಿ!

ಟಿಲ್ಟಿಲ್ : ಸುಮ್ಮನಿರೆ! ಸುಮ್ಮನೆ ನೋಡು!

ಮೈಟಿಲ್: ಕೊಂಬೆಗಳಿಂದ ಜೋತಾಡ್ತಿದಾವಲ್ಲ ಆ ಚೆನ್ನದಂಗೆ ಕಾಣಸೋವು.... ಅವು ಏನೊ?

ಟಿಲ್ಟಿಲ್ : ಅವು ಆಟದ ಸಾಮಾನುಗಳು ಕಣೆ! ಕತ್ತಿ, ಗನ್ನು, ಸೈನಿಕರು, ಮದ್ದು-ಗುಂಡು...

ಮೈಟಲ್: ಮತ್ತೆ ಬೊಂಬೆ... ಬೊಂಬೆಗಳೂ ಇವೆಯಾ?

ಟಿಲ್ಟಿಲ್ : ಬೊಂಬೆಗಳಾ?... ಅವೇನು ಚೆನ್ನ ಹೋಗೇ.

ಮೈಟಲ್: ಮತ್ತೆ, ಟೇಬಲ್ ತುಂಬಾ ಜೋಡಿಸಿದ್ದಾರಲ್ಲ, ಅವೆಲ್ಲ ಏನು?

ಟಿಲ್ಟಿಲ್ : ಕೇಕು, ಹಣ್ಣು.... ತಿಂಡಿಗಳು.

ಮೈಟಲ್: ನಾನು ಚಿಕ್ಕವಳಿದ್ದಾಗ ಒಂದು ಸಲ ಅವನ್ನೆಲ್ಲ ತಿಂದಿದ್ದೆ.

ಟಿಲ್ಟಿಲ್ : ನಾನೂ ಅಷ್ಟೇ, ಅವು ಬ್ರೆಡ್‌ಗಿಂತಾ ಚೆನ್ನಾಗಿರುತ್ತವೆ. ಆದರೆ ಅವನ್ನ ಜಾಸ್ತಿ ಕೊಡೋದೇ ಇಲ್ಲ.

ಮೈಟಲ್: ಅವರ ಹತ್ರ ಜಾಸ್ತಿ ಇದೆ ನೋಡು, ಟೇಬಲ್ ತುಂಬಾ ಇದೆ. ಅವರೆಲ್ಲ ಈಗ ಅದನ್ನ ತಿನ್ತಾರಾ?

ಟಿಲ್ಟಿಲ್ : ಹೌದು ಮತ್ತೆ . ಇನ್ನೇನು ಮಾಡ್ತಾರೆ ಅಂದುಕೊಂಡಿದ್ದೀಯ?

ಮೈಟಲ್: ಒಂದೇ ಸಲಕ್ಕೆ ಯಾಕೆ ತಿನ್ತಾ ಇಲ್ಲ ಮತ್ತೆ?

ಟಿಲ್ಟಿಲ್ : ಯಾಕಂದ್ರೆ ಅವರಿಗೆ ಹೊಟ್ಟೆ ಹಸಿತಾ ಇಲ್ಲ, ಅದಿಕ್ಕೆ.

ಮೈಟಲ್: (ಆಶ್ಚರ್ಯಚಕಿತಳಾಗಿ) ಹೊಟ್ಟೆ ಹಸಿತಾ ಇಲ್ವ? ಯಾಕೆ ಹಸಿತಾ ಇಲ್ಲ?

ಟಿಲ್ಟಿಲ್ : ಅವರಿಗೆ ಬೇಕು ಅನ್ನಿಸಿದಾಗ ತಿನ್ತಾರೆ.

ಮೈಟಲ್: (ನಂಬಿಕೆಬಾರದೆ) ದಿವ್ಸಾ?

ಟಿಲ್ಟಿಲ್ : ಹಂಗಂತ ಹೇಳ್ತಾರೆ.

ಮೈಟಲ್: ಅಷ್ಟೂ ತಿಂದು ಮುಗುಸ್ತರಾ ಅಥವಾ ಬೇರೇವ್ರಿಗೂ ಸ್ವಲ್ಪ ಕೊಡ್ತರೊ?

ಟಿಲ್ಟಿಲ್ : ಯಾರಿಗೆ?

ಮೈಟಲ್: ನಮಗೆ.

ಟಿಲ್ಟಿಲ್ : ನಾವು ಅವರಿಗೆ ಪರಿಚಯ ಇಲ್ಲ.

ಮೈಟಲ್: ನಾವೇ ಹೋಗಿ ಕೇಳಿದ್ರೆ?

ಟಿಲ್ಟಿಲ್ : ಹಾಗೆಲ್ಲ ಕೇಳಬಾರ್ದು

ಮೈಟಲ್: ಯಾಕೆ ಕೇಳಬಾರ್ದು?

ಟಲ್ಪಿಲ್ : ಯಾಕೇಂದ್ರೆ ಕೇಳೋದು ಸರಿಯಲ್ಲ

ಮೈಟಲ್: (ಚಪ್ಪಾಳೆ ತಟ್ಟುತ್ತಾ) ಓ, ಅವರೆಲ್ಲ ಎಷ್ಟು ಮುದ್ದಾಗಿದ್ದಾರೆ!

ಟಲ್ಪಿಲ್ : (ಖುಷಿಯಿಂದ) ಹೇಗೆ ನಗ್ತನೇ ಇದ್ದಾರೆ!

ಮೈಟಲ್: ಚಿಕ್ಕಮಕ್ಕಳು ಕುಣಿಯಕ್ಕೆ ಶುರುಮಾಡಿದ್ರು!

ಟಲ್ಪಿಲ್ : ಬಾ, ನಾವೂ ಕುಣಿಯೋಣ! (ಖುಷಿಯಿಂದ ಸ್ಟೂಲಿನ ಮೇಲೆ ಕುಣಿದಾಡುತ್ತಾರೆ)

ಮೈಟಲ್: ಎಷ್ಟು ಮಜವಾಗಿದೆ!

ಟಲ್ಪಿಲ್ : ಅವರೆಲ್ಲ ಈಗ ಕೇಕ್ ತಿನ್ತಾ ಇದ್ದಾರೆ! ಅವನ್ನು ಮುಟ್ಟಬಲ್ಲರು! ತಿಂದ್ರು, ತಿಂದ್ರು.. ತಿನ್ತಾ ಇದ್ದಾರೆ!

ಮೈಟಲ್: ಸಣ್ಣ ಸಣ್ಣ ಮಕ್ಕಳೂ ತಿನ್ತಾ ಇದ್ದಾರೆ! ಒಬ್ಬೊಬ್ಬರಿಗೂ ಎರಡು, ಮೂರು, ನಾಲ್ಕು ತುಂಡುಗಳು.

ಟಲ್ಪಿಲ್ : (ಖುಷಿಯಿಂದ ಉನ್ಮತ್ತನಾಗಿ) ಹೊ! ಎಷ್ಟು ಚೆನ್ನಾಗಿದೆ! ಓ ಎಷ್ಟು ಮಜವಾಗಿದೆ! ಆಹಾ!

ಮೈಟಲ್: (ಕೇಕುಗಳನ್ನು ಎಣಿಸುವವಳಂತೆ) ನನ್ನ ಹತ್ರ ಒಂದು ಡಜನ್ ಕೇಕಿದೆ!

ಟಲ್ಪಿಲ್ : ನನ್ ಹತ್ರ ನಾಲ್ಕು ಡಜನ್ ಇವೆ ತೊಗೊ, ನಿಂಗೂ ಒಂದಿಷ್ಟು ಕೊಡ್ತೀನಿ!

ಬಾಗಿಲು ಬಡಿದ ಸದ್ದು

ಟಲ್ಪಿಲ್ : (ಬೆದರಿ, ತಕ್ಷಣ) ಏನದು?

ಮೈಟಲ್: (ಹೆದರಿ) ಅಪ್ಪ ಇರಬಹುದು!

ಬಾಗಿಲು ತೆರೆಯಲು ಹಿಂಜರಿಯುತ್ತಿರುವಂತೆ ಕಿರ್ರ್ಂದು ಶಬ್ದಮಾಡುತ್ತಾ ಚಿಲಕ ತಾನೇ ತೆರೆದುಕೊಳ್ಳುತ್ತದೆ; ಬಾಗಿಲು ಅರ್ಧ ತೆರೆದು, ಕುಳ್ಳಗಿನ ಮುದುಕಿಯೊಬ್ಬಳು ಒಳ ಬರುತ್ತಾಳೆ; ಹಸಿರು ಉಡುಗೆ, ಕೆಂಪು ಟೋಪಿ ಧರಿಸಿದ್ದಾಳೆ. ಗೂನಿ. ಕುಂಟಿ ಮತ್ತು ಕಣ್ಣು ಸರಿಯಾಗಿ ಕಾಣದು; ಅವಳ ಮೂಗು ಗಲ್ಲಕ್ಕೆ ತಾಕುತ್ತಿದೆ. ಊರುಗೋಲ ಮೇಲೆ ಬಾಗಿಕೊಂಡು ನಡೆದಾಡುತ್ತಾಳೆ. ಅವಳು ಒಬ್ಬ ಯಕ್ಷಿ

ಯಕ್ಷಿ : ಇಲ್ಲಿ ಹಾಡುವ ಹುಲ್ಲಾಗಲಿ ನೀಲಿ ಹಕ್ಕಿ[illegible]ಗಲಿ ನಿಮ್ಮ ಹತ್ತಿರ ಇದೆಯಾ?

ಟಲ್ಪಿಲ್ : ಹುಲ್ಲಿದೆ, ಆದ್ರೆ ಅದು ಹಾಡುವುದಿಲ್ಲ.

ಮೈಟಿಲ್: ಟಿಲ್ಟಿಲ್ ಹತ್ರ ಪಕ್ಷಿನೂ ಇದೆ.

ಟಿಲ್ಟಿಲ್ : ಆದ್ರೆ ನಾನದನ್ನ ಯಾರಿಗೂ ಕೊಡೋದಿಲ್ಲ.

ಯಕ್ಷಿ : ಯಾಕೆ ಕೊಡೊಲ್ಲ?

ಟಿಲ್ಟಿಲ್ : ಯಾಕೇಂದ್ರೆ ಅದು ನನ್ನದು, ಅದಕ್ಕೆ.

ಯಕ್ಷಿ : ಸರಿಯಾದ ಕಾರಣಕೊಟ್ಟೆ, ಒಪ್ಪಿದೆ. ಹಕ್ಕಿ ಎಲ್ಲಿದೆ?

ಟಿಲ್ಟಿಲ್ : (ಪಂಜರದ ಕಡೆ ತೋರಿಸುತ್ತಾ) ಅಲ್ಲಿ, ಪಂಜರದಲ್ಲಿ.

ಯಕ್ಷಿ : (ಹಕ್ಕಿಯನ್ನು ಪರೀಕ್ಷಿಸಿ ನೋಡಲು ಕನ್ನಡಕ ತೊಡುತ್ತಾ) ನನಗೆ ಇದು ಬೇಡ, ಇದು ಸಾಕಷ್ಟು ನೀಲಿಯಾಗಿಲ್ಲ. ನನಗೆ ಬೇಕಾಗಿರುವಂಥ ನೀಲಿ ಹಕ್ಕಿಯನ್ನು ಹೋಗಿ ಹುಡುಕಿ ತರಬೇಕು.

ಟಿಲ್ಟಿಲ್ : ಆದ್ರೆ ಅದೆಲ್ಲಿ ಇದೆ ಅಂತ ಗೊತ್ತಿಲ್ಲ.

ಯಕ್ಷಿ : ನನಗೂ ಗೊತ್ತಿಲ್ಲ. ಆದಕ್ಕೇ ನೀನೂ ಹುಡುಕಬೇಕು. ಚಿಗುಟಿದರೆ ಹಾಡುವ ಹುಲ್ಲು ಇಲ್ಲದಿದ್ದರೂ ಪರವಾಗಿಲ್ಲ, ಆದರೆ ನೀಲಿಹಕ್ಕಿ ಮಾತ್ರ ನನಗೆ ಬೇಕೇಬೇಕು. ನನ್ನ ಪುಟ್ಟ ಮಗಳಿಗೆ ಮೈಯಲ್ಲಿ ಹುಷಾರಿಲ್ಲ, ಅವಳಿಗೆ ಬೇಕಾಗಿದೆ.

ಟಿಲ್ಟಿಲ್ : ಅವಳಿಗೆ ಏನಾಗಿದೆ ?

ಯಕ್ಷಿ : ಏನೂಂತ ನಮಗೆ ಸರಿಯಾಗಿ ಗೊತ್ತಿಲ್ಲ. ಅವಳು ಸಂತೋಷ ವಾಗಿರಬೇಕಂತೆ.

ಟಿಲ್ಟಿಲ್ : ಹೌದಾ?

ಯಕ್ಷಿ : ನಾನು ಯಾರಂತ ನಿನಗೆ ಗೊತ್ತಾ?

ಟಿಲ್ಟಿಲ್: ನೀನು ನಮ್ಮ ನೆರೆಮನೆಯಾಕೆ ಮ್ಯಾಡಮ್ ಬರ್ಲಿಂಗಾಟ್ ಥರ ಇದ್ದೀಯ.

ಯಕ್ಷಿ : (ತಕ್ಷಣ ಸಿಟ್ಟಿಗೆದ್ದು) ಇಲ್ಲ, ಒಂಚೂರು ಹಾಗಿಲ್ಲ, ಇದು ಅತಿಯಾಯಿತು! ನಾನು ಯಕ್ಷಿ ಬೆರಿಲ್ಯೂನ್.

ಟಿಲ್ಟಿಲ್: ಓಹೊ, ಹೌದಾ?

ಯಕ್ಷಿ : ನೀವು ಈಗಲೇ ಹೊರಡಬೇಕು.

ಟಿಲ್ಟಿಲ್: ನೀನೂ ನಮ್ಮ ಜೊತೆ ಬರುತ್ತೀಯಾ?

ಯಕ್ಷಿ : ಇಲ್ಲ, ನಾನು ಬರಕ್ಕಾಗಲ್ಲ. ಇವತ್ತು ಬೆಳಿಗ್ಗೆ ಎಸರು ಕುದಿಯಕ್ಕೆ ಇಟ್ಟಿದ್ದೀನಿ. ಒಂದು ಗಂಟೆಗಿಂತ ಜಾಸ್ತಿ ಹೊತ್ತಾದರೆ ಅದು ಕುದ್ದೂಕುದ್ದು ಹೋಗುತ್ತೆ. *(ಮಾಳಿಗೆ, ಹೊಗೆಗೂಡು, ಕಿಟಕಿಗಳತ್ತ ಒಂದಾದ ಮೇಲೆ ಒಂದರತ್ತ ಕೈ ಮಾಡುತ್ತಾ)* ಹೇಗೆ ಹೋಗುತ್ತೀರ, ಹೀಗಾ ಅಥವಾ ಹೀಗಾ?

ಟಿಲ್ಟಿಲ್: *(ಬಾಗಿಲ ಕಡೆ ತೋರಿಸುತ್ತಾ ಮುಗ್ಧನಾಗಿ)* ನಾನು ಹಾಗಾಸಿ ಹೋಗುತ್ತೇನೆ.

ಯಕ್ಷಿ : *(ಮತ್ತೆ ತಕ್ಷಣ ಸಿಟ್ಟಿಗೆದ್ದು)* ಅದು ಅಸಾಧ್ಯ, ಎಂಥ ಭಯಂಕರ ರೂಢಿ ಅದು. *(ಕಿಟಕಿ ಕಡೆ ತೋರಿಸಿ)* ಇದರಾಸಿ ಹೋಗೋಣ ಬನ್ನಿ. ಯಾತಕ್ಕಾಗಿ ಇನ್ನೂ ಕಾಯುತ್ತಿದ್ದೀರ? ಬಟ್ಟೆ ತೊಟ್ಟುಕೊಳ್ಳಿ ಈ ಕೂಡಲೆ. *(ಮಕ್ಕಳು ಹಾಗೇ ಮಾಡುತ್ತಾರೆ, ಹೋಗಲು ತಯಾರಾಗುತ್ತಾರೆ)* ನಾನು ಮೈಟಿಲ್‌ಗೆ ಸಹಾಯ ಮಾಡುತ್ತೇನೆ.

ಟಿಲ್ಟಿಲ್: ನಮ್ಮ ಹತ್ತಿರ ಶೂಗಳೇ ಇಲ್ಲ.

ಯಕ್ಷಿ : ಪರವಾಗಿಲ್ಲ, ನಿಮಗೆ ನಾನೊಂದು ಮಾಯದ ಟೊಪ್ಪಿ ಕೊಡುತ್ತೇನೆ. ನಿಮ್ಮ ತಂದೆ ತಾಯಿ ಎಲ್ಲಿದ್ದಾರೆ?

ಟಿಲ್ಟಿಲ್: *(ಬಲ ಬಾಗಿಲನ್ನು ತೋರಿಸುತ್ತಾ)* ಅಲ್ಲಿ, ಒಳಗೆ ಮಲಗಿದ್ದಾರೆ.

ಯಕ್ಷಿ : ನಿಮ್ಮ ತಾತಾ, ಅಜ್ಜಿ?

ಟಿಲ್ಟಿಲ್: ಅವರು ಬದುಕಿಲ್ಲ.

ಯಕ್ಷಿ : ನಿಮ್ಮ ತಮ್ಮಂದಿರು, ತಂಗಿಯರು.... ನಿನಗೆ ತಮ್ಮ-ತಂಗಿಯರಿದ್ದಾರಾ?

ಟಿಲ್ಟಿಲ್: ಹೂಂ, ಮೂರು ಮಂದಿ ಚಿಕ್ಕ ಚಿಕ್ಕ ತಮ್ಮಂದಿರು.

ಮೈಟಿಲ್: ನಾಲ್ಕು ಮಂದಿ ಪುಟ್ಟಪುಟ್ಟ ತಂಗಿಯರು.

ಯಕ್ಷಿ : ಅವರೆಲ್ಲಿದ್ದಾರೆ ?

ಟಿಲ್ಟಿಲ್ : ಅವರೂ ಸತ್ತುಹೋಗಿದ್ದಾರೆ

ಯಕ್ಷಿ : ಅವರನ್ನೆಲ್ಲ ಮತ್ತೆ ನೋಡಕ್ಕೆ ಇಷ್ಟನಾ?

ಟಿಲ್ಟಿಲ್ : ಹೌದು ! ಈಗಲೆ ! ತೋರಿಸು ನಮಗೆ ಅವರನ್ನೆಲ್ಲಾ !

ಯಕ್ಷಿ : ಅವರೆಲ್ಲ ನನ್ನ ಜೇಬಿನಲ್ಲಿದ್ದಾರೆ ಅಂದುಕೊಂಡೆಯಾ? ಆದರೆ ನಿಮ್ಮ

ಅದೃಷ್ಟ; ನೀವು ನೆನಪಿನ ಲೋಕದಾಸಿ ಹೋಗುವಾಗ ಅವರನ್ನ ನೋಡಬಹುದು. ಆ ಲೋಕ ನೀಲಿಹಕ್ಕಿ ಹುಡುಕಿಕೊಂಡು ಹೋಗುವಾಗ ದಾರಿಯಲ್ಲಿ ಸಿಗುತ್ತದೆ. ಎಡಕ್ಕೆ, ಮೂರನೆ ತಿರುವಿನ ನಂತರ. ಅದು ಸರಿ, ನಾನು ಬಾಗಿಲು ತಟ್ಟದಾಗ ನೀವು ಏನು ಮಾಡುತ್ತಿದ್ದಿರಿ?

ಟಿಲ್ಪಿಲ್ : ನಾವು ಕೇಕು ತಿನ್ನೋ ಆಟ ಆಡ್ತಿದ್ವಿ.

ಯಕ್ಷಿ : ನಿಮ್ಮ ಹತ್ರ ಕೇಕುಗಳಿವೆಯಾ? ಎಲ್ಲಿವೆ ?

ಟಿಲ್ಪಿಲ್ : ಶ್ರೀಮಂತರ ಮನೆಯಲ್ಲಿ. ಬಾ, ನೋಡು; ಎಷ್ಟು ಚೆನ್ನಾಗಿದೆ. (ಯಕ್ಷಿಯನ್ನು ಕಿಟಕಿ ಬಳಿ ಕರೆದೊಯ್ಯುತ್ತಾನೆ)

ಯಕ್ಷಿ : (ಕಿಟಕಿಯ ಬಳಿ) ಆದರೆ ಅದನ್ನು ಬೇರೆಯವರು ತಿನ್ನುತ್ತಾ ಇದ್ದಾರೆ.

ಟಿಲ್ಪಿಲ್ : ಹೌದು, ಆದರೆ ಅವರು ತಿನ್ನೋದನ್ನ ನಾವು ನೋಡಬಹುದು.

ಯಕ್ಷಿ : ಅವರ ಮೇಲೆ ನಿಮಗೆ ಸಿಟ್ಟು ಬರೋದಿಲ್ಲವಾ?

ಟಿಲ್ಪಿಲ್ : ಯಾಕೆ ?

ಯಕ್ಷಿ : ಎಲ್ಲಾ ಕೇಕೂ ಅವರೇ ತಿನ್ತಾ ಇದ್ದಾರೇಂತ. ನಿಮಗೆ ಸ್ವಲ್ಪನೂ ಕೊಡದೇ ತಿನ್ನುತ್ತಾ ಇರೋದು ಸರಿಯಲ್ಲಾನ್ನಿಸುತ್ತೆ.

ಟಿಲ್ಪಿಲ್ : ಹಾಗೇನಿಲ್ಲ, ಅವರು ಶ್ರೀಮಂತರು. ಅಲ್ಲ, ಅಲ್ಲಿ ನೋಡೋಕೆ ಚೆನ್ನಾಗಿ ದೆಯೋ ಇಲ್ವೋ?

ಯಕ್ಷಿ : ಇಲ್ಲಿಗಿಂತ ಅಲ್ಲಿ ಚೆನ್ನಾಗೇನೂ ಇಲ್ಲ.

ಟಿಲ್ಪಿಲ್ : ಅಯ್ಯೋ, ಇಲ್ಲಿ ಎಷ್ಟು ಕತ್ತಲಿದೆ, ಇಕ್ಕಟ್ಟಾಗಿದೆ, ಅಲ್ಲದೆ ಇಲ್ಲಿ ಕೇಕೇ ಇಲ್ಲ.

ಯಕ್ಷಿ : ಅಲ್ಲೂ ಹೀಗೇ ಇದೆ, ಆದ್ರೆ ನಿಮಗೆ ಹಾಗೆ ಕಾಣಿಸ್ತಿಲ್ಲ.

ಟಿಲ್ಪಿಲ್: ಏನಿಲ್ಲ, ನನ್ನ ಕಣ್ಣು ಚೆನ್ನಾಗಿ ಕಾಣಿಸುತ್ತೆ. ಚರ್ಚಿನ ಗಂಟೇಲಿ ಸಮಯ ಎಷ್ಟೂಂತ ನಾನು ನೋಡಬಲ್ಲೆ, ಅಪ್ಪಂಗೇ ಕಾಣಲ್ಲ.

ಯಕ್ಷಿ : (ಸಿಟ್ಟಿಗೇಳುತ್ತ) ನಿನಗೆ ಕಾಣಿಸುತ್ತಿಲ್ಲ ಅಂತ ನಾನು ಮತ್ತೆ ಹೇಳ್ತೇನೆ! ನಾನು ಕಾಣಿಸುತ್ತೀನಾ? ಹೇಗಿದ್ದೀನಿ ನಾನು? (ಟಿಲ್ಪಿಲ್ ಸುಮ್ಮನಾಗುತ್ತಾನೆ) ಹುಂ, ಉತ್ತರಕೊಡು. ನಾನು ನಿಮಗೆ ಹೇಗೆ ಕಾಣಿಸ್ತೀನಿ ಅಂತ ನಾನು ತಿಳಕೋಬೇಕು ನಾನು ಸುಂದರಿನಾ, ಕುರೂಪಿಯಾ? (ನಿಶ್ಶಬ್ದ ಅಸಹನೀಯವಾಗುತ್ತದೆ) ಉತ್ತರ

ಹೇಳೋದಿಲ್ವ? ನಾನು ಯುವತಿನಾ, ಮುದುಕಿನಾ? ನನ್ನ ಕೆನ್ನೆಗಳು ಕೆಂಪಗಿವಾ, ಹಳದಿಯಾಗಿವಾ?.........ನಾನು ಗೂನಿ ಅಂದು ಬಿಡುತ್ತೀಯೇನೊ?

ಟಿಲ್ಟಿಲ್: (ಹೊಂದಾಣಿಕೆ ಮಾಡಿಕೊಳ್ಳುವವನಂತೆ) ಇಲ್ಲ, ಇಲ್ಲ. ಅಂಥಾ ದೊಡ್ಡ ಗೂನೇನು ಅಲ್ಲ.

ಯಕ್ಷಿ : ಏನಿಲ್ಲ, ನಿನ್ನ ಮುಖ ನೋಡಿದರೆ ಭಾರಿ ದೊಡ್ಡ ಗೂನೇ ಇರಬೇಕೆಂದು ಯಾರಾದರೂ ಅಂದುಕೊಳ್ಳಬಹುದು. ನನ್ನ ಮೂಗು ಕೊಂಡಿಯ ಹಾಗಿದೆಯಾ, ನನ್ನ ಕಣ್ಣೊಂದು ಇಲ್ಲವಾಗಿದೆಯಾ?

ಟಿಲ್ಟಿಲ್: ಛೆ, ಛೆ, ನಾನು ಹಾಗೆ ಹೇಳುವುದಿಲ್ಲ. ಯಾರು ಕಿತ್ತರು ಅದನ್ನ ?

ಯಕ್ಷಿ : (ಹೆಚ್ಚು ಅಸಹನೆಯಿಂದ) ಅದೇನು ಕಿತ್ತು ಹಾಕಿಲ್ಲ! ಎಷ್ಟು ಕೊಬ್ಬು ನಿನಗೆ, ಏ ಹುಡುಗ ! ಇನ್ನೊಂದಕ್ಕಿಂತ ಇದೇ ಚೆನ್ನಾಗಿ ಕಾಣುತ್ತೆ; ಇದೇ ಅದಕ್ಕಿಂತ ದೊಡ್ಡದು, ಜಾಸ್ತಿ ಹೊಳಪಿರೋದು, ಆಕಾಶದ ಥರ ನೀಲಿಯಾಗಿರೋದು. ನನ್ನ ಕೂದಲು.... ಕಾಣುತ್ತಾ? ಹೊಲದಲ್ಲಿ ಕಾಳಿನ ತೆನೆಗಳಷ್ಟು ಚೆನ್ನಾಗಿದೆ; ನಿಜವಾದ ಚಿನ್ನದ ಹಾಗೆ. ಅಲ್ಲದೆ ನನ್ನ ಕೇಶ ರಾಶಿ ರಾಶಿಯಾಗಿದೆ, ಭಾರದಿಂದ ತಲೆ ತಗ್ಗುವಂತಾಗಿದೆ... ಎಲ್ಲಾ ಕಡೆಗೂ ತೂರಿಕೊಂಡು ಬರುತ್ತಿರುತ್ತದೆ. ನನ್ನ ಕೈ ಮೇಲೂ ಬೆಳಕೊಂಡಿರೋದು ಕಾಣುತ್ತಾ?

(ಎರಡು ಬೂದು ಬಣ್ಣದ ಕೂದಲೆಳೆಗಳನ್ನು ಎತ್ತಿ ತೋರಿಸುತ್ತಾಳೆ)

ಟಿಲ್ಟಿಲ್ : ಹೌದು, ಚೂರು ಚೂರು ಕಾಣಿಸುತ್ತೆ.

ಯಕ್ಷಿ : (ಸಿಟ್ಟಿನಿಂದ) ಚೂರಾ? ರಾಶಿರಾಶಿ ! ತೋಳುತುಂಬಾ ! ಗುಚ್ಛಗುಚ್ಛವಾಗಿ! ಚಿನ್ನದ ಅಲೆಗಳು! ನಂಗೊತ್ತು, ಏನೇನೂ ಕಾಣಿಸುತ್ತಿಲ್ಲಾ ಅಂತ ಅನ್ನುವ ಜನ ಇದ್ದಾರೆ; ಆದ್ರೆ ನೀನೂ ಅಂಥಾ ಕೇಡಿ ಕುರುಡರಲ್ಲಿ ಒಬ್ಬನಲ್ಲ ಅಂತ ನನ್ನ ಭಾವನೆ.

ಟಿಲ್ಟಿಲ್ : ಇಲ್ಲ, ಇಲ್ಲ. ಅಡಿಗಿಕೊಂಡಿರೋದನ್ನ ಬಿಟ್ಟರೆ ಇನ್ನೆಲ್ಲಾ ನಾನು ನೋಡಬಲ್ಲೆ.

ಯಕ್ಷಿ : ಇನ್ನ ಮಿಕ್ಕವನ್ನೂ ನೀನು ಸಂಶಯವಿಲ್ಲದೆ ನೋಡಬಲ್ಲವನಾಗಬೇಕು ! ಮನುಷ್ಯರು ಬಹಳ ವಿಚಿತ್ರ ! ಯಕ್ಷ ಯಕ್ಷಿಯರು ಸತ್ತು ಹೋದಾಗಿನಿಂದ ಅವರಿಗೆ ಏನೇನೂ ಕಾಣದು. ಹೋಗಲಿ ಅನುಮಾನ ಕೂಡ ಬರುವುದಿಲ್ಲ. ಅದೃಷ್ಟವಶಾತ್, ಮೊಬ್ಬು ಕಣ್ಣುಗಳಿಗೆ ಹೊಸಬೆಳಕು ನೀಡಬಲ್ಲ ಎಲ್ಲ ವಸ್ತುಗಳನ್ನೂ ನಾನು ಯಾವಾಗಲೂ ಕೊಂಡೊಯ್ದಿರುತ್ತೇನೆ. ನನ್ನ ಚೀಲದಿಂದ ಏನು ಹೊರತೆಗೀತಿದ್ದೀನಿ, ನೋಡು....

ಟಿಲ್ಟಿಲ್ : ಓ, ಎಷ್ಟು ಮುದ್ದಾಗಿದೆ ಈ ಹಸಿರು ಟೊಪ್ಪಿ! ಆ ತುರಾಯಿಯಲ್ಲಿ ಮಿನುಗುತ್ತಿರುವುದು ಏನು?

ಯಕ್ಷಿ : ಅದೂ, ಜನರಿಗೆ ಕಾಣುವಂತೆ ಮಾಡಬಲ್ಲ ದೊಡ್ಡ ವಜ್ರ.

ಟಿಲ್ಟಿಲ್ : ಹೌದಾ?

ಯಕ್ಷಿ : ಹೌದು, ಆ ಟೊಪ್ಪಿಯನ್ನು ತಲೆಯ ಮೇಲೆ ಹಾಕಿಕೊಂಡು, ಆ ವಜ್ರವನ್ನು ಒಂದಿಷ್ಟು ತಿರುಗಿಸು: ಬಲದಿಂದ ಎಡಕ್ಕೆ, ಹೀಗೆ... ಕಾಣಿಸಿತಾ? ಆಗ ಅದು ಯಾರಿಗೂ ಗೊತ್ತಿಲ್ಲದ ಒಂದು ಗುಳ್ಳೆಯನ್ನು ಒತ್ತುತ್ತದೆ. ಆಗ ನಿನ್ನ ಕಣ್ಣುಗಳು ತೆರಕೊಳ್ಳುತ್ತವೆ.

ಟಿಲ್ಟಿಲ್ : ನೋವಾಗಲ್ವ?

ಯಕ್ಷಿ : ಬದಲಾಗಿ ಅದು ಇಷ್ಟವಾಗುತ್ತೆ, ನಿನ್ನ ಮರುಳಾಗಿಸುತ್ತೆ. ತಕ್ಷಣ ನೀನು ಎಲ್ಲ ವಸ್ತುಗಳ ಒಳಗನ್ನೂ ನೋಡಲು ಸಾಧ್ಯವಾಗುತ್ತೆ- ಬ್ರೆಡ್ಡಿನ ಆತ್ಮ, ವೈನಿನ ಆತ್ಮ, ಮೆಣಸಿನ ಆತ್ಮ... ಹೀಗೆ.

ಮೈಟಲ್: ಸಕ್ಕರೆಯ ಆತ್ಮವನ್ನೂ ನೋಡಬಹುದಾ?

ಯಕ್ಷಿ : (ಸಿಡುಕುತ್ತಾ) ಖಂಡಿತಾ ! ನನಗೆ ಅನವಶ್ಯಕ ಪ್ರಶ್ನೆಗಳೊಂದ್ರೆ ಆಗಲ್ಲ. ಸಕ್ಕರೆಯ ಆತ್ಮ ಮೆಣಸಿನ ಆತ್ಮಕ್ಕಿಂತ ಹೆಚ್ಚೇನೂ ಚೆನ್ನಾಗಿರುವುದಿಲ್ಲ. ನೀಲಿಹಕ್ಕಿ ಹುಡುಕಲು ನಿಮಗೆ ಏನೇನು ಸಹಾಯ ಬೇಕೊ ಅದನ್ನೆಲ್ಲಾ ನಾನು ನಿಮಗೆ ಕೊಡುತ್ತೇನೆ, ಆಯ್ತಾ? ನಿಮಗೆ ಹಾರುವ ಜಮಖಾನ ಅಥವಾ ಹಾಕಿಕೊಂಡರೆ ಅದೃಶ್ಯವಾಗಿಸುವ ಉಂಗುರ ಕೊಟ್ಟಿದ್ದರೆ ಚೆನ್ನಾಗಿರುತ್ತಿತ್ತು, ನಂಗೆ ಗೊತ್ತು; ಆದರೆ ಅವನ್ನ ಇಟ್ಟಿರುವ ಬೀರುವಿನ ಕೀಲಿಕೈ ಕಳಕೊಂಡು ಬಿಟ್ಟಿದ್ದೀನಿ. ಓ, ಮರೆತೇ ಹೋಗುತ್ತಿದೆ. (ವಜ್ರದ

ಕಡೆತೋರಿಸುತ್ತಾ) ಹೀಗೆ ಇಟ್ಟುಕೊಂಡು... ಕಾಣಿಸುತ್ತಾ?..... ಹೀಗೆ ಒಂದು ಸುತ್ತು ತಿರುಗಿಸಿದರೆ ಹಿಂದೆ ನಡೆದಿದ್ದು ಕಾಣಿಸುತ್ತೆ. ಒಂದು ಸುತ್ತು ಈ ಕಡೆ ತಿರುಗಿಸಿದರೆ ಭವಿಷ್ಯದ್ದು ಕಾಣಿಸುತ್ತೆ. ಇದು ಕುತೂಹಲ ಕಾರಿಯಾದರೂ, ಸಾಧ್ಯವಾಗುವಂಥದ್ದು. ಮತ್ತೆ ಶಬ್ದ ಮಾಡುವುದಿಲ್ಲ.

ಟಿಲ್ಪಿಲ್ : ಅಪ್ಪ ಇದನ್ನ ಇಸ್ಕೊಂಡ್ ಬಿಡ್ತರೆ.

ಯಕ್ಷಿ : ಅವರ ಕಣ್ಣಿಗೆ ಇದು ಕಾಣಿಸೋದಿಲ್ಲ. ಅದು ನಿನ್ನ ತಲೆಮೇಲೆ ಇರೋವರ್ಗೂ ಯಾರ ಕಣ್ಣಿಗೂ ಅದು ಕಾಣುವುದಿಲ್ಲ. ನೋಡ್ತಿಯಾ ಒಂದು ಸಲ?(ಪುಟ್ಟ ಹಸಿರು ಟೊಪ್ಪಿಯನ್ನು ಟಿಲ್ಪಿಲ್ ತಲೆ ಮೇಲೆ ಇರಿಸುತ್ತಾಳೆ) ಈಗ, ವಜ್ರ ತಿರುಗಿಸು, ಒಂದು ಸುತ್ತು.... ಆಮೇಲೆ...

ಟಿಲ್ಪಿಲ್ ವಜ್ರ ತಿರುಗಿಸುತ್ತಿದ್ದಂತೆ ಎಲ್ಲ ವಸ್ತುಗಳಲ್ಲೂ ವಿಚಿತ್ರ ಬದಲಾವಣೆ ಆಗ ತೊಡಗುತ್ತದೆ. ಮುದಿ ಯಕ್ಷಿ ಸುಂದರ ರಾಜಕುಮಾರಿ ಯಾಗಿ ಪರಿವರ್ತನೆ ಹೊಂದುತ್ತಾಳೆ. ಮನೆಯ ಗೋಡೆಯಲ್ಲಿ ಕಲ್ಲುಗಳೆಲ್ಲ ಬೆಲೆಬಾಳುವ ಹರಳುಗಳಂತೆ ನೀಲಮಣಿಗಳಂತೆ ಹೊಳೆಯ ತೊಡುಗುತ್ತವೆ. ಸರಳವಾಗಿದ್ದ ಕುರ್ಚಿ ಮೇಜು ಮಂಚಗಳು ಥಳ ಥಳ ಹೊಳೆಯತೊಡಗುತ್ತವೆ. ಟೇಬಲ್ಲು ಅಮೃತಶಿಲೆಯಿಂದ ಮಾಡಿರುವಂತೆ ಕಾಣುತ್ತದೆ. ಗಡಿಯಾರದ ಮುಖ ಕಣ್ಣು ಮಿಟುಕಿಸಿ ಮುಗುಳ್ನಗುತ್ತದೆ ; ಅದರ ಪೆಂಡುಲಂ ಇರುವ ಬಾಗಿಲು ತೆರೆದು ಗಂಟೆಗಳು (ತಾಸುಗಳು) ಒಂದೊಂದೂ ಕೈ ಕೈ ಹಿಡಿದುಕೊಂಡು ಹೊರಬರುತ್ತವೆ ; ಸುಶ್ರಾವ್ಯ ಸಂಗೀತಕ್ಕೆ ಕುಣಿಯಲು ಶುರು ಮಾಡುತ್ತವೆ.

ಟಿಲ್ಪಿಲ್: (ಆಶ್ಚರ್ಯದಿಂದ ತಾಸುಗಳ ಕಡೆ ಕೈ ಮಾಡುತ್ತಾ) ಆ ಸುಂದರ ಹೆಂಗಸರೆಲ್ಲ ಯಾರು?

ಯಕ್ಷಿ : ಹೆದರಬೇಡ; ಅವು ನಿಮ್ಮ ಜೀವನದ ಸಮಯದ ತಾಸುಗಳು. ಹೊರಬಂದು ಒಮ್ಮೆಯಾದರೂ ಕಣ್ಣಿಗೆ ಕಾಣುವಂತಾದೆವಲ್ಲಾ ಎಂದು ಅವಕ್ಕೆ ಖುಷಿಯಾಗಿದೆ.

ಟಿಲ್ಪಿಲ್: ಗೋಡೆಗಳೆಲ್ಲ ಯಾಕಿಷ್ಟು ಫಳ ಫಳ ಹೊಳೆಯುತ್ತಿವೆ? ಅವೇನು ಸಕ್ಕರೆಯಿಂದ ಮಾಡಿದ್ದಾ, ಅಥವಾ ಬೆಲೆಬಾಳುವ ಕಲ್ಲುಗಳಿಂದ ಮಾಡಿದ್ದಾ?

ಯಕ್ಷಿ : ಕಲ್ಲುಗಳೆಂದರೆ ಎಲ್ಲಾ ಒಂದೇ. ಎಲ್ಲಾ ಕಲ್ಲುಗಳೂ ಬೆಲೆ ಬಾಳುವಂಥವೇ; ಆದರೆ ಮನುಷ್ಯ ಕೆಲವನ್ನು ಮಾತ್ರ ನೋಡಬಲ್ಲ.

ಮಾತಾಡುತ್ತಿರುವಾಗ ಮೋಡಿ ಹಾಕುವಂಥ ಆ ದೃಶ್ಯದ ಮಾಂತ್ರಿಕತೆ ಹೆಚ್ಚಾಗುತ್ತದೆ, ಪೂರ್ಣ ಗೊಳ್ಳುತ್ತದೆ. ಬ್ರೆಡ್ಡಿನ ತುಂಡುಗಳ ಆತ್ಮಗಳು ಚಿಕ್ಕ ಚಿಕ್ಕ ಮನುಷ್ಯರಂತೆ, ಬ್ರೆಡ್ಡಿನ ಅಂಚಿನ ಬಣ್ಣದ ಬಿಗಿ ಪ್ಯಾಂಟು ಧರಿಸಿ, ಹಿಟ್ಟಿನಿಂದಾಗಿ ಧೂಳು ಮೆತ್ತಿಕೊಂಡು, ಬ್ರೆಡ್ಡಿನ ಪಾತ್ರೆಯಿಂದ ಹೊರ ಜಿಗಿಯುತ್ತವೆ; ಮೇಜಿನ ತುಂಬಾ ಓಡಾಡ ತೊಡಗುತ್ತವೆ. ಅಲ್ಲಿ, ಹಳದಿ ಒಲೆಯಿಂದ ಜಿಗಿದು, ಕೆಂಪು ಬಿಗಿಪ್ಯಾಂಟು ತೊಟ್ಟ ಬೆಂಕಿಯನ್ನು ಎದುರುಗೊಳ್ಳುತ್ತಾರೆ. ಬೆಂಕಿ ಗಹಗಹಿಸಿ ನಗುತ್ತಾ ಬ್ರೆಡ್ಡಿನ ತುಂಡುಗಳ ಮಧ್ಯ ಹಾಯುತ್ತಿರುತ್ತಾನೆ

ಟಿಲ್ಟಿಲ್: ಆ ಕುರೂಪಿ ಕುಳ್ಳರು ಯಾರು?

ಯಕ್ಷಿ : ಓ, ಅವರೆಲ್ಲ ಅಮುಖ್ಯರು; ಸತ್ಯದ ಸಾಮ್ರಾಜ್ಯ ಬಂದ ಕೂಡಲೆ ಅದರ ದುರುಪಯೋಗಪಡಿಸಿಕೊಳ್ಳಲು ಬಿಗಿಯಾಗಿ ಬಂಧಿಯಾಗಿದ್ದ ಪಾತ್ರೆಯೊಳಗಿಂದ ಹೊರ ಬಂದಿದ್ದಾರೆ.

ಟಿಲ್ಟಿಲ್: ಮತ್ತೆ ಆ ಗಬ್ಬುನಾತದ ಕೆಂಪು ವ್ಯಕ್ತಿ...?

ಯಕ್ಷಿ : ಶ್ ! ಅಷ್ಟು ಜೋರಾಗಿ ಮಾತಾಡಬೇಡ; ಅದು ಬೆಂಕಿ. ಬಹಳ ಅಪಾಯಕಾರಿ.

ಮಾಂತ್ರಿಕತೆ ಈ ಮಾತಿನಿಂದಾಗಿ ಕಡಿಮೆಯೇನಾಗುವುದಿಲ್ಲ. ಬೀರುವಿನ ಕಾಲ ಬಳಿ ಮೈ ಸುರುಳಿ ಮಾಡಿ ಮಲಗಿದ್ದ ನಾಯಿ ಮತ್ತು ಬೆಕ್ಕು ಎದ್ದು ಒಟ್ಟಿಗೆ ಜೋರಾಗಿ ಒಮ್ಮೆ ಕೂಗು ಹಾಕಿ, ಹೋಗಿ ಬಿಡುತ್ತಾವೆ. ಅವು ಇದ್ದ ಜಾಗದಿಂದ ಇಬ್ಬರು ವ್ಯಕ್ತಿಗಳು ಮೇಲೇರುತ್ತಾರೆ; ಒಬ್ಬನಿಗೆ ಗಡವನಾಯಿಯ ಮುಖ, ಇನ್ನೊಬ್ಬಳಿಗೆ ಮಳ್ಳ ಬೆಕ್ಕಿನ ಮುಖ. ಇನ್ನು ಮುಂದೆ ಮೊದಲನೆಯವನನ್ನು ನಾಯಿ ಎಂದೂ, ಎರಡನೆಯವಳನ್ನು ಬೆಕ್ಕು ಎಂದು ನಾವು ಹೇಳೋಣ. ನಾಯಿ ಟಿಲ್ಟಿಲ್ ಬಳಿ ನುಗ್ಗಿ ಹಿಂಸೆಯಾಗುವಂತೆ ಮುದ್ದಿಸುತ್ತದೆ; ಬೆಕ್ಕು ತನ್ನ ಕೂದಲು ಬಾಚಿಕೊಳ್ಳುತ್ತಾಳೆ, ಕೈ ತೊಳಕೊಳ್ಳುತ್ತಾಳೆ, ಮೀಸೆ ತೀಡಿಕೊಂಡು ಮೈಟಿಲ್ ಹತ್ತಿರ ಬರುತ್ತಾಳೆ.

ನಾಯಿ : (*ಕಿರುಚುತ್ತಾ, ಕುಣದಾಡುತ್ತಾ, ಎಲ್ಲ ವಸ್ತುವಿನ ಮೇಲೂ ಎರಗುತ್ತಾ, ಒಟ್ಟನಲ್ಲಿ ಸಹಿಸಲು ಕಷ್ಟವಾಗುವಷ್ಟು ಕುಣಯುತ್ತಾ*) ನನ್ನ ಪುಟ್ಟ ದೇವತೆ! ಶುಭ ಬೆಳಗು! ಶುಭ ಬೆಳಗು ನನ್ನ ಪುಟ್ಟ ದೇವರೆ. ಅಂತೂ ನಾವು ಮಾತಾಡ ಬಲ್ಲೆವು! ನಿನ್ನ ಹತ್ರ ಎಷ್ಟು ವಿಷಯ ಹೇಳೋದಿದೆ! ನಾನು ಎಷ್ಟು ಬೊಗಳಿದರೂ, ಬಾಲ ಆಡಿಸಿದರೂ ನಿನಗೆ ತಿಳಿಯಲೇ ಇಲ್ಲ! ಈಗ, ಈಗ ! ಶುಭ ಬೆಳಗು! ಶುಭ ಬೆಳಗು! ನಿನ್ನ ಕಂಡರೆ ನನಗದೆಷ್ಟು ಪ್ರೀತಿ... ಪ್ರೇಮ! ನನ್ನ ಚಮತ್ಕಾರ ಮಾಡಿ ತೋರಿಸಲೆ? ಭಿಕ್ಷೆ ಬೇಡುವುದನ್ನು ಮಾಡಿ ತೋರಿಸಲೆ? ಮುಂದಿನ ಕಾಲಮೇಲೆ

ನಡೆಯಲಾ, ಹಿಂದಿನ ಕಾಲಮೇಲೆ ಕುಣಿಯಲಾ, ಯಾವುದು ಇಷ್ಟ ನಿನಗೆ?

ಟಿಲ್ಪಿಲ್ : ನಾಯಿ ಮುಖ ಹೊತ್ತಿರುವ ಈ ವ್ಯಕ್ತಿ ಯಾರು?

ಯಕ್ಷಿ : ನಿನಗೇ ಕಾಣಿಸೋದಿಲ್ಲವಾ? ನೀನೇ ಬಿಡುಗಡೆಗೊಳಿಸಿರುವ ನಿನ್ನ ನಾಯಿ ಟೈಲೋನ ಆತ್ಮ.

ಬೆಕ್ಕು : *(ಮೈಟಲ್ ಬಳಿಹೋಗಿ ವೈಯ್ಯಾರದಿಂದ ತನ್ನ ಕೈ ಅವಳ ಮೇಲೆ ಹಾಕುತ್ತಾ)* ಎಷ್ಟು ಚೆನ್ನಾಗಿ ಕಾಣಿಸುತ್ತಿದ್ದೀಯ ನೀನು ಇವತ್ತು!

ಟಿಲ್ಪಿಲ್ : ಶುಭ ಬೆಳಗು ಮ್ಯಾಡಮ್. *(ಯಕ್ಷಿಗೆ)* ಇದು ಯಾರು?

ಯಕ್ಷಿ : ಯಾಕೆ, ನಿನಗೇ ಕಾಣಿಸುತ್ತಿಲ್ಲವಾ ? ಟಿಲೆಟ್ಟೆಯ ಆತ್ಮ. ಕೈ ಚಾಚಿದೆ , ಮುದ್ದಿಸು ಅದನ್ನು.

ನಾಯಿ : *(ಬೆಕ್ಕನ್ನು ನೂಕುತ್ತಾ)* ನಾನೂ... ನಾನು, ಪುಟ್ಟ ದೇವತೆಯನ್ನ ಮುದ್ದಿಸಿದೆ, ಪುಟ್ಟ ಹುಡುಗಿಯನ್ನೂ ಮುದ್ದಿಸಿದೆ! ಎಲ್ಲರನ್ನೂ ಮುದ್ದಿಸಿದೆ. ಓ, ಎಷ್ಟು ಮಜವಾಗಿದೆ! ಎಷ್ಟು ಸಂತೋಷವಾಗ್ತಿದೆ! ಈಗ ಟಿಲಟ್ಟೆನ ಹೆದರಿಸ್ತೀನಿ. ಬೌ ಬೌ ಬೌ!

ಬೆಕ್ಕು : ನೀವು ಯಾರೂಂತ ನಂಗೆ ಗೊತ್ತಾಗ್ತಿಲ್ಲ.

ಯಕ್ಷಿ : *(ಕಡ್ಡಿ ತೋರಿಸಿ ನಾಯಿಯನ್ನು ಬೆದರಿಸುತ್ತಾ)* ಸುಮ್ಮನಿರುತ್ತೀಯಾ ಅಥವಾ ಕಾಲದ ಕಡೆಯವರೆಗೂ ಮೊದಲಿನಂತೆ ಮೂಕನಾಗಿಸಿ ಬಿಡಲಾ?

ಮಾಂತ್ರಿಕತೆ ಮುಂದುವರೆದಿರುತ್ತದೆ. ಮೂಲೆಯಲ್ಲಿ ಚರಕ ತಿರುಗ ಹತ್ತಿ, ಬೆಳಕಿನೆಳೆಗಳನ್ನು ನೂಲುತ್ತಿದೆ; ಇನ್ನೊಂದು ಮೂಲೆಯಲ್ಲಿದ್ದ ನಲ್ಲಿ ದೊಡ್ಡದನಿ ತೆಗೆದು ಹಾಡುತ್ತ ಬೆಳಕಿನ ಕಾರಂಜಿ ಉಂಟಾಗಿ, ಬಚ್ಚಲು ತುಂಬಿ ಪಚ್ಚೆ ಹರಳುಗಳು ಧಾರಾಕಾರವಾಗಿ ಹರಿಯ ತೊಡಗುತ್ತದೆ. ಅದರ ಮೂಲಕ ನೀರಿನ ಆತ್ಮ ಆಚೆ ಬರುತ್ತಾಳೆ. ಯುವತಿಯ ಮೇಲಿಂದ ನೀರಿಳಿಯುತ್ತಿರುತ್ತದೆ. ಕೂದಲು ಕೆದರಿದೆ, ತಕ್ಷಣ ಬೆಂಕಿಯ ಜೊತೆ ಕಾದಲು ಶುರುಮಾಡುತ್ತಾಳೆ.

ಟಿಲ್ಪಿಲ್: ಆ ಒದ್ದೆ ಒದ್ದೆ ಹೆಂಗಸು ಯಾರು?

ಯಕ್ಷಿ ಹೆದರಬೇಡ. ಈಗ ತಾನೇ ನಲ್ಲಿಯಿಂದ ಆಚೆ ಬಂದ ನೀರು ಆಕೆ.

ಹಾಲಿನ ಪಾತ್ರೆ, ಜಿಗಿದು ಟೇಬಲ್ಲಿನಿಂದ ಕೆಳಕ್ಕೆ ಬಿದ್ದು ಒಡೆಯುತ್ತದೆ. ಚೆಲ್ಲಿದ ಹಾಲಿನಿಂದ ಏನು ಕಂಡರೂ ಹೆದರುವ ಎತ್ತರದ ಬಿಳೀ ಬಣ್ಣದ ಯುವತಿ ಮೇಲೇರುತ್ತಾಳೆ

ಟಿಲ್ಟಿಲ್: *ರಾತ್ರಿ ಉಡುಪಿನಲ್ಲಿರುವ ಆ ಬೆದರಿದ ಹೆಂಗಸು ಯಾರು?*

ಯಕ್ಷಿ : *ಅದು ಹಾಲು, ಆಕೆ ತನ್ನ ಪಾತ್ರೆ ಒಡೆದು ಹಾಕಿಕೊಂಡಿದ್ದಾಳೆ.*

ಬೀರುವಿನ ಕಾಲಿನ ಬಳಿಯಿದ್ದ ಸಕ್ಕರೆಅಚ್ಚು ಎತ್ತರಕ್ಕೆ ದೊಡ್ಡದಾಗಿ ಬೆಳೆದು, ತನ್ನ ಸುತ್ತುವರಿದಿದ್ದ ಪೇಪರ್ ಹರಿದುಹೋಗಿ, ಅಲ್ಲಿಂದ ಹೇಸಿಗೆ ಮುಖದ ಕಪಟಿಯೊಬ್ಬ ಅರ್ಧನೀಲಿ ಅರ್ಧ ಬಿಳಿ ಬಣ್ಣದ ಉದ್ದನೆ ನಿಲುವಂಗಿ ತೊಟ್ಟವ ಮೇಲೆದ್ದು, ಮೈಟಿಲ್ ಬಳಿ ಕಪಟ ಭಕ್ತಿ ತೋರುತ್ತಾ ಬರುತ್ತಾನೆ

ಮೈಟಿಲ್: *(ಬೆದರಿ) ಅವನಿಗೇನು ಬೇಕಂತೆ?*

ಯಕ್ಷಿ : *ಅರೆ, ಅವನು ಸಕ್ಕರೆಯ ಆತ್ಮ.*

ಮೈಟಿಲ್: *(ನಂಬಿಕೆ ಬಂದ ಮೇಲೆ) ಅವನ ಹತ್ತಿರ ಬಾರ್ಲಿ ಸಕ್ಕರೆ ಇದೆಯಾ?*

ಯಕ್ಷಿ : *ಅವನ ಜೋಬಿನ ತುಂಬಾ ಅವೇ ಇವೆ. ಅವನ ಒಂದೊಂದು ಬೆರಳೂ ಸಕ್ಕರೆ ಕಡ್ಡಿಗಳೇ.*

ದೀಪ ಟೇಬಲ್ಲಿಂದ ಕೆಳಕ್ಕೆ ಬೀಳುತ್ತದೆ. ಅದರ ಬೆಂಕಿ ಝುಗ್ಗೆಂದು ಮೇಲೆ ಬಂದು ತಕ್ಷಣ ಅಸಾಮಾನ್ಯ ರೂಪದ ಪ್ರಕಾಶಮಾನ ಯುವತಿಯೊಬ್ಬಳು ಹೊರಬರುತ್ತಾಳೆ. ಫಳ ಫಳ ಹೊಳೆಯುವ ಧಾವಣಿಗಳಿಂದ ಅಲಂಕೃತಳಾಗಿದ್ದಾಳೆ. ಉನ್ಮತ್ತಳಾಗಿ ಅಲುಗಾಡದೇ ನಿಂತು ಬಿಡುತ್ತಾಳೆ

ಟಿಲ್ಟಿಲ್ : *ಅದು ಮಹಾರಾಣಿ!*

ಮೈಟಿಲ್: *ಅದು ಪವಿತ್ರ ವರ್ಜಿನ್ ಮೇರಿ!*

ಯಕ್ಷಿ : *ಅಲ್ಲ, ಮಕ್ಕಳೆ, ಅದು ಬೆಳಕು.*

ಅಷ್ಟರಲ್ಲಿ ಕಟ್ಟೆಯ ಮೇಲಿಂದ ಪಾತ್ರೆ, ಪಡಾಸುಗಳು ಬುಗುರಿಯಂತೆ ತಿರುಗತೊಡಗುತ್ತವೆ; ಬಟ್ಟೆ ಪೆಟ್ಟಿಗೆ ಮಡಚಿದ ತನ್ನ ಬಾಗಿಲನ್ನು ತೆರೆಯುತ್ತದೆ; ಒಳಗಿಂದ ರಾಶಿಗಟ್ಟಲೆ ಚಂದ್ರನ ಬೆಳಕಿನ, ಸೂರ್ಯನ ಬೆಳಕಿನ ಬಟ್ಟೆ ಬರೆ, ರಗ್ಗು, ಹರಕಲು ಬಟ್ಟೆಗಳು ಅಟ್ಟದ ಮೇಲಿಂದ ಏಣಿಯ ಮೇಲಾಸಿ ಹೊರಬೀಳತೊಡಗುತ್ತವೆ. ತಕ್ಷಣ ಬಲಬಾಗಿಲನ್ನು ಮೂರು ಸಲ ಯಾರೋ ತಟ್ಟಿದ ಸದ್ದು.

ಟಿಲ್ಟಿಲ್ : (ಹೆದರಿ) ಅದು ಅಪ್ಪನೇ! ಅವರಿಗೆ ಕೇಳಿಸಿ ಬಿಟ್ಟಿದೆ!

ಯಕ್ಷಿ : ವಜ್ರ, ತಿರುಗಿಸು! ಎಡದಿಂದ ಬಲಕ್ಕೆ (ಟಿಲ್ಟಿಲ್ ಕೂಡಲೆ ತಿರುಗಿಸುತ್ತಾನೆ) ಅಷ್ಟು ಫಕ್ಕಂತ ಅಲ್ಲ! ಅಯ್ಯೋ ದೇವರೆ! ಇನ್ನು ತಡವಾಯಿತು. ಅದನ್ನು ತುಂಬಾ ಜೋರಾಗಿ ತಿರುಗಿಸಿಬಿಟ್ಟೆ; ಇವರೆಲ್ಲಾ ತಮ್ಮ ಜಾಗಗಳಿಗೆ ಹೋಗಲು ಸಾಕಷ್ಟು ಸಮಯ ಇಲ್ಲದಾಯ್ತು. ಇನ್ನು ತುಂಬಾ ಕಷ್ಟವಾಗುತ್ತೆ.

ಯಕ್ಷಿ ಮತ್ತೆ ಮುದುಕಿಯಾಗುತ್ತಾಳೆ. ಗೋಡೆಗಳು ಪ್ರಜ್ವಲತೆ ಕಳಕೊಂಡು ಮತ್ತೆ ಮೊದಲಿನಂತಾಗುತ್ತವೆ; ತಾಸುಗಳು ಮತ್ತೆ ಗಡಿಯಾರ ದೊಳಕ್ಕೆ ಹೋಗುತ್ತವೆ; ಚರಕ ನೂಲುವುದನ್ನು ನಿಲ್ಲಿಸುತ್ತದೆ... ಇತ್ಯಾದಿ. ಆದರೆ ಗಡಿಬಿಡಿಯಲ್ಲಿ ಬೆಂಕಿ ಹುಚ್ಚನಂತೆ ಕೋಣೆ ತುಂಬಾ ಹೊಗೆ ಗೂಡಿಗಾಗಿ ಹುಡುಕಾಡುತ್ತೆ. ಬ್ರೆಡ್ಡಿನ ಒಂದು ತುಂಡು ಮತ್ತೆ ಪಾತ್ರೆಯೊಳಗೆ ಹಿಡಿಯಲಾಗದೆ ಹೆದರಿ ಅಳಲು ಶುರುಮಾಡುತ್ತದೆ.

ಯಕ್ಷಿ : ಯಾಕೆ, ಏನಾಯ್ತು?

ಬ್ರೆಡ್ಡು : (ಕಣ್ಣೀರು ಹರಿಸುತ್ತಾ) ಪಾತ್ರೆಯಲ್ಲಿ ನನಗೆ ಜಾಗವೇ ಇಲ್ಲ.

ಯಕ್ಷಿ : (ಪಾತ್ರೆಯೊಳಗೆ ಬಗ್ಗಿ ನೋಡುತ್ತಾ) ಇದೆ, ಇದೆ. (ಮಿಕ್ಕ ತುಂಡುಗಳನ್ನ ಒಂದು ಪಕ್ಕಕ್ಕೆ ಸರಿಸಿ) ಬೇಗ ಬಾ, ಇಲ್ಲಿ ಸೇರಿಕೊ.

ಮತ್ತೆ ಬಾಗಿಲು ಬಡಿದ ಸದ್ದು

ಬ್ರೆಡ್ಡು : (ತುಂಬಾ ಹೆದರಿ ಪಾತ್ರೆಯೊಳಗೆ ಸೇರಿಸಿಕೊಳ್ಳಲಾಗದೆ) ಸೇರಿಕೊಳ್ಳಕ್ಕೆ ಆಗ್ತಿಲ್ಲ. ಇನ್ನು ಅವನು ನನ್ನನ್ನೇ ಮೊದಲು ತಿನ್ನುತ್ತಾನೆ

ನಾಯಿ : (ಟಿಲ್ಟಿಲ್ ಸುತ್ತ ಓಡಾಡುತ್ತಾ) ನನ್ನ ಪುಟ್ಟ ದೇವತೆ! ನಾನಂತೂ ಇನ್ನೂ ಇಲ್ಲೇ ಇದ್ದೀನಿ! ಇನ್ನೂ ಮಾತಾಡಬಲ್ಲೆ! ನಿನ್ನ ಮುದ್ದಿಸಲೂ ಬಲ್ಲೆ! ಮತ್ತೆ! ಮತ್ತೆ! ಮತ್ತೆ!

ಯಕ್ಷಿ : ನೀನು? ನೀನಿನ್ನೂ ಇಲ್ಲೇ ಇದ್ದೀಯಾ?

ನಾಯಿ : ಅದೃಷ್ಟ ಚೆನ್ನಾಗಿದೆ. ನಿಶ್ಯಬ್ದತೆಗೆ ಮರುಳುವುದಕ್ಕೆ ಮುಂಚೆ ಬಲೆ ಹಾಕಿಕೊಂಡು ಬಿಟ್ಟಿತ್ತು. ನಾನೂ ತಡಮಾಡಿದೆ.

ಬೆಕ್ಕು : ನನ್ನದೂ ಅಷ್ಟೆ. ಈಗೇನಾಗುತ್ತದೆ? ಏನಾದರೂ ಅಪಾಯ ಇದೆಯಾ?

ಯಕ್ಷಿ : ನಾನಂತೂ ಇರೋ ವಿಷಯ ಹೇಳಬೇಕಾಗಿದೆ: ಈ ಮಕ್ಕಳ ಜೊತೆ ಪ್ರಯಾಣ ಹೊರಡುವವರೆಲ್ಲ ಕಡೆಯಲ್ಲಿ ಸಾವನ್ನಪ್ಪುತ್ತಾರೆ.

ಬೆಕ್ಕು ಜೊತೆಗೆ ಹೋಗದವರು ?

ಯಕ್ಷಿ : ಅವರು ಮಿಕ್ಕವರಿಗಿಂತ ಕೆಲವು ನಿಮಿಷಕಾಲ ಹೆಚ್ಚು ಬದುಕಿರುತ್ತಾರೆ.

ಬೆಕ್ಕು : (ನಾಯಿಗೆ) ಬಾ, ನಾವು ಬಲೆಯೊಳಕ್ಕೆ ಹೋಗಿ ಸೇರಿಕೊಳ್ಳೋಣ.

ನಾಯಿ : ಇಲ್ಲ ! ಇಲ್ಲ ! ನಾನು ಬರಲ್ಲ ! ನಾನು ನನ್ನ ಪುಟ್ಟ ದೇವತೆ ಜೊತೆ ಹೋಗುತ್ತೇನೆ. ನಾನು ಯಾವಾಗಲೂ ಅವನ ಜೊತೆ ಮಾತಾಡುತ್ತಿರಬೇಕು.

ಬೆಕ್ಕು : ಈಡಿಯಟ್!

ಬಾಗಿಲು ಬಡಿಯುವುದು ಹೆಚ್ಚಾಗುತ್ತದೆ

ಬ್ರೆಡ್ : (ಕಣ್ಣೀರು ಸುರಿಸುತ್ತಾ) ಪ್ರಯಾಣದ ಕಡೆಯಲ್ಲಿ ಸಾಯುವುದು ನನಗಿಷ್ಟವಿಲ್ಲ. ನಾನು ನನ್ನ ಪಾತ್ರೆಯೊಳಕ್ಕೆ ಹೋಗಿ ಸೇರಿಕೊಳ್ಳಬೇಕು. ಈಗಲೇ!

ಬೆಂಕಿ : (ಬೆದರಿ ಬುಸ್‌ಬುಸ್ ಎಂದು ಒಂದೇ ಸಮ ಕೋಣೆಯ ತುಂಬಾ ಓಡಾಡಿಕೊಂಡಿದ್ದು) ನನ್ನ ಹೊಗೆಗೂಡೇ ಸಿಗುತ್ತಿಲ್ಲ !

ನೀರು : (ನಲ್ಲಿಯೊಳಗೆ ಸೇರಿಕೊಳ್ಳುವ ವ್ಯರ್ಥ ಪ್ರಯತ್ನ ಮಾಡುತ್ತಾ) ನಾನು ನಲ್ಲಿಯೊಳಕ್ಕೆ ಹೋಗಲಾರೆ !

ಸಕ್ಕರೆ : (ಕಾಗದದ ಪೊಟ್ಟಣದ ಸುತ್ತ ಹಾರಾಡುತ್ತಾ) ನನ್ನ ಪೊಟ್ಟಣದ ಕಾಗದವನ್ನು ನಾನೇ ಹರಿದು ಹಾಕಿ ಬಿಟ್ಟಿದ್ದೆ !

ಹಾಲು : (ಹಾಲು ಹಾಳಾಗಿ ಸೋರುತ್ತಾ, ನಾಚುತ್ತಾ) ನನ್ನ ಪುಟ್ಟ ಪಾತ್ರೆಯನ್ನ ಯಾರೋ ಒಡೆದು ಹಾಕಿದ್ದಾರೆ !

ಯಕ್ಷಿ : ಅಯ್ಯೋ ದೇವರೆ, ಎಂಥ ಮೂರ್ಖರು ಇವರೆಲ್ಲ! ಮೂರ್ಖರು, ಹೇಡಿಗಳೂ ಸಹ ! ಅಂದ್ರೆ, ನಿಮ್ಮ ಅಸಹ್ಯಕರ ಡಬ್ಬಗಳೊಳಗೆ, ನಲ್ಲಿ, ಬಲೆಗಳೊಳಗೆ ಬಂಧಿಯಾಗಿ ಇರುವುದೇ ನಿಮಗೆ ಇಷ್ಟವೆ?.... ಈ ಮಕ್ಕಳ ಜೊತೆ ಹೋಗಿ ನೀಲಿಹಕ್ಕಿ ಹುಡುಕುವುದಕ್ಕೆ ಸಿದ್ಧರಿಲ್ಲವೆ?

ಎಲ್ಲರೂ: (ನಾಯಿ ಮತ್ತು ಬೆಕ್ಕು ಬಿಟ್ಟು) ಹೌದು, ಹೌದು. ಈಗಲೇ ! ನನ್ನ ನಲ್ಲಿ! ನನ್ನ ಪಾತ್ರೆ ! ನನ್ನ ಹೊಗೆಗೂಡು ! ನನ್ನ ಬಲೆ!.....

ಯಕ್ಷಿ : (ತನ್ನ ಒಡೆದ ದೀಪವನ್ನು ನೋಡುತ್ತಿದ್ದ ಬೆಳಕಿಗೆ) ನೀನು, ಬೆಳಕೇ, ನೀನು ಏನು ಹೇಳುತ್ತೀಯ?

ಬೆಳಕು : ನಾನು ಮಕ್ಕಳ ಜೊತೆ ಹೋಗುತ್ತೇನೆ.

ನಾಯಿ : (ಖುಷಿಯಿಂದ ಕೂಗುತ್ತಾ) ನಾನೂ! ನಾನೂ!

ಯಕ್ಷಿ : ಒಳ್ಳೆಯ ಆಯ್ಕೆ. ಅಲ್ಲದೆ ವಾಪಸ್ಸು ಹೋಗಲು ಕಾಲ ಮಿಂಚಿದೆ. ನಿಮಗೆ ಇನ್ನು ಅನ್ಯ ಮಾರ್ಗವಿಲ್ಲ, ನಮ್ಮ ಜೊತೆ ಹೊರಡಲೇ ಬೇಕು. ಆದರೆ ನೀನು, ಬೆಂಕಿ, ನೀನಂತೂ ಯಾರ ಹತ್ತಿರಕ್ಕೂ ಬರಬಾರದು. ನೀನು, ನಾಯಿ, ಆ ಬೆಕ್ಕನ್ನು ಅಣಕಿಸಬಾರದು; ನೀನು ನೀರೇ, ನಿನ್ನನ್ನು ನೀನೇ ಹಿಡಿತದಲ್ಲಿಟ್ಟುಕೊ, ಎಲ್ಲ ಕಡೆ ಹರಿದಾಡಬೇಡ.

ಬಾಗಿಲ ಬಡಿತ ಜೋರಾಗುತ್ತದೆ

ಟಿಲ್ಟಿಲ್ : (ಕೇಳಿಸಿಕೊಂಡು) ಮತ್ತೆ ಬಂದರು ಅಪ್ಪ ! ಏಳುತ್ತಿದ್ದಾರೆ... ಹೆಜ್ಜೆ ಸಪ್ಪಳ ಕೇಳಿಸುತ್ತಿದೆ.

ಯಕ್ಷಿ : ಕಿಟಕಿಯಾಸಿ ಹೋಗಿ ಬಿಡೋಣ ಬನ್ನಿ. ಮೊದಲು ನೀವೆಲ್ಲ ನಮ್ಮ ಮನೆಗೆ ಬರಬೇಕು. ಅಲ್ಲಿ ನಾನು ಎಲ್ಲ ಪ್ರಾಣಿಗಳಿಗೆ, ಎಲ್ಲ ವಸ್ತುಗಳಿಗೆ ಸರಿಯಾಗಿ ಸಿಂಗಾರ ಮಾಡುತ್ತೇನೆ. (ಬ್ರೆಡ್ಡಿಗೆ) ನೀನು, ಬ್ರೆಡ್, ನೀಲಿಹಕ್ಕಿಯನ್ನು ಹಿಡಿದುಕೊಳ್ಳಲು ಆ ಪಂಜರವನ್ನ ತೆಗೆದುಕೊಂಡು ಬಾ. ಅದು ನಿನ್ನ ಜವಾಬ್ದಾರಿ. ಬೇಗ, ಬೇಗ. ಕಾಲ ಹರಣ ಮಾಡೋದು ಬೇಡ.

ಕಿಟಕಿ ತಾನಾಗೆ ಕೆಳಕ್ಕೆ ಇಳಿದು, ಬಾಗಿಲ ಹಾಗಾಗುತ್ತದೆ. ಎಲ್ಲ ಆಚೆ ಹೋಗುತ್ತಾರೆ. ಕಿಟಕಿ ಮತ್ತೆ ಮೊದಲಿನಂತಾಗುತ್ತದೆ. ಕೋಣೆ ಮತ್ತೆ ಮೊದಲಿನಂತೆ ಕತ್ತಲಾಗುತ್ತದೆ; ಎರಡೂ ಮಂಚಗಳು ಕತ್ತಲಲ್ಲಿ ಮುಳುಗುತ್ತವೆ. ಬಲಬಾಗಿಲು ದೊಡ್ಡದಾಗಿ ತೆರೆಯುತ್ತದೆ, ಅಪ್ಪಟಿಲ್ ಮತ್ತು ಅಮ್ಮಟಿಲ್‌ರ ಮುಖಗಳು ಕಾಣುತ್ತವೆ

ಅಪ್ಪಟಿಲ್: ಏನಿಲ್ಲ. ಜೀರುಜಂಬೆ ಗುಂಯ್‌ಗುಡುತ್ತಿದೆ, ಅಷ್ಟೆ.

ಅಮ್ಮಟಿಲ್: ಅವರಿಬ್ಬರು ಕಾಣಿಸ್ತರಾ?

ಅಪ್ಪಟಿಲ್: ಹೂಂ. ಸುಮ್ಮನೆ ಮಲಗಿದ್ದಾರೆ.

ಅಮ್ಮಟಿಲ್: ಹೌದು, ಅವರ ಉಸಿರಾಟ ಕೇಳಿಸುತ್ತಿದೆ.

ಬಾಗಿಲು ಮುಚ್ಚಿಕೊಳ್ಳುತ್ತದೆ

-ಪರದೆ-

ಮಕ್ಕಳು 'ರಾತ್ರಿಲೋಕ' 'ನೆನಪಿನ ಲೋಕ' ಮುಂತಾದ ಲೋಕಗಳಿಗೆ ನೀಲಿಹಕ್ಕಿ ಹುಡುಕುತ್ತಾ ಹೋಗುತ್ತಾರೆ. 'ನೆನಪಿನ ಲೋಕ'ದಲ್ಲಿ ಕೆಲವು ನೀಲಿ ಹಕ್ಕಿಗಳನ್ನು ಹಿಡಿಯುವಲ್ಲಿ ಸಫಲರಾದರೂ, ಅವನ್ನು ಅಲ್ಲಿಂದ ಆಚೆ ತರುವಷ್ಟರಲ್ಲಿ ಅವು ಸತ್ತು ಹೋಗಿರುತ್ತವೆ ; 'ರಾತ್ರಿಲೋಕ'ದಲ್ಲಿ ಹಿಡಿದು ಆಚೆ ತರುವಷ್ಟರಲ್ಲಿ ಅವು ನೀಲಿ ಬಣ್ಣ ಕಳೆದುಕೊಂಡು ಬಿಟ್ಟಿರುತ್ತವೆ. ನೀಲಿ ಹಕ್ಕಿ ಎಲ್ಲಿಯೂ ದಕ್ಕುವುದಿಲ್ಲ.

ಯಾತ್ರೆ ಮುಗಿಸಿ ರಾತ್ರಿ ಮಲಗಿದ್ದ ಮನೆಗೆ ತಂಡ ವಾಪಸ್ಸಾಗುತ್ತದೆ. ಬೆಳಕು, ಹೊತ್ತಾಯಿತೆಂದು ಆಚೆ ಹೋಗಿಬಿಡುತ್ತದೆ. ನಾಯಿ, ಬೆಕ್ಕು, ಸಕ್ಕರೆಗಳೂ ಮೊದಲಿನಂತಾಗುತ್ತವೆ. ಮೊದಲು ಕೋಣೆಯ ಪಂಜರದಲ್ಲಿದ್ದ ಹಕ್ಕಿಯೇ ನೀಲಿಹಕ್ಕಿಯಾಗುತ್ತದೆ. ತಾಯಿ ಬಂದು ಮಧ್ಯಾಹ್ನವಾದರೂ ಮಕ್ಕಳು ಎದ್ದಿಲ್ಲವೆಂದು ಏಳಿಸುತ್ತಿದ್ದರೆ, ಒಂದು ವರ್ಷದ ಯಾತ್ರೆಯ ನಂತರ ತಾವು ಮನೆಗೆ ಮರಳಿದ್ದಾಗಿ ಮಕ್ಕಳು ಹೇಳುತ್ತಾರೆ. ಪಕ್ಕದ ಮನೆಯ ಆಟದ ಜೊತೆಗಾತಿಗೆ ಆ ನೀಲಿಹಕ್ಕಿ ಬೇಕೆಂದು ಪಕ್ಕದ ಮನೆಯಾಕೆ ಬಂದು ಅಂಗಲಾಚುತ್ತಾಳೆ. ಇಷ್ಟು ದಿನ ಹಕ್ಕಿಯನ್ನು ಕೊಡದ ಟಿಲ್ಟಿಲ್, ಮೈಟಿಲ್ ಸಂತೋಷವಾಗಿ ಆ ನೀಲಿಹಕ್ಕಿಯನ್ನು ಕೊಟ್ಟುಬಿಡುತ್ತಾರೆ. ಹುಷಾರು ತಪ್ಪಿದ್ದ ಹುಡುಗಿ ತಕ್ಷಣ ಚೇತರಿಸಿಕೊಳ್ಳುತ್ತಾಳೆ. ಆಮೇಲೆ, ಒಂದಿಷ್ಟು ಅಜಾಗರೂಕತೆಯಿಂದಾಗಿ ನೀಲಿಹಕ್ಕಿ ಹುಡುಗಿ ಮತ್ತು ಟಿಲ್ಟಿಲ್ ಕೈಯಿಂದ ತಪ್ಪಿಸಿಕೊಂಡು ಕಿಟಕಿಯಾಚೆ ಹಾರಿಹೋಗಿ ಬಿಡುತ್ತದೆ.

'ನೀಲಿಹಕ್ಕಿ' ಅತ್ಯಂತ ತಾತ್ವಿಕ ವಿಚಾರಗಳನ್ನು, ಸೂಕ್ಷ್ಮ ವಿಚಾರಗಳನ್ನು ನಾಟಕದ ಸ್ವರೂಪದಲ್ಲಿ ಅತಿ ಕಡಿಮೆ ಕ್ಲಿಷ್ಟತೆಯೊಂದಿಗೆ ಹೇಳಿಬಿಡುತ್ತದೆ ಎನ್ನಬೇಕು. ಯಾವ ಒಂದು ವಿಚಾರದ ಅಭಿವ್ಯಕ್ತಿಗೆ ಬೇರೆ ಮಾರ್ಗ, ಬೇರೆ ರೂಪಗಳನ್ನು ಬಳಸಿದ್ದರೆ ಪುಟಗಟ್ಟಲೆ ಸಾಹಿತ್ಯ ರಚಿಸಬೇಕಾಗುತ್ತಿತ್ತೋ ಅದನ್ನು ಅನುಭವದ ಮೂಲಕ ರೂಪ ಕೊಟ್ಟು, ಸ್ವಾಲ್ಕಾರು ಸಂಭಾಷಣೆಗಳ ಮೂಲಕ ತಿಳಿಸಿಬಿಡುತ್ತಾನೆ ಮೇತರ್‌ಲಿಂಕ್. ವಿಲಿಯಂ ಬ್ಲೇಕ್ ಕವಿಯ ಸರಳವಾದರೂ ನಿಗೂಢವಾದ 'ಸಾಂಗ್ಸ್ ಆಫ್ ಇನಸೆನ್ಸ್'ಗಳಂತೆ; ಮೇತರ್‌ಲಿಂಕ್‌ನ 'ನೀಲಿಹಕ್ಕಿ'ಯ ಮಕ್ಕಳು ಸತ್ಯವನ್ನು ಸ್ಪಷ್ಟವಾಗಿ, ನೇರವಾಗಿ ನೋಡಬಲ್ಲರು. ಬಹುಶಃ ದೊಡ್ಡವರ ಸಾಂಕೇತಿಕ ಭಾಷೆಯಲ್ಲಿ 'ನೀಲಿಹಕ್ಕಿ' ಎಂದು ಅದನ್ನ ಕರೆಯಬಹುದೇನೋ. ಹಾಗೇ, ನೆನಪಿನ ಲೋಕ ಎನ್ನುವುದು ದೊಡ್ಡವರಿಗೆ ಕಲ್ಪನೆಯಲ್ಲಿದ್ದರೆ ಅಥವಾ ಸಾಂಕೇತಿಕ ಅರ್ಥವುಳ್ಳ ಲೋಕವಾದರೆ, ಈ ಮಕ್ಕಳಿಗೆ ನಿಜವಾಗಿಯೂ ಒಂದು ಲೋಕವೇ. ಅಲ್ಲಿ ಅವರ ಸತ್ತ ತಮ್ಮ-ತಂಗಿಯರು,

ತಾತ-ಅಜ್ಜಿಯರನ್ನು ಭೇಟಿ ಮಾಡುತ್ತಾರೆ. ಗಹನವಾದ ವಿಚಾರಗಳನ್ನು ಸರಳವಾಗಿ ತಿಳಿದು ಕೊಳ್ಳುತ್ತಾರೆ:-

ನೆನಪಿನ ಲೋಕದ ಹಾದಿಯಲ್ಲಿ

ಯಕ್ಷಿ *ಬನ್ನಿ ಮಕ್ಕಳೆ, ಜಾಸ್ತಿ ಸಕ್ಕರೆ ತಿನ್ನಬೇಡಿ. ನೀವು ಸಧ್ಯದಲ್ಲೇ ತಾತ-ಅಜ್ಜಿಯರ ಜೊತೆ ಊಟ ಮಾಡಬೇಕಿದೆ ಅನ್ನೋದನ್ನ ಮರೀಬೇಡಿ.*

ಟಿಲ್ಪಿಲ್ : *ಅವರು ಇಲ್ಲಿದ್ದಾರಾ?*

ಯಕ್ಷಿ : *ಸಧ್ಯದಲ್ಲೇ ಅವರನ್ನ ನೋಡುತ್ತೀರಿ.*

ಟಿಲ್ಪಿಲ್ : *ಅವರು ಸತ್ತಿದ್ದಾರೆ, ನೋಡಕ್ಕೆ ಹೇಗೆ ಸಾಧ್ಯ?*

ಯಕ್ಷಿ *ಅವರು ನಿಮ್ಮ ನೆನಪಿನಲ್ಲಿ ಬದುಕಿರುವಾಗ ಸಾಯಲು ಹೇಗೆ ಸಾಧ್ಯ? ಮನುಷ್ಯರಿಗೆ ಈ ರಹಸ್ಯ ಗೊತ್ತೇ ಇಲ್ಲ. ಯಾಕಂದ್ರೆ ಅವರಿಗೆ ಗೊತ್ತಿರೋದು ಬಹಳ ಕಡಿಮೆ ವಿಚಾರಗಳು. ಆದರೆ ನೀವಿಬ್ಬರೂ ವಜ್ರದ ಸಹಾಯದಿಂದ ನೋಡಬಲ್ಲಿರಿ; ನೆನಪಿನಲ್ಲಿ ಉಳಿದಿರುವ ಸತ್ತವರು ಸತ್ತೇ ಇಲ್ಲವೆನ್ನುವ ಹಾಗೆ ಸಂತೋಷವಾಗಿ ಬದುಕಿರುತ್ತಾರೆ.*

ಟಿಲ್ಪಿಲ್ : *ಬೆಳಕು ನಮ್ಮ ಜೊತೆ ಬರುತ್ತಾಳಾ?*

ಯಕ್ಷಿ *ಇಲ್ಲ, ಈ ಭೇಟಿ ನಿಮ್ಮ ಕುಟುಂಬಕ್ಕೆ ಮಾತ್ರ ಸೀಮಿತವಾಗಿದ್ದರೆ ಚೆನ್ನ....*

ನೆನಪಿನ ಲೋಕದಲ್ಲಿ.....

ಟಿಲ್ಪಿಲ್ : *ಹಾಗಾದರೆ ನೀವು ಸತ್ತಿಲ್ಲವೆ?*

ತಾತಟಿಲ್: *(ಬೆಚ್ಚಿ) ಏನಂದೆ? ಏನು ಹೇಳುತ್ತಿದ್ದಾನೆ ಇವನು? ನಮಗೆ ಅರ್ಥವೇ ಆಗದ ಪದಗಳನ್ನ ಬಳಸುತ್ತಿದ್ದಾನಲ್ಲ. ಹೊಸಾ ಪದನಾ ಅದು, ಹೊಸದಾಗಿ ಕಂಡು ಹಿಡಿದಿದ್ದಾರಾ ಆ ಪದವನ್ನ?*

ಟಿಲ್ಪಿಲ್ : *'ಸಾಯೋದು' ಅನ್ನೋ ಪದವನ್ನಾ?*

ತಾತಟಿಲ್: *ಹೌದು, ಅದೇ ಪದ. ಏನು ಅದರ ಅರ್ಥ?*

ಟಿಲ್ಪಿಲ್ : *ಅಂದ್ರೆ, ಬದುಕಿಲ್ಲದಿರೋದೂಂತ.*

ತಾತಟಿಲ್: ಆ ಮೇಲಿನ ಜನ ಎಷ್ಟು ಮೂರ್ಖರಪ್ಪ!

ಟಿಲ್ಟಿಲ್ : ಇಲ್ಲಿ ಎಲ್ಲಾ ಚೆನ್ನಾಗಿದ್ಯಾ?

ತಾತಟಿಲ್: ಓಹೋ, ಪರವಾಗಿಲ್ಲ, ಪರವಾಗಿಲ್ಲ.... ಜನ ನಮಗಾಗಿ ಇನ್ನೂ ಪ್ರಾರ್ಥನೆ ಮಾಡುತ್ತಿದ್ದರೆ ಪರವಾಗಿಲ್ಲ.

ಟಿಲ್ಟಿಲ್ : ಪ್ರಾರ್ಥನೆ ಮಾಡೋದನ್ನ ನಿಲ್ಲಿಸು ಅಂತ ಅಪ್ಪ ನನಗೆ ಹೇಳಿದ್ರು.

ತಾತಟಿಲ್: ಮೂರ್ಖತನ! ಪ್ರಾರ್ಥನೆ ಮಾಡೋದೂಂದ್ರೆ ನೆನಪು ಮಾಡಿಕೊಳ್ಳೋದು

ಅಜ್ಜಿಟಿಲ್: ಹೌದು, ನೀವು ಆವಾಗವಾಗ ಬಂದು ನಮ್ಮನ್ನ ನೋಡ್ತಾ ಇದ್ರೆ, ಇಲ್ಲಿ ಎಲ್ಲ ಚೆನ್ನಾಗಿರುತ್ತೆ. ಟಿಲ್ಟಿಲ್, ನೆನಪಿದ್ಯಾ ? ಹೋದ ಸಲ ನಿನಗೆ ಸೇಬಿನ ಕಡುಬು ಮಾಡಿಕೊಟ್ಟಿದ್ದೆ. ನೀನು ಹೊಟ್ಟೆ ಕೆಡುವವರೆಗೂ ತಿನ್ನುತ್ತಲೇ ಇದ್ದೆ.

ಟಿಲ್ಟಿಲ್ : ಹೋದವರ್ಷದಿಂದ ನಾನಂತೂ ಸೇಬಿನ ಕಡುಬನ್ನೇ ತಿಂದಿಲ್ಲ. ಈ ವರ್ಷ ಸೇಬು ಬರಲೇ ಇಲ್ಲ.

ಅಜ್ಜಿಟಿಲ್: ಮೂರ್ಖ, ಇಲ್ಲಿ ಯಾವಾಗಲೂ ಸೇಬು ಸಿಕ್ಕುತ್ತದೆ.

ಟಿಲ್ಟಿಲ್ : ಅದು ಬೇರೆ ವಿಷಯ.

ಅಜ್ಜಿಟಿಲ್: ಏನು? ಬೇರೆ ವಿಷಯ ಅಂದಾ? ನಾವು ನಿಮಗೆ ಮುದ್ದು ಮಾಡಿಕೊಂಡಿರೋದು ಸಾಧ್ಯವಾಗಿರುವ ತನಕ ಯಾವುದೂ ಬೇರೆ ವಿಷಯವಾಗೊಲ್ಲ.

** ** **

'ಪೆಲಿಯಸ್ ಎತ್ ಮೆಲಿಸಾಂದೆ' ಮತ್ತು 'ಅಗ್ಲವಯಿನೆ ಎತ್ ಸೆಲಿಸೆತ್ತೆ' ಇವು ಮತ್ತೊಂದು ಗುಂಪಿಗೆ ಸೇರುವ ನಾಟಕಗಳು. ಮೆಲಿಸಾಂದೆ ಮತ್ತು ಸೆಲಿಸೆತ್ತೆ ಇವರಿಬ್ಬರೂ ಕಿನ್ನರ ಲೋಕದ ಸುಂದರಿಯರು. ಎಲ್ಲಿಂದ ಬರುತ್ತಾರೆ, ಯಾಕೆ ಹಾಗೆ ಸಾಯುತ್ತಾರೆ- ಇವುಗಳಿಗೆ ಉತ್ತರವಿಲ್ಲ. ಅಲೌಕಿಕ ವಾತಾವರಣ, ಕಾವ್ಯಮಯ ಭಾಷಾ ಪ್ರಯೋಗಗಳಿಂದಾಗಿ ಇವು ಹೆಚ್ಚು ನೃತ್ಯನಾಟಕ (ಆಪೆರಾ)ವಾಗಿ ಕಾಣುವುದು. ಎರಡೂ ಮಧ್ಯಯುಗದ ಸಂದರ್ಭಗಳಲ್ಲಿ ಮೂಡಿವೆ. ಎರಡೂ ಬೇರೆಬೇರೆ ರೀತಿಯ ಪ್ರೇಮ ತ್ರಿಕೋನ ಕತೆಯನ್ನು ಒಳಗೊಂಡಿವೆ.

ಮೆಲಿಸಾಂದೆ ಒಂದು ಕಾಡಿನಲ್ಲಿ ನೀರಿನ ಬುಗ್ಗೆಯ ಬಳಿ ಗೊಲಾಂದ್‌ನನ್ನು ಮೊದಲು ಭೇಟಿಯಾಗುತ್ತಾಳೆ. ಮದುವೆಯಾದ ಮೇಲೆ ಅವನ ಮಲ ತಮ್ಮ ಪೆಲಿಯಸ್ ಮತ್ತು ಮೆಲಿಸಾಂದೆ ಅತಿ ಸಲುಗೆಯಿಂದಿರತೊಡಗುತ್ತಾರೆ. ಅವಳ ಮದುವೆಯ ಗುರುತಿನ ಉಂಗುರ ಕಳೆದು ಹೋಗಿ, ಗೊಲಾಂದ್‌ನ ಸಿಟ್ಟಿಗೆ ಪಾತ್ರಳಾಗುತ್ತಾಳೆ. ಆದರೂ ಪೆಲಿಯಾಸ್ ಜೊತೆಗಿನ ಅನ್ಯೋನತೆ ಮುಂದುವರಿಯುತ್ತದೆ. ಒಂದು ರಾತ್ರಿ ಇಬ್ಬರೂ ಗೊಲಾಂದ್‌ನ ಕೈಗೆ ಸಿಕ್ಕಿಬೀಳುತ್ತಾರೆ. ಪೆಲಿಯಾಸ್ ಅಣ್ಣನಿಂದ ಹತನಾಗುತ್ತಾನೆ. ಮೆಲಿಸಾಂದೆ ಜರ್ಜರಿತಳಾಗಿ, ಹೆಣ್ಣು ಮಗುವೊಂದಕ್ಕೆ ಸಮಯಕ್ಕೆ ಮುಂಚೆ ಜನ್ಮ ನೀಡುತ್ತಾಳೆ. ತಪ್ಪನ್ನು ಒಪ್ಪಿಕೊಂಡಾಳು ಎಂದು ಗೊಲಾಂದ್ ಉತ್ಸುಕನಾಗಿದ್ದರೂ, ದುಃಖಿ ಮೆಲಿಸಾಂದೆ ತಾನು ಪಾಪಿಯಲ್ಲವೆಂದೇ ಹೇಳಿ, ದುಃಖದಿಂದಲೇ ಅಸುನೀಗುತ್ತಾಳೆ. ವೈದ್ಯರು ಹೇಳುವಂತೆ, ''ಅವಳು ಹುಟ್ಟಿದ್ದೂ ಕಾರಣವಿಲ್ಲದೆ, ಸತ್ತಿದ್ದೂ ಕಾರಣವಿಲ್ಲದೆ''

'ಅಗ್ಲವಯಿನೆ ಎತ್ ಸೆಲಿಸೆತ್ತೆ' ಯಲ್ಲಿ ಇವೇ ಭಾವಸ್ಪರ್ಶಿ ದೃಶ್ಯಗಳು ಮೂಡಿ ಬರುತ್ತವೆ. ಅದೂ ಇನ್ನೂ ಹೆಚ್ಚು ಗಾಢವಾಗಿ. ಸೆಲಿಸತ್ತೆ ಮತ್ತು ಮೆಲಿಯಾಂದರ್‌ನ ಪ್ರೇಮಲೋಕಕ್ಕೆ ಅಗ್ಲವೆಯಿನೆ ಪ್ರವೇಶ ಮಾಡುತ್ತಾಳೆ. ಮೊದಲು ಹೆಣ್ಣುಗಳ ಮಧ್ಯ ಅಸೂಯೆ ಉಂಟಾದರೂ, ಬರಬರುತ್ತಾ ಮೂವರೂ ಅನ್ಯೋನ್ಯ ಪ್ರೇಮಿಗಳಾಗುತ್ತಾರೆ. ಸೆಲಿಸೆತ್ತೆ ವಿವರಿಸಲಾಗದ ರೀತಿಯಲ್ಲಿ ಸಾವಿನ ದವಡೆಗೆ ಸಿಕ್ಕಿ ಬೀಳುತ್ತಾಳೆ. ತಾನೇ ಸಾವಿಗೆ ಪ್ರಯತ್ನಪಟ್ಟು ಅಗ್ಲವಯಿನೆ-ಮೆಲಿಯಾಂದರ್‌ರನ್ನು ಒಂದು ಮಾಡಲು ಬಯಸುತ್ತಿದ್ದಾಳೆಂದು ಇವರಿಬ್ಬರ ಭಾವನೆ. ಆದರೆ ಸೆಲಿಸೆತ್ತೆ ಸಾಯುತ್ತಾ ಇದ್ದಾಗ ಸುಳ್ಳು ನುಡಿಯುವುದಿಲ್ಲವೆಂದೇ ಹೇಳುತ್ತಾ, ಆದ ಅಪಘಾತಕ್ಕೆ ತಾನು ಹೊಣೆಯಲ್ಲವೆಂದೇ ಹೇಳಿ ಸಾಯುತ್ತಾಳೆ.

ಸತ್ಯ ನಿಗೂಢವಾದ್ದು, ಕೈಗೆ ಸಿಗದಂಥದ್ದು, ಸೂಕ್ಷ್ಮತರವಾದ್ದು; ಅದನ್ನು ವಿವರಿಸಲೂ ಬಾರದು ಎಂಬಂತಿದೆ. ಇವೆರಡೂ 'ನೀಲಿಹಕ್ಕಿ' 'ಲಗ್ನನಿಶ್ಚಯ' ನಾಟಕಗಳ ಮುಂದಿನ ಹಂತದ ಕೃತಿಗಳು ಎನ್ನಬಹುದು.

** ** **

ಷೇಕ್ಸ್‌ಪಿಯರ್‌ನ ನಾಟಕಗಳ ವಿಶೇಷತೆಗಳಲ್ಲಿ ಒಂದು, ಅವುಗಳ ಪ್ಲಾಟ್ ರಚನೆ. ದುರಂತ ನಾಟಕಗಳಲ್ಲಿ ಅವುಗಳ ಗಾಂಭೀರ್ಯತೆಗೆ ತಕ್ಕನಾದ ಪ್ಲಾಟ್‌ಗಳಿದ್ದರೆ, ನಗೆ

ನಾಟಕಗಳಲ್ಲಿ ಅವುಗಳಿಗೆ ತಕ್ಕನಾದ ಹಗುರವೆನಿಸುವ 'ಪ್ಲಾಟ್'ಗಳಿರುತ್ತವೆ. ಷೇಕ್ಸ್‌ಪಿಯರನ ನಾಟಕಗಳಲ್ಲಿ 'ಪ್ಲಾಟ್' ಅವಿಭಾಜ್ಯವಾದಷ್ಟೇ ಕುತೂಹಲಕಾರಿಯೂ, ಅಭ್ಯಾಸಯೋಗ್ಯವೂ ಆಗಿದೆ. ಮುಂದೆ, 'ಪ್ಲಾಟ್'ಗಳಿಲ್ಲದ ನಾಟಕ ರಚನೆ ಸಾಧ್ಯವಾಗದೇನೋ ಅನ್ನುವ ಕಾಲ ಒಂದಿತ್ತು. ಇವುಗಳಲ್ಲಿ ನಾಟಕಕಾರ, ಇಂದಿನ ಚಿತ್ರ ಕಥೆಗಾರರ ಥರ, 'ಪ್ಲಾಟ್' ಅನ್ನು ಮೊದಲೇ ಹೆಣೆದು ಕೊಳ್ಳಬೇಕಿತ್ತೇನೋ. ಆದರೆ, 'ಪ್ಲಾಟ್'ಗಳೇ ಮುಖ್ಯವಾಗಿಬಿಟ್ಟರೆ, ಮೂಗಿಗಿಂತ ಮೂಗುತಿ ಭಾರವಾಗಿಬಿಡುತ್ತದೆ.

ಮೇತರ್‌ಲಿಂಕ್‌ನ ವಿಶೇಷತೆ ಮತ್ತೆ ಕಾಣುವುದು ಅವನ ನಾಟಕಗಳಲ್ಲಿ ಪ್ಲಾಟ್‌ಗಳೇ ಇಲ್ಲದಿರುವುದರಲ್ಲಿ; ಕಥಾವಸ್ತುವಿನ ಜೊತೆ ಕತೆಯ ಸೂಕ್ಷ್ಮ ಎಳೆಯೊಂದಿರುತ್ತದೆ. ಅವೂ ಇರಬೇಕು, ಅವಶ್ಯಕ ಅನ್ನುವ ಕಾರಣದಿಂದಲ್ಲ, ಬದಲಾಗಿ ಲೇಖಕನ ಅಭಿವ್ಯಕ್ತಿ ಕ್ರಿಯೆಯಲ್ಲಿ ಅವು ಮಾಧ್ಯಮ ಅಷ್ಟೆ. ಹಾಗಾಗಿ 'ಮರಿಯೆ ಮಗ್ದಲೀನೆ', 'ಮೊನ್ನವನ್ನಾ'ಗಳಲ್ಲಿ ಕಾಣಬಹುದಾದ ಸೂಕ್ಷ್ಮವಾದ ಪ್ಲಾಟ್ ಇರುವಂತೆ, 'ಆರ್ದಿಯನೆ....' ನಾಟಕದಲ್ಲಿ ಜಾನಪದ ಕಥೆಯೇ ಬೆನ್ನೆಲುಬಿನಂತೆ ಇದೆ. 'ಸಿಸ್ಟರ್ ಬೀಟ್ರಿಸ್' ಯೂರೋಪಿನಲ್ಲಿ ಪ್ರಚಲಿತ ಜಾನಪದ ಕಾವ್ಯ (ಬ್ಯಾಲಡ್) ಆಧರಿಸಿದ್ದರೆ 'ಪೆಲಿಯಾಸ್.....' ದಾಂತೆಯ ಕಥೆಯೊಂದರ ಪುನರ್‌ರಚನೆ. 'ನೀಲಿಹಕ್ಕಿ', 'ಲಗ್ನನಿಶ್ಚಯ'ಗಳಲ್ಲಿ ಕತೆ ಸಹ ಇಲ್ಲದ್ದರಿಂದ, ನಾಟಕವೆನ್ನುವ ಪ್ರಕಾರದ ಪರಿಕರಗಳನ್ನು 'ಅವಶ್ಯ'ವೆನ್ನುವ ಕಾರಣದಿಂದ ಬಳಸಿಕೊಂಡಿಲ್ಲ; ಬದಲಾಗಿ ಆ ಪ್ರಕಾರಕ್ಕೆ ಚ್ಯುತಿಯಾದರೂ ಸರಿ, ತನಗೆ, ತನ್ನ ಆಶಯಕ್ಕೆ ಪೂರಕವಾದ ಯಾವುದೇ ಪರಿಕರಗಳನ್ನು 'ಯಾರು ಏನನ್ನುತ್ತಾರೋ' ಎಂಬ ಯೋಚನೆಯಾಗಲಿ ಭಯವಾಗಲಿ ಇಲ್ಲದೆ ಸಲೀಸಾಗಿ ಬಳಸುತ್ತಾನೆ. ಮೇಲಾಗಿ, 'ನೀಲಿಹಕ್ಕಿ'ಯಲ್ಲಿ ಇಡೀ ನಾಟಕವೇ 'ಮಕ್ಕಳ ಕನಸೊ, ವಾಸ್ತವವೋ?' ಎಂಬಂತಿರುವುದರಿಂದ ಲೇಖಕನ ಸ್ವಾತಂತ್ರ್ಯದ ಪರಿಧಿ ಮತ್ತೂ ಹಿಗ್ಗುತ್ತದೆ.

ಆದ್ದರಿಂದಲೇ ಬಹುಶಃ ಮೇತರ್‌ಲಿಂಕ್‌ನ ನಾಟಕಗಳು - ಅದರಲ್ಲೂ 'ನೀಲಿಹಕ್ಕಿ' ಒಂದೇ ಓದಿಗೆ ದಕ್ಕುವುದಿಲ್ಲ. ಹಲವಾರು ಸಲ ಓದಬೇಕಾಗಬಹುದು. ಹಾಗೆ ನೋಡಿದರೆ ಪದಗಳ ಅಥವಾ ವಿಷಯಗಳ ಕ್ಲಿಷ್ಟತೆ ಆತನ ನಾಟಕಗಳಲ್ಲಿ ಇರುವುದೇ ಇಲ್ಲ. ಅನೇಕ ಸಲ ಮಕ್ಕಳಾಡುವ ಸರಳ ಭಾಷೆ ಬಳಕೆಯಾಗಿರುತ್ತದೆ. ಇವನ ಬಹುಪಾಲು ಸಂಭಾಷಣೆಗಳು ಆಶ್ಚರ್ಯ ಸೂಚಕ ಚಿಹ್ನೆಯಿಂದ ಕೊನೆಗೊಳ್ಳುವುದನ್ನು ನೋಡಿದರೆ ಮೇತರ್‌ಲಿಂಕ್‌ನಿಗೆ ಸುತ್ತಲಿನ ವಸ್ತು ಪ್ರಪಂಚ ಹಾಗೂ ಅಲೌಕಿಕಗಳೆರಡೂ ಮಕ್ಕಳಿಗೆ ಮಾಡುವಂತೆ ಸೋಜಿಗ ಉಂಟು ಮಾಡಿರಬೇಕೆಂದು ತೋರುತ್ತದೆ.

ಮೇತರ್‌ಲಿಂಕ್‌ನ ನಾಟಕಗಳಲ್ಲಿ ಬೆಳಕಿನದರಂತೆ ಮತ್ತೊಂದು ಜವಾಬ್ದಾರಿಯುತ ಪಾತ್ರವೆಂದರೆ 'ಕೀಲಿಕೈ'ದು. 'ಆರ್ದಿಯೆನ್....' ನಲ್ಲಿ ಆರು ಬೆಳ್ಳಿಕೈಗಳು, ಒಂದು ಚಿನ್ನದ ಕೈಯಿನ ವಿಷಯ ಈಗಾಗಲೆ ಹೇಳಿಯಾಗಿದೆ. 'ಸಿಸ್ಟರ್ ಬೀಟ್ರಿಸ್'ನಲ್ಲಿ ಬೀಟ್ರಿಸ್ ಕಾನ್ವೆಂಟು ಬಿಟ್ಟುಹೋಗುವಾಗ ತನ್ನೆಲ್ಲ ಜವಾಬ್ದಾರಿಯನ್ನು ಬಿಟ್ಟು ಹೋಗುವಂತೆ ಕೀಲಿಕೈಯನ್ನು ವರ್ಜಿನ್ ವಿಗ್ರಹದ ಬಳಿ ಬಿಟ್ಟುಹೋಗುತ್ತಾಳೆ. 'ಅಗ್ಲವಯಿನೆ....' ನಾಟಕದಲ್ಲಿ ಕೋಟೆ ಬರುಜಿನ ಕಳೆದು ಹೋದ, ಮತ್ತೆ ಸಿಕ್ಕ ಕೀಲಿಕೈ ಹಾಗೂ ಅದರ ಬದಲಿಗೆ ಮಾಡಿಸಿದ್ದ ವಿಚಿತ್ರ ಕೀಲಿಕೈ ಬಹು ಮುಖ್ಯಪಾತ್ರ. ಅದು ಸೆಲಿಸೆತ್ತೆಯ ಪಾಲಿಗೆ ಸಾವು, ಸಾವಿಂದ ಬಿಡುಗಡೆಯ ಕಡೆ ಕೊಂಡೊಯ್ದು ಕೀಲಿಕೈಯಾದರೆ, ಅಗ್ಲವಯಿನೆ ಪ್ರಕಾರ: ''ಅದು ಏನನ್ನು ತೆರೆಯುತ್ತದೆ ಎಂದು ತಿಳಿಯುವವರೆಗೂ ಕೀಲಿಕೈ ಅತ್ಯಂತ ಸುಂದರ ವಸ್ತು ಆಗಿರುತ್ತದೆ''.

'ಸೌಂದರ್ಯ' ಕೂಡ ಮೇತರ್‌ಲಿಂಕನಲ್ಲಿ ಪ್ರಾಮುಖ್ಯತೆ ಪಡೆಯುತ್ತದೆ. ಮೆಲಿಸಾಂದೆ, ಆರ್ದಿಯೆನ್, ಸೆಲಿಸೆತ್ತೆ, ಅಗ್ಲವಯಿನೆ, ಮರಿಯ ಮಗ್ದಲೀನೆ, ಬಿಯಾತ್ರೀಸೆ, ಯಕ್ಷಿ ಬೆರಿಲ್ಯೂನ್, ಮೊನ್ನಾವನ್ನಾ - ಎಲ್ಲರೂ ನಿಗರ್ವಿ ಸುಂದರಿಯರೇ. ಸೌಂದರ್ಯ ಮೇತರ್‌ಲಿಂಕನಿಗೆ ಅಲೌಕಿಕತೆಯಿಂದ ದೂರವಾದ ವಿಚಾರವಲ್ಲ. ಉಳಿಯುವುದಿಲ್ಲ. ಸೌಂದರ್ಯದ ಜೊತೆ ಪ್ರೀತಿ, ಪ್ರೇಮ, ವಿವೇಚನೆ, ಅಲೌಕಿಕತೆಗಳು ಒಂದಾಗಿರುತ್ತವೆ. ಹೆಣ್ಣು ಪಾತ್ರಗಳೇ ಮುಖ್ಯವಾಗಿರುವ ಇವನ ನಾಟಕಗಳಲ್ಲಿ ಬರುವ ಹೆಣ್ಣು ಪಾತ್ರಗಳು ವಿಕಾರ ವಿಕೃತಗಳ ಹತ್ತಿರವೂ ಸುಳಿಯುವುದಿಲ್ಲ. 'ನೀಲಿಹಕ್ಕಿ' ಮತ್ತು 'ಲಗ್ನನಿಶ್ಚಯ'ದಲ್ಲಿ ಬರುವ ಗೂನಿ ಹಾಗೂ ಬಾಗಿದ ಮೂಗಿನ ಯಕ್ಷಿಯ ನಿಜವಾದ ರೂಪ ಸೌಂದರ್ಯವೇ ಆಗಿರುತ್ತದೆ. 'ಪ್ಲಾಟ್'ಗಳಿಲ್ಲದ ನಾಟಕಗಳಾದ್ದರಿಂದ ಘರ್ಷಣೆ, ಘರ್ಜನೆಗಳಿಲ್ಲದ ಈ ನಾಟಕಗಳು ಸುಕೋಮಲತೆಯ ಸೌಂದರ್ಯದ ಉಪಾಸನೆ ಗಳೆಂದೇ ಹೇಳಬೇಕು.

ಮೇತರ್‌ಲಿಂಕನ ನಾಟಕಗಳಲ್ಲಿ ಬರುವ ಮಕ್ಕಳ ಪಾತ್ರಗಳೂ ಕುತೂಹಲಕಾರಿ. 'ಸಿಸ್ಟರ್ ಬೀಟ್ರಿಸ್'ನಲ್ಲಿ ಅಲೆಟ್ಟೆ ಬರುವ ನಾಟಕ ಭಾಗವನ್ನು ಈಗಾಗಲೇ ಕೊಡಲಾಗಿದೆ. ಅಲ್ಲಿ ಕಾಣುವಂತೆ, ವರ್ಜಿನ್ ವಿಗ್ರಹ ಮನುಷ್ಯರೂಪ ತಾಳಿದಾಗ, ಮಗು ಅಲೆಟ್ಟೆಯ ಕಣ್ಣಿಗೆ ಮಾತ್ರ ಆ ವಿಶಿಷ್ಟತೆ ಕಾಣುತ್ತದೆ. ಮಿಕ್ಕ ಕಾನ್ವೆಂಟ್‌ವಾಸಿಗಳಿಗೆ ಇದು ಪವಾಡದ ಮೂಲಕ ತಿಳಿಯಬೇಕಾಯ್ತು; ಆದರೆ ಅಲೆಟ್ಟೆಗೆ ಬೀಟ್ರಿಸ್ ಆಗಿ ಪರಿವರ್ತಿತಗೊಂಡ ವರ್ಜಿನ್‌ಳ ಮೈಯ್ಯಿ, ಮೇಲಂಗಿಗಳಲ್ಲು ಬೆಳಕೇ ಕಾಣುತ್ತದೆ. 'ಪೆಲಿಯಾಸ್.....' ನಲ್ಲಿ

ಪೆಲಿಯಾಸ್ ಮತ್ತು ಮೆಲಿಸಾಂದೆಯರ ನಿಗೂಢ ಸಂಬಂಧದ ಬಗ್ಗೆ ಮೆಲಿಸಾಂದೆಯ ಗಂಡ ತಿಳಿಯ ಬಯಸಿ ತನ್ನ ಪುಟ್ಟ ಮಗ ವಿನಿಯೋಲ್ಡ್‌ನನ್ನು ಬಹುವಾಗಿ ಪ್ರಶ್ನಿಸುತ್ತಾನೆ. ಪ್ರಯೋಜನವಾಗದು. ಮೆಲಿಸಾಂದೆ ಕಿನ್ನರಿಯಂಥವಳು, ಸತ್ಯವನ್ನು ಬಿಟ್ಟುಕೊಡದೇ ಅಸುನೀಗುತ್ತಾಳೆ. ಸತ್ಯ ತಿಳಿದಿದ್ದರೆ, ಅದು ಆ ಮಗುವಿಗೆ ಮಾತ್ರ. ಆದರೆ ಮಗು ನಿಸರ್ಗದಷ್ಟೇ ನಿಗೂಢ. ಇದೇ ರೀತಿ ಸೆಲಿಸೆತ್ತೆ ಕೋಟೆ ಬುರುಜಿನಿಂದ ಸಾವಿಗೆ ತುತ್ತಾಗುವ ವಿಚಾರ ಕುರಿತು ಅವಳ ಪುಟ್ಟ ತಂಗಿ ಯೆಸ್ಸಾಲಿನೆಗೆ ಮಾತ್ರ ಕೆಲ ವಿಚಾರಗಳು ಗೊತ್ತು. ಇನ್ನು 'ನೀಲಿಹಕ್ಕಿ' ಯ ಮಕ್ಕಳು ವಸ್ತುಗಳ ಆತ್ಮಗಳನ್ನು ಕಾಣಬಲ್ಲ ನೇರ ಸತ್ಯಾನ್ವೇಷಿಗಳೇ ಆಗಿರುವರು.

ಇನ್ನು ಉಳಿದವರು ಗಂಡಸರು: 'ಆರ್ದಿಯೆನ್....' ನಲ್ಲಿ ಬಾರ್ಬ್‌ಬ್ಲೂ ನೀಲಿಗಡ್ಡದವ; ಮಧ್ಯಯುಗದ ಜಾನಪದ ಸಾಹಿತ್ಯದಲ್ಲಿ ನೀಲಿಗಡ್ಡದ ವರ್ಣನೆ ಕ್ರೂರಿಗಳಿಗೆ ಬರುತ್ತಿದ್ದುದನ್ನು ಮೇತರ್‌ಲಿಂಕ್ ಹಾಗೇ ಉಳಿಸಿಕೊಂಡಂತೆ ತೋರುತ್ತದೆ. ಮತ್ತೆ 'ಮೊನ್ನಾವನ್ನಾ'ದ ಮಾರ್ಕೋ ಮೇಧಾವಿ, ಹಿರಿಯ ಯೋಧ. 'ಮರಿಯೆ ಮಗ್ದಲೀನೆ' ಯ ರೋಮನ್ ಯೋಧ ವೀರುಸ್. ವನ್ನಾಳ ಗಂಡ ಗ್ವಿಡೋ- ಇವರೆಲ್ಲ ಸಿಟ್ಟು ಸೆಡವುಗಳಿಗೆ ಪಕ್ಕಾಗುವ ಪಾತ್ರಗಳು. ಉಳಿದಂತೆ, ಹೆಚ್ಚಿನ ಗಂಡು ಪಾತ್ರಗಳು ಮಧ್ಯಯುಗೀಯ ರೊಮ್ಯಾಂಟಿಕ್ ನಾಯಕರಂತೇ, ಪ್ರೇಮದಲ್ಲಿ ಸಿಲುಕಿದ ಭಾವುಕ ಜೀವಿಗಳಾಗಿರುತ್ತಾರೆ.

ಮೇತರ್‌ಲಿಂಕನ ರಂಗ ನಿರ್ದೇಶನದ ಬಗ್ಗೆ ಈಗಾಗಲೆ ಹೇಳಿಯಾಗಿದೆ. ಅದು ದೀರ್ಘವೂ, ಸಜ್ಜು ಮಾಡಲು ಕೆಲವೊಮ್ಮೆ ಅಸಾಧ್ಯವೂ ಆಗಿರುತ್ತದೆ. ವಿಪರ್ಯಾಸವೋ ಅಥವಾ ಲೇಖಕನ ಕಲಾತ್ಮಕತೆ ಮೀರಿ, ಹಿಗ್ಗುವ ಆಧ್ಯಾತ್ಮಿಕ ತುಡಿತವೋ, ಅಂತೂ ಇಂಥ ಒಂದು ಸೆಟ್ಟಿಂಗ್ ರಂಗದ ಮೇಲೆ ನಾಟಕ ಪ್ರದರ್ಶನಕ್ಕಾಗಿ ತಯಾರಾಗಿದ್ದರೂ, ನಾಟಕದ ಸಂದರ್ಭ ಉತ್ತುಂಗಕ್ಕೆ ಏರಿದಾಗ, ನಾಟಕದ ಪಾತ್ರಧಾರಿಗಳು ಮತ್ತು ಸಂದರ್ಭಗಳು ಸ್ವಾತಂತ್ರಕ್ಕಾಗಿ ಹಾತೊರೆಯುತ್ತಿರುವಾಗ, ಇದೇ ರಂಗವೇ ಇಕ್ಕಟ್ಟಾದಂತೆ ಭಾಸವಾಗ ತೊಡಗಿ, ಸ್ವಾತಂತ್ರವೆಂದರೆ ಆ ರಂಗದಿಂದ ಮುಕ್ತಿ ಪಡೆಯಬೇಕೆನ್ನುವಂತೆ ನಾಟಕ ಮುನ್ನುಗುತ್ತದೆ. ಭಾವನೆಗಳು ಇನ್ನು ತಡೆಯಲಾರದಷ್ಟು ಉತ್ಕಟವಾಗಿರುತ್ತವೆ ಹಿಗ್ಗಿರುತ್ತವೆ. ಒಂದೇ ಮಾರ್ಗ ಅಂದರೆ, ಬಿಡುಗಡೆ. ರಂಗವೇ ಒಂದು ಮಿತಿಯಾದಂತೆ ಭಾಸವಾಗುತ್ತದೆ. ಉದಾಹರಣೆಗೆ ನೀಲಿಹಕ್ಕಿ ಕಿಟಕಿಯಾಚೆ ಹೋಗಿ ಬಿಡುತ್ತದೆ; 'ಆರ್ದಿಯೆನ್ ಎತ್ ಬಾರ್ಬ್‌ಬ್ಲೂ' ನಲ್ಲಿ ಗವಿಯೇ ಒಂದು ಮಿತಿಯಾಗಿರುವಂತೆ

ಭಾಸವಾಗುತ್ತದೆ;ಕಡೆಗೆ ಆಕೆ ಗವಿಯಿಂದ ಹಾಗೂ ಕೋಟೆಯಿಂದ ಆಚೆ ಬಂದು ಬಿಡುತ್ತಾಳೆ. ಮೇತರ್‌ಲಿಂಕನಿಗೆ ಕಲೆ 'ಬಿಡುಗಡೆಯ' ಮಾಧ್ಯಮವಾಗಿರಬೇಕು.

ಹಾಗಾಗಿ ಇವನ ನಾಟಕಗಳಲ್ಲಿ ಪಾತ್ರಗಳಿಗಿಂತ ಭಾವನೆಗಳೇ ಮುಖ್ಯವಾಗುತ್ತವೆ. ಪಾತ್ರ ಪಾತ್ರಗಳ ನಡುವಿನ ನಾಟಕ ಮನದಲ್ಲಿ ಉಳಿಯುವುದು ಭಾವ-ಭಾವಗಳ ನಡುವಿನ ನಾಟಕವಾಗಿ; ಸಂದರ್ಭ, ಸಂದಿಗ್ಧಗಳ ನಡುವಿನ ಲೌಕಿಕ, ಅಲೌಕಿಕಗಳ ನಡುವಿನ ನಾಟಕವಾಗಿ. ಆದಾಗ್ಯೂ (ನನಗೆ ಸಿಕ್ಕಿರುವ ಲೆಕ್ಕದ ಪ್ರಕಾರ ಅವನ ನಾಟಕಗಳ ಒಟ್ಟು ಸಂಖ್ಯೆ ೧೬) ಹದಿನಾರು ನಾಟಕಗಳಲ್ಲಿ ಒಂದಕ್ಕೊಂದು ಸಂಬಂಧ, ಬೆಳವಣಿಗೆಗಳು ಕಂಡು ಬರುತ್ತದೆ. ವಿಚಿತ್ರವೆಂದರೆ, ಹಾಗಿದ್ದೂ ಮೇತರ್‌ಲಿಂಕನ ನಾಟಕಗಳ ವೈವಿಧ್ಯತೆಯೂ ಅಭ್ಯಾಸಯೋಗ್ಯ. ಇವನ ನಾಟಕಗಳಲ್ಲಿ ಒಂದೇ ಒಂದು ಪರಿಕರ ಕಂಡರೂ ಅದಕ್ಕೆ ಸಂಬಂಧಿಸಿದ ಅರ್ಥಗಳಿರುತ್ತವೆ. ಯೇಸುವಿನ ದನಿಯ ಪ್ರಯೋಗದಂತೆ, ವರ್ಜಿನ್ ವಿಗ್ರಹ ಜೀವತಳೆಯುವ ಪ್ರಯೋಗದಂತೆ, ಯಕ್ಷಿ, ಮಾಂತ್ರಿಕತೆಯಂತೆ - ಎಲ್ಲವೂ ಕಲಾತ್ಮಕವಾದಷ್ಟೇ ಅವನ ಅರ್ಥಗಳ, ಮೌಲ್ಯಗಳ ಸಾಕಾರ ರೂಪವೂ ಆಗಿರುತ್ತವೆ. ಹೊರ ರೂಪಕ್ಕೆ ವಿಚಿತ್ರವೆನಿಸಿದರೂ, ತನ್ನ ಅಗಾಧವಾದ ಬುದ್ಧಿಶಕ್ತಿಗೆ, ಪಾಂಡಿತ್ಯಕ್ಕೆ, ನಂಬಿಕೆ, ಶ್ರದ್ಧಾಭಕ್ತಿಗಳಿಗೆ ಅರ್ಥವುಳ್ಳದ್ದಾಗಿದ್ದರೆ, ಪೂರಕವಾದದ್ದಾದರೆ ಮೇತರ್‌ಲಿಂಕ್ ಯಾವುದೇ ವಿವರ ಬಳಸಲು ಮುಂದಾಗುತ್ತಿದ್ದ. ತನ್ನ ಮಟ್ಟಕ್ಕೆ ವಿಶ್ವಾಸವುಳ್ಳವನಾದ್ದರಿಂದಲೇ, ಅವನು ಮಿತ್ರರಿಗೆ ಪತ್ರ ಬರೆದಾದ ಮೇಲೆ, ಹೇಳಬೇಕಾದ್ದನ್ನು ಹೇಳಿದ ಮೇಲೆ, ''.... ನನ್ನ ಮಾತುಗಳನ್ನು ದಯವಿಟ್ಟು ನಂಬಿ ಎಂದು ಅಂಗಲಾಚುತ್ತಾ'' ಎಂದು ಪತ್ರ ಮುಗಿಸುತ್ತಿದ್ದ. ತಾನು ಹೇಳಿದ್ದು ಇತರರಿಗೆ ಅಸಮಂಜಸ ಎನಿಸಿಬಿಟ್ಟೀತು ಎಂದು ಅವನ ಕಳಕಳಿ.

ಮೇತರ್‌ಲಿಂಕನ ನಾಟಕಗಳ ಶಕ್ತಿಯಿರುವುದು ಆತನ ನಾಟಕೀಯ ಪವಾಡ ಗಳಲ್ಲಿ ಮಾತ್ರವೇನಲ್ಲ. ಆತನ ಚಾರಿತ್ರಿಕ ನಾಟಕಗಳಲ್ಲಿ ಬರುವ ಸಂಭಾಷಣೆ ಮುಂತಾದ ವಿವರಗಳಿಂದ ಆತನ ಸೂಕ್ಷ್ಮಗ್ರಹಣ ಶಕ್ತಿಯ ಪರಿಚಯವಾಗುತ್ತದೆ. ಚಾರಿತ್ರಿಕ - ಸಾಂಸ್ಕೃತಿಕ ವಿಚಾರವೇ ಇರಬಹುದು ಅಥವಾ ವಸ್ತು ವಿವರಗಳಿರಬಹುದು. 'ಮರಿಯೆ ಮಗ್ದಲೀನೆ' ಮತ್ತು 'ಮೊನ್ನವನ್ನಾ' ಗಳಲ್ಲಿ ಬರುವ ಇಟಲಿಯ ವರ್ಣನೆಯನ್ನೇ ನೋಡಿ, ಅವು ಕಣ್ಣಿಗೆ ಕಟ್ಟಿದಂತಿದೆ. 'ಮರಿಯೆ ಮಗ್ದಲೀನೆ' ನಲ್ಲಂತೂ ಕ್ರಿಸ್ತನ ಜೀವಿತದ ಚಾರಿತ್ರಿಕ ಕಾಲದ ಇಟಲಿಯ ಸಂಸ್ಕೃತಿಯ ಎರಡು ಆಧಾರ ಸ್ತಂಭಗಳ ಪರಿಚಯವೂ ಆಗುತ್ತದೆ; ರೋಮ್ ನಗರ ನೆಲದ ಮೇಲೆ ಎತ್ತರದಲ್ಲಿ, ವಿಸ್ತಾರದಲ್ಲಿ ಎಷ್ಟಿದೆಯೋ ಬಹುಶಃ ಅಷ್ಟೇ

ವಿಶಾಲ ಹಾಗೂ ಆಳವಾಗಿ ನೆಲದ ಕೆಳಗೂ ನಗರವಿದೆ. ಆದರೆ ನೆಲದ ಕೆಳಗಿನ ಗ್ರೀಕೊ - ರೋಮನ್ ಸಂಸ್ಕೃತಿ ಇಂದು ಹುದುಗಿಹೋಗಿ, ಅವಶೇಷ ಅನ್ನಿಸಿಕೊಂಡಿದ್ದರೆ, ಅದರ ಮೇಲೆ ಬೆಳೆದ ಕ್ರಿಶ್ಚಿಯನ್ ಸಂಸ್ಕೃತಿ ಇಂದೂ ಮುಂದುವರೆದಿದೆ. ನಾಟಕದ ಕಾಲ ಕ್ರಿಸ್ತನ ಜೀವಿತದ ಅಂತಿಮ ದಿನಗಳದ್ದು, ಇದೇ ಪರ್ವಕಾಲ. ಕೆಲವು ಕಡೆ ಎರಡೂ ಸಂಸ್ಕೃತಿಗಳು ಒಟ್ಟಿಗೆ ಕಾಣಸಿಗುತ್ತವೆ. ಯಾವುದಾದರೂ ಸುಂದರ ಚರ್ಚಿನ ಒಳಗೆ ಕೆಲವು ಕಂಭಗಳು ಗ್ರೀಕೊ ರೋಮನ್ ಸಂಸ್ಕೃತಿಯದ್ದಾಗಿದ್ದೀತು; ಅಥವಾ ಇಂದಿನ ಚರ್ಚಿನ ಕೆಳಗೆ ಅಂದಿನ ಜ್ಯೂಪಿತರ್‌ನದೊ, ವೀನುಸ್‌ಳದೋ ದೇವಾಲಯ ಹುದುಗಿದ್ದೀತು. ಇದು ಇಂದಿನ ಇಟಲಿಯಾದರೆ, ಕ್ರಿಶ್ಚಿಯನ್ ಧರ್ಮ ಅಸ್ತಿತ್ವಕ್ಕೆ ಬರುವ ಮುಂಚಿನ ಆ ದಿನಗಳಲ್ಲೂ ಗ್ರೀಕೋ ರೋಮನ್ ಸಂಸ್ಕೃತಿಗೂ ಯಹೂದ್ಯರ ಸಂಸ್ಕೃತಿಗೂ ಒಡೆದು ಕಾಣಬಹುದಾದಷ್ಟು ವ್ಯತ್ಯಾಸಗಳಿದ್ದವು. ಗ್ರೀಕೊ - ರೋಮನ್ ಎಂದು ಕರೆಯುವ ಸಂಸ್ಕೃತಿ ಇಟಲಿಯ ಪಾಲಿಗೆ ಗ್ರೀಕಿನಿಂದ ಆಮದಾಗಿದ್ದು. ಆದ್ದರಿಂದಲೇ ಆ ನಾಟಕದಲ್ಲಿ ಪಾತ್ರವೊಂದು ಹೇಳುವುದು:''ಗ್ರೀಕಿನಲ್ಲಿಯೇ ಇದ್ದೇವೆಂದು ಭಾಸವಾಗುತ್ತಿದೆ''

'ಸಿಸ್ಟರ್ ಬೀಟ್ರಿಸ್' ನಲ್ಲಿಕೂಡ ಮೇತರ್‌ಲಿಂಕನ ಅನುಭವ ಸೂಕ್ಷ್ಮತೆಗೆ, ಚಾರಿತ್ರಿಕ ಅರಿವಿಗೆ ಉದಾಹರಣೆ ಸಿಕ್ಕುತ್ತದೆ. ಬೀಟ್ರಿಸ್ ಅಂದೊಡನೆ ಸಾಹಿತ್ಯ ಪ್ರೇಮಿಗಳಿಗೆ ಇಟಲಿಯ ಕವಿ ದಾಂತೆಯ ಪ್ರಿಯತಮೆಯ ನೆನಪಾಗುತ್ತದೆ. ಆಕೆ ಅಪ್ರತಿಮ ಸುಂದರಿ, ದಾಂತೆ ಅವಳನ್ನು ನೋಡಿದ್ದು ಒಂದೇ ಸಲ, ಅದೂ ಕೆಲವೇ ಕ್ಷಣಗಳು. ಆದರೂ ಅವನ ಕಾವ್ಯದ ಸ್ಫೂರ್ತಿ ಅವಳೇ ಆಗಿಬಿಟ್ಟಳು. ನಾಟಕದ ಬೀಟ್ರಿಸ್ ಕೂಡ ಅನುಪಮ ಸುಂದರಿ. ಸೌಂದರ್ಯವನ್ನೆಲ್ಲ ಕಟ್ಟಿಟ್ಟದ್ದ ಸನ್ಯಾಸಿನಿ ಆಗಿದ್ದವಳು. ಮತ್ತೆ, ವರ್ಜಿನ್ ಮೇರಿಯ ಆರಾಧನೆ ಇಟಲಿಯಲ್ಲಿ ವ್ಯಾಪಕವಾಗಿರುವುದು, ಮೇರಿಯ ಪವಾಡಗಳು ಅಲ್ಲಿ ದಿನನಿತ್ಯದ ಅನುಭವವಾಗಿರುವುದು - ಇಷ್ಟು ಇಂದಿಗೂ ವಾಸ್ತವ ಹಾಗೂ ಸತ್ಯ.

ಹದಿನೈದನೆ ಶತಮಾನದ ಚರಿತ್ರೆಯೊಳಕ್ಕೆ ಸೇರುವಂತೆ ರಚಿಸಲಾದ ನಾಟಕ 'ಮೊನ್ನವನ್ನಾ' ದಲ್ಲಿ ಬರುವ ಕಟ್ಟಡಗಳ ವಿವರಗಳು ಆ ಕಾಲದ ಇಟಲಿಯ (ಇಂದಿಗೂ ಜೀವಂತವಿರುವ) ಕಟ್ಟಡಗಳಿಗೆ ಕನ್ನಡಿಯಿಟ್ಟಂತಿವೆ. ಇಲ್ಲಿನ ಒಂದು ಪಾತ್ರ ಮಾರ್ಕೋ (ವನ್ನಾಳ ಮಾವ)ನ ಸಂಭಾಷಣೆಯೊಂದನ್ನು ಕೆಳಗೆ ಕೊಡಲಾಗಿದೆ. ಪವಾಡ ಕುರಿತ ನಾಟಕ ಬರೆಯುವ ಮೇತರ್‌ಲಿಂಕನ ಲೌಕಿಕ ಸಿದ್ಧತೆಗಳ ಮೇಲೆ ಇದು ಬೆಳಕು ಚೆಲ್ಲುತ್ತದೆ.

ಮಾರ್ಕೋ: *ಫ್ಲಾರೆನ್ಸ್ ನಮ್ಮನ್ನು ಮುಗಿಸಿಬಿಡಲು ನಿಶ್ಚಯಿಸಿದೆ, ಸೈನ್ಯದ ಸಲಹಾ ಮಂಡಲಿಯವರು ಇದು ಅಗತ್ಯವೆಂದು ತೀರ್ಮಾನಿಸಿದ್ದಾರೆ. ಸಚಿವ ಮಂಡಲಿಯು ತೀರ್ಪನ್ನು ಅಂಗೀಕಾರ ಮಾಡಿದೆ. ಆ ನಿರ್ಧಾರವನ್ನು ಬದಲಿಸುವಂತೆಯೇ ಇಲ್ಲ. ಆದರೆ ಫ್ಲಾರೆನ್ಸಿಗೆ ಮುಂದಾಲೋಚನೆ ಹೆಚ್ಚು. ಕುತಂತ್ರ, ಕುಟಿಲಗಳಲ್ಲಿ ಫ್ಲಾರೆನ್ಸ್, ಅಗ್ಗಳ. ಲೋಕಕ್ಕೆ ನಾಗರೀಕತೆಯನ್ನು ಕಲಿಸುತ್ತಿರುವ ಫ್ಲಾರೆನ್ಸ್, ತನ್ನ ಮೇಲೆ ಅನವಶ್ಯ ರಕ್ತಪಾತ ಮಾಡಿತು ಎಂಬ ಅಪವಾದ ತಂದುಕೊಳ್ಳಲು ಅವಕಾಶ ಕೊಡುವುದಿಲ್ಲ. ಬದಲಾಗಿ ದಯೆಯಿಟ್ಟು ಶರಣಾಗತರಾಗಿ ಎಂದು ಕೆಲವು ನಿಬಂಧನೆಗಳನ್ನು ಕೊಟ್ಟರೂ ನಾವೇ ಅವನ್ನು ನಿರಾಕರಿಸಿದೆವೆಂದು ಹೇಳಿಕೊಳ್ಳುತ್ತದೆ... ಸ್ಪೇಯ್ನ್ ಮತ್ತು ಜರ್ಮನಿಯಿಂದ ಕೂಲಿಗಾಗಿ ಬಂದಿರುವ ಸೈನಿಕರನ್ನು ನುಗ್ಗಿಸಿ, ಪೀಸಾನಗರದ ಮೇಲೆ ದಾಳಿ ಮಾಡಿ ಆಕ್ರಮಿಸಿಕೊಳ್ಳುತ್ತದೆ...*

ಮೇತರ್‌ಲಿಂಕನ ಬಹುತೇಕ ನಾಟಕಗಳು ಗದ್ಯದಲ್ಲಿವೆ ಎಂದು ಹೇಳಬಹುದಾದರೂ, ಭಾಷೆ ಕಾವ್ಯಾತ್ಮಕವಾಗಿದೆ. ಅಷ್ಟೇ ಅಲ್ಲದೆ, ನಾಟಕದ ಒಟ್ಟು ಪ್ರಭಾವವೂ ಕಾವ್ಯಾತ್ಮಕವಾಗಿದೆ. ಹಾಗೆ ನೋಡಿದರೆ ಲೇಖಕನೇ ಹೇಳುವಂತೆ 'ಸಿಸ್ಟರ್ ಬೀಟ್ರಿಸ್' ಮತ್ತು 'ಆರ್ದಿಯೆನ್ ಎತ್ ಬಾರ್ಬೆಬ್ಲೂ' ಇವೆರಡು ಪ್ರಾಸರಹಿತ ಹನ್ನೆರಡು ಮಾತ್ರೆಗಳ ಸಾಲಿನಲ್ಲಿ (ಅನ್‌ರೈಮ್ಡ್ ಅಲೆಗ್ಸಾಂಡ್ರೀನ್)ಗಳಲ್ಲಿ ರಚಿತವಾದವು. ಉಳಿದಂತೆ, ನಾಟಕಗಳಲ್ಲಿ ಭಾವಸ್ಪರ್ಶಿ ಹಾಡುಗಳ ಪ್ರಯೋಗಗಳಿವೆ. 'ಅಗ್ಲವಯಿನೆ......' ಯಲ್ಲಿ ಬರುವ ಒಂದು ಹಾಡು:

ಅವಳ ಪ್ರಿಯನು ಹೊರಟಾಗ
(ಕದಾ ಮುಚ್ಚಿಕೊಂಡಾಗ)
ಅವಳ ಪ್ರಿಯನು ಹೊರಟಾಗ
ಮುಗುಳು ನಕ್ಕಳು

ತಿರುಗಿ ಅವನು ಬಂದಾಗ
(ದೀಪ ಉರಿಯುತ್ತಿದ್ದಾಗ)
ತಿರುಗಿ ಅವನು ಬಂದಾಗ
ಮತ್ತೊಬ್ಬಳಿದ್ದಳು

ಮೃತ್ಯು ನನಗೆ ಕಂಡಿತಾಗ
(ಅವಳ ಜೀವ ಕೊರಗುವಾಗ)
ಮೃತ್ಯು ನನಗೆ ಕಂಡಿತಾಗ
ಅವಳುಸಿರ ಕಾಯುತ

** ** **

ಮೇತರ್‌ಲಿಂಕನ ಆಲೋಚನೆಗಳು - ಅವನ ಇತರೆ ಗದ್ಯ ಕೃತಿಗಳಲ್ಲಿ ಕಂಡು ಬರುವ ಹಾಗೆ - ಸಮಕಾಲೀನ ವೈಜ್ಞಾನಿಕ ಸಂಶೋಧನೆ ಮತ್ತು ತತ್ವಜ್ಞಾನಗಳ ಕುರಿತಾದರೆ, ಸೃಜನಾತ್ಮಕ ಮನಸ್ಸು ಸುಳಿದಾಡುವುದು ಮಧ್ಯಯುಗಗಳಲ್ಲೇ ಎನ್ನಬಹುದು. ಕಾರಣ, ಅವನ ನಾಟಕಗಳಲ್ಲಿರುವ ವಾತಾವರಣ ಮಧ್ಯಯುಗದ ಯೂರೋಪ್: ಸ್ಪಷ್ಟ ಐತಿಹಾಸಿಕ ನಾಟಕವಾಗಲಿ, ಇತಿಹಾಸ ಇದೆ ಎಂದು ಗುರುತಿಸಬಹುದಾದ ನಾಟಕವಾಗಲಿ, ಜನಪದ ಕತೆ ಆಧಾರಿತ ನಾಟಕವಾಗಲಿ, ಅವುಗಳಲ್ಲಿ ಬರುವ ಪಾತ್ರ, ದೃಶ್ಯಗಳು ಮಧ್ಯಯುಗಕ್ಕೆ ಹತ್ತಿರವಾದಂತೆ ಕಾಣುತ್ತವೆ.

ಇದಕ್ಕೆ ಕಾರಣಗಳು ಇಲ್ಲದಿಲ್ಲ. ಮೇತರ್‌ಲಿಂಕನಿಗೆ ನಾಟಕಗಳು ರಂಗ ಪ್ರಯೋಗಕ್ಕಿಂತ ಹೆಚ್ಚಾಗಿ ಅಭಿವ್ಯಕ್ತಿ ಮಾಧ್ಯಮಗಳಾಗಿದ್ದವು. ಅವನು ಅಭಿವ್ಯಕ್ತಿ ಪಡಿಸಬೇಕಿದ್ದ 'ವಸ್ತು'ವೇ ಹಾಗೆ ಅಗ್ರಾಹ್ಯ, ಅಗೋಚರ, ವಿಸ್ಮಯಕಾರೀ, ಮಾಂತ್ರಿಕ ಜಗತ್ತಿನದಾಗಿದೆ. ಇವನ ನಾಟಕಜಗತ್ತಿನಲ್ಲಿ ಪಾತ್ರಗಳಾಗಲಿ, ಘಟನೆಗಳಾಗಲಿ ಮುಖ್ಯ ಭೂಮಿಕೆಯಲ್ಲಿರುವುದಿಲ್ಲ; ಬದಲಾಗಿ ಇವನ ಯಾವುದೇ ನಾಟಕವನ್ನು ನೆನಪಿಸಿ ಕೊಂಡರೆ ತಕ್ಷಣ ನೆನಪಾಗುವುದು ಅದರಲ್ಲಿನ ಭಾವನೆಗಳು, ಅವಿಸ್ಮರಣೀಯ ಕ್ಷಣಗಳು. ಷೇಕ್ಸ್‌ಪಿಯರನ ನಾಟಕಗಳಲ್ಲಿ ಅಥವಾ ಇಬ್ಸೆನ್ನಿನ ನಾಟಕಗಳಲ್ಲಿ ಹೀಗಾಗದು ; ಅವುಗಳಲ್ಲಿ ನೆನಪಿನಲ್ಲಿ ಉಳಿಯುವುದು ವಿಶಿಷ್ಟ ಪಾತ್ರಗಳು ಮತ್ತು ಘಟನೆಗಳು, ಜೊತೆಗೆ ಕಥಾವಸ್ತು ಮತ್ತು ಕಥೆ; ಮುಂದೆಂದೊ, ಯಾವುದೋ ಸಂದರ್ಭದಲ್ಲಿ 'ಆತ ಹ್ಯಾಮ್ಲೆಟ್'ನಂತೆ, ಈ ಘಟನೆ 'ಡಾಲ್ಸ್‌ಹೌಸ್'ನಲ್ಲಿನಂತೆ... ಎಂದು ನೆನಪಿಸಿ ಕೊಳ್ಳುತ್ತೇವೆ. ಆದರೆ ಎಂದಾದರೊಂದು ದಿನ ಹಸಿರಾದ ಗುಡ್ಡದ ಮೇಲಿನ ಕೋಟೆ ಬುರುಜಿನ ಮೇಲೆ ನಿಂತು ತಂಗಾಳಿ ಸವಿಯುವಾಗ.....' ಮೇತರ್‌ಲಿಂಕನ 'ಅಗ್ಲವಯಿನೆ..........' ನಾಟಕ ನೆನಪಾಗಬಹುದು!

ಮೇತರ್‌ಲಿಂಕ್ ಪ್ರಖ್ಯಾತಿಗೆ ಬಂದಾಗ ಕೆಲವರು ಅವನನ್ನು 'ಫ್ಲಾಂದರ್ಸ್‌ನ

ಷೇಕ್ಸ್‌ಪಿಯರ್' ಅಂದದ್ದುಂಟು. ಆದರೆ, ಇವರಿಬ್ಬರಿಗೂ ಅಜಗಜಾಂತರ. ಷೇಕ್ಸ್‌ಪಿಯರ್ ಮೂಲತಃ, ನಾಟಕಕಾರ; ಅವನೇ ಬಯಸಿ, ಆರಿಸಿಕೊಂಡ ಹಾದಿ ಆದಾಗಿತ್ತು. ಮೇತರ್‌ಲಿಂಕ್‌ನದು ಹಾಗಲ್ಲ; ಅಲೌಕಿಕದ ಕುರಿತ ಆಸಕ್ತಿ, ಕುತೂಹಲಗಳ ಅಭಿವ್ಯಕ್ತಿಗೆ ನಾಟಕ ಪ್ರಕಾರ ಮಾಧ್ಯಮವಾಯಿತು. ಷೇಕ್ಸ್‌ಪಿಯರ್ ತನ್ನ ನಾಟಕಗಳಾಚೆಗೆ ಏನಾಗಿದ್ದ ಎಂದು ಹೇಳಲು ಕಷ್ಟವಾಗಬಹುದು. ಹೇಳಬಹುದಾದರೂ ಅವನ ವೈಯಕ್ತಿಕ ಜೀವನದ ಕೆಲವು ಸಿಹಿ, ಕಹಿ ಘಟನೆಗಳನ್ನು ಮಾತ್ರ. ಆದರೆ ಮೇತರ್‌ಲಿಂಕನದು ನಾಟಕಗಳಾಚೆಗಿನ ಪ್ರತಿಭೆ ಹಾಗೂ ವ್ಯಕ್ತಿತ್ವ. 'ವ್ಯಕ್ತಿತ್ವ' ಎನ್ನುವ ಪದ ಕೂಡ ಅಸಮಂಜಸವಾಗಬಹುದು; ಯಾಕಂದರೆ ಅವನದು ಎಂದೂ ವ್ಯಕ್ತಿಕೇಂದ್ರಿತ ಆಲೋಚನೆ ಆಗಿರಲಿಲ್ಲ.

ಇವರಿಬ್ಬರ ಪರಿಕರಗಳು ಕೆಲವೊಮ್ಮೆ ನೋಡಲು ಒಂದೇ ತೆರನಾಗಿರುತ್ತವೆ. ಅಲ್ಲೇ ನಮಗೆ ಇವರಿಬ್ಬರ ನಡುವೆ ಇರುವ ವ್ಯತ್ಯಾಸಗಳನ್ನು ಗುರುತಿಸಲು ಬರುವುದು. ಷೇಕ್ಸ್‌ಪಿಯರನ 'ವಿಂಟರ್ಸ್ ಟೇಲ್' ನಾಟಕದ ಕಡೆಯಲ್ಲಿ ರಾಣಿಯ ವಿಗ್ರಹ ಜೀವ ಪಡೆಯುವ ಪವಾಡದಂತಹ ದೃಶ್ಯವಿದೆ. ಅದನ್ನು ಮೇತರ್‌ಲಿಂಕನ 'ಸಿಸ್ಟರ್ ಬೀಟ್ರಿಸ್'ನೊಂದಿಗೆ ನೇರವಾಗಿ ಹೋಲಿಸಲು ಬರುತ್ತದೆ. 'ಸಿಸ್ಟರ್ ಬೀಟ್ರಿಸ್'ನಲ್ಲಿರುವ ವಿಗ್ರಹ ಜೀವತಳೆದು, ಕಡೆಯಲ್ಲಿ ಮತ್ತೆ ವಿಗ್ರಹವಾಗಿ ಬಿಡುತ್ತದೆ - ಈ ಕ್ರಿಯೆಗೆ ಯಾವುದೇ ನಾಟಕೀಯ ಅಥವಾ ಸಾಂಕೇತಿಕ ಉದ್ದೇಶಗಳಿಲ್ಲ; ಬದಲಾಗಿ ಆಸ್ತಿಕರ ನಂಬಿಕೆಯ ನೇರ ಪ್ರತಿಪಾದನೆಯ ಪವಾಡ ಕತೆಗಳಲ್ಲಿ ಬರುವ ಹಾಗೇ ಬರುತ್ತದೆ. ಆದರೆ ಷೇಕ್ಸ್‌ಪಿಯರನದರಲ್ಲಿ ಹಾಗಲ್ಲ: ಷೇಕ್ಸ್‌ಪಿಯರ್ 'ಪ್ಲಾಟ್'ಗಳನ್ನು ಸೃಷ್ಟಿಸುವಲ್ಲಿ ಎತ್ತಿದ ಕೈ. ಹಾಗಾಗಿ 'ವಿಂಟರ್ಸ್ ಟೇಲ್'ನಲ್ಲಿ ಪ್ಲಾಟ್ ಇದ್ದೇ ಇದೆ- ರಾಜ ಮುಗ್ಧ ಹೆಂಡತಿಯನ್ನು ಶಂಕಿಸಿ ಗಡೀಪಾರು ಮಾಡುವುದು; ರಾಣಿಯ ಪ್ರೀತಿಯ ಪರಿಚಾರಿಕೆ ಮುಂದೊಂದು ದಿನ ರಾಜನ ಸಂಶಯ ನಿವಾರಣೆ ಮಾಡಿ, ಅವನ ಪಶ್ಚಾತ್ತಾಪ ಉಚ್ಛ್ರಾಯಸ್ಥಿತಿ ತಲುಪಿದಾಗ ತಾನು ರಕ್ಷಿಸಿದ ರಾಣಿಯನ್ನು ಕರೆ ತಂದು ಅವರಿಬ್ಬರ ಪುನರ್‌ಮಿಲನ ಮಾಡಿಸುವುದು- ಇದು ಷೇಕ್ಸ್‌ಪಿಯರನ 'ಪ್ಲಾಟ್'. ಆದರೆ, ರಾಣಿಯನ್ನು ವಿಗ್ರಹದಂತೆ ಮಾಡಿ, ರಾಜನ ಮುಂದೆ ಕರೆತಂದು, ಒಳ್ಳೆಯ ಸಮಯ ನೋಡಿಕೊಂಡು, ಆಕೆ ವಿಗ್ರಹವಲ್ಲ, ಸಾಕ್ಷಾತ್ ರಾಣಿಯೇ ಎಂದು ತೋರುವುದು, ಪರಿಚಾರಿಕೆಯ ಮಾಸ್ಟರ್ ಪ್ಲಾಟ್! ಜೀವಂತ ರಾಣಿಯನ್ನು ಪ್ರತಿಮೆಯಂತೆ ನಿಲ್ಲಿಸಿ ರಾಜ ಪ್ರಲಾಪಿಸ ತೊಡಗಿದಾಗ, ಆದರ ಪರಿಣಾಮವೇನೋ ಅನ್ನುವಂತೆ ರಾಣಿ ಜೀವ ತಳೆಯುತ್ತಾಳೆ ಎಂಬ ಕಣ್ಕಟ್ಟಾಟ ಇದೆ.

(ನನ್ನದೊಂದು ಪ್ರಶ್ನೆ : ಆಕೆ ಸತ್ತಿದ್ದಾಳೆಂದುಕೊಂಡು ವಿಗ್ರಹದ ಮುಂದೆ ಗೋಳಾಡುತ್ತಿದ್ದ ರಾಜನಿಗೆ, ಅದು ವಿಗ್ರಹವಲ್ಲ, ರಾಣಿಯೇ ಎಂದು ತಿಳಿದಾಗ, ತನಗೆ ಮೋಸವಾಯಿತೆಂದು ಸಿಟ್ಟು ಬರಲಿಲ್ಲವೇಕೆ? ನಾಟಕ ಅಲ್ಲಿಗೇ ಮುಗಿಯಬೇಕೆಂದು ನಾಟಕಕಾರ ಮೊದಲೇ ಚೌಕಟ್ಟು ಹಾಕಿಕೊಂಡಿದ್ದ ! ಹಾಗೇ ಆಗಬೇಕೆಂದು ಪ್ಲಾಟ್ ನಿರ್ಧಾರವಾಗಿತ್ತು! ಅಂದ ಮೇಲೆ ಈ ವಿಲಕ್ಷಣ ಆಸ್ತಿಕನ ಪವಾಡವೇ ಹೆಚ್ಚು ಸಮಂಜಸವಾಗಿ ಕಾಣುತ್ತಿದೆಯಲ್ಲ!)

ಮೇತರ್‌ಲಿಂಕನ ನಾಟಕಗಳ ಪಾತ್ರಗಳು, ಹಾಗೆ ನೋಡಿದರೆ ಮಧ್ಯಯುಗದ ಇಂಗ್ಲೆಂಡಿನ 'ಮಿರಕಲ್ ಪ್ಲೇಸ್'ಗಳಿಗೆ ಹತ್ತಿರವಾಗುತ್ತವೆ. ಅಲ್ಲಿನ ಪಾತ್ರಗಳಂತೆ ಇವನವೂ ರಕ್ತ ಮಾಂಸ ಹೊರತಾದ ಅಲೆಗಾರಿಕಲ್ ಪಾತ್ರಗಳು; ಯಾವುದೋ ಭಾವನೆಗಳ ಮೂರ್ತರೂಪಗಳಂತಹ ಪಾತ್ರಗಳು.

ಅದು ಬಿಟ್ಟರೆ ಮೇತರ್‌ಲಿಂಕನ ನಾಟಕಗಳನ್ನು ಸ್ವೀಡನ್ನಿನ ಆಗಸ್ಟ್ ಸ್ಟ್ರಿಂಡ್‌ಬರ್ಗ್‌ನ ನಾಟಕಗಳಿಗೆ ಹೋಲಿಸಬಹುದು. ಇಬ್ಬರೂ ಸ್ವೀಡನ್ನಿನ ೧೮ ನೇ ಶತಮಾನದ ತತ್ವಜ್ಞಾನಿ ಸ್ವೀಡೆನ್‌ಬರ್ಗ್‌ನಿಂದ ಪ್ರಭಾವಿತರಾದ, ನಾಟಕವನ್ನು ಮಾಧ್ಯಮವನ್ನಾಗಿ ಮಾಡಿಕೊಂಡ ಮೂಲತಃ ಅನ್ವೇಷಕರೇ ಆಗಿದ್ದಾರೆ. ಸ್ಟ್ರಿಂಡ್‌ಬರ್ಗನೂ ಸಹ ವೈವಿಧ್ಯಮಯ ನಾಟಕಗಳನ್ನು ಕೊಟ್ಟಿದ್ದಾನೆ; ಅವುಗಳಲ್ಲಿ ಹೆಚ್ಚು ಸ್ಮರಣೀಯವಾದವನ್ನು ಮತ್ತು ಮೇತರ್‌ಲಿಂಕನ ನಾಟಕಗಳನ್ನು ಬಹುಶಃ ಒಂದೇ ವಿಭಾಗದಲ್ಲಿಡಬಹುದೇನೊ. ಇಬ್ಬರೂ 'ಪ್ಲಾಟ್'ನಲ್ಲಿ ನಂಬಿಕೆ ಇಟ್ಟುಕೊಂಡ ನಾಟಕ ಕರ್ತೃಗಳಲ್ಲ, ಇಬ್ಬರ ಉತ್ಕೃಷ್ಟ ಕೃತಿಗಳೂ ಅಭಿವ್ಯಕ್ತಿವಾದ ನಾಟಕಗಳೇ ಆಗಿವೆ. ವ್ಯತ್ಯಾಸಗಳಿರುವುದು ಅನ್ವೇಷಣೆಯ ಮಾರ್ಗಗಳಲ್ಲಿ: ಸ್ಟ್ರಿಂಡ್‌ಬರ್ಗ್‌ನ ಆಳ ವೈಶಾಲ್ಯ ಹಿರಿದು; ಅವನ ನಾಟಕಗಳಲ್ಲಿ ಪರಸ್ಪರ ವಿರುದ್ಧ ಭಾವನೆಗಳ ನಡುವಿನ ಘರ್ಷಣೆ ಹೆಚ್ಚು ಉತ್ಕಟ ಹಾಗೂ ವೈಯಕ್ತಿಕವಾಗಿರುತ್ತವೆ. ಅವೂ ಅಂತಿಂಥಾ ಭಾವನೆಗಳಲ್ಲ. ಆದಿಮವಾದ ಉತ್ಕಟ ಭಾವನೆಗಳ! ಮೇತರ್‌ಲಿಂಕ್ ನದು ಹೆಚ್ಚು ವಿವರಣಾತ್ಮಕ ಶೈಲಿಯ ನಾಟಕಗಳಾದರೂ ಭಾವನೆಗಳು ಸ್ಟ್ರಿಂಡ್‌ಬರ್ಗ್‌ನದಕ್ಕಿಂತ ಹೆಚ್ಚು ತಿಳಿಯಾಗಿರುತ್ತವೆ. ಮೇತರ್‌ಲಿಂಕನದು ತತ್ವಜ್ಞಾನಿಯ ಅನ್ವೇಷಣೆಯಾದರೆ, ಸ್ಟ್ರಿಂಡ್‌ಬರ್ಗ್‌ನದು ಮನಸ್ಸಿನ ತೊಳಲಾಟಗಳ ಮೂಲಕ ನಡೆಯುವ ಅನ್ವೇಷಣೆ.

ಮೇತರ್‌ಲಿಂಕನ ನಾಟಕಗಳನ್ನು ಸಂಕೇತವಾದಿ ನಾಟಕಗಳೆಂದೇ ಕರೆಯಲಾಗುತ್ತವೆ

ಅವನ ನಾಟಕಗಳಲ್ಲಿ 'ನಾಟಕೀಯ ಕ್ರಿಯೆ' ಗಳು ನಡೆಯದು; ನಡೆಯುವುದೇನಿದ್ದರೂ ಅಂತರಂಗದ ನಾಟಕದ ರೂಪಕಗಳು. ಹಾಗಾಗಿ ಅವನ್ನು 'ಸ್ಥಾಯೀ ನಾಟಕಗಳು' *(Static Drama)* ಎಂದು ಕರೆಯುವವರಿದ್ದಾರೆ. ಇದರಲ್ಲಿ ನಾಟಕೀಯ ಕ್ರಿಯೆಯ ಬದಲಾಗಿ, ಪೂರ್ವಯೋಜಿತ ಕತೆಯ ಪ್ರತಿಪಾದನೆಯ ಬದಲಾಗಿ ನಮಗೆ ಕಂಡುಬರುವುದು ಭಾವಕ್ಷಣಗಳ ನಡುವಿನ ನಾಟಕ; ಅವುಗಳದೇ ಆದ ವಸ್ತು ಚೌಕಟ್ಟು; ಭಾವುಕತೆಗೆ ತಕ್ಕನಾದ ಕಾವ್ಯಾತ್ಮಕತೆ; ಮೂರು ನಾಲ್ಕು ಸಾಲುಗಳಿಗೆ ಇಳಿಸಬಹುದಾದ ಕತೆ.

**   **   **

ನಾಟಕದಿಂದ, ನಾಟಕಾನುಭವದಿಂದ ತಾನೇನು ಬಯಸುತ್ತಾನೆಂದು ಮೇತರ್ ಲಿಂಕ್ ಒಂದು ಕಡೆ ಹೇಳಿಕೊಂಡಿದ್ದಾನೆ:

''ನಾನು ಥಿಯೆಟರ್‌ಗೆ ಹೋದಾಗಲೆಲ್ಲ, ಜೀವನವನ್ನು ಆದಿಮವೆಂದೂ, ಶುಷ್ಕವೆಂದೂ ಕ್ರೂರವೆಂದೂ ಭಾವಿಸಿದ ನನ್ನ ಪೂರ್ವಿಕರ ಮಧ್ಯೆ ಹೋಗಿ ಹಲವು ಗಂಟೆಗಳ ಕಾಲ ಕಳೆಯುತ್ತಿದ್ದೇನೆ ಎನಿಸುತ್ತದೆ. ಆದರೆ ಅವರ ಈ ಅಭಿಪ್ರಾಯಗಳು ನನನ ನೆನಪಿನ ಲೋಕದಲ್ಲೂ ಉಳಿದಿಲ್ಲವಾಗಿ ನಾನು ಅವನ್ನು ಒಪ್ಪಲಾರೆ.... ದಿನನಿತ್ಯದ ಜಂಜಡಗಳಿಂದಾಗಿ ಅವನ್ನು ಅಭ್ಯಾಸಮಾಡಲು ಶಕ್ತಿಯಾಗಲಿ ಸಂದರ್ಭವಾಗಲಿ ಇಲ್ಲದ ಕಾರಣ, ತನ್ನ ಮೂಲಕ್ಕೆ ಅಥವಾ ನಿಗೂಡವಾದ ಆಳಕ್ಕೆ ಸೆಳೆದೊಯ್ಯಬಲ್ಲ ಮತ್ತು ನನ್ನೊಂದಿಗಿನ ಅದರ ಸಂಬಂಧವನ್ನು ವೃದ್ಧಿಸುವ ಜೀವನದ ಒಂದು ಭಾಗವನ್ನು ಅದು ತೆರೆದು ತೋರಲಿ ಎಂದು ಬಯಸಿದ್ದೆ. ನನ್ನ ದೀನವಾದ ದೈನಂದಿನ ಅಸ್ತಿತ್ವದ ಹಿಂದಿನ ಸೌಂದರ್ಯ, ಭವ್ಯತೆ ಮತ್ತು ಅರ್ಥವಂತಿಕೆ ಒಂದು ಕ್ಷಣದಲ್ಲಿ ನನಗೆ ಒಡೆದು ತೋರುತ್ತದೆ ಎಂದು ಭಾವಿಸಿದ್ದೆ......... ಆದರೆ ನಾನು ನೋಡಿದೆಲ್ಲ (ನಾಟಕಗಳು ಮತ್ತು ಪಾತ್ರಗಳು) ನೀಳವಾದ ಏಕತಾನವಾದ ಮಾತಿನಲ್ಲಿ ನನಗೆ ತಿಳಿಸಿದ್ದು, ತಾನು ಯಾಕೆ ಹೊಟ್ಟೆಕಿಚ್ಚು ಪಟ್ಟೆನೆಂದೋ ಅಥವಾ ಯಾಕೆ ಇನ್ನೊಬ್ಬ ವಿಷ ಹಾಕಿದ್ದು ಎಂದೋ ಅಥವಾ ಯಾಕೆ ಸಾಯಿಸಿದ್ದು ಎಂದೋ......''

ತನ್ನ ನಾಟಕಗಳ ಮೂಲಕ ಆಧ್ಯಾತ್ಮಿಕ ಯಾತ್ರೆಯಲ್ಲಿ ತೊಡಗಿರುವ ಮೇತರ್‌ಲಿಂಕ್‌ನಿಗೆ 'ಎಕ್ಸ್‌ಪ್ರೆಶನಿಸಂ' ಆಗಲಿ, 'ಸಿಂಬಲಿಸಂ' ಆಗಲಿ, ಮತ್ತು ತನ್ನದೇ ಆಳವಾದ ಅಭ್ಯಾಸ ಮತ್ತು ಅಗಾಧ ಪ್ರತಿಭೆ ನೀಡುವ ಯಾವುದೇ ಪರಿಕರವಾಗಲಿ- ಅವು ಮಾಧ್ಯಮ ಮಾತ್ರಗಳು. ಅವನ ಯಾತ್ರೆ ಸೀಮಾತೀತತೆಯ ಕಡೆಗೆ ಹಾಗಿದ್ದಾಗ ರೂಪಗಳು ವಿರೂಪಗಳಾಗದೆ ಇರುತ್ತವೆಯೆ?

ಮರಿಯೆ ಮಗ್ದಲೀನೆ

(ಮೂರು ಅಂಕಗಳ ನಾಟಕ)

ಪಾತ್ರವರ್ಗ

೧. ಲೂಸಿಯಸ್ ವೀರುಸ್, ಯೋಧ

೨. ಅನ್ನೋಮಿಸ್ ಸಿಲಾನುಸ್

೩. ಅಪ್ಪಿಯುಸ್

೪. ಕೋಲಿಯುಸ್

೫. ಲಾಜರುಸ್

೬. ಅರಿಮಾಥಿಯಾದ ಯೂಸೂಫ್

೭. ನಿಕೊದೀಮಸ್

೮. ಬಾರ್ತಿಮೇಯುಸ್

೯. ಆಳುಗಳು, ಕುರುಡರು, ಕುಂಟರು, ಅಲೆಮಾರಿಗಳು, ಪವಾಡಗಳಿಂದ ಗುಣವಾದವರು ಮುಂತಾದವರು

೧೦.. ಮರಿಯೆ ಮಗ್ದಲೀನೆ

೧೧. ಮಾರ್ಥಾ

೧೨. ಮರಿಯೆ ಕ್ಲಿಯೊಫಾಸ್

೧೩. ಮರಿಯೆ ಸಲೋಮ್

೧೪. ಬೇರೆ ಸಂತರು, ಭಿಕ್ಷುಕಿಯರು, ಸೂಳೆಯರು ಇತರರು

ಮೊದಲ ಮತ್ತು ಎರಡನೆ ಅಂಕಗಳು ನಡೆಯುವುದು ಬೆಥನಿಯಲ್ಲಿ
ಮೂರನೆ ಅಂಕ ಜೆರೂಸಲೆಮ್‌ನಲ್ಲಿ

ಅಂಕ ಒಂದು

ಭೆಥನಿಯಲ್ಲಿ ಅನ್ತೋಯಿಸ್ ಸಿಲಾನುಸ್‌ನ ತೋಟ. ರೋಮನ್ ಮನೆ ಮಾಳಿಗೆ. ಅಮೃತಶಿಲೆಯ ಬೆಂಚುಗಳು, ಮೊಗಸಾಲೆಗಳು, ಪ್ರತಿಮೆಗಳು. ಮಧ್ಯದಲ್ಲಿ ಕಾರಂಜಿಯಿರುವ ನೀರಿನ ಕೊಳ, ಲತಾಮಂಟಪಗಳು, ಕಲ್ಲುಹೂದಾನಿಗಳು ಕಿತ್ತಲೆ ಹಾಗೂ ಲಾರೆಲ್ ಮರಗಳು. ಕಣಿವೆಯ ಎಡಬಲಗಳಲ್ಲಿ ಕಟಕಟೆಗಳು; ಹಿಂದೆ ಕೂಡ. ಓಡಾಟಕ್ಕೆ ಅನುಕೂಲವಾಗುವಂತೆ ಮಧ್ಯದಲ್ಲಿ ಜಾಗ ಬಿಟ್ಟಿದೆ. ಹಿಂದಕ್ಕೆ ಲಾರೆಲ್ ಮತ್ತಿತರ ಮರಗಳ ದಟ್ಟವಾದ ತೋಪು

ದೃಶ್ಯ - ೧

(ಅನ್ತೋಯಿಸ್ ಸಿಲಾನುಸ್ ಮತ್ತು ಲೂಸಿಯಸ್ ವೀರುಸ್)

ಸಿಲಾನುಸ್ : ಇಗೋ, ಇದೇ ನನ್ನ ಪುಟ್ಟ ಸಾಮ್ರಾಜ್ಯದ ಹಿರಿಮೆ. ಈ ಮಾಳಿಗೆ ಉದ್ಯಾನವನ, ನನ್ನ ಆಸೆ ಆಕಾಂಕ್ಷೆಗಳಿಗೆ ಕಿರೀಟ ಪ್ರಾಯವಾಗಿದ್ದ ಪ್ರೇನೆಸ್ತೇಯ ಉದ್ಯಾನವನ್ನು ಇದು ನೆನಪಿಸುತ್ತಿದೆ. ಇಲ್ಲಿವೆ ನನ್ನ ಪ್ರೀತಿಯ ಕಿತ್ತಲೆ ಮರಗಳು, ಇಲ್ಲಿ ಸೈಪ್ರಸ್‌ಗಳು, ಇಲ್ಲಿ ನನ್ನ ಕೆಂಪು ಕಣಗಿಲೆಗಳು... ಇಲ್ಲಿ ಮೀನಿನ ಕೊಳ; ದೇವತೆಗಳ ಮೂರ್ತಿಗಳಿರುವ ಈ ಮೊಗಸಾಲೆ, ಇವುಗಳಲ್ಲಿ ಒಂದು ಅಂತಿಯೋಖ್‌ನಲ್ಲಿ ಸಿಕ್ಕ ಮಿನರ್ವಾ ದೇವತೆಯ ಮೂರ್ತಿ. (ಎಡಕ್ಕೆ ಕೈಮಾಡಿ) ಮತ್ತೆ ಇಲ್ಲಿ ನೋಡಿ, ಇಲ್ಲಿ ನಿಮಗೆ ಈಗಾಗಲೇ ವಸಂತ ನಲಿದಾಡುತ್ತಿರುವ ಕಣಿವೆಗಳ ಅಸದಳ ನೋಟ ಸಿಕ್ಕುತ್ತದೆ. ನಾವು ಮಧ್ಯದಲ್ಲಿದ್ದೇವೆ. ಬೆಥನೀಯ ಇಳಿಜಾರುಗಳ ಮೇಲೆ ಇಳಿಯುತ್ತಿರುವ ಸೌತೆ ಬಳ್ಳಿಗಳನ್ನು ಮನಸಾರೆ ನೋಡಿ. ಆಲಿವ್ ಮರಗಳ ಕೆಳಗಂತೂ ನೆಲಕ್ಕೆ ಬೆಂಕಿ ಹೊತ್ತಿಕೊಂಡಂತೇ ಕಾಣುತ್ತಿದೆ. ನಾನೀಗ ನನ್ನ ಇಳಿವಯಸ್ಸಿನ ಸುಖವನ್ನು ಶಾಂತವಾಗಿ ಇಲ್ಲೇ ಅನುಭೋಗಿಸುತ್ತೇನೆ. ಈ ಮುಪ್ಪಿಗೆ ಮಾತ್ರ ಗೊತ್ತು, ಗತಕಾಲದಿಂದ ಸುಖವನ್ನ ಹೇಗೆ ಹೀರಬೇಕೆಂದು. ಯಾಕಂದರೆ ಹದಿಹರೆಯ ಬರೀ ವರ್ತಮಾನದಲ್ಲಿರುವುದರಿಂದ ಸುಖದ ಸವಿಯನ್ನು ಕಿರಿದಾಗಿಸುತ್ತದೆ........

ವೀರುಸ್ : ಕಡೆಗೂ ಸಿಕ್ಕಿತು! ಮರ, ನೀರು, ಹುಲ್ಲು.... ! ಈ ಯೂದಿಯಾ ಎನ್ನುವ ಹೆಸರಿನ ಕಲ್ಲು -ಮರಳುಗಾಡಿಗೆ ಬಂದಾಗಿನಿಂದ ಇವುಗಳನ್ನೆಲ್ಲ ಮರೆತೇಬಿಟ್ಟಿದ್ದೆ... ಆದರೆ, ಹಿರಿಯರೆ, ಇದು ಹೀಗೇಕಾಯಿತು? ಯಾತಕ್ಕೂ ಬೇಡದಷ್ಟು ಮಣ್ಣು ಹದಗೆಟ್ಟಿರುವ ಈ ಸಪ್ಪೆಮೋರೆಯ ಬಂಜರು ನಗರದ ಹತ್ತಿರ ನೀವೇಕೆ ಮನೆ ಮಾಡಬೇಕಾಯಿತು? ಕುಹಕಿಗಳ, ಕುಟಿಲಜನರ, ವಕ್ರವಾಗಿರುವ ಮಾನಗೇಡಿಗಳ ಕೊಳಕು ಅನಾಗರೀಕರ ಮಧ್ಯೆ ಯಾಕೆ ಮನೆ ಮಾಡಬೇಕಾಯಿತು?

ಸಿಲಾನುಸ್ : ನಿನಗೇ ಗೊತ್ತು, ನಾನು ಸಿಜೇರಿಯಾ ದೇಶಾಧಿಪತಿ ವೆಲೇರಿಯುಸ್ ಗ್ರಾತುಸ್‌ನ ಜೊತೆ ಇಲ್ಲಿಗೆ ಬಂದೆ, ಆಮೇಲೆ ರೋಮಾಗೆ ಹಿಂತಿರುಗಿದೆ. ಆಗಲೇ ನೀನು ಕೆಲಕಾಲ ನನ್ನ ಪ್ರಿತಿಯ ಮತ್ತು ನಿಷ್ಠಾವಂತ ಶಿಷ್ಯನಾಗಿದ್ದು. ಆದರೆ ನಾನು ಹೆಚ್ಚು ಹೆಚ್ಚು ಖಚಿತತೆಯಿಂದ ಬೋಧಿಸಿದಂತೆಲ್ಲಾ ಆ ಬೋದನೆಗಳ ಸತ್ಯಾಸತ್ಯತೆ ಹೆಚ್ಚು ಹೆಚ್ಚು ಶಂಕಾಸ್ಪದವಾಗಹತ್ತಿತು ; ಆದ್ದರಿಂದ ಆ ಜ್ಞಾನದ ಬಗ್ಗೆ ನನಗೇ ನಾಚಿಕೆಯಾಗಹತ್ತಿತು. ಈ ಅನಾಗರೀಕ ನಗರ ಯೂದಿಯಾಕ್ಕೆ ನನ್ನ ಕರೆತಂದಿದ್ದು ಒಂದು ವಿಚಿತ್ರ ಕುತೂಹಲ. ಮೊದಲ ಸಲ ಇಲ್ಲಿ ಇಳಕೊಂಡಿದ್ದಾಗ ಯಹೂದಿಗಳ ಪೂಣ್ಯ ಗ್ರಂಥಗಳನ್ನು ಓದಲು ಶುರುಮಾಡಿದೆ. ಅವು ಅನಾಗರೀಕ ಮತ್ತು ರಕ್ತದಾಹಿಗಳಾಗಿದ್ದರೂ ಅವುಗಳಲ್ಲಿ ಸುಂದರ ಪುರಾಣಗಳಿದ್ದವು. ಅಷ್ಟೇ ಅಲ್ಲ, ಅನಾಗರಿಕ ವಾದರೂ ಪ್ರಬುದ್ಧತೆಯ ಪ್ರಯತ್ನಶೀಲತೆಯೂ ಇತ್ತು, ಹಾಗಾಗಿ ಅದು ನನಗೆ ಬೇಸರವೆನಿಸಲಿಲ್ಲ.

ವೀರುಸ್ : ಹೌದು, ಅಂತಿಯೋಖ್‌ನಲ್ಲಿ ಸಿಕ್ಕನಲ್ಲಾ ನಮ್ಮ ಮಿತ್ರ ಅಪ್ಪಿಯುಸ್, ಅವನೇ ಹಳೇ ಯಹೂದಿ ಪುಸ್ತಕಗಳ ಬಗೆಗಿನ ನಿಮ್ಮ ಧಿಡೀರ್ ಆಸಕ್ತಿ ಅಭ್ಯಾಸಗಳ ಬಗ್ಗೆ ನನಗೆ ಹೇಳಿದ್ದು.......

ಸಿಲಾನುಸ್: ಅವನು ಇಲ್ಲಿಗೆ ಇನ್ನೇನು ಬರಲಿದ್ದಾನೆ.

ವೀರುಸ್ : ಯಾರು? ಅಪ್ಪಿಯುಸ್ಸನಾ? ಅವನೀಗ ಜೆರೂಸಲೆಮ್‌ನಲ್ಲಿದ್ದಾನಾ?

ಸಿಲಾನುಸ್: ನಿನಗೆ ಗೊತ್ತಿರಲಿಲ್ಲವಾ?.... ನೀನಾದರೂ ಈ ದೇಶದಲ್ಲಿ ಎಷ್ಟು

ಕಾಲದಿಂದ ಇದ್ದೀಯಾ?..... ಎರಡು ದಿನದ ಹಿಂದೆ ಸಿಕ್ಕ ನಿನ್ನ ಕಾಗದದಲ್ಲಿ ಅದರ ಪ್ರಸ್ತಾಪವೇ ಇರಲಿಲ್ಲ.

ವೀರುಸ್ : ಸುಮಾರು ಒಂದು ವಾರವಾಯಿತು; ಸ್ವಲ್ಪ ಸಮಯಾವಕಾಶವಾದರೂ ನಿಮ್ಮನ್ನೇ ನೋಡಬೇಕೆಂದಿದ್ದೆ. ನಾನು ದೇಶಾಧಿಪತಿ ಪಾಂತಿಯುಸ್ ಪಿಲಾತರ ಜೊತೆ ಜೆರೂಸಲೆಮ್‌ಗೆ ಹೋಗಲೆಂದು ಅಂತಿಯೋಖ್‌ನಿಂದ ಹೊರಟೆ. ಅವರಿಗೆ ಪರಿಸ್ಥಿತಿ ಹದಗೆಡುತ್ತದೆಂಬ ಭಯ ಇದೆ. ನಮ್ಮ ಹಳೇ ದಂಡಿನ ಸಹಾಯ ಅವರಿಗೆ ಬಹುಶಃ ಬೇಕಾಗಬಹುದು.

ಸಿಲಾನುಸ್: ವಿಶಾಲ ಮನಸ್ಸಿನ ಅಪ್ಪಿಯುಸ್, ತನ್ನ ರೂಢಿಗಳಷ್ಟೇ ದಿಕ್ಕೆಟ್ಟ ಮಾತುಗಳಾಡುವ, ದೂರದ ಮಿತ್ರರನ್ನು ಹತ್ತಿರ ತರಬಲ್ಲ ಮಾತುಗಳನ್ನಾಡುವ ಅಪ್ಪಿಯುಸ್, ನಿನ್ನ ಹತ್ತಿರ ನನ್ನ ಬಗ್ಗೆ ಮಾತಾಡಿದ ಹಾಗೇ ನನ್ನ ಹತ್ತಿರ ನಿನ್ನ ವಿಷಯ ಮಾತಾಡಿದ. ಅಂತಿಯೋಖ್‌ನಲ್ಲಿ ನಿನ್ನನ್ನ ಭೇಟಿ ಮಾಡುವ ಸುಯೋಗ ಅವನಿಗೆ ಬಂದ್ದಿದ್ದಾಗ ನೀನೊಂದು ದಾರುಣ ಪ್ರೇಮಕ್ಕೆ ಸಿಲುಕಿದ್ದೆ ಎಂದೂ ಹೇಳಿದ.

ವೀರುಸ್ : ಯಾವುದು ಅದು?

ಸಿಲಾನುಸ್: ಏನು? ಭವ್ಯ ಉಡುಗೆ ತೊಟ್ಟ ಈ ಸುಂದರಾಂಗ ಸೈನಿಕನಿಗೆ ಹಲವಾರು ಪ್ರೇಮ ಪ್ರಕರಣಗಳಿವೆಯೆ?..... ಅವನು ಹೇಳಿದ್ದು ಒಬ್ಬ ಗೆಲೀಲೀ ಯುವತಿ ಜೊತೆಗಿನ ಪ್ರಕರಣದ ಬಗ್ಗೆ. ಈ ಸೀಮೆಯವಳದ್ದೇ ವಿಷಯ.

ವೀರುಸ್ : ಮಗ್ದಾಲಾದ ಮೇರಿಯೆ? ಅವಳ ವಿಷಯ ನಿಮಗೆ ಹೇಳಿದನೆ? ಅವಳು ಈಗ ಎಲ್ಲಿದ್ದಾಳೆ?..... ನಾನು ಅವಳನ್ನು ಮತ್ತೆ ನೋಡಲೇ ಇಲ್ಲ; ಆಕೆ ಅಂತಿಯೋಖ್‌ನ್ನು ಇದ್ದಕ್ಕಿದ್ದಂತೆ ಬಿಟ್ಟು ಹೋದಳು. ಆಮೇಲೆ ಅವಳ ಸುಳಿವೇ ಇಲ್ಲದಾಯಿತು.

ಸಿಲಾನುಸ್: ಆದರೆ ಅವಳು ನಿನ್ನ ಮಾತನ್ನು ಯಾಕೆ ಕೇಳಲಿಲ್ಲ? ಅಪ್ಪಿಯುಸ್ ಪ್ರಮಾಣ ಮಾಡಿ ಹೇಳಿದ, ಅವಳು ಈ ದೇಶದ ಗಂಡಸರಿಗೆ ತಲೆ ತಿರುಗಿಸುವುದು ನಿಜವಾದರೂ, ರೋಮಿನ ವೀರರಿಗೆ ತಾನು ಧೃಡಚಿತ್ತದವಳಂತೆ ತೋರಿಸಿಕೊಳ್ಳುತ್ತಾಳಂತೆ.

ವೀರುಸ್ : ಹೆಣ್ಣ ಜಾತಿಯ ಬಗೆಗಿನ ಒಗಟುಗಳಲ್ಲಿ ಅದೂ ಒಂದು; ಆದರೆ ನಾವು ಸೈನಿಕ ವೃತ್ತಿಯಲ್ಲಿರುವುದರಿಂದ ಅವನ್ನು ಬಿಡಿಸುತ್ತಾ ಕೂರಲು ನಮಗೆ ಸಮಯವೇ ಇರುವುದಿಲ್ಲ. ಅವಳಿಗೆ ನನ್ನ ಕಂಡರೆ ಬೇಸರವೇನೂ ಇದ್ದಂತಿಲ್ಲ, ಕಡೇಪಕ್ಷ ಇಷ್ಟು ಹೇಳಬಹುದು. ಅವಳು ತೋರಿದ ಬೇಸರಿಕೆ ಜೊತೆಗೆ ಕಂಡು ಬಂದಿದ್ದು ಒಂದು ರೀತಿಯ ರೂಕ್ಷ ಸೌಮ್ಯತೆ..... ಆದರೆ ಅದರೊಳಗೆ ಒಂದು ಥರ ಅಗ್ರಾಹ್ಯವಾದ ಭಯ ಸೇರಿದಂತಿತ್ತು. ಆದರಿಂದಾಗಿಯೇ ಅವಳು ನನ್ನಿಂದ ಉಪಾಯವಾಗಿ ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಳು.... ಅಷ್ಟೇ ಅಲ್ಲ, ಇತ್ತೀಚೆಗೆ ಅವಳು ಯಾವುದೋ ಒಂದು ದೊಡ್ಡ ಸಂಕಟದಿಂದ ಬಳಲುತ್ತಿರುವಂತಿದೆ. ಅದಕ್ಕಾಗಿ ಈಗಾಗಲೆ ಅನೇಕ ಸಲ ತನಗೆ ತಾನೇ ಸಮಾಧಾನ ಹೇಳಿಕೊಂಡಿದ್ದಾಳಂತೆ.

ಸಿಲಾನುಸ್: ಇದು ಗೊತ್ತೇ ಇರಲಿಲ್ಲ. ಇವೆಲ್ಲಾ ನನ್ನ ಪ್ರಕಾರ ಉತ್ಸಾಹ ಗುಂದಿಸುವಂಥವಲ್ಲ. ದೇವತೆಗಳು ಭೋಗಕ್ಕಾಗಿಯೇ ನಮ್ಮನ್ನು ಸೃಷ್ಟಿಸಿರುವುದರಿಂದ ನಮಗೆ ನಾವೇ ದುಃಖ ಯಾಕೆ ತಂದುಕೊಳ್ಳಬೇಕು?... ಅಪ್ಪಿಯುಸ್ ಅದಕ್ಕೇ ಹೇಳಿದ್ದು ನಿನ್ನನ್ನು ಅನಾವಶ್ಯ ದುಃಖಕ್ಕೀಡುಮಾಡಿರುವ ಆ ರೋಗವನ್ನು ನನ್ನ ಹಿತವಚನದಿಂದ ವಾಸಿ ಮಾಡಬೇಕೆಂದು. ಆದರೆ, ಅದಕ್ಕಿಂತ ಮುಂಚೆ ಹೇಳು, ಅಪ್ಪಿಯುಸ್ ಅಂದುಕೊಂಡಷ್ಟು ಗಾಢವಾಗಿ ನೀನು ಅವಳನ್ನು ಪ್ರೀತಿಸುತ್ತಿದ್ದೆಯಾ? ಅವನ ಮಾತು ಅನೇಕ ಸಲ ಅತಿರೇಕ ಮತ್ತು ಅನಾವಶ್ಯ ವಿಷರಗಳಿಂದ ಕೂಡಿರುತ್ತದೆ.

ವೀರುಸ್ : ಯಾವುದೇ ಹೆಣ್ಣನ್ನು ಬಯಸಿದ್ದಕ್ಕಿಂತಾ ಹೆಚ್ಚಾಗಿ ಅವಳನ್ನು ಬಯಸಿದ್ದೆ. ಈಗಲೂ ಬಯಸುತ್ತೇನೆ.

ಸಿಲಾನುಸ್ : ಬಯಕೆ ಮತ್ತು ಪ್ರೇಮಗಳನ್ನು ಬೇರ್ಪಡಿಸದೆ ಬಹಳ ಬುದ್ಧಿವಂತಿಕೆಯಿಂದ ಮಾತಾಡುತ್ತೀಯೆ. ಅಲ್ಲದೆ, ನನಗೂ ಅರ್ಥವಾಗುತ್ತಿದೆ, ನನ್ನ ಜೀವನದಲ್ಲಿ ನಾನು ಮೆಚ್ಚಿದ ಸುಂದರಿಯರಲ್ಲೆಲ್ಲ ಇವಳೇ ಮಿಗಿಲಾದವಳು.

ವೀರುಸ್ : ಏನಂದಿರಿ!... ನೀವು ಅವಳನ್ನು ನೋಡಿದ್ದೀರಾ?... ಹಾಗಾದರೆ ಅವಳೂ ಈಗ ಜೆರೂಸಲೆಮ್‌ನಲ್ಲಿದ್ದಾಳಾ?

ಸಿಲಾನುಸ್: ಬೆಥನೀಯಿಂದ ಜೆರೂಸಲೇಮ್ ಹದಿನೈದು ಮಜಲು ದೂರ ಇರಬಹುದು. ಅಂದರೆ ಅವಳು ಜೆರೂಸಲೆಮ್‌ಗೆ ನಮಗಿಂತಲೂ ಹೆಚ್ಚು ಸಮೀಪದಲ್ಲಿದ್ದಾಳೆ. ಈ ಮೊಗಸಾಲೆಗೆ ಬಾ; ಬಂದು ಅಗೋ ಅಲ್ಲಿ, ಕಣಿವೆಯ ಆಳಕ್ಕೆ ನೋಡು..... ಏನು ಕಾಣಿಸುತ್ತದೆ?

ವೀರುಸ್ : ಆಲಿವ್ ಮರಗಳು, ರಸ್ತೆಗಳು, ಸಮಾಧಿಗಳು... ಅರಮನೆಯವೋ, ದೇವಸ್ಥಾನಗಳವೋ ಸೋಪಾನಗಳು, ಸಾಲುಕಂಬಗಳು, ಸೈಪ್ರೆಸ್‌ಗಳು..... ನೋಡಿದರೆ ರೋಮಿನ ಅಂಚಿನಲ್ಲೇ ನಾವಿರಬಹುದು ಅನ್ನಿಸುತ್ತೆ. ಆದರೆ ನನಗಿದು ಅರ್ಥವಾಗುತ್ತಿಲ್ಲ....

ಸಿಲಾನುಸ್: ಇದು ಮಹಾರಾಜ ಹೆರಾದ್‌ನ ಕೈಚಳಕ. ಒಂದು ರೀತಿಯ ಹುಚ್ಚ ! ನಗರ ಕಟ್ಟುವ ಹುಚ್ಚು ಅವನಿಗೆ. ರೋಮಿನಲ್ಲಿರುವುದಕ್ಕಿಂತಾ ಹೆಚ್ಚು ರೋಮೀಯವಾಗಿ ಕಾಣುವ ಸುಂದರ ಅರಮನೆಗಳಿಂದ ಅವನೇ ಈ ಕಣಿವೆಯನ್ನು ತುಂಬಿಸಿದ್ದು... ಆದರೆ ಆ ಗುಡ್ಡದ ಮಧ್ಯದಲ್ಲಿ, ಆ ಎತ್ತರದ ಮೂರು ಸೈಪ್ರೆಸ್‌ಗಳ ಎಡಕ್ಕೆ.... ಇಲ್ಲಿಂದ ಮೂರು, ನಾಲ್ಕು ಮಜಲು ದೂರದಲ್ಲಿ.... ಅಮೃತ ಶಿಲೆಯ ಅತಿಸುಂದರ ಬಂಗಲೆಗಳಲ್ಲೇ ಒಂದಾದ ಆ ಬಂಗಲೆ ಕಾಣುತ್ತಿದೆಯೆ?

ವೀರುಸ್ : ಅದಾ? ಆ ವಿಶಾಲ ಬಿಳೀ ಸೋಪಾನಗಳು... ಮೂರ್ತಿಗಳಿಂದ ಸಜ್ಜಾಗಿರುವ ಅರ್ಧಚಂದ್ರಾಕಾರದ ಕಂಬಗಳ ಸಾಲಿಗೆ ತಲುಪಿಸುವ ಸೋಪಾನಗಳಿರುವ ಆ ಭವನವೆ?

ಸಿಲಾನುಸ್: ಅಲ್ಲೇ ಅವಳು ಈಗ ವಿಶ್ರಮಿಸುತ್ತಿರುವುದು...

ವೀರುಸ್ : ಮರಿಯೆ ಮಗ್ದಲೀನಳಾ? ನಗರದಿಂದ ಅಷ್ಟೊಂದು ದೂರವಿರುವ ಆ ನಿರ್ಜನ ಪ್ರದೇಶದಲ್ಲಾ?

ಸಿಲಾನುಸ್: ಪಸ್ಕಾ ಹಬ್ಬ ಹತ್ತಿರವಾದಂತೆಲ್ಲ ಜೆರೂಸಲೆಮ್‌ನಲ್ಲಿ ಎರಡು ಪಟ್ಟು ಹೆಚ್ಚಾಗುವ ಯಹೂದ್ಯರ ಧರ್ಮಶ್ರದ್ಧೆ, ಹುಂಬತನ, ಉನ್ಮತ್ತತೆ ಮತ್ತು

ವಾಕರಿಕೆ ತರುವ ದುರ್ಗಂಧಗಳ ಕಾರಣ ಅವಳು ದೂರ ಹೋಗುತ್ತಿರುವುದಾಗಿ ನನಗೆ ಹೇಳಿದಳು.

ವೀರುಸ್ : ಅಂದಮೇಲೆ ನೀವು ಅವಳನ್ನು ನೋಡುತ್ತಿರುತ್ತೀರ? ಮಾತಾಡಿದ್ದೀರ ಅವಳ ಜೊತೆ?

ಸಿಲಾನುಸ್ : ಸುಂದರ ಯುವತಿಯರನ್ನು ಕಂಡರೆ ನನ್ನ ಕಣ್ಣಿಗಾನಂದವೆಂದೂ ಮತ್ತು ಅವರಿಗೇನೂ ಅದರಿಂದ ತೊಂದರೆಯಾಗದೆಂದೂ ಸಜ್ಜನ ಅಪ್ಪಿಯುಸ್‌ಗೆ ಗೊತ್ತು; ಹಾಗಾಗಿ ನಿಶಸ್ತ್ರಗೊಂಡ, ನಿರಪಾಯಕಾರಿಯಾದ ಈ ಮುದಿಯನ ಮನೆಗೆ ಆಕೆ ಬರುವುದನ್ನು ಆತ ತಡೆಯಲಿಲ್ಲ....

ವೀರುಸ್ : ಅವಳು ನಿಮಗೆ ಏನು ಹೇಳಿದಳು?.... ನಿಮ್ಮ ಮೇಲೆ ಯಾವ ರೀತಿ ಪರಿಣಾಮ ಬೀರಿ ಹೋದಳು ಅವಳು?

ಸಿಲಾನುಸ್ : ಮುತ್ತು ಮತ್ತು ಇಬ್ಬನಿ ಹನಿಗಳನ್ನು ಪೋಣಿಸಿದ್ದಾರೆ ಎಂಬಂತೆ ಕಾಣುತ್ತಿದ್ದ ಉಡುಗೆ ಧರಿಸಿದ್ದಳು; ಮೇಲೆ ಕೆಂಪು ಕಲ್ಲಿನ ಆಭರಣಗಳ ಜೊತೆಗೆ ಟಿರಿಯನ್ ಪರ್ಪಲ್ ಬಣ್ಣದ ಉದ್ದ ನಿಲುವಂಗಿ. ಪೂರ್ವದ ಈ ಪ್ರಭೆಯನ್ನು ಹೆಚ್ಚಿಸುವ ರೀತಿಯಲ್ಲಿ ಒಡವೆಗಳಿಂದ ಅಲಂಕಾರ ಮಾಡಿಕೊಂಡಿದ್ದಳು. ಅವಳ ಕೂದಲಂತೂ, ಸಡಿಲ ಬಿಟ್ಟರೆ ಚಿನ್ನದ ದಟ್ಟ ಹೊದಿಕೆ ಹೊದ್ದಿರುವ ಆ ಅಮೃತಶಿಲೆಯ ಹೂಜವನ್ನು ಪೂರ್ತಿ ಮುಚ್ಚಿ ಬಿಡುತ್ತದೇನೊ!.....

[illegible] : ಅವಳ ಬುದ್ಧಿ ಬಗ್ಗೆ ಹೇಳುತ್ತೇನೆ. ಅವಳ ಚಾರಿತ್ರದ ಬಗ್ಗೆ... ಅಪಾರ್ಥ ಮಾಡಿಕೊಳ್ಳಬೇಡಿ; ಅವಳು ಕೀಳು ಅಭಿಸಾರಿಕೆಯಂತೂ ಅಲ್ಲ. ಬದಲಾಗಿ ಅವಳಲ್ಲಿ ಬೇರೆ ಆಕರ್ಷಣೆಗಳಿವೆ. ಸುಭದ್ರವಾದ ಪ್ರೇಮ....

ಸಿಲ[illegible] : ನಾನು ಗಮನಿಸಿದ್ದು ವಾಸ್ತವವಾದ, ನಯನ ಮನೋಹರವಾದ ಅವಳ ಸೌಂದರ್ಯವನ್ನು ಮಾತ್ರ...... ಇನ್ನೇನು ಅವಳೇ ಬರುವವಳಿದ್ದಾಳೆ. ಅವಳು ಎಂಥವಳು ಎಂದು ಸದ್ಯದಲ್ಲೇ ಸರಿಯಾಗಿ ನಿರ್ಧರಿಸಬಹುದು.

ವೀರುಸ್ : ಅವಳು ಇಲ್ಲಿಗೆ ಬರುತ್ತಿದ್ದಾಳಾ?.... ನಿಮ್ಮ ಜೊತೆ ನಾನಿರುತ್ತೇನೆ ಎಂದು ಅವಳಿಗೆ ಗೊತ್ತಿದೆಯಾ?

ಸಿಲಾನುಸ್ : ಖಂಡಿತಾ. ಅಪ್ಪಿಯುಸ್‌ನ ಹೆದರಿಕೆ ಹುಟ್ಟಿಸುವ ಉಪದೇಶಕ್ಕಿಂತ ಉತ್ತಮರೀತಿಯಲ್ಲಿ ಈ ಭೇಟಿಯೇ ನಿನ್ನ ಸಂಕಟಗಳನ್ನು ನಿವಾರಿಸಬಹುದೆಂದು ನನಗನ್ನಿಸುತ್ತದೆ.

ವೀರುಸ್ : ಆದರೆ ಅವಳಿಗೆ?.... ಹಾಗೆಂದು ಗೊತ್ತಾದ ಮೇಲೆ ಅವಳು ಏನು ಹೇಳಿದಳು?

ಸಿಲಾನುಸ್ : ಅವಳು ಸಣ್ಣಗೆ ನಡುಗುತ್ತಾ, ಆಲೋಚನೆಯಲ್ಲಿ ಮುಳುಗಿದರೂ ಮುಗುಳ್ನಕ್ಕಳು. ಮಿಕ್ಕ ಅತಿಥಿಗಳು ಯಾರು ಗೊತ್ತೇನು? ನಮಗೆ ಅನಿವಾರ್ಯವಾದ ಅಪ್ಪಿಯುಸ್ ಮತ್ತು ಪ್ರೇನೆಸ್ತೇನ ನಿನ್ನ ಸಹಪಾಠಿ ಕೋಲಿಯುಸ್.... ಮೂರು ವಾರಗಳ ಹಿಂದೆ ತನ್ನ ಎರಡು ವರ್ಷದ ಮಗಳನ್ನು ಕಳೆದುಕೊಂಡ ನಮ್ಮ ಪಾಪದ ಮಿತ್ರ ಲಾಂಗಿನುಸ್‌ನನ್ನೂ ಕರೆದುಕೊಂಡು ಬರುತ್ತಾರೆ ಅಂದು ಕೊಂಡಿದ್ದೇನೆ.... ತನ್ನ ನಷ್ಟಕ್ಕಿಂತಲೂ ಹೆಚ್ಚು ದುಃಖದಲ್ಲಿರುವ ಅವನನ್ನು ಒಳ್ಳೆ ಮಾತುಗಳಿಂದ ವಿಚಾರಗಳಿಂದ ಸಮಾಧಾನ ಪಡಿಸಲು ಪ್ರಯತ್ನಿಸುತ್ತೇನೆ... ಮಿಕ್ಕ ಆಹಾರ ಪದಾರ್ಥಗಳ ಜೊತೆಗೆ - ಎಲ್ಲ ಉತ್ಕೃಷ್ಟವಾದವೆಂದು ಕೊಂಡಿದ್ದೇನೆ - ಜೋರ್ಡನ್‌ನ್ನಿನ ಎರಡು ಮೀನುಗಳು, ನಿನಗೆ ಹೊಸವು. ನನ್ನ ಮುದಿ ಅಡುಗೆಯವನೇ ಸಿದ್ಧಪಡಿಸಿದ ಮೀನುಗಳು. ಆದರೆ ಕೊಳಲಿನ ಶಬ್ದ ಕೇಳಿಸುತ್ತಿದೆ. ಬೆಥನೀ ಮತ್ತು ಜೆರೂಸಲೆಮ್‌ನ ರಾಣಿಯ ಪರಿವಾರ ನನ್ನ ಮನೆ ಹೊಸ್ತಿಲ ಬಳಿ ಇರಬೇಕು.....ಅವರ್‍ಯಾರೂ ನೋಡಿಲ್ಲದ ಮಂದ ಬೆಳಕನ್ನು ಮತ್ತು ಅವರಿಗೆ ಸಂತಸ ತರುವ ನನ್ನ ಮುಗುಳ್ನಗೆಯನ್ನು ನಿನ್ನ ಕಣ್ಣುಗಳು ಸದ್ಯದಲ್ಲೇ ನೋಡಲಿವೆ...... ಹೊರಾಂಗಣದ ಆ ಬೆಳ್ಳಿ ಕನ್ನಡಿಗಳು ಅವಳನ್ನು ಬೇಕಿದ್ದಕ್ಕಿಂತಾ ಹೆಚ್ಚು ಕಾಲ ತಡೆಹಿಡಿಯದಿದ್ದಲ್ಲಿ.....

ವೀರುಸ್ : ಬಂದಳು!.....

ಬಲದಿಂದ ಮರಿಯ ಮಗ್ದಲೀನ ಪ್ರವೇಶ. ಅವಳ ಹಿಂದೆ ಕೆಲವು ಗುಲಾಮರು. ಒರಟು ರಾಜಗಾಂಭೀರ್ಯದಿಂದ ಕೈಸಂಜ್ಞೆ ಮಾಡಿ ಅವರನ್ನೆಲ್ಲ ಕಳಿಸಿ ಬಿಡುತ್ತಾಳೆ.

ದೃಶ್ಯ - ೨

ಅದೇ. ಮರಿಯ ಮಗ್ದಲೀನೆ

ಸಿಲಾನುಸ್ : (ಮರಿಯ ಮಗ್ದಲೀನೆಯನ್ನು ಬರಮಾಡಿಕೊಳ್ಳಲು ಮುಂದೆ ಸಾಗುತ್ತಾ) ಯಾರದು ಬರುತ್ತಿರುವುದು ದಟ್ಟಕಾಡಿನೊಳಗಿಂದ ಹೊಗೆಯ ಸಾಲುಗಂಬಗಳಂತೆ ಸಾಂಬ್ರಾಣಿ ಧೂಪಗಳ ಗಂಧ ಸೂಸುತ್ತಾ?..... ಯಾರಾಕೆ ಮುಂಬೆಳಗಿನಂತೆ ನೋಡುತ್ತಿರುವುದು; ಚಂದ್ರನಂತೆ ಕಾಂತಿಯುಳ್ಳವಳು, ಸೂರ್ಯನಷ್ಟು ಸ್ಪಷ್ಟವಾಗಿರುವಳು? ಪತಾಕೆ ಹೊತ್ತ ಸೇನೆಯಷ್ಟು ಭಯಂಕರವಾಗಿರುವವಳು? ನಿಮ್ಮ ಪುಣ್ಯ ಗ್ರಂಥಗಳು ಶೂಲಮೈಟ್‌ನ ಬರವನ್ನು ಹೀಗೇ ಹಾಡುವವಲ್ಲವೆ?

ಮರಿಯ : ನನ್ನ ಪುಣ್ಯಗ್ರಂಥಗಳ ವಿಷಯ ಮಾತಾಡಬೇಡಿ. ಅವನ್ನು ಕಂಡರೆ ನನಗೆ ಆಗದು... ಆ ಮೋಸಗಾರ, ನೀಚ, ಆಸೆ ಬುರುಕ, ಹೊಲಸು ದೇಶದಿಂದ ಬಂದದ್ದೆಲ್ಲಾ ನನಗೆ ಅಸಹ್ಯ....

ವೀರುಸ್ : (ತನ್ನ ಸರದಿಯಲ್ಲಿ ಮುಂದೆ ಬಂದು ಅವಳಿಗೆ ಶುಭಾಶಯ ಕೋರುತ್ತಾ) ಹಾಗಾದರೆ ನಾನು ರೋಮನ್ನರ ರೀತಿಯಲ್ಲಿ ಬಂದು ಹೇಳುತ್ತೇನೆ. ದೇವತಾಮಣಿಗಳಲ್ಲೆ ಕಿರಿಯವಳಾದ, ಹೆಚ್ಚು ಸುಖಿಯಾದ, ಅಗ್ಲಾಯಿಯಾಳ ಹಿರಿಯ ಕುವರಿಗೆ ಜಯವಾಗಲಿ!

ಮರಿಯ : ನನ್ನನ್ನು ಹೊಗಳುವ ಬದಲು ನನಗೆ ಕರುಣೆ ತೋರಿ ಕಳೆದ ರಾತ್ರಿ ಕಾರ್ಥಗ್ನಾದ ಕೆಂಪು ರತ್ನಗಳು, ಜೊತೆಗೆ ಹನ್ನೆರಡು ಅತಿ ಉತ್ಕೃಷ್ಟ ಮುತ್ತುಗಳು ಮತ್ತೆ ಎಲ್ಲಕ್ಕಿಂತ ಹೆಚ್ಚಾಗಿ ಬ್ಯಾಬಿಲೋನಿಯಾದ ನವಿಲುಗಳು ಜೊತೆಗೆ ಕೊಳದಲ್ಲಿದ್ದ ಎಲ್ಲ ಸುಂದರ ಮೀನುಗಳೂ ಕಳುವಾಗಿದ್ದಾವೆ...

ವೀರುಸ್ : ಅಷ್ಟು ಸ್ಪಷ್ಟವಾಗಿ ದೇವಭಂಡಾರ ದ್ರೋಹದ ಸಾಹಸ ಯಾರು ಮಾಡಿದರು?

ಮರಿಯ : ನನಗೆ ತಿಳಿಯದು.... ಪಕ್ಷಿಪಂಜರ ಮತ್ತು ಮೀನುಕೊಳ ಕಾಯ ಬೇಕಾಗಿದ್ದ ಗುಲಾಮರನ್ನು ದೊಣ್ಣೆಗಳಿಂದ ಹೊಡೆದು ಹಿಂಸೆಗೆ

ಗುರಿಮಾಡಿದ್ದೇನೆ. ಅವರು ಇದುವರೆಗೂ ಏನೂ ಒಪ್ಪಿಕೊಂಡಿಲ್ಲ. ಅವರಿಗೆ ಏನೂ ಗೊತ್ತಿಲ್ಲವೆಂದೇ ನಾನು ನಂಬಬೇಕಾಗಿದೆ.

ವೀರುಸ್ : ನಿಮಗೆ ಯಾವ ಸೂಚನೆಯೂ ಸಿಕ್ಕಿಲ್ಲವೆ?.... ಯಾರ ಬಗ್ಗೆ ಶಂಕೆಯೂ ಇಲ್ಲವೆ?

ಸಿಲಾನುಸ್ : ಈ ದೇಶ ಸುರಕ್ಷಿತವಾದ್ದು, ಆದ್ದರಿಂದ ಈ ಕಳ್ಳತನ ನನಗೆ ತುಂಬಾ ಆಶ್ಚರ್ಯ ತರುತ್ತಿದೆ. ಹತ್ತಿರ ಹತ್ತಿರ ಆರು ವರ್ಷದಿಂದ ನಾನು ಇಲ್ಲೇ ವಾಸ ಮಾಡುತ್ತಿದ್ದೇನೆ. ಆದರೆ ಯಾವತ್ತೂ ಯಾವೊಬ್ಬನೂ ಒಂದು ಅಣುವಿನಷ್ಟು ನನ್ನ ಬುದ್ಧಿಯನ್ನು ಅಪಹರಿಸಲು ಯತ್ನಿಸಿಲ್ಲ- ಅದನ್ನು ನಾನು ಯಾವ ಬೀಗ-ಕೈಗಳಿಂದಲೂ ಬಂಧಿಸಿಲ್ಲ; ನನ್ನಲ್ಲಿರುವ ಒಂದೇ ಒಂದು ಅಮೂಲ್ಯ ವಸ್ತುವೆಂದರೆ ಅದೊಂದೇ.... ಯಹೂದಿಗಳು ಬಹಳ ಚಾಣಕ್ಷರು, ಕುಹಕಿಗಳು ಮತ್ತು ಕೇಡಿಗಳು; ; ಅವರು ಮೋಸದಿಂದ ವ್ಯಾಪಾರ ಮಾಡುವುದಿಲ್ಲ, ಬೇಡುಗೈಯವರ ಗುಣಾವಗುಣಗಳನ್ನು ಅಭ್ಯಾಸ ಮಾಡುತ್ತಾರೆ. ಶುದ್ಧವಾದ ಕಳ್ಳತನವನ್ನು ದೂರವಿಡುತ್ತಾರೆ ಅಂತ ಹೇಳಬಹುದೇನೋ....

ಮರಿಯೆ : ನನ್ನ ಬಂಗಲೆಯ ಒಂದು ಕೋಣೆಯ ಹಲಗೆಗಳನ್ನು ಬದಲಾಯಿಸುತ್ತಿದ್ದೇನೆ. ಮೇಜಿನ ಮೇಲೆ ಊಟಕ್ಕೆ ಪ್ರತೀಸಲ ಬಡಿಸುವ ಆಹಾರಗಳಿಗೆ ತಕ್ಕವಾದಂತೆ ಅವೂ ಬದಲಾಗಬೇಕು. ಅದನ್ನು ಮಾಡುತ್ತಿರುವ ಆ ತಿಳಿಯಾದ ಕೆಲಸಗಾರರ ಮೇಲೆ ಮೊದಲು ಸಂಶಯ ಪಟ್ಟೆ....

ವೀರುಸ್ : ಅಂತಿಯೋಖ್‌ನಲ್ಲಿರುವ ನಮ್ಮ ರಾಜ್ಯಪಾಲ ಪಾಂಪೋನಿಯುಸ್ ಫ್ಲಾರಸ್‌ರ ಮನೆಯಲ್ಲಿ ಅಂಥದನ್ನ ನೋಡಿದ್ದೇನೆ. ಆದರೆ ರೋಮಾದಲ್ಲೇ ಇನ್ನೂ ಹೊಸದಾಗಿರುವ ಈ ಫ್ಯಾಷನ್ ದೂರದ ನಾಡಿಗೆ ಇಷ್ಟು ಬೇಗ ಬಂದಿರುವುದು ನನಗೆ ಗೊತ್ತಿರಲಿಲ್ಲ.

ಮರಿಯೆ : ನಮ್ಮ ಮನೆಯಲ್ಲಿ ಬಿಟ್ಟರೆ ಅದು ಇಲ್ಲಿ ಇನ್ನೆಲ್ಲೂ ನಿಮಗೆ ಕಾಣಸಿಗುವುದಿಲ್ಲ. ತೆತ್ರಾರ್ಕ್ ಅಂತಿಪೊಸ್‌ರವರ ಅರಮನೆಯಲ್ಲಿ ಅದಿನ್ನು ಬಂದೇ ಇಲ್ಲ... ಅದಿಕ್ಕೆ ಆ ಕೆಲಸಗಾರರ ಬಗ್ಗೆ ಸಂಶಯ

ಪಟ್ಟಿದ್ದು; ಆದರೆ ಅವರು ನಿರಪರಾಧಿಗಳು ಅನ್ನುವುದಕ್ಕೆ ನನ್ನಲ್ಲೇ ಆಧಾರ ಇದೆ. ಹಾಗಾಗಿ ದೇಶವನ್ನು ಕೆಲಕಾಲದಿಂದ ಕುಲಗೆಡಿಸುತ್ತಿರುವ ಅಲೆಮಾರಿಗಳು ಬೇಟೆಗಾರರುಗಳ ನಡುವೆಯೇ ಕಳ್ಳರನ್ನು ಹುಡುಕ ಬೇಕೆಂದು ನನ್ನ ನಂಬಿಕೆ.

ಸಿಲಾನುಸ್ : ಬಹುಶಃ ನಜರೀನ್‌ನ ಕುಖ್ಯಾತ ಗುಂಪು....

ಮರಿಯ : ಹೌದು, ಅದೇ. ಅವರ ಮುಖಂಡ ಸ್ನಾನವನ್ನೂ ಮಾಡದ ಒಂದು ; ಥರಾ ದರೋಡೆಕೋರನಂತೆ ಅನಾಗರೀಕ ಮಂತ್ರವಿದ್ಯೆಯಿಂದ ಜನಸಮುದಾಯವನ್ನೆ ಮೋಡಿ ಮಾಡಬಲ್ಲವನಂತೆ; ಅಷ್ಟೆ ಅಲ್ಲ, ಯಾವುದೋ ಹೊಸ ನೀತಿಯನ್ನೋ ತತ್ವವನ್ನೋ ಬೋದಿಸುವವನ ಹಾಗೆ ನಟಿಸಿ ಜನರನ್ನು ಲೂಟಿ ಮಾಡುತ್ತಾನಂತೆ; ಏನು ಮಾಡಲೂ ಹೇಸದ ಜನರೇ ಅವನ ಸುತ್ತ ಸುತ್ತಿರುತ್ತಾರಂತೆ.... ಅವರ ಬಗ್ಗೆ ಅಸಮಾಧಾನ ತಾಳಲು ನನಗೆ ಇನ್ನೂ ಬೇಕಷ್ಟು ಕಾರಣಗಳಿವೆ..... ಎರಡು ದಿನದ ಹಿಂದೆ ನನ್ನ ಉದ್ಯಾನದಲ್ಲಿ ನಾನು ಓಡಾಡುತ್ತಿರು ವಾಗ, ರಸ್ತೆಗೂ ಅದಕ್ಕೂ ನಡವಿನ ಮೊಗಸಾಲೆ ಕೆಳಗೆ, ಆ ಗುಂಪಿನ ಹನ್ನೆರಡು ಜನ ಗತಿಗೇಡಿಗಳು ತಮ್ಮ ದುರ್ನಡತೆಯಿಂದ ನನ್ನನ್ನು ಅವಮಾನ ಮಾಡಿದರು. ಕಲ್ಲು ತೂರಿ ಹೆದರಿಸಿದರೂ ಕೂಡ..... ಸಹಿಸಲಸಾಧ್ಯವಾಗಿ ಬಿಟ್ಟಿದೆ. ಇನ್ನಾದರೂ ಈ ನಾಡನ್ನು ಅವರಿಂದ ಮುಕ್ತಿಗೊಳಿಸಬೇಕು.

ವೀರುಸ್ : ಆ ಜನಗಳ ಬಗ್ಗೆ ನಾನೂ ಕೇಳಿದ್ದೇನೆ.... ಮೇಲಿನವರಿಗೆ ಅವರ ಮೇಲೆ ಕಣ್ಣಿದೆ ಎಂದೂ ನನಗೆ ಗೊತ್ತು..... ಇನ್ನೂ ಹತ್ತಿರದಿಂದ ಅವರ ಮೇಲೆ ನಿಗಾ ಇಡಿಸುತ್ತೇನೆ. ಹಾಗೆ ನೋಡಿದರೆ ನೀನು ಹೂಂ ಅಂದರೆ ಅವರ ಮುಖಂಡನನ್ನು ಹಿಡಿಸಿ ಹಾಕುವುದು ನನಗೆ ಸುಲಭವೇ....

ಮರಿಯ : ಹಾಗೆ ಮಾಡು ಮತ್ತೆ. ಕೈ ಜೋಡಿಸಿ ಕೇಳಿಕೊಳ್ಳುತ್ತೇನೆ.. ಸಾಧ್ಯವಾದಷ್ಟು ಬೇಗ... ನಿನಗೆ ನನ್ನ ವಿಶೇಷ ಧನ್ಯವಾದಗಳು.

ಸಿಲಾನುಸ್ : ಇಲ್ಲಿ ಏನೋ ಮೋಸವಾದಂತಿದೆ. ನನ್ನ ಪ್ರಕಾರ ಕಳ್ಳರನ್ನ ಹುಡುಕಬೇಕಾದ್ದು ಅಲ್ಲಿ ಅಲ್ಲ. ಆ ಗುಂಪು ಐದಾರು ದಿನಗಳಿಂದ ಮನೆ ಹತ್ತಿರ ಸೇರಿರುವುದರಿಂದ ಅದರ ಬಗ್ಗೆ ಸುಮಾರು ವಿಚಾರಗಳು ಗೊತ್ತಾಗಿವೆ. ನನ್ನ ಈ ವಯಸ್ಸಿನಲ್ಲಿ ಎಲ್ಲವೂ ಸುಖಪ್ರದವಾಗಿ ಇರುವುದರಿಂದ ಹೇಳುತ್ತೇನೆ ಅವರ ಸಭೆಯೊಂದರಲ್ಲಿ ಪಾಲ್ಗೊಳ್ಳುವ ಸದಾವಕಾಶ ನನಗೂ ಬಂದಿತ್ತು. ಜೆರಿಖೋಗೆ ಹೋಗುವ ಹಳೇ ರಸ್ತೆಯ ಹತ್ತಿರ ಅವರ ಮುಖಂಡ ಧೂಳು ಮತ್ತು ಜೀರ್ಣವಸ್ತ್ರಾನ್ವಿತರಾದ ಜನರ ಗುಂಪಿನ ನಡುವೆ ನಿಂತು ಮಾತಾಡುತ್ತಿದ್ದ; ಆ ಜನರಲ್ಲಿ ಅನೇಕರು ಅಸಹ್ಯವಾಗಿ ಕಾಣುತ್ತಿದ್ದ ಕುಂಟರು, ರೋಗಿಗಳು.... ಅವರೆಲ್ಲ ಅಜ್ಞಾನಿಗಳಂತೆ, ಉನ್ಮತ್ತರಾದಂತೆ ಕಾಣುತ್ತಾರೆ. ಅವರು ಬಡವರು, ಕೊಳಕರು ನಿಜ; ಆದರೆ ತೊಂದರೆ ಕೊಡುವವರಲ್ಲ. ಒಂದು ಲೋಟ ನೀರು ಅಥವಾ ಒಂದು ತೆನೆ ಜೋಳಕ್ಕಿಂತ ಹೆಚ್ಚಿನದನ್ನು ಕದಿಯಬಲ್ಲವರಲ್ಲ ಎಂದೇ ನನ್ನ ಭಾವನೆ.... ಅತಿ ಉತ್ಸುಕತೆಯಿಂದ ಒಂದುಥರಾ ವಿಚಿತ್ರವಾದ ದೃಷ್ಟಾಂತ ಕತೆಯನ್ನು ಕೇಳುತ್ತಿದ್ದರು - ಮಗ ತಂದೆಯ ದುಡ್ಡನ್ನು ಸ್ವೇಚ್ಛೆಯಾಗಿ ಖರ್ಚು ಮಾಡಿ ಕಡೆಗೆ ಅಪ್ಪನ ಬಳಿ ಮರಳಿದ ಕತೆಯನ್ನ... ಅವರೆಲ್ಲ ನನ್ನನ್ನು ಸಂಶಯದಿಂದ ನೋಡಹತ್ತಿದ್ದರು. ಆದ್ದರಿಂದ ಕತೆ ಮುಗಿಯುವರೆಗೂ ಕೇಳಲಾಗಲಿಲ್ಲ.... ಆದರೆ ಆ ಗೆಲಿಲಿಯವನು ಅಥವಾ ನಜರೀನನು- ಅವನನ್ನು ಇಲ್ಲಿ ಹಾಗೇ ಕರೆಯೋದು- ಕುತೂಹಲಕಾರಿಯಾಗಿದ್ದಾನೆ. ಅವನ ದನಿ ಆಳವಾಗಿದೆ, ವಿಚಿತ್ರ ರೀತಿಯಲ್ಲಿ ಮಧುರವಾಗಿದೆ. ಅವನು ಬಡಗಿಯ ಮಗನಿದ್ದ ಹಾಗೆ ಕಾಣುತ್ತದೆ.... ಅವನ ಬಗ್ಗೆ ಇನ್ನೂ ಸ್ವಾರಸ್ಯಕರ ವಿಷಯಗಳು ನನಗೆ ಗೊತ್ತಿದೆ, ಬೇಕಾದರೆ ಹೇಳುತ್ತೇನೆ. ಆದರೆ ಅದಕ್ಕೆ ಮುಂಚೆ ಅತಿಥಿಗಳು ಬರುತ್ತಿದ್ದಾರಾ ಎಂದು ನೋಡಬೇಕು. ಅದಕ್ಕೋಸ್ಕರ ಈ ಮನೆಯ ಹಿಂಬದಿಯಲ್ಲಿ ರಸ್ತೆ ಕಾಣಿಸುವ ಕಡೆ ಹೋಗಿ ನೋಡಲು ಮೊದಲು ಅನುಮತಿ ಕೊಡಿ....

ಎಡಕ್ಕೆ ಹೋಗುತ್ತಾನೆ

ದೃಶ್ಯ -೩

ಮರಿಯ ಮಗ್ದಲೀನೆ , ವೀರುಸ್

ವೀರುಸ್ : ನಿನ್ನ ಆ ಕ್ರೂರ ನುಡಿಗಳನ್ನು ಕೇಳಿದ ನಂತರ ನೀನಾಗಿ ನೀನೇ ಈ ರೀತಿ ನನ್ನನ್ನು ನೋಡಲು ಬರುವ ಸಂತಸಕ್ಕೆ ನಾನಂತೂ ಸಿದ್ಧವಾಗಿರಲಿಲ್ಲ. ಬೇಸರಿಕೆಗಳೂ ಕಳೆಯುವವೆಂಬ ನಂಬಿಕೆಯನ್ನು ಅಳಿಸಿಹಾಕಿದ್ದವು ಆ ನಿನ್ನ ಮಾತುಗಳು.....

ಮರಿಯೆ : ನಾನಾಗ ಮೂರ್ಖಳಾಗಿದ್ದೆ; ಆದರೆ ವಿಚಾರಶಕ್ತಿ ಈಗ ಮರಳಿದೆ. ಉತ್ಕೃಷ್ಟ ಎನಿಸಿಕೊಂಡ ಪ್ರೇಮ ಕೂಡ ಒಂದು ಹನಿ ಕಣ್ಣೀರಿಗೆ ಸಮವಲ್ಲ ಅನ್ನುವುದು ನನಗೀಗ ತಿಳಿದಿದೆ.

ವೀರುಸ್ : ಕಣ್ಣೀರು ಹರಿಸುವುದಾದರೆ ಅದು ಉತ್ಕೃಷ್ಟ ಪ್ರೇಮ ಹೇಗಾದೀತು...?

ಮರಿಯೆ : ನನಗಂತೂ ಉತ್ಕೃಷ್ಟ ಪ್ರೇಮ ಅಥವಾ ನಿಕೃಷ್ಟ ಪ್ರೇಮಗಳೆಂಬುದೇ ಇಲ್ಲ. ಇತ್ತೀಚಿನವರೆಗೆ ಬೇರೆಯವರು ಲಾಭಪಡೆದುಕೊಳ್ಳುತ್ತಿದ್ದ ಅಸತ್ಯಗಳ ನಡುವೆ ಜೀವಿಸಿದ್ದೆ ; ಕಳೆದ ಆರು ತಿಂಗಳಿಂದಂತೂ ನನಗೆ ಮಾತ್ರ ಲಾಭ ದೊರೆಯುವ ಸತ್ಯಗಳ ನಡುವೆಯೇ ಬದುಕುತ್ತಿದ್ದೇನೆ.

ವೀರುಸ್ : ಹಾಗಂದರೇನು?

ಮರಿಯೆ : ಅಂದರೆ ಮುಂಚೆಗಿಂತ ಹೆಚ್ಚು ಜಾಣತನದಿಂದ ಹೆಚ್ಚಿನ ದರಕ್ಕೆ ನಾನು ನನ್ನನ್ನು ಮಾರಿಕೊಳ್ಳುತ್ತಿದ್ದೇನೆ.

ವೀರುಸ್ : ಮಗ್ದಲೀನೆ!.... ನಿನ್ನನ್ನ ನೀನೇ ಹೀಯಾಳಿಸಿಕೊಳ್ಳುತ್ತಿದ್ದೀಯ!

ಮರಿಯೆ : ನಿನ್ನ ಅದೃಷ್ಟ ಪರೀಕ್ಷೆ ಮಾಡಿಕೊ, ಆಗ ತಿಳಿಯುತ್ತದೆ. ನಾನು ನನ್ನನ್ನು ಹೀಯಾಳಿಸಿಕೊಳ್ಳುತ್ತಿಲ್ಲ, ನನ್ನ ಬೆಲೆ ಹೆಚ್ಚಿಸಿಕೊಂಡಿದ್ದೇನೆ ಎಂದೆ.

ವೀರುಸ್ : ಆದರೆ ನಾನು ನಿನಗೆ ಕೊಡುವಷ್ಟು ಬೆಲೆಗಿಂತ ಕಡಿಮೆ ಬೆಲೆಯನ್ನೇ ನಿನಗೆ ನೀನು ಕೊಟ್ಟುಕೊಂಡಿರುತ್ತೀಯ. ನನ್ನ ಪ್ರಕಾರ ನಿನ್ನನ್ನ ನೀನೇ ಹೀಯಾಳಿಸಿಕೊಳ್ಳುವ ಪ್ರಯತ್ನದಲ್ಲಿ ನೀನಂತೂ ಗೆಲ್ಲುವುದಿಲ್ಲ. ನಿನ್ನ

ಮಾತಿನಲ್ಲಿ ನನಗೆ ಕಾಣುವುದು, ಗಾಢಗಾಯಗಳಿಂದ ಭಗ್ನಗೊಂಡ ಆತ್ಮದ ನ್ಯಾಯಬದ್ಧ ದಂಗೆಯೇ ಹೊರತು ಮತ್ತೇನೂ ಅಲ್ಲ.

ಮರಿಯೆ : ನಿನ್ನ ಮಾತು ತಪ್ಪು. ಭಗ್ನಗೊಂಡ ಆತ್ಮವಲ್ಲ, ತನ್ನನ್ನು ತಾನೇ ಹುಡುಕಿಕೊಳ್ಳುತ್ತಿರುವ ಆತ್ಮ.

ವೀರುಸ್ : ನಿನ್ನ ಮಾತಿನಲ್ಲಿ ಒಂದು ಶಬ್ದವನ್ನೂ ನಾನು ನಂಬುವುದಿಲ್ಲ. ಆದರೂ, ಯಾವುದೇ ಶ್ರೇಷ್ಠ ಆದರ್ಶದಲ್ಲಿ ಕಳೆದು ಹೋಗುವುದರ ಬದಲಿಗೆ ಕ್ರೋಧದಿಂದಲೋ, ದ್ವೇಷದಿಂದಲೋ ಅಂತೂ ನಿನ್ನನ್ನು ನೀನು ನನಗೆ ಅರ್ಪಿಸಿ ಕೊಳ್ಳುವುದೇ ಲೇಸು. ಅಲ್ಲದೆ ನಿನಗೆ ಅತ್ಯಾಧಿಕ ಬೆಲೆ ಕಟ್ಟುವುದೇ ಇಲ್ಲಿನ ಪ್ರಶ್ನೆಯಾದ್ದರಿಂದ, ಮಗ್ದಲೀನೆ, ಈ ಕ್ಷಣದಿಂದ ನೀನು ನನ್ನವಳು, ತಿಳಿದುಕೊ.

ಮರಿಯೆ : ಇರಬಹುದು.... ಆದರೀಗ ನಮ್ಮ ಅತಿಥೇಯ ಮರಳುತ್ತಿದ್ದಾರೆ. ಸದ್ಯಕ್ಕೆ ಈ ಚರ್ಚೆ ಬೇಡ.....

ಎಡದಿಂದ ಸಿಲಾನುಸ್, ಅಪ್ಪಿಯುಸ್ ಮತ್ತು ಕೋಲಿಯುಸ್ ಪ್ರವೇಶ

ದೃಶ್ಯ -೪

ಅದೇ. ಸಿಲಾನುಸ್, ಅಪ್ಪಿಯುಸ್, ಕೋಲಿಯುಸ್

ಅಪ್ಪಿಯುಸ್: (ಮರಿಯೆ ಮಗ್ದಲೀನೆಯ ಹತ್ತಿರ ಹೋಗುತ್ತಾ) ವೀನಸ್ ಸೈಪ್ರೆಸ್ ಬಿಟ್ಟು ಜೆರೂಸಲೆಮ್ ಮೇಲೆ ಹಾರಾಡುತ್ತಾ ಇದ್ದಾಳೆ ! ಆಹಾ, ತೆಲೆಮೊನ್‌ನ ಮಗನ ತುಟಿಗಳಿಗೆ ಮುಗುಳ್ನಗೆ ಮರಳಿಸುವ ಸುಂದರಿ ತೆಕ್‌ಮೆಸ್ಸಾ ಅನ್ನಬೇಕು ! ಓ ಕೋಲಿಯಸ್, ಪ್ರೇಮ ಮತ್ತು ಸೌಂದರ್ಯಗಳು ಈ ಮೊಗಸಾಲೆಯ ಕೆಳಗೆ ಮಾಡಿಟ್ಟಿರುವ ಈ ಸುಂದರ ರೂಪವನ್ನು ನೋಡಿ ಸಂತಸ ಪಡು. !

ಕೋಲಿಯುಸ್: ನೀಲಿಯಾಕಾಶ ಆ ಎರಡು ಕಂಬಗಳ ನಡುವೆ ಅವರಿಗಾಗೇ ಚಾಚಿದೆ ಅನ್ನುವಂತಿದೆ.

ಸಿಲಾನುಸ್ : ಯೌವನ ಮತ್ತು ಪ್ರೇಮಗಳನ್ನು ಸುತ್ತುವರಿದಾಗ ಮಾತ್ರ ನೀಲಿ ಮತ್ತು ಪ್ರಕಾಶಗಳು ಸಂತೋಷಿಸುವ ಹಾಗೆ ತೋರುತ್ತದೆ... ಆದರೆ, ವಯಸ್ಸಿನಿಂದ ಭಾರವಾದ ನನ್ನ ತಲೆಗೆ ತಕ್ಕನಾದ ಮಂದ ಪ್ರಕಾಶದ ಪ್ರತಿಮೆಗಳಿಗೆ ಮರಳುವುದಾದರೆ, ಒಂದು ಕ್ಷಣದ ಹಿಂದೆ ಆ ನಜರೀನನ ಗುಂಪಿನ ಬಗ್ಗೆ ಮಾತಾಡಿಕೊಳ್ಳುವ ಪ್ರಮೇಯ ಒಂದು ರೀತಿಯ ಮುನ್ಸೂಚನೆ ಇದ್ದಿರಬೇಕು. ಯಾಕಂದರೆ ಅದೇ ಗುಂಪಿನ ಕಾರಣದಿಂದಲ್ಲವೆ ನಮ್ಮ ಅತಿಥಿಗಳು ವಿಳಂಬವಾಗಿ ಬಂದಿದ್ದು.... ?

ಅಪ್ಪಿಯುಸ್: ಹೌದು.... ಕೆಳಗೆ ಕಾಣುವ ಆ ಕೊನೆಯ ಅಡ್ಡರಸ್ತೆಗೆ ಬಂದಾಗ ಇಡೀ ಪ್ರದೇಶವೇ ಗಲಿಬಿಲಿಗೊಂಡಿತ್ತು. ಕಣ್ಣು ಬಂದವೆಂದು ಹೇಳಲಾದ ಕುರುಡನ ಸುತ್ತ ನೆರೆದು ಕೂಗಾಡುತ್ತಾ, ಕೈಯಿಬಾಯಿ ಆಡಿಸುತ್ತಿದ್ದ ಜನರು ದಾರಿಗೆ ಅಡ್ಡಗಟ್ಟಿದ್ದರು.

ವೀರುಸ್ : ಹೌದು, ಯೂದಿಯಾ ಬಿಟ್ಟರೆ ಇನ್ನೆಲ್ಲೂ ಕಾಣಸಿಗದ ವಿಶೇಷತೆಗಳಲ್ಲಿ ಅದೊಂದು.

ಕೋಲಿಯುಸ್: ಅಸಾಮಾನ್ಯವಾಗಿತ್ತು! ಪಾಪದ ಮನುಷ್ಯ, ಗೋಡೆಗೆ ಡಿಕ್ಕಿ ಹೊಡೆದ, ತುಂಬಿದ ಕಣ್ಣುಗಳ ಗುಡ್ಡೆಗಳನ್ನಾಡಿಸಿದ, ಕೂಗಿದ : ''ಅವನೊಬ್ಬ ಪ್ರವಾದಿ! ಅವನೊಬ್ಬ ಪ್ರವಾದಿ! ಜನ ಮರಗಳಂತೆ ಕಾಣುತ್ತಿದ್ದಾರೆ, ನಡೆದಾಡುತ್ತಿದ್ದಾರೆ!''. .... ಜನರೆಲ್ಲ ಸಂತೋಷದಿಂದ ಸುತ್ತ ಕುಣಿದಾಡಿದರು. ಅವನಂತೂ ಬೆಳಕಿನಿಂದ ಕುರುಡಾದಂತೆ ತೋರಿತು.

ಅಪ್ಪಿಯುಸ್: ವೈನಿನಿಂದಾಗಿ ಹಾಗಾಡಿರಬಹುದು.... ಅವನು ಸುಮ್ಮನೆ ತೂರಾಡುತ್ತಿದ್ದ.

ವೀರುಸ್ : ಮತ್ತೆ, ನಜರೀನ್‌ನನ್ನು ನೋಡಿದೆಯಾ?

ಅಪ್ಪಿಯುಸ್: ಅತಿ ಹೆಚ್ಚು ವ್ಯಗ್ರವಾದ ಒಂದು ಗುಂಪಿನೊಂದಿಗೆ ಅವನು ಹೊರಟು ಹೋದ; ಹಾಗಾಗಿಲ್ಲದಿದ್ದರೆ ನಾವು ಹಾದು ಬರುವುದು ಸಾಧ್ಯವೇ ಇರುತ್ತಿರಲಿಲ್ಲ.

ಮರಿಯೆ : ಹೌದು, ಆ ಕಿಡಿಗೇಡಿಗಳು ಅವರ ಮುಖಂಡನ ಸುತ್ತ ಸೇರಿದಾಗ ಸೀಜರ್ ಬಂದರೂ ದಾರಿ ಬಿಡುವವರಲ್ಲ.

ಕೋಲಿಯುಸ್: ಆತನೆಲ್ಲಿ ಹೋದ? ಆತನನ್ನು ನೋಡುವ ಕುತೂಹಲ ನನಗೆ.....

ಸಿಲಾನುಸ್ : ಬಹಳ ದೂರ ಹೋಗಿರಲಾರರು... ನನ್ನ ಉದ್ಯಾನದ ಕೆಳಗಿರುವ ಆ ಲಾರೆಲ್ ದಿಣ್ಣೆ ಕಾಣಿಸುತ್ತಿದೆಯಾ?... ಅದು ನನ್ನ ಪುಟ್ಟ ರಾಜ್ಯವನ್ನು ಮತ್ತು ಕುಷ್ಠರೋಗಿ ಸೈಮನ್ ಎಂಬ ನನ್ನ ನೆರೆಯವನ ತೋಟವನ್ನು ಬೇರೆ ಮಾಡುತ್ತದೆ.

ಮರಿಯೆ : (ದಿಣ್ಣೆಯನ್ನೇ ನೋಡುತ್ತಾ) ಏನು, ನೆರೆಯವನು ಕುಷ್ಠ ರೋಗಿಯೆ?.... ನೀವು ನಮಗೆ ಮೊದಲೇ ಹೇಳಬೇಕಿತ್ತು...

ಸಿಲಾನುಸ್ : ಭಯಬೇಡ ಅಮ್ಮಣ್ಣಿ, ಅವನಿಗೀಗ ಕುಷ್ಠರೋಗ ಇಲ್ಲ...

ಅಪ್ಪಿಯುಸ್ : ಕುಷ್ಠರೋಗಿ ಅಂದರೆ ಜೀವಮಾನವಿಡೀ ಅವನು ಕುಷ್ಠರೋಗಿಯೇ ಆಗಿರುತ್ತಾನೆ ಎಂದು ನಾನು ಅಂದುಕೊಂಡಿದ್ದೆ. ಒಬ್ಬ ಸೆನೆಟರ್ ಜೀವಮಾನವಿಡೀ ಸೆನೆಟರ್ ಆಗಿರುವಂತೆ.... ಯೂದಿಯಾದ ವಿಚಿತ್ರಗಳಲ್ಲಿ ಇದೂ ಒಂದು.

ಸಿಲಾನುಸ್ : ನಜರೀನ್ ಅವನನ್ನು ವಾಸಿ ಮಾಡಿದನು.

ಕೋಲಿಯುಸ್: ನಿಜವಾಗಿಯೂ ವಾಸಿ ಮಾಡಿದನೆ?... ಅವನ ನೆರೆಯವನಾಗಿ ನಿಮಗೆ ನಿಜ ತಿಳಿದಿರಬೇಕಲ್ಲ.

ಸಿಲಾನುಸ್ : ನಿಮ್ಮೆದುರಿಗಿರುವ ಈ ಮಗ್ದಾಲಾದ ಗುಲಾಬಿಯಂತೆ, ಬೆಥನೀಯ ಲಿಲಿ ಹೂಗಳಂತೆ ಅವನ ಮುಖದಲ್ಲಿ ಈಗಂತೂ ಆರೋಗ್ಯ ತುಂಬಿಕೊಂಡಿದೆ ಎಂದು ಮಾತ್ರ ಬಲ್ಲೆ. ಆದರೆ ಅವನನ್ನು ಮೊದಲು ನೋಡಿರಲಿಲ್ಲವಾದ್ದರಿಂದ ಅವನು ರೋಗಿಷ್ಠನಾಗಿದ್ದನೆ ಎಂಬುದೇ ನನಗೆ ಗೊತ್ತಿಲ್ಲ...

ಅಪ್ಪಿಯುಸ್ : ನಾನೂ ಹಾಗೇ ಅಂದುಕೊಂಡೆ.... ಅಲ್ಲದೆ, ಥ್ರಾಸ್ ಮತ್ತು ಈಜಿಪ್ಟಿನಲ್ಲಿ ಇನ್ನೂ ಹೆಚ್ಚು ಅಸಾಮಾನ್ಯ ಮಂತ್ರಗಾರರನ್ನು ನೋಡಿದ್ದೇನೆ.... ಆದರೆ ಕುಷ್ಠರೋಗ ಗುಣವಾಯಿತೆನ್ನಲಾದ ವಿಷಯಕ್ಕೆ ಮರಳುವುದಾದರೆ - ಆ ದಿಣ್ಣೆಯ ಹಿಂದೆ ನಿನ್ನ ನಿಗೂಢ ನೆರಮನೆಯಲ್ಲಿ ಏನು ಜರುಗುತ್ತಿದೆ?

ಸಿಲಾನುಸ್ : ಕಳೆದ ಮೂರು ದಿನಗಳಿಂದ ನಜರೀನ್ ಅವನ ಅತಿಥಿ. ಈ ಸೈಮನ್, ಅವನ ತಂಗಿ, ಹೆಂಡತಿ ಮತ್ತು ಬಹುಶಃ ಅವನ ಭಾವಮೈದುನ- ಇವರೆಲ್ಲ ಆಲಿವ್ ಮರಗಳ ಉತ್ಪನ್ನ ಆಧರಿಸಿ ಜೀವನ ನಡೆಸುತ್ತಿರುವ ಸಾಮಾನ್ಯ ಜನ. ಅವರೆಲ್ಲ ಭಯಸ್ಥರು, ಶಾಂತಿಪ್ರಿಯರು ; ಆದರೆ ನಜರೀನ್ ಬಂದಾಗಿನಿಂದ ಎಲ್ಲವೂ ಗಿಜಿಬಿಜಿಯಾಗಿದೆ. ಒಂದೇ ಸಮ ಜನ ಬರುತ್ತಾರೆ, ಹೋಗುತ್ತಾರೆ; ಒಂದೇ ಸಮ ಗಿಜಿಬಿಜಿ. ಅವರ ತೋಟದ ತುಂಬ ರೋಗಿಗಳು, ಅಲೆಮಾರಿಗಳು, ಕುಂಟರು - ಹೀಗೆ ಯೂದಿಯಾದ ಕಲ್ಲು ಬಂಡೆಗಳ ಒಕ್ಕಲುಗಳೆಲ್ಲ ಅಲ್ಲೇ ತುಂಬಿದ್ದಾರೆ; ಜಗತ್ ರಕ್ಷಕ, ದಾವೂದ್‌ನ ಮಗ, ಯಹೂದಿಗಳ ರಾಜ ಮುಂತಾಗಿ ಆತನನ್ನು ಕರೆಯುತ್ತಾ ಆತನ ಉಪದೇಶ ಪಡೆಯುತ್ತಾರೆ. ಒಂದೊಂದು ಸಲ ಜನ ಎಷ್ಟು ತುಂಬಿರುತ್ತಾರೆಂದರೆ, ನನ್ನ ತೋಟದ ಒಳಕ್ಕೂ ಹರಿದಿರುತ್ತಾರೆ. ಆ ದಿಣ್ಣೆ ನಿಮಗೇ ಕಾಣುತ್ತಲ್ಲ, ಅದನ್ನು ಜನ ತುಳಿದುತುಳಿದು ಚಪ್ಪಟ್ಟೆ ಮಾಡಿದ್ದಾರೆ, ಅಲ್ಲದೆ ಕೆಲವು ಕಡೆ ಕಿತ್ತೂ ಹಾಕಿದ್ದಾರೆ. ಅದೃಷ್ಟವಶಾತ್ ನಜರೀನ್ ಕಣ್ಣಿಗೆ ಬೀಳುವುದು ಕೆಲವೇ ಸಲ, ಅದೂ ಕೆಲ ಕ್ಷಣಗಳು ಮಾತ್ರ. ಇಷ್ಟೆಲ್ಲಾ ಅನಾನುಕೂಲತೆ ಇದ್ದರೂ ಈ ವಿಹಂಗಮ ನೋಟ ನನಗೆ ಸೋಜಿಗದಂತೆ ಸಂತಸವನ್ನೂ ತರುತ್ತಿದೆ.

ಎಡದಿಂದ ಐದು ಅಥವಾ ಆರು ಬಡ ಜನರ ಪ್ರವೇಶ

ಕೋಲಿಯುಸ್: ಯಾರು ಆ ಜನ?

ಸಿಲಾನುಸ್ : ಏನು ಹೇಳಿದೆ ನಾನು?..... ರೊಟ್ಟಿ ಬೇಡಲು ಆ ಐದಾರು ಜನ ಬರುತ್ತಿದ್ದಾರೆ..

ಅಪ್ಪಿಯುಸ್ : ಅವರು ಈ ಪ್ರಖ್ಯಾತ ಗುಂಪಿಗೆ ಸೇರಿದವರಾ?

ಮರಿಯ : ಅವರನ್ನು ನೋಡಿದರೆ ಸಾಕು ಸಿಟ್ಟು ಅಸಹ್ಯ ಉಂಟಾಗುತ್ತದೆ!... ಒಬ್ಬನ ಇಡೀ ಮುಖವನ್ನು ಹುಣ್ಣು ತಿಂದು ಹಾಕಿದೆ; ಇನ್ನೊಬ್ಬ ಹೆಚ್ಚೂ ಕಮ್ಮಿ ಬೆತ್ತಲೆ; ಮತ್ತೊಬ್ಬ ಹೊಟ್ಟೆಗಿಲ್ಲದವ!....

ಅಪ್ಪಿಯುಸ್ : ಕುರೂಪ, ವಕ್ರಗಳನ್ನು ಮೆರೆದಾಡುವುದಕ್ಕೆ ಅವರಿಗೆ ನಿಜವಾಗಲೂ ನಾಚಿಕೆಯೇ ಇಲ್ಲ!

ಸಿಲಾನುಸ್ : ಅಷ್ಟರ ಮಟ್ಟಿಗೆ ಸಮಾಧಾನ ಕಳೆದುಕೊಳ್ಳಬೇಡ; ಇವು ನಮ್ಮ ಕಣ್ಣು ತಣಿಸುವ ಮೊಗಸಾಲೆಗಳ ಸೌಂದರ್ಯವನ್ನು ಬಹಳ ಕಾಲ ಕೆಡಿಸುವುದಿಲ್ಲ. ನಮ್ಮ ಮಾಲಿಗೆ ಇದು ಗೊತ್ತಾಗಿ ದೊಡ್ಡ ಸಲಿಕೆ ಇಟ್ಟುಕೊಂಡು ಹಿಂದೆಮುಂದೆ ನೋಡದೆ ಅವರನ್ನು ಹೊಡೆದು ಅಟ್ಟುತ್ತಾ ಇದ್ದಾನೆ.... ನೋಡು, ಅವರೇನೂ ಹಟಮಾಡುವುದಿಲ್ಲ, ಸುಮ್ಮನೆ ತಲೆ ಕೆಳಗೆ ಹಾಕಿಕೊಂಡು ಹೊರಟು ಹೋಗಿ ಬಿಡುತ್ತಾರೆ... ನಾವು ಸಾಕಷ್ಟು ಕಾಲ ಈ ದುರದೃಷ್ಟ ಜನರಿಂದ ಅವರ ಮಹಾ ಮುಖಂಡನಿಂದ ಮತ್ತವರ ತೊಂದರೆ ತಾಪತ್ರಯಗಳಿಂದ ಕಾಡಿಸಿಕೊಂಡಿದ್ದೇವೆ; ಇನ್ನಾದರೂ ನಮ್ಮ ನಮ್ಮ ಬಗ್ಗೆ ಯೋಚನೆ ಮಾಡೋಣ; ವಸಂತ ಋತು ನಮ್ಮ ಮುಂದೆ ತಂದಿಟ್ಟಿರುವ ಈ ಸುಖಮಯ ಮಧ್ಯಾಹ್ನವನ್ನು ಸವಿಯೋಣ.... ನಮ್ಮ ಹಳೆಯ ಮಿತ್ರ ಲಾಂಗಿನುಸ್, ಈ ಅಪ್ಪಿಯುಸ್‌ನ ವಿನಂತಿಗಳಿಗೆ ಮನಸೋತು ನಿಮ್ಮಗಳ ಜೊತೆ ಬರಲು ಒಪ್ಪಿದ್ದಿದ್ದರೆ, ನಿಮ್ಮನ್ನು ಇಲ್ಲಿ ಒಟ್ಟಿಗೆ ಕಾಣುತ್ತಿರುವ ನನ್ನ ಸಂತೋಷಕ್ಕೆ ಯಾವುದೇ ಕುಂದು ಇರುತ್ತಿರಲಿಲ್ಲ.

ಅಪ್ಪಿಯುಸ್: ಅವನೇ ಹೇಳಿಕೊಟ್ಟಿದ್ದ ಅತಿ ಮಾತುಗಾರಿಕೆಯ ಅರ್ಥಹೀನತೆಯನ್ನು ಹಿಂದೆಂದೂ ಇಷ್ಟು ಚೆನ್ನಾಗಿ ನಾನು ಕಂಡುಕೊಂಡಿರಲಿಲ್ಲ. ಸಮಾಧಾನ ನೀಡುವ ನನ್ನೆಲ್ಲಾ ಮಾತುಗಳಿಗೂ ಮಂಕುಕವಿದ ಮೌನದಿಂದ ಉತ್ತರಿಸುತ್ತಿದ್ದ ಅಥವಾ ತಲೆ ಆಡಿಸುತ್ತಿದ್ದ; ನಿಮ್ಮ ಸಂತೋಷ ಕೂಟದಲ್ಲಿ ತನ್ನ ಶೋಕದಿಂದ ಮಂಕು ಕವಿಸಲು ತನಗಿಷ್ಟವಿಲ್ಲ ಎಂದು ಹಲವಾರು ಸಲ ಹೇಳಿದ.

ಕೋಲಿಯುಸ್: ಆದರೆ ಮಗು ಸತ್ತು ಮೂರು ವಾರಗಳಾದವಲ್ಲ... ಅವನು ಇಷ್ಟೊಂದು ದುಃಖಿಸುತ್ತಾನೆ ಎಂದು ಕೊಂಡಿರಲಿಲ್ಲ.

ಅಪ್ಪಿಯುಸ್: ಮಗು ಎಳೆಯದಾಗಿತ್ತು.... ಅಲ್ಲದೆ ತಂದೆಗೆ ಇನ್ನೂ ಆ ಮಗುವಿನ ಪರಿಚಯ ಆಗಿರಲೇ ಇಲ್ಲ.... ಸಾವಿಗೆ ಮಾತ್ರ ಆಗಿತ್ತು.

ಸಿಲಾನುಸ್ : ಅದಕ್ಕಿಂತಲೂ ಆಶ್ಚರ್ಯದ ವಿಷಯವೊಂದಿದೆ; ಜ್ಞಾನದ ಅರ್ಥ ತಿಳಿಯುವುದಕ್ಕಿಂತ ಹೆಚ್ಚಾಗಿ ತಿಳಿದಿದ್ದಕ್ಕೆ ಬದ್ಧನಾಗಿರಬೇಕೆಂಬುದು. ಹದಿನೈದು ವರ್ಷಗಳ ಹಿಂದೆ ನಾನು ಅವನು ಕಳಕೊಂಡಿರುವಷ್ಟೇ ಚಿಕ್ಕ ವಯಸ್ಸಿನ ಮಗನನ್ನು ಕಳಕೊಂಡಾಗ ಲಾಂಗಿನುಸ್ ನನ್ನನ್ನು ಸಮಾಧಾನ ಪಡಿಸಲು ಯತ್ನಿಸಿದ. ಮೆತ್ರೊದೊರಸ್, ಪನೋತಿಯುಸ್ ಮತ್ತು ಹರ್ಮೊರುಸ್‌ರನ್ನು ಉದ್ಧರಿಸಿ, ಅದರ ಆಧಾರದ ಮೇಲೆ ನನಗೊಂದು ದೊಡ್ಡ ಪತ್ರ ಬರೆದು ಅದರಲ್ಲಿ ದುಃಖ ಕೇವಲ ನೀರುಪಯೋಗಿಯಷ್ಟೆ ಅಲ್ಲ, ಕೃತಘ್ನ ಕೂಡ ಎಂದು ಸಾಬೀತು ಮಾಡಿದ. ಆ ಪತ್ರ ಇವತ್ತು ಬೆಳಿಗ್ಗೆ ಸಿಕ್ಕಿತು, ತೆಗೆದು ಓದಿದೆ. ಅದರ ಕೆಲ ಮುಖ್ಯ ಭಾಗಗಳು ಎಷ್ಟು ಪ್ರಭಾವಶಾಲಿಯಾಗಿವೆ ಎಂದರೆ ಅವು ನನಗೆ ಬಾಯಿಗೇ ಬರುತ್ತವೆ... ಸಾವು ನೋವುಗಳ ವಿರುದ್ಧ ಮನುಷ್ಯನ ಜ್ಞಾನ ನುಡಿಯಬಲ್ಲ ಅತ್ಯಂತ ಗಂಭೀರ ಮಾತುಗಳವು. ಆ ಮಾತುಗಳೇ ನನ್ನನ್ನು ಒಮ್ಮೆ ಕಾಪಾಡಿದ್ದವು...

ಮರಿಯೆ : ಯಾವು ಆ ಮಾತುಗಳು? ದುಃಖ ನಿವಾರಕವಾದುದನ್ನು ತಿಳಿದುಕೊಳ್ಳುವುದು ಅದೆಷ್ಟು ಚೆನ್ನ....

ಸಿಲಾನುಸ್ : ನೀನು ಸಮಾಧಾನ ಬಯಸುತ್ತಿದ್ದೀಯ. ನಿನಗೆ ಸಿಗುವುದು ಬರೀ ಆಪಾದನೆ, ನಿಂದನೆ. ಮಗುವಿನ ಸಾವನ್ನೇ ನೀನು ಇಷ್ಟು ತಾಳ್ಮೆಗೆಟ್ಟು ಅನುಭವಿಸುತ್ತಿದ್ದೀಯ; ಇನ್ನು ಗೆಳೆಯನನ್ನು ಕಳಕೊಂಡಿದ್ದಿದ್ದರೆ ಏನು ಮಾಡುತ್ತಿದ್ದೆ? ನನಗೊಬ್ಬ ಮಗನಿದ್ದ, ಅದರಿಂದ ನಾನು ಸಂತೋಷವಾಗಿದ್ದೆ ಎನ್ನುವುದನ್ನು ಮಾತ್ರ ಮನಸ್ಸಿನೊಳಗಿಟ್ಟುಕೊಂಡಿರಬೇಕು. ಇನ್ನು ಅವನು ಇಲ್ಲವಲ್ಲ ಎಂಬ ವಿಷಯವನ್ನಲ್ಲ. ಅನೇಕ ಜನ ಮಾಡುವುದೇ ಹೀಗೆ. ಗತದಲ್ಲಿದ್ದ ಸುಖ, ಅನುಕೂಲಗಳು ಲೆಕ್ಕಕ್ಕೇ ಇಲ್ಲ ಎನ್ನುವ ಹಾಗೆ ವರ್ತಿಸುತ್ತಾರೆ. ಗೆಳೆಯನೊಂದಿಗೆ ಗೆಳೆತನವನ್ನೂ ಹೂತು ಬಿಡುತ್ತಾರೆ....

ಅಪ್ಪಿಯುಸ್: ನಮ್ಮ ಗೌರವಾನ್ವಿತ ಹಿರಿಯರ ಜ್ಞಾನ ಸಂಪದವನ್ನು ಗುರುತಿಸಿ ಗೌರವಿಸುತ್ತೇನೆ.

ಸಿಲಾನುಸ್ : ದುರಾದೃಷ್ಟ ಅವನಿಗೇ ಬಡಿದಿರುವಾಗ ಅದನ್ನೇಕೆ ನೆನಪಿಸಿ ಕೊಳ್ಳುತ್ತಿಲ್ಲ? ನಾನಾದರೂ ಯಾಕೆ ಸಮಯಕ್ಕೇ ಸರಿಯಾಗಿ ಅದನ್ನ ಮರೆತೆ? ಅವನು ಬರೆದಿದ್ದ; ನನ್ನ ಮಾತನ್ನ ನಂಬು. ನಾವು ಹೆಚ್ಚು ಪ್ರೀತಿಸಿದವರ ವಿಷಯದಲ್ಲಿ ಹೆಚ್ಚು ಜವಾಬ್ದಾರಿ ಇರುವುದು ಗೊತ್ತಾಗುವುದು ಸಾವು ಅವರನ್ನು ಇಲ್ಲಿಂದ ಸೆಳೆದು ಕೊಂಡಾಗಲೇ. ಕಳೆದು ಹೋದ ಸಮಯ ಮಾತ್ರ ನಮ್ಮದು ; ನನಗಂತೂ ಆಗಿ ಹೋಗಿದ್ದಕ್ಕಿಂತ ಇನ್ನು ಯಾವುದೂ ನಿಶ್ಚಿತವೆಂದು ತೋರುತ್ತಲೇ ಇಲ್ಲ. ನಾವು ಈಗಾಗಲೇ ಪಡೆದದ್ದರ ಭವಿಷ್ಯದ ಬಗೆಗಿನ ವಿಶ್ವಾಸ ನಿಮ್ಮನ್ನು ವಿಶ್ವಾಸ ಘಾತುಕರನ್ನಾಗಿಸುತ್ತದೆ. ನಾವು ಬಯಸುವ ಸಹಾಯ ಗತಕಾಲದ ನಡುವೆ ಬಹುಬೇಗ ಒಂದಾಗಿ ಹೋಗುವುದಿಲ್ಲವೇನೋ ಎಂಬಂತೆ. ಅವನು ಮುಂದಿನ ಭರವಸೆಯನ್ನು ನಿನಗೆ ಉಂಟು ಮಾಡುವ ಮೊದಲೇ ಆ ಎಳೇಮಗುವನ್ನು ಮೃತ್ಯು ನಿನ್ನಿಂದ ಕಸಿದು ಕೊಂಡಿದೆ. ಸ್ವಲ್ಪಕಾಲ ವ್ಯಯವಾಯಿತು. ಅಷ್ಟೇ ಎಳೇಕೂಸುಗಳನ್ನು ಕಳೆದುಕೊಂಡು ಒಂದೂ ಹನಿ ಕಣ್ಣೀರು ಹರಿಸದೆ, ಅವುಗಳನ್ನು ಸಮಾಧಿ ಮಾಡಿ ಸೀದಾ ಸೆನೆಟ್‌ಗೆ ಬರುವ ತಂದೆಯರ ಅಸಂಖ್ಯಾತ ಉದಾಹರಣೆಗಳಿವೆ. ಇದು ಅವಿವೇಕವೇನಲ್ಲ; ಯಾಕಂದರೆ ಮೊದಲನೆಯದಾಗಿ ದುಃಖ ಬೇರೆ ಯಾವುದಕ್ಕೂ ಎಡೆ ಮಾಡಿಕೊಡ ದಂತಿರುವಾಗ ನಾವು ದುಃಖಕ್ಕೆ ನಮ್ಮನ್ನು ಕೊಟ್ಟುಕೊಳ್ಳುವುದು ನಿರರ್ಥಕ. ಈಗ ಸದ್ಯಕ್ಕೆ ಈ ದುರಾದೃಷ್ಟ ಒಬ್ಬನಿಗೆ ಮಾತ್ರ ಬಂದೊದಗಿದೆ. ಆದರೆ ಅದು ಯಾರಿಗೆ ಬೇಕಾದರೂ ಬರಬಹುದು. ಅದರ ವಿರುದ್ಧ ದೂರುವುದೆಂದರೆ ಅನ್ಯಾಯ. ಅಷ್ಟೇ ಅಲ್ಲದೆ, ಸತ್ತವ ಮತ್ತು ಶೋಕಿಸುವವನ ನಡುವಿನ ಅಂತರ ಇಷ್ಟು ಕಡಿಮೆ ಇದ್ದಾಗ ಪ್ರಲಾಪಿಸುವುದು ಮೂರ್ಖತನವೇ. ಮನುಕುಲದವರೆಲ್ಲ ಬೇರಬೇರೆ ಅಂತರಗಳಲ್ಲಿ, ಬಹು ಘೋರವೆಂದು ಕಾಣುವ ಅಂತರಗಳಲ್ಲಿ, ಒಂದೇ ಗುರಿಯ ಕಡೆ ಹೋಗುತ್ತಿದ್ದಾರೆ ಎಂದು ತಿಳಿದುಕೋ. ನೀನು ಸತ್ತನೆಂದುಕೊಂಡವ ಮೊದಲು ಹೋಗಿದ್ದಾನೆ ಅಷ್ಟೆ. ನಾವೆಲ್ಲ ಅದೇ ರಸ್ತೆಯಲ್ಲಿ ಹೋಗಬೇಕಾದವರು. ಬುದ್ಧಿವಂತ ನಾದವ ತನಗಿಂತ ಮೊದಲು ಹೋದವನ ಕುರಿತು ಅಳುವುದು ಅರ್ಥ

ಹೀನವಲ್ಲವೆ? ಮಗ ಸತ್ತ ಅಥವಾ ಗೆಳೆಯ ಸತ್ತ ಎಂದು ಪ್ರಲಾಪಿಸುವುದರ ಅರ್ಥ, ಮಗ ಅಥವಾ ಗೆಳೆಯ ಹುಟ್ಟಿದ್ದೇ ತಪ್ಪು ಅಂದಂತೆ. ನಾವೆಲ್ಲ ಅದೇ ವಿಧಿಯಲ್ಲಿ ಸಿಲುಕಿಕೊಂಡಿದ್ದೇವೆ. ಪ್ರಪಂಚಕ್ಕೆ ಬಂದವರೆಲ್ಲ ಅದನ್ನು ತ್ಯಜಿಸಲೇಬೇಕು. ಒಬ್ಬ ಹೆಚ್ಚು ಕಾಲ ತಂಗಬಹುದು, ಆದರೆ ಅಂತ್ಯ ಮಾತ್ರ ಅದೇ. ಮೊದಲ ದಿನದಿಂದ ಕಡೆ ದಿನದವರೆಗೆ ಕಳೆಯುವ ಕಾಲ ಅನಿರ್ದಿಷ್ಟವಾದುದು, ಬದಲಾವಣೆಗಳಿಂದ ಕೂಡಿದುದು. ಜೀವನದ ನಿರರ್ಥಕತೆಯನ್ನು ಮಾತ್ರ ನೀನು ಗಮನಿಸುವುದಾದರೆ, ಅದು ಬಹಳ ದೀರ್ಘ. ಮಗುವಿನ ಪಾಲಿಗೂ ಸಹ. ಕಾಲದ ವ್ಯಾಪ್ತಿಯನ್ನು ಗಮನಿಸುವುದಾದರೆ, ಮುದುಕನ ಪಾಲಿಗೂ ಅದು ಕಡಿಮೆ ಆಗಿರುತ್ತದೆ.

ಮರಿಯೆ : ಅದರಿಂದ ನನಗಂತೂ ಸಮಾಧಾನವಾಗುತ್ತಿರಲಿಲ್ಲ.....

ಸಿಲಾನುಸ್ : ಸಮಾಧಾನ ಮಾಡುವುದು ಅಂದರೆ, ಅಮ್ಮಣ್ಣಿ, ದುಃಖವನ್ನು ಹೋಗಲಾಡಿಸುವುದಲ್ಲ, ಬದಲಾಗಿ ಅದನ್ನು ಮೀರಲು ಕಲಿಸುವುದು.

ಅಷ್ಟರಲ್ಲಿ ಹಾದಿ ಬೀದಿಗಳಿಂದ ಮತ್ತು ಮಾಳಿಗೆಯ ಸುತ್ತಲ ಪ್ರದೇಶದಿಂದ ಮೊದಲು ಮಂದವಾಗಿಯೂ ಗೊಂದಲಮಯವಾಗಿಯೂ ಕೇಳಿ ಬಂದ ಸದ್ದು ಕ್ರಮೇಣ ಸ್ಪಷ್ಟವಾಗುತ್ತದೆ. ಜನ ಗುಂಪುಗಟ್ಟುವ, ತಡಬಡಿಸುವ, ಕಲ್ಲುಗಳು ಉರುಳುವ, ಮಕ್ಕಳು ಅಳುತ್ತಿರುವ, ನಾಯಿಗಳು ಬೊಗಳುತ್ತಿರುವ ಸದ್ದುಗಳು; ಕೆಳಕಂಡ ಕೂಗುಗಳು ಹೆಚ್ಚಾಗುತ್ತವೆ: "ಈ ಕಡೆಗೆ! ಈ ಕಡೆಗೆ!... ಬೇಗ ಬನ್ನಿ!.... ಕೆಳಗೆ!... ಬಲಕ್ಕೆ! ಬಲಕ್ಕೆ!... ಅಗೋ ಆತ ಅಲ್ಲಿ!...... ನಾವು ಆತನನ್ನು ನೋಡಿದೆವು! ಆತ ಮನೆಯಿಂದ ಹೊರಡುತ್ತಿದ್ದಾನೆ!... ಸಿಮೋನನ ತೋಟಕ್ಕೆ! ಲಕ್ವ ಹೊಡೆದವನನ್ನು ಅಲ್ಲಿಗೇ ಒಯ್ಯಿರಿ! ಕುರುಡರನ್ನು ಕರಕೊಂಡು ಹೋಗಿ! ಬೇಗ, ಬೇಗ.... ಈ ಕಡೆಗೆ!... ಆತ ಇವತ್ತು ಉಪದೇಶ ಮಾಡುತ್ತಾನಂತೆ!" ಇತ್ಯಾದಿ...

ಅಪ್ಪಿಯುಸ್ : ಏನಿದು? ಏನಾಗುತ್ತಿದೆ?

ವೀರುಸ್ : ಜನ ಎಲ್ಲ ದಿಕ್ಕಿನಿಂದಲೂ ಧಾವಿಸುತ್ತಿದ್ದಾರೆ.

ಕೋಲಿಯುಸ್ : ಎಲ್ಲ ರಸ್ತೆಗಳೂ ಹುಚ್ಚರಿಂದ ತುಂಬಿರುವಂತಿದೆ!

ಅಪ್ಪಿಯುಸ್ : ಕಲ್ಲುಗಳಿಂದ ಅವರು ಚಿಮ್ಮಿ ಬರುವಂತಿದ್ದಾರೆ!

ಕೋಲಿಯುಸ್ : ಆದರೆ ಇದೇನಾಯಿತು? ಅವರೆಲ್ಲ ಆ ಆಲಿವ್ ಮರಗಳ ಹಿಂದೆ ಮರೆಯಾಗುತ್ತಿದ್ದಾರೆ....

ವೀರುಸ್ : ಇತ್ತ ಕಡೆ ಹಾಸಿಗೆ ಸಮೇತ ಇಬ್ಬರು ರೋಗಿಗಳನ್ನು ಹೊತ್ತು ತರುತ್ತಿದ್ದಾರೆ..

ಕೋಲಿಯುಸ್: ಕುರುಡನೊಬ್ಬ ಬೀಳುತ್ತಿದ್ದಾನೆ.

ಅಪ್ಪಿಯುಸ್ : ಅವರಿಗೇನಾಗುತ್ತಿದೆ?.... ತಲೆ ಕೆಟ್ಟಿದೆಯೊ?....

ವೀರುಸ್ : ಬಂಡೆಗಳ ನಡುವೆ ಕುಪ್ಪಳಿಸುತ್ತಿರುವ ಆ ವಿಚಿತ್ರ ಜೀವಿಗಳು ಯಾರು?

ಸಿಲಾನುಸ್ : ಅವರು ದೆವ್ವ ಹಿಡಿದ ಜನ, ಗೋರಿಗಳಿಂದ ಹೊರ ಬಂದವರು.

ಅಪ್ಪಿಯುಸ್ : ಅದೆಲ್ಲ ಸರಿ. ಆಗುತ್ತಿರುವುದಾದರೂ ಏನು?

ಸಿಲಾನುಸ್ : ಅವರೆಲ್ಲ ನಜರೀನ್‌ನನ್ನು ಕಂಡಿದ್ದಾರೆ....

ಮರಿಯೆ : ನಜರೀನ್? ಎಲ್ಲಿದ್ದಾನೆ ಆತ?

ಸಿಲಾನುಸ್ : ಸಿಮೋನನ ಮನೆಯಿಂದ ಇದೇ ತಾನೇ ಆಚೆ ಬಂದಿರಬೇಕು. ಆತನ ಪ್ರತಿಯೊಂದು ಚಲನವಲನವನ್ನೂ ಅವರು ಗಮನಿಸುತ್ತಿದ್ದಾರೆ. ಆತ ಕಂಡೊಡನೆಯೇ ರೋಗಿಗಳನ್ನ ಹೊತ್ತು ಮುಂದೆ ತರುತ್ತಾರೆ; ಧರ್ಮಾಂಧರೂ ನುಗ್ಗಿ ಬರುತ್ತಾರೆ.... ಆತ ಪಕ್ಕದ ತೋಟದಲ್ಲಿ ಓಡಾಡುತ್ತಿರಬೇಕು... (ಕೇಳಿಸಿಕೊಳ್ಳುವಂತೆ ಅಭಿನಯಿಸಿ) ಹೌದು... ಜನರ ಗುಂಪು ದುಂಬಿಗಳ ಹಾಗೆ ಗುಂಯ್ ಗುಡುತ್ತಿರುವುದು ಕೇಳಿಸುತ್ತಿದೆಯಾ?... ನನ್ನ ಲಾರೆಲ್ ದಿಣ್ಣೆಗೆ ಬಹಳ ಸಮೀಪದಲ್ಲೇ ಇರಬೇಕು....

ಅಪ್ಪಿಯುಸ್ : ಅಲ್ಲಿ ನಾವೂ ಹೋಗಿ ನೋಡಬಹುದಲ್ಲ.

ಸಿಲಾನುಸ್ : ಬೇಡ ಎಂದೇ ನನ್ನ ಸಲಹೆ. ಮೊದಲನೆಯದಾಗಿ ಆ ಜನ ಬಡವರು, ಕೊಳಕರು ಮತ್ತು ಸ್ಪರ್ಶಿಸಲೂ ಅನರ್ಹರು.... ಮೇಲಾಗಿ ಯಹೂದಿಯರ ಧರ್ಮಾಂಧತೆ ನಿನಗೆ ಗೊತ್ತೇ ಇದೆಯಲ್ಲ...

ಇಂಥಾ ಉನ್ಮಾದದ ಕ್ಷಣಗಳಲ್ಲಿ ಅತಿ ಸೌಮ್ಯ ಅನಿಸಿಕೊಂಡವನೂ ಅಪಾಯಕಾರಿಯಾಗಿ ಬಿಡುತ್ತಾನೆ; ರೋಮಾದವರ ಟೋಗಾ, ಮತ್ತು ಶಸ್ತ್ರಗಳನ್ನು ಕಂಡರೇ ಸಾಕು, ಅವರೆಲ್ಲ ವಿಚಿತ್ರ ರೀತಿಯಲ್ಲಿ ಭುಗಿಲೇಳುತ್ತಾರೆ.... ಅಲ್ಲದೆ, ನಾವು ನಿಂತಿರೊ ಕಡೆಯಿಂದಲೆ ಅಲ್ಲಿ ನಡೆಯುವುದನ್ನು ಸಾಕಷ್ಟು ಚೆನ್ನಾಗಿ ನೋಡಬಹುದು, ಕೇಳಿಸಿಕೊಳ್ಳಬಹುದು.... ಕೇಳಿಸಿಕೊ! ಜನರ ಕೂಗಾಟ ಇನ್ನೂ ಹತ್ತಿರ ಹತ್ತಿರ ಬರುತ್ತಿದೆ, ಹೆಚ್ಚಾಗುತ್ತಿದೆ.....

ದಿಣ್ಣೆಯ ಹಿಂದೆ ತೋಟದ ಅಂಚಿನಲ್ಲಿ ಹತ್ತಿರ ಎನ್ನಿಸುವ ಶಬ್ದ ಕೇಳಿ ಬರುತ್ತದೆ. "ಹೊಸನ್ನ! ಹೊಸನ್ನಾ! ಶುಭವಾಗಲಿ! ಜಯಜಯವಾಗಲಿ!... ದೇವ ಪುತ್ರ!... ಸ್ವಾಮಿ, ಸ್ವಾಮಿ, ಕೃಪೆ ತೋರಿ! ಓ ಸ್ವಾಮಿ, ಓ ದಾವೂದ್‌ನ ಪುತ್ರ, ಈ ರೋಗಿಯನ್ನು ಗುಣಪಡಿಸಿ!... ಗುರುವೆ! ಗುರುವೆ! ಸ್ವಾಮಿಯೆ !... ನಜರೆತ್‌ನ ಯೇಸು ನನ್ನ ಮೇಲೆ ಕೃಪೆ ತೋರು!... ದಾರಿ ತೋರು!.... ಶಾಂತಿ! ಶಾಂತಿ!.... ಈತ ಮಾತಾಡುತ್ತಾರೆ!" ಹೀಗಂದ ತಕ್ಷಣ ಗದ್ದಲ ಅಡಗುತ್ತದೆ. ಆಕಾಶದ ಹಕ್ಕಿಗಳು, ಮರದ ಎಲೆಗಳು ಮತ್ತು ಉಸಿರಾಡುವ ಗಾಳಿ - ಎಲ್ಲವೂ ಭಾಗಿಗಳಾದಂತಹ ಮೌನ ; ಅಲೌಕಿಕ ವಾತಾವರಣ ಊರನ್ನೇ ಆವರಿಸುತ್ತದೆ. ಮಾಳಿಗೆ ಮೇಲಿರುವವರನ್ನೂ ಆವರಿಸುವ ಆ ಮೌನದಲ್ಲಿ ಒಂದು ಅದ್ಭುತ ಧ್ವನಿ ಕೇಳ ತೊಡಗುತ್ತದೆ. ಕಾಲ ದೇಶಗಳ ಏಕಮಾತ್ರ ಪ್ರಭುವಿನಂತೆ ಶಕ್ತಿ, ಮಾಧುರ್ಯಗಳಿಂದ ಕೂಡಿ ಪ್ರೇಮ ಜ್ಞಾನ ಮತ್ತು ಉತ್ಸಾಹಗಳಿಂದ ಉನ್ನತವಾಗಿ, ಪ್ರತಿ ಹೃದಯದಿಂದ ದೂರವಾದರೂ ಹತ್ತಿರವೇ ಇರುವ ಹಾಗೆ, ಪ್ರತಿ ಆತ್ಮದಲ್ಲೂ ಉಪಸ್ಥಿತವಿರುವ ರೀತಿಯಲ್ಲಿ-

ವಾಣಿ : ಆತ್ಮಲೋಕದಲ್ಲಿ ಬಡವರೇ ಪುಣ್ಯವಂತರು; ಯಾಕಂದರೆ ಸ್ವರ್ಗದ ಸಾಮ್ರಾಜ್ಯ ಅವರಿಗೇ ಸೇರಿದ್ದು! ಶೋಕಿಸುತ್ತಿರುವವರು ಪುಣ್ಯವಂತರು; ಯಾಕಂದರೆ ಅವರಿಗೇ ಸಮಾಧಾನ ದೊರಕುವುದು!... ನಮ್ರರು ಪುಣ್ಯವಂತರು; ಯಾಕಂದರೆ ಅವರೇ ಈ ಭೂಮಿಗೆ ಬಾಧ್ಯಸ್ಥರು!....

ಅಪ್ಪಿಯುಸ್: ಏನು ಹೇಳುತ್ತಿದ್ದಾನೆ ಆತ?....

ಸಿಲಾನುಸ್ : ಕೇಳಿಸಿಕೊ !... ಬಹಳ ಸ್ವಾರಸ್ಯವಾಗಿದೆ....

ವಾಣಿ : ಒಳಿತಿಗಾಗಿ ಹಸಿವು ತೃಷೆಗಳನ್ನು ಸಹಿಸುವರು ಪುಣ್ಯಶಾಲಿಗಳು; ಯಾಕಂದರೆ ಅವರ ಬಾಧೆ ಹಿಂಗುತ್ತದೆ!.... ದಯಾರ್ದ್ರರು ಪುಣ್ಯಶಾಲಿಗಳು; ಯಾಕಂದರೆ ಅವರಿಗೆ ದಯೆ ದೊರಕುತ್ತದೆ!....

ಮರಿಯೆ : ನಾನು ಅಲ್ಲಿ ನಡೆದಿರುವುದನ್ನು ನೋಡಬೇಕು. (ಏಳುತ್ತಾಳೆ. ದಿವ್ಯ ವಾಣಿಯಿಂದ ಇನ್ನಿಲ್ಲದಂತೆ ಸೆಳೆದವಳಾಗಿ, ಮಾಳಿಗೆಯ ಸೋಪಾನಗಳನ್ನಿಳಿದು ತೋಟದ ಕೆಳಭಾಗಕ್ಕೆ ಹೋಗುತ್ತಾಳೆ)

ಸಿಲಾನುಸ್ : (ಅವಳನ್ನು ತಡೆಯುವಂತೆ, ಮೆಲ್ಲನೆ) ಅಲ್ಲಿ ಹೋಗಬೇಡ!

ವಾಣಿ : ತಿಳಿಮನಸ್ಸಿನವರು ಪುಣ್ಯಶಾಲಿಗಳು; ಯಾಕಂದರೆ ಅವರು ಪರಮಾತ್ಮನನ್ನು ಕಾಣುತ್ತಾರೆ!.....

ಮರಿಯೆ : ನಾನು ಹೋಗೇ ಹೋಗುತ್ತೇನೆ.

ಏರುಸ್ : ನಾನೂ ನಿನ್ನ ಜೊತೆ ಬರುತ್ತೇನೆ.

ಮರಿಯೆ : (ತೀಕ್ಷ್ಣವಾಗಿ, ಖಡಾಖಂಡಿತವಾಗಿ) ಬೇಡ, ಯಾರೂ ಬರುವುದು ಬೇಡ!.....ನನ್ನ ಪಾಡಿಗೆ ನನ್ನನ್ನು ಬಿಡಿ! (ಪರವಶಳಾದಂತೆ ದಿಣ್ಣೆಯ ಕಡೆ ಹೋಗುತ್ತಾಳೆ)

ವಾಣಿ : ಶಾಂತಿದಾತರು ಪುಣ್ಯಶಾಲಿಗಳು; ಯಾಕಂದರೆ ಅವರು ಪರಮಾತ್ಮನ ಮಕ್ಕಳೆಂದು ಹೆಸರು ಪಡೆಯುತ್ತಾರೆ!.... ಒಳಿತಿಗಾಗಿ ಶಿಕ್ಷೆಗೊಳಗಾಗುವವರು ಪುಣ್ಯಶಾಲಿಗಳು; ಯಾಕಂದರೆ ಅವರದೇ ಸ್ವರ್ಗದ ಸಾಮ್ರಾಜ್ಯ!.....

ಏರುಸ್ : ಎಲ್ಲಿ ಹೋಗುತ್ತಿದ್ದಾಳೆ....?

ಅಪ್ಪಿಯುಸ್: ಏನು ಮಾಡುತ್ತಿದ್ದಾಳೆ ?..... ಅವಳಿಗೆ ತಲೆ ಕೆಟ್ಟಿದೆ!... ದಿಣ್ಣೆಯಾಸಿ ಹೋಗಲು ಪ್ರಯತ್ನಿಸುತ್ತಿದ್ದಾಳೆ!....

ವಾಣಿ : ಜನರಿಂದ ಹಂಗಿಸಿಕೊಂಡ, ಹಿಂಸಿಸಿಕೊಂಡ ನೀವುಗಳು ಪುಣ್ಯಶಾಲಿಗಳು!......... ಆನಂದಿಸಿ, ಮಿತಿಮೀರಿ ಸಂತೋಷ ಪಡಿರಿ; ಯಾಕಂದರೆ ಸ್ವರ್ಗದಲ್ಲಿ ನಿಮಗೆ ಅಪಾರ ಪ್ರತಿಫಲವಿದೆ!....

ಏರುಸ್ : ತೋಟದ ಬಾಗಿಲನ್ನು ತೆಗೆಯುತ್ತಿದ್ದಾಳೆ! ಮರಗಳ ಮಧ್ಯೆ ಹೋಗುತ್ತಿದ್ದಾಳೆ!..........

ಸಿಲಾನುಸ್ : ಬುದ್ಧಿವಂತ ಗಂಡಸರಿಗೂ ತಿಳಿಯದಂಥಾ ವಿಚಾರಗಳು ಒಮ್ಮೊಮ್ಮೆ ಈ ಹೆಂಗಸರಿಗೆ ಬರುತ್ತವೆ...

ವೀರುಸ್ : ನಾನೂ ಅವಳ ಜೊತೆ ಹೋಗುತ್ತೇನೆ; ಅವರುಗಳಿಂದ ಅವಳನ್ನು ಕಾಪಾಡಬೇಕಾಗಿ ಬಂದರೆ....

ಸಿಲಾನುಸ್ : ಅಂಥದ್ದೇನೂ ಮಾಡಬೇಡ...... ಅವರೆಲ್ಲ ಆ ವಾಣಿಯಲ್ಲಿ ಮಗ್ನರಾಗಿದ್ದಾರೆ, ಅವಳು ಇದ್ದಾಳೆಂಬುದು ಅವರಿಗೆ ಗೊತ್ತಾಗುವುದಿಲ್ಲ. ಆದರೆ ನಿನ್ನ ಶಸ್ತ್ರಗಳು ಕಣ್ಣಿಗೆ ಬಿದ್ದರೆ, ಕೇಳಿಸಿದರೆ....... ಆತ ಹೇಳುತ್ತಿರುವುದನ್ನು ಕೇಳಿಸಿಕೊ ; ಅತ್ಯಂತ ವಿಶಿಷ್ಟವಾದ್ದು....

ವಾಣಿ : ನಿಮಗೆ ನಾನು ಹೇಳುವುದಿಷ್ಟು: ಶತ್ರುಗಳನ್ನು ಪ್ರೀತಿಸಿ, ಶಪಿಸುವವರನ್ನು ಹರಸಿ, ಹಗೆ ಸಾಧಿಸುವವರ ನೆರವಿಗೆ ಹೋಗಿ. ನಿಮ್ಮನ್ನು ಕೀಳಾಗಿ ಕಾಣುವವರಿಗೋಸ್ಕರ ಪ್ರಾರ್ಥಿಸಿ!....

ಆಗ ಕಣ್ಣಿಗೆ ಕಾಣದ ಜನರ ಕೂಗಾಟ ದಿಣ್ಣೆಯ ಹಿಂದೆ. ಕೆಲವೇ ಮಾತುಗಳು ಸ್ವಲ್ಪ ಸ್ಪಷ್ಟ; 'ರೋಮಿಯ ಹೆಂಗಸು! ಅವಳೇ ಆ ರೋಮಿಯ ಹೆಂಗಸು!.... ಹಾದರಗಿತ್ತಿ! ಲಜ್ಜೆ ಗೆಟ್ಟವಳು! ಲಜ್ಜೆಗೆಟ್ಟವಳು!.... ಲಜ್ಜೆಗೆಟ್ಟವಳು!.... ಕಲ್ಲು ತೂರಿ ಅವಳಿಗೆ! ತೂರಿ ಕಲ್ಲು ಅವಳ ಮೇಲೆ! ಸಾಯಿಸಿರಿ! ಸಾಯಿಸಿರಿ! ಹೊಡೆಯಿರಿ!' ಮುಂತಾದ್ದು ಕೇಳಿಸುತ್ತದೆ. ಜೊತೆಗೇ ಸರಬರ ಹೆಜ್ಜೆ ಸಪ್ಪಳ, ಕಡ್ಡಿ, ಕಲ್ಲುಗಳ ತೂರಾಟದ ಶಬ್ದ

ಸಿಲಾನುಸ್ : ಅವಳನ್ನು ನೋಡಿಬಿಟ್ಟಿದ್ದಾರೆ!...

ವೀರುಸ್ : ಏನಾಗುತ್ತಾ ಇದೆ?... ಅವರು ಹಲ್ಲೆ ಮಾಡುತ್ತಿರುವುದು ಅವಳ ಮೇಲೇ ಏನು?

ಸಿಲಾನುಸ್ : ಹಾಗಾಗುವುದೆಂದು ನಾನು ಹೆದರಿದ್ದೆ.... ಈಗ ನಾವು ಹುಷಾರಾಗಿರಬೇಕು.

ವೀರುಸ್ : (ತೋಟದ ಕೆಳಕ್ಕೆ ಧಾವಿಸುತ್ತಾ) ಈ ಕಡೆ!... ಬನ್ನಿ ನನ್ನ ಹಿಂದೆ! ಅಪ್ಪಿಯುಸ್, ಕೋಲಿಯುಸ್ ನಿಮ್ಮ ಖಡ್ಗಗಳನ್ನು ಕೊಡಿ!...

ಅವನು ನುಗ್ಗುವುದಕ್ಕೆ ಸರಿಯಾಗಿ ಮರಿಯೆ ಮಗ್ದಲೀನಳನ್ನು ಬೆನ್ನಟ್ಟುತ್ತಿರುವ ಜನ ಕಿರುಚಾಡುತ್ತಾ, ಲಾರೆಲ್ ದಿಬ್ಬವನ್ನು ನಾಶ ಮಾಡುತ್ತಾರೆ. ಅವಳು ಮಾಳಿಗೆ ತಲುಪಲು

ಹವಣಿಸುತ್ತಾಳೆ. ಏರುಸ್ ಮತ್ತು ಅವನ ಇಬ್ಬರು ಗೆಳೆಯರು ಅವಳ ಕಡೆ ಓಡಿ, ಜನರ ಆಕ್ರಮಣದಿಂದ ಅವಳನ್ನು ರಕ್ಷಿಸಿಲು ಪ್ರಯತ್ನಿಸುತ್ತಾರೆ. ಕಲ್ಲು ತೂರಾಡುತ್ತಾರೆ. ಏರುಸ್ ಅವರೆಲ್ಲರ ಮುಂದೆ ತನ್ನ ಕತ್ತಿ ಝಳಪಿಸುತ್ತಾನೆ. ಇನ್ನೇನು ಕದನ ಶುರುವಾಗಬೇಕು, ಕೊಂಬೆ ಕಿತ್ತಿದ್ದಾಯ್ತು, ಒಂದು ಮೂರ್ತಿಯನ್ನು ಉರುಳಿಸಿದ್ದಾಯ್ತು, ಇದ್ದಕ್ಕಿದ್ದಂತೆ ಗಟ್ಟಿಯಾದ ಅಶರೀರವಾಣಿಯೊಂದು ಆಲಿವ್ ಮರಗಳ ಹತ್ತಿರದಿಂದ ಕೇಳಿ ಬರುತ್ತದೆ. ಎಲ್ಲರು ಆಶ್ಚರ್ಯದಿಂದ ಸ್ತಬ್ಧರಾಗುತ್ತಾರೆ. ಬಾಯಿಂದ ಬಾಯಿಗೆ ಆಜ್ಞೆ ಹೊರಡುತ್ತದೆ: 'ಸದ್ದು! ಸದ್ದು!... ಕೇಳಿಸಿಕೊಳ್ಳಿ! ಕೇಳಿಸಿಕೊಳ್ಳಿ! ಆತ ನುಡಿಯುತ್ತಿದ್ದಾರೆ ! ಆತ ನುಡಿಯ ಹೊರಟಿದ್ದಾರೆ!... ಗುರುಗಳು ಸನ್ನೆ ಮಾಡುತ್ತಿದ್ದಾರೆ. ಕೇಳಿಸಿಕೊಳ್ಳಿ! ಕೇಳಿಸಿಕೊಳ್ಳಿ!.....' ಅನಂತರ ಅನಿರೀಕ್ಷಿತವಾಗಿ ಎದ್ದ ನಿಶ್ಶಬ್ದದೊಳಗಿಂದ ದಿವ್ಯ ವಾಣಿ ಕೇಳಿ ಬರುತ್ತದೆ

ವಾಣಿ : ನಿಮ್ಮಲ್ಲಿ ಪಾಪವನ್ನೇ ಎಸಗದವರು ಯಾರಿದ್ದೀರಿ, ಅಂಥವರು ಅವಳ ಕಡೆ ಮೊದಲ ಕಲ್ಲು ತೂರಿ!....

ಕಲ್ಲುಗಳನ್ನು ನೆಲಕ್ಕೆ ಹಾಕುವ ಸದ್ದು. ಜನಜಂಗುಳಿ ನಾಚಿ ಹಿಂದಕ್ಕೂ ಮುಂದಕ್ಕೂ ತೂರಾಡುತ್ತದೆ ; ಬರಬರುತ್ತಾ ದಿಕ್ಕೆಟ್ಟು ಮರೆಯಾಗುತ್ತದೆ. ಮೇರಿ ಮಗ್ದಲೀನಳಿಗೆ ಸಹಾಯ ಮಾಡಲು ಏರುಸ್ ಮುಂದೆ ಬರುತ್ತಾನೆ; ನಡೆದಾಡುತ್ತಿದ್ದವಳು ಸ್ತಬ್ಧಳಾಗಿ ನೆಟ್ಟಗೆ ನಿಂತು ಬಿಟ್ಟಿದ್ದಾಳೆ. ಸಹಾಯ ನಿರಾಕರಿಸಿ, ಮಾಳಿಗೆಯ ಸೋಪಾನಗಳನ್ನು ನಿಧಾನವಾಗಿ ಹತ್ತತೊಡಗುತ್ತಾಳೆ. ಮಿಕ್ಕವರು ಅರ್ಥವಾಗದಂತೆ ಅವಳನ್ನೇ ದಿಟ್ಟಿಸುತ್ತಾರೆ.

** ** **

ಅಂಕ - ಎರಡು

ಬೆಥನಿಯಲ್ಲಿ ಮರಿಯೆ ಮಗ್ದಲೀನಳ ಮನೆಯ ಒಂದು ದೊಡ್ಡ ಕೋಣೆ. ಹಿಂದೆ, ಒಂದರಿಂದಿನ್ನೊಂದಕ್ಕೆ ಹೋಗಬಹುದಾದ ಏಟ್ರಿಯಂ ಮತ್ತು ಅಮೃತಶಿಲೆಯ ಕಂಬಗಳುಳ್ಳ ಉದ್ದನೆ ಪಡಸಾಲೆ.

ದೃಶ್ಯ - ೧

ಮರಿಯೆ ಮಗ್ದಲೀನೆ, ಲೂಸಿಯುಸ್ ವೀರುಸ್

ಲೂಸಿಯುಸ್ ವೀರುಸ್ ಬರುತ್ತಾನೆ. ಮರಿಯೆ ಮಗ್ದಲೀನೆ ಅವನತ್ತ ಓಡಿ ಅವನ ತೆಕ್ಕೆ ಸೇರುತ್ತಾಳೆ

ಮರಿಯೆ : ಅಂತೂ ಬಂದೆಯಲ್ಲಾ ನನ್ನ ವೀರುಸ್ !... ಮೂರು ದಿನದಿಂದ ನಿನ್ನನ್ನೇ ಕಾಯುತ್ತಿದ್ದೆ, ಮೂರು ದಿನದಿಂದ ನಿನ್ನನ್ನೇ ಕರೆಯುತ್ತಿದ್ದೆ. ಗಂಡಸರು ನನ್ನ ಸೌಂದರ್ಯವನ್ನು ಮಾತ್ರ ಹೊಗಳುತ್ತಾರೆ. ಆದರೆ ಅದರ ಜಯ ನನಗೆ ಪಶ್ಚಾತ್ತಾಪ ಹುಟ್ಟಿಸುತ್ತದೆ, ಬೇಸರಿಕೆ ಹುಟ್ಟಿಸುತ್ತದೆ. ಪ್ರತಿ ಹೆಣ್ಣೂ ತನ್ನ ಜೀವನದಲ್ಲಿ ಬಯಸುವ ಸಂತೋಷದ ಪ್ರಶ್ನೆ ಬಂದಾಗ ಸೌಂದರ್ಯ ಎನ್ನುವುದು ಇಷ್ಟೊಂದು ದುರ್ಬಲವಾಗುವುದೇ ಎಂದು ನನಗೆ ನಾನೇ ಕೇಳಿಕೊಳ್ಳುತ್ತೇನೆ....

ವೀರುಸ್ : ಮಗ್ದಲೀನೆ, ನಿನಗೆ ಸಲ್ಲಬೇಕಾದ ಸಂತೋಷವನ್ನು ಕೊಡಲು ನಾನು ಶಕ್ತನೋ ಅಲ್ಲವೊ ನನಗೆ ತಿಳಿಯದು; ಆದರೆ ಇಷ್ಟು ಮಾತ್ರ ನಂಬು, ನಿನ್ನ ಸೌಂದರ್ಯ ನಾನು ಕೊಡುವುದಕ್ಕಿಂತ ಹೆಚ್ಚಿನ ಪರಿಪೂರ್ಣ ಜಯವನ್ನು ಸಾಧಿಸಿಲ್ಲ ಎಂದು....

ಮರಿಯೆ : ಅದರ ಜಯವಾದರೆಷ್ಟು ಬಿಟ್ಟರೆಷ್ಟು ನನಗೆ!.... ನಾನೇ ನಿಜವಾಗಿ ಸೋತದ್ದು. ನನಗೆ ನಾನೇ ಹೇಳಿಕೊಳ್ಳಲು ಧೈರ್ಯ ಸಾಲದೆ, ನನ್ನದೇ ಅನ್ಯಮನಸ್ಕತೆಯಿಂದ ಬಚ್ಚಿಡಲಾಗದೆ, ಅಥವಾ ಜಂಬದಿಂದ ಮುಚ್ಚಿಡಲಾಗದೆ ಸಂಪೂರ್ಣವಾಗಿ ಸೋತುಬಿಟ್ಟೆ. ಅದು ನನ್ನ ನಾಚಿಕೆಗೇಡಿತನದ ನಾಚಿಕೆಗೆಟ್ಟ ಕಿರೀಟ!... ಆದರೆ ಏತಕ್ಕಾಗಿ ನನ್ನನ್ನು ಕಾಯುತ್ತಿರುವುದು? ನಮ್ಮ ಗೆಳೆಯ ಸಿಲಾನುಸ್‌ನ ಮನೆಯಲ್ಲಿ

ನಾನಾಡಿದ ಭಯಂಕರ ಮಾತಿನಿಂದಾಗಿ ಎಲ್ಲರೂ ನನ್ನನ್ನು ದೂರ ಮಾಡುತ್ತಿದ್ದಾರೆ, ನಾನು ಎಲ್ಲವನ್ನೂ ಕಳಕೊಂಡು ಬಿಟ್ಟೆ ಅಂದುಕೊಂಡಿದ್ದೆ. ಆದರೆ ಆ ಮಾತು ನಿಜವಾಗಿರಲಿಲ್ಲ, ನನ್ನ ತಲೆಕೆಟ್ಟಿತ್ತು. ಯಾಕಂದರೆ ಪಡೆಯಲು ಸಾಧ್ಯವಾಗದ ಸಂತೋಷವನ್ನೇನೂ ನಾನು ಬಯಸಲಿಲ್ಲ.

ವೀರುಸ್ : ನಿನಗೇ ಗೊತ್ತಿದೆ ಮಗ್ದಲೀನ್, ನೀನು ನೀನೆಂದು ತೋರಿದ ಹೆಣ್ಣೆಂದು ನಾನು ಯಾವತ್ತೂ ನಂಬಿರಲಿಲ್ಲ.... ಈಗಂತೂ ಮುಂಬರುವ ಸಂತೋಷವನ್ನು ನಂಬಲು ನನಗೆ ಧೈರ್ಯವೇ ಬರುತ್ತಿಲ್ಲ.... ನಾನಂತೂ ತಬ್ಬಿಬ್ಬಾಗಿದ್ದೇನೆ. ಕತ್ತಲಲ್ಲಿ ತಟ್ಟಾಡುತ್ತಿದ್ದೇನೆ... ಅಷ್ಟು ಸಲ ಅಷ್ಟು ಒರಟಾಗಿ ನನ್ನ ದೂರ ಮಾಡಿದ ದನಿ ಇದೇ ಎಂದು ಗುರುತಿಸಲು ನನ್ನಿಂದ ಆಗುತ್ತಲೇ ಇಲ್ಲ.

ಮರಿಯೆ : (ವೀರುಸ್‌ನ ತೋಳಲ್ಲಿ) ಆ ದನಿಯೂ ಇದಲ್ಲ, ಆ ಆತ್ಮವೂ ಇದಲ್ಲ....

ವೀರುಸ್ : ಆದರೂ ನನ್ನ ತೋಳಲ್ಲಿ ಹಿಡಿದಿರುವ ನೀನೇ ಇದು, ಬಹಳ ಕಾಲದಿಂದ ನಾನು ಬಯಸಿದ್ದ ನೀನೇ ಇದು; ಒಂದೊಂದು ಅಂಗವೂ ನೀನೇ!.... ನನಗೆ ನಾನೇ ಕೇಳಿಕೊಳ್ಳುತ್ತೇನೆ, ಇದೆಲ್ಲಾ ನಿಜವಾಗಲೂ ನಿಜವೆ, ನಿಜವಾಗಲೂ ಸಾಧ್ಯವಾಗಿದೆಯೆ ಅಥವಾ ನೀನು ನಂಬಿಕೆ ಹುಟ್ಟಿಸುವ ರೀತಿಯ ಸಂತೋಷದೊಂದಿಗೆ ಚೆಲ್ಲಾಟವಾಡಿ ಕಡೆಗೆ ಅದನ್ನ - ಸೌಂದರ್ಯ ತನ್ನ ಶಕ್ತಿಯನ್ನು ಪರೀಕ್ಷೆ ಮಾಡಿಕೊಳ್ಳುವಾಗ ಪ್ರೇಮವನ್ನು ಕೊಚ್ಚಿಕೊಚ್ಚಿ ಹಾಕಿರುತ್ತದಲ್ಲಾ ಹಾಗೆ - ಅವುಗಳ ಮಧ್ಯಕ್ಕೆ ಎಸೆದು ಬಿಡುವುದಿಲ್ಲವೆ.... ಇಲ್ಲ! ನಾನು ಈ ರೀತಿ ಪ್ರಶ್ನೆ ಕೇಳಿ, ನನ್ನ ಕಣ್ಣುಗಳಾಳಕ್ಕೆ ಇಳಿಯುತ್ತಿರುವ ನಿನ್ನ ಕಣ್ಣುಗಳನ್ನು ನೋಡಿದಾಗ ತಿಳಿಯುತ್ತೆ, ಇದೆಲ್ಲ ನಿಜವೇ ಎಂದು. ಎಂದೆಂದಿಗೂ ನಿಜವೇ ಆಗಿತ್ತು ಎಂದು........

ಮರಿಯೆ : ಹೌದು, ಹೌದು, ಇದು ನಿಜವೇ.... ನಿಜವೇ.... ಎಂದೆಂದಿಗೂ ನಿಜವೇ ಆಗಿತ್ತು... ನನಗೇ ಗೊತ್ತಿರಲಿಲ್ಲ. ನನ್ನ ಹೃದಯದೊಳಗೆಲ್ಲಾ ವೃಥಾ ಹುಡುಕಾಡಿದೆ... ದುಗುಡದ ಈ ದಿನಗಳವರೆಗೆ ನನ್ನ

ಭಾವನೆಗಳ ಬಗ್ಗೆ ನನಗೇ ಅಜ್ಞಾನವಿತ್ತು... ನೀನು ನನ್ನತ್ತ ಬರುತ್ತಿರುವುದನ್ನು ಎಲ್ಲರೂ ನಿನಗಾಗಿಯೇ ಕಾಯುತ್ತಿರುವುದನ್ನು ನೋಡಲು ನಿರಾಕರಿಸಿದೆ... ಆದರೂ ನನಗೆ ಗೊತ್ತಿರಲೇಬೇಕು... ಅಂತಿಯೋಖ್‌ನಲ್ಲಿ, ನೆನಪಿದೆಯಾ ವೀರುಸ್ ನಾನು ನಿನ್ನನ್ನು ಹೇಗೆ ದೂರ ಮಾಡುತ್ತಿದ್ದೆ? ಎಷ್ಟೋ ಜನರನ್ನ ಬರಮಾಡಿಕೊಳ್ಳುತ್ತಿದ್ದೆ; ನಿನ್ನೊಬ್ಬನನ್ನು ಎಲ್ಲರಿಗಿಂತ ಸೌಮ್ಯನಾದ ಪವಿತ್ರನಾದ ನಿನ್ನನ್ನು ನಿರ್ಲಕ್ಷ ಮಾಡಲು ಪ್ರಯತ್ನಿಸಿದ್ದೆ, ನಾಶಮಾಡಲು ಪ್ರಯತ್ನಿಸಿದ್ದೆ... ನೀನು ಕಣ್ಣಿಗೆ ಬೀಳುವುದೇ ತಡ, ನಾಚಿ ನೀರಾಗಿ, ನನ್ನ ಗೂಡೊಳಕ್ಕೆ ಮುದುರಿಕೊಂಡು ಬಿಡುತ್ತಿದ್ದೆ. ಮೊನ್ನೆ ಮೊನ್ನೆ, ನಮ್ಮ ಗೆಳೆಯ ಸಿಲಾನುಸ್‌ರ ಮನೆಯಲ್ಲಿ, ನನ್ನ ಹೃದಯ ತುಂಬಿದ ಎಲ್ಲ ಕೇಡಿತನ, ಕ್ರೂರತನ, ಬೇಸರಿಕೆ- ಎಲ್ಲವೂ ನನ್ನ ಬಾಯವರೆಗೆ ಏರಿ ಬಂದವು... ಆದರೆ ಈ ದಿನ, ನೋಡುತ್ತೇನೆ, ಮೊದಲಿನ ವ್ಯಕ್ತಿ ನಾನಲ್ಲವೇ ಅಲ್ಲ. ನಾನಾರೆಂದು ನನಗೇ ಗೊತ್ತಿಲ್ಲ, ಯಾಕಂದರೆ ನಾನು ಮತ್ತೆ ನಾನೇ ಆಗಿದ್ದೇನೆ.... ? ಹಿಂಜರಿಕೆ ಉಂಟು ಮಾಡುತ್ತಿದ್ದ ನನ್ನ ಅಂತರಂಗ ನನ್ನೊಳಗಡೆ ಮುರಿದು ಬಿದ್ದಿದೆ. ಇನ್ನು ನನಗೆ ನಾನೇ ಅರ್ಥವಾಗುವುದಿಲ್ಲ. ಸಂತೋಷ ಅನ್ನುವುದು ಇಷ್ಟು ವಿಚಿತ್ರ ವಾಗಿರುತ್ತದೆ ಎಂದೇ ಗೊತ್ತಿರಲಿಲ್ಲ..... ಎಂಥಾ ಕೆಟ್ಟ ಕಾಲದಲ್ಲೂ ಅಳದ ನಾನು ಇವತ್ತು ಬಿಕ್ಕಳಿಸಿ ಬಿಕ್ಕಳಿಸಿ ಅಳುತ್ತಿದ್ದೇನೆ.... ನನಗೀಗ ತುಂಬ ಖುಷಿಯಾಗಿ ಹೃದಯ ಹಗುರವಾಗಿದೆ; ಜೊತೆಜೊತೆಗೆ ಆಕಾಶದಲ್ಲಾಡುತ್ತಿರುವ ಎಲ್ಲ ದುರಾದೃಷ್ಟಗಳೂ ನನ್ನ ಮೇಲೆರಗಿದರೆ ಆಗುವಷ್ಟು ಹತಾಶನಾಗಿದ್ದೇನೆ ನಾನು,

(ಹೆಚ್ಚು ಉನ್ಮತ್ತಳಾಗಿ ಅವನನ್ನು ತಬ್ಬುತ್ತಾಳೆ) ಯಾವುದಕ್ಕೂ ಭಯಪಡ ಬೇಕಿಲ್ಲದ ನೀನು, ಯಾವುದರಿಂದಲೂ ಬೆದರಿಕೆ ಹಾಕಿಸಿಕೊಳ್ಳದ ನೀನು, ವೀರುಸ್, ನೀನು ನನಗೆ ಸಹಾಯ ಮಾಡು, ಬೆಂಬಲ ಕೊಡು !

ವೀರುಸ್ : ಆದರೆ ಏನಾಗಿದೆ ಈಗ? ನಾನಿಲ್ಲದಾಗ ಯಾರಾದರೂ ಧೈರ್ಯಮಾಡಿ....?

ಮರಿಯೆ : ಇಲ್ಲ, ಯಾರೂ ಬಂದಿಲ್ಲ. ವಿಷಯ ಅದಲ್ಲವೂ ಅಲ್ಲ. ನನ್ನ ಸುತ್ತಿರುವ

ಅಪಾಯ ಯಾವುದೆಂದು ನನಗೇ ಗೊತ್ತಿಲ್ಲ..... ಆದರೂ ನಿನ್ನ ತೋಳಲ್ಲದೆ ನನಗೆ ಇನ್ನಾವ ರಕ್ಷಣೆಯೂ ಇಲ್ಲ; ನಿನ್ನನ್ನು ಕಳಕೊಂಡರೆ ಇನ್ನು ನನ್ನನ್ನೇ ಕಳಕೊಂಡಂತೆ. ನನ್ನನ್ನು ಸ್ವೀಕರಿಸು, ನಿನ್ನ ಹೃದಯದು ಮಾತನ್ನೇ ಆಲಿಸುತ್ತಿದ್ದೇನೆ - ಆ ಹೃದಯದ ಮೇಲೆ ನನ್ನನ್ನು ನನ್ನಿಂದ ದೂರ ಕರೆದೊಯ್ಯಿ, ಈ ಜಾಗದಿಂದ ಈ ದುಗುಡದಿಂದ ದೂರ! ನೀನೊಬ್ಬನೇ ನನ್ನನ್ನು ಕಾಪಾಡಬಲ್ಲೆ. ನೀನೇ ಕೊಟ್ಟರೆ ಮಾತ್ರ ಕೊಟ್ಟಷ್ಟು ಮಾತ್ರ ನನಗೆ ಜೀವವಿರುತ್ತೆ... ಆದರೆ ನನ್ನನ್ನು ನನ್ನ ಕಣ್ಣೀರೊಳಗೆ ಬಿಟ್ಟು ಇಷ್ಟುಕಾಲ ಯಾಕೆ ದೂರವಿದ್ದು ಬಿಟ್ಟೆ? ಹೀಗೆ ನನ್ನನ್ನು ಯಾಕೆ ದೂರ ಮಾಡಿದೆ? ಒಂದಾದರೂ ಕರುಣೆಯ ಮಾತು, ಭರವಸೆಯ ಕುರುಹಿಲ್ಲದೆ ಮೂರು ದಿನ ಕಳೆಯುವವರೆಗೂ ಯಾಕೆ ಬರಲೇ ಇಲ್ಲ?....

ವೀರುಸ್ : ನೀನು ತಪ್ಪು ತಿಳಿದಿದ್ದೀಯ ಮಗ್ದಲೀನ್. ಅಥವಾ ನಿನ್ನ ಗುಲಾಮರು ನಿನಗೆ ನಿಜವನ್ನ ಹೇಳಿಲ್ಲವೆಂದು ತೋರುತ್ತೆ. ಸಿಲಾನುಸ್‌ನ ಮನೆಯಲ್ಲಿ ನಾವು ಭೇಟಿಯಾದ ದಿನವೇ ನಾನು ಬೆಥನೀಗೆ ಬಂದದ್ದು; ದೇಶಾಧಿಕಾರಿಯ ಆಜ್ಞೆಗೆ ಅನುಸಾರವಾಗಿ ಜೆರಿಕೋ ಹತ್ತಿರದಲ್ಲಿ ಎದ್ದಿದ್ದ ಬಂಡನ್ನು ಹತ್ತಿಡಲು ಸೇನೆಯ ಒಂದು ತುಕಡಿ ಜೊತೆ ಬಂದೆ. ನಿನ್ನ ಬಾಗಿಲು ಕಾಯುವ ಗುಲಾಮರು ನಾನು ನಿನ್ನ ಬಳಿ ಬರಲು ಬಿಡಲೇ ಇಲ್ಲ; ನಾನು ಒತ್ತಾಯ ಮಾಡಲೂ ಆಗದ ರೀತಿಯಲ್ಲಿ ಉತ್ತರ ಕೊಟ್ಟುಬಿಟ್ಟರು... ಅವರು ನಿನ್ನ ಕಟ್ಟಾಜ್ಞೆಯನ್ನು ಪಾಲಿಸುತ್ತಿದ್ದಾರೆ, ನಾನದನ್ನ ಮುರಿಯಬಾರದೆಂದುಕೊಂಡು.....

ಮರಿಯ : ಹೌದು, ನಿಜ... ನಾನು ಮರೆತಿದ್ದೆ... ನನಗೆ ಹುಚ್ಚು ಹಿಡಿದಂತಾಗಿತ್ತು. ಬಹಳ ಆಯಾಸವಾಗಿತ್ತು. ಯಾರನ್ನೂ ನೋಡಲು, ಮಾತಾಡಿಸಲು ಅಸಮರ್ಥಳಾಗಿದ್ದೆ.... ನನಗಿನ್ನೂ ಎಚ್ಚರವಾಗಿರಲಿಲ್ಲ. ನಾನಿನ್ನೂ ಸಿಮೋನೆಯ ತೋಟದಲ್ಲಿ ಆ ಕ್ರೂರಿಗಳ ನಡುವೆ ಸಿಕ್ಕು ಒದ್ದಾಡುತ್ತಿದ್ದೇನೆ ಅನ್ನಿಸುತ್ತಿತ್ತು... ಅಲ್ಲೇ ನಾನು ಆತನನ್ನು, ನನ್ನ ಜೀವದಾತನನ್ನು ನಿರರ್ಥಕವಾಗಿ ಕೂಗಿ ಕರೆದಿದ್ದು... ಆತನೂ ನನ್ನನ್ನು ದೂರಮಾಡುತ್ತಿದ್ದ. ಆತ ಕೂಡ.... ಆತನನ್ನು ಹುಡುಕಿಸಲು ಪ್ರಯತ್ನಪಟ್ಟೆ, ಪ್ರಯೋಜನವಾಗಲಿಲ್ಲ. ಆತ ಎಲ್ಲಿ ಅಡಗಿದ್ದಾನೆಂದು

ಯಾರಿಂದಲೂ ಹೇಳಲು ಸಾಧ್ಯವಾಗಿಲ್ಲ... ನೀನು ಆಮೇಲೆ ಆತನನ್ನು ನೋಡಲಿಲ್ಲವೆ? ಆತ ಎಲ್ಲಿದ್ದಾನೆಂದು ನಿನಗಾದರೂ ಗೊತ್ತಾ?

ವೀರುಸ್ : ಯಾರು?

ಮರಿಯೆ : ಆ ನಜರೀನ್....

ವೀರುಸ್ : ಆ ಪಾಪದವನ ಬಗ್ಗೆ ಮಾತಾಡುವುದೇ ಬೇಡ. ಆತನ ಕಾಲ ಹತ್ತಿರ ಬರುತ್ತಿದೆ.........

ಮರಿಯೆ : ಆತನ ಕಾಲ ಹತ್ತಿರ ಬರುತ್ತಿದೆ?.... ಹಾಗಂದರೇನು?

ವೀರುಸ್ : ಆ ವಿಚಾರ ಬಿಡು; ಅದೇಗ ನಮಗೆ ಆಸಕ್ತಿ ಹುಟ್ಟಿಸುವ ವಿಚಾರವಲ್ಲ. ಇನ್ನು ಮುಂದೆ ನಮ್ಮ ಪ್ರೇಮವನ್ನು ಸೋಕುವ ಯಾವ ವಿಚಾರವೂ ನಮಗೆ ತಿಳಿಯುವುದಿಲ್ಲ. ಪ್ರೇಮಿಗಳು ಎಷ್ಟೇ ದೂರದಲ್ಲಿದ್ದರೂ..., ಅವರ ನಡುವೆ ಎಷ್ಟೇ ಕೆಟ್ಟ ಮಾತುಗಳು ಅಡ್ಡ ಬಂದರೂ ಪ್ರೀತಿಸುತ್ತಿರುವವರ ಆಲೋಚನೆಗಳೂ ಹೇಗೆ ಭೇಟಿಯಾಗಿ ಒಂದಾಗುತ್ತವೆ ಗೊತ್ತಿದೆಯಾ? ಸಿಲಾನುಸ್ ಮನೆಯಲ್ಲಿ ನನ್ನೆಲ್ಲ ಭರವಸೆಗಳನ್ನೂ ದೂರ ಮಾಡುವಂಥ ನಿನ್ನ ಮಾತುಗಳನ್ನು ಕೇಳಿದ ನಂತರ ನಿನ್ನನ್ನು ಅಲ್ಲಿ ಬಿಟ್ಟು ಬಂದ ಮೇಲೆ, ಮೊದಲ ಬಾರಿಗೆ ನಮ್ಮ ಸಂತೋಷ ಉಕ್ಕೇರುತ್ತಿರುವುದು, ತನ್ನೆಲ್ಲ ಶಕ್ತಿ, ಸಾಮರ್ಥ್ಯಗಳೊಂದಿಗೆ ಹೂವಾಗಿ ಅರಳುತ್ತಿರುವುದು ಮೊದಲ ಬಾರಿಗೆ ನನ್ನ ಅನುಭವಕ್ಕೆ ಬರುತ್ತಿದೆ ಅಂದರೆ ನಿನಗೆ ಆಶ್ಚರ್ಯವಾಗುವುದಿಲ್ಲವೆ?.... ನೀನು ನನ್ನನ್ನು ಕರೆಯುತ್ತಿದ್ದೆ ಎಂದೆಯಲ್ಲ, ಹಾಗೇ ನಾನೂ ನನ್ನ ಹೃದಯದ ಆಳದಿಂದ, ವಿಚಿತ್ರ ದನಿಗಳಿಂದ ನಿನ್ನನ್ನು ಕೂಗಿ, ಕೂಗಿ ಕರೆಯುತ್ತಿದ್ದೆ. ಈ ಸೈನಿಕನ ತಕ್ಕುದಲ್ಲದ ಕರ್ತವ್ಯದಿಂದಾಗಿ ನಾನು ನಿನ್ನಿಂದ ದೂರ ಇರಬೇಕಾಯಿತು. ತಕ್ಕುದಲ್ಲದು ಯಾಕಂದರೆ ಜೆರಿಕೋದ ಕಳೆದ ಯಾತ್ರೆ ಬಹಳ ಅಸಹ್ಯವೂ ತಮಾಷೆಯೂ ಆಗಿತ್ತೆಂದೇ ನನ್ನ ಭಾವನೆ. ನಮ್ಮ ಹೊಸ ಜೀವನದಿಂದ ಅಪಹರಿಸಲ್ಪಟ್ಟ ಆ ಕ್ಷಣಗಳನ್ನು ಸಿಟ್ಟಿನಿಂದ ಎಣಿಸಿದೆ ; ಭಯಕ್ಕೆ ಕಾರಣವಿಲ್ಲದ ಭಯದಿಂದ ತತ್ತರಿಸಿದ್ದ ಆತ್ಮದೊಳಗೆ ಅಷ್ಟೊತ್ತಿಗಾಗಲೇ ನಮ್ಮ ಹೊಸ ಜೀವನ ಆರಂಭವಾಗಿತ್ತು....

ಮರಿಯೆ : ಇಲ್ಲ, ಉಸಿರು ಕಟ್ಟಿಸುವ ಈ ನಾಡಿನಿಂದ, ಸಂತೋಷಕ್ಕೆ ಮಸಿಬಳಿಯುವ, ಬೆದರಿಕೆ ಒಡ್ಡುವ ಈ ನಾಡಿನಿಂದ ದೂರ ಹೋಗುವವರೆಗೆ ಅದು ನಿಜವಾಗಿ ಆರಂಭವಾಗಿರುವುದಿಲ್ಲ.... ನಾನು ಇನ್ನು ಇಲ್ಲಿರಲಾರೆ.... ವೀರುಸ್, ನಾನು ನಿನ್ನ ಬೇಡಿಕೊಳ್ಳುತ್ತೇನೆ... ನಾನು ನಿನ್ನನ್ನು ಪ್ರೀತಿಸುವಷ್ಟು ನೀನು ನನ್ನನ್ನು ಪ್ರೀತಿಸುವುದಾದರೆ, ಬೇಗ ಹೊರಟುಬಿಡೋಣ, ಎಲ್ಲವನ್ನೂ ತೊರೆದು.... ಕಾಲಹರಣ ಮಾಡುವಂತಿಲ್ಲ!

ವೀರುಸ್ : ಸರಿಯಾಗಿ ಹೇಳಿದೆ. ಬಹಳ ಕಾಲದಿಂದ ಕಾಯುತ್ತಿದ್ದ ಸಂತಸ ಇಲ್ಲಿನ ಅಶುಭ ಕಲ್ಲು ಬಂಡೆಗಳ ನಡುವೆ ಹುಟ್ಟಬಾರದು... ಇಲ್ಲಿ ಗಾಳಿಯಲ್ಲಾಡುತ್ತಿರುವುದು ಸಾವು ಮತ್ತು ಹುಚ್ಚುತನದ ದುರ್ಗಂಧ.... ಆದರೆ, ಇಲ್ಲೇ ತಾನೆ ನಮ್ಮ ಆಲೋಚನೆಗಳು ನಮ್ಮ ಮಾತುಗಳಿಗಿಂತಲೂ ಮುಂಚೆ ಒಂದನ್ನೊಂದು ಅರ್ಥ ಮಾಡಿಕೊಂಡಿದ್ದು... ನಿನ್ನ ಹಾಗೆ ನಾನೂ ಈ ಕೆಟ್ಟ ನಗರವನ್ನು, ನನ್ನ ಕರ್ತವ್ಯವನ್ನು ದುರುಪಯೋಗ ಪಡಿಸಿಕೊಳ್ಳುವ ಈ ನಗರವನ್ನು ತೊರೆಯಬೇಕೆಂದು ನಿಶ್ಚಯಿಸಿದ್ದೇನೆ....ದೇಶಾಧಿಕಾರಿಯವರ ಆಜ್ಞೆ ಹೊತ್ತು ಬಂದಿದ್ದೇನೆ; ಯಹೂದೀ ಪುರೋಹಿತರದಲ್ಲ; ಅಥವಾ ನಮ್ಮ ಹಿಂದಿನ ಅರಸರ ಆಕ್ರಮಣದಲ್ಲಿ ಸೋತ ವಿಶ್ವಾಸಘಾತುಕ ತರಲೆ ಜನರ ಸೇವೆಯಲ್ಲೂ ಬಂದಿಲ್ಲ. ಈ ಇಬ್ಬಂದಿತನದ ಜೀವನ ಸಾಕುಸಾಕಾಗಿದೆ. ಇವತ್ತೇ ಜಾರಿಗೊಳಿಸಬೇಕಾದ ಆಜ್ಞೆಯಿಂದ ತಪ್ಪಿಸಿಕೊಳ್ಳಲು ಯಾವುದಾದರೂ ನೆಪವನ್ನ ಈ ರಾತ್ರಿಯೇ ಹುಡುಕಿಕೊಳ್ಳುತ್ತೇನೆ - ಆ ಆಜ್ಞೆಯ ಮೂಲವಂತೂ ನನಗೆ ಗೊತ್ತೇ ಇಲ್ಲ.... ನೆಪ ಸಬಲವಾಗಿಲ್ಲದಿದ್ದರೆ, ಬೇಕಾದರೆ ಕೈಫಾಸ್ ಮತ್ತು ಅನ್ನಾಸ್ ಹೋಗಿ ಸೀಜರ್ ಹತ್ತಿರ ದೂರು ಹೇಳಲಿ.... ನಮ್ಮ ಪ್ರೇಮದ ಮುಂದೆ ಯಾವುದೂ ಲೆಕ್ಕಕ್ಕೆ ಬರುವುದಿಲ್ಲ; ಅಷ್ಟೇ ಅಲ್ಲ, ಆ ನಾಚಿಕೆಗೇಡಿ ಕೆಲಸವನ್ನು ನನ್ನ ಮೇಲೆ ಹಕ್ಕಿದೆ ಎಂಬ ಕಾರಣದಿಂದ ಹೇರಿದ್ದು ಯಾಕೆ ಹೆಚ್ಚು ರೊಚ್ಚಿಗೊಬ್ಬಿಸುತ್ತಿದೆ ಅಂದರೆ ನಾನು ಆ ಕೆಲಸವನ್ನ ... ನಿನ್ನ ಕಣ್ಣೆದುರಿಗೆ ಈಡೇರಿಸಬೇಕಂತೆ....

ಮರಿಯ : ನನ್ನ ಕಣ್ಣೆದುರಿಗೆ?..... ಯಾವ ವಿಷಯ ಹೇಳುತ್ತಿದ್ದೀಯ?

ವೀರುಸ್ : ನಿನಗೆ ಅದರಲ್ಲಿ ಆಸಕ್ತಿ ಇಲ್ಲ; ನಾವಿನ್ನು ಕೇವಲ ಸಂತೋಷವಾಗಿರುವುದರ ಬಗ್ಗೆ ಆಲೋಚಿಸೋಣ....

ಮರಿಯ : ಆತನಿಗೆ ಯಾವುದೋ ಅಪಾಯ ಕಾದಿದೆ ಎಂದು ನನಗನ್ನಿಸುತ್ತಿದೆ....

ವೀರುಸ್ : ಯಾರಿಗೆ?....

ಮರಿಯ : ಕೂಡದು, ಆತ ಏನು ಮಾಡಿದಾಂತ ನೀನು ಆತನ ದುಷ್ಟ ವೈರಿಗಳ ಕೈಗೊಂಬೆ ಆಗಬೇಕು ನನಗೆ ತಿಳಿಯುತ್ತಿಲ್ಲ..... ನನ್ನ ಜೀವದ ಋಣ ನಿನಗೆ ಆತನ ಮೇಲಿದೆ; ಬಹುಶಃ ನಮ್ಮ ಆನಂದದ ಋಣವೂ ಕೂಡ.... ಆತನಿಂದ ಅವರಿಗೆ ಏನಾಗಬೇಕಂತೆ? ನಿನಗೆ ನೀಡಿರುವ ಆಜ್ಞೆಗಳಾದರೂ ಏನು?..

ವೀರುಸ್ : ಅವನ ತಂಡದ ಮುಖ್ಯ ನಾಯಕರೊಂದಿಗೆ ಅವನನ್ನು ಇವತ್ತು ಸೂರ್ಯ ಮುಳುಗುವ ಮುಂಚೆ ನಾನು ಸೆರೆಹಿಡಿಯಬೇಕೆಂಬ ಆಜ್ಞೆ ನನ್ನ ಮೇಲಿದೆ. ಅದೊಂದು ಹಿಂದೆಂದೂ ಕಾರ್ಯಾಚರಣೆಗೆ ಬಂದಿರದ, ರೋಗಿಷ್ಠರ, ಭಿಕ್ಷುಕರ ವಿರುದ್ಧ ನಡೆಸುವ ಒಂದು ಕಟ್ಟ ಕಾನೂನು ಕ್ರಮ. ಅದು ನೇರವೇರುವುದೂ ಇಲ್ಲ; ನಾವಿನ್ನು ಆ ವಿಷಯ ಮಾತನಾಡುವುದೂ ಬೇಡ....

ಮರಿಯ : ಆದರೆ ಆತನನ್ನ ಯಾಕೆ ಸೆರೆಹಿಡಿಯಬೇಕಂತೆ ? ಆತ ಏನು ಮಾಡಿದ್ದಾನೆ? ಯಾವ ಆಪಾದನೆ ಅವನ ಮೇಲೆ ಬಂದಿದೆ?... ಆತ ನಿರಪರಾಧಿ, ನನಗೆ ಗೊತ್ತು. ಅಲ್ಲದೆ ಆತನನ್ನು ಅರ್ಥಮಾಡಿಕೊಳ್ಳ ಬೇಕೆಂದರೆ ಆತನ ಕಣ್ಣಿನ ಆಳದಲ್ಲಿ ಒಮ್ಮೆ ನೋಡಬೇಕು... ಹಿಂದೆಂದೂ ಗೊತ್ತಿರದ ಆನಂದವನ್ನ ಆತ ನೀಡುತ್ತಾನೆ. ಆತನ ಬಳಿ ಹೋದವರೆಲ್ಲಾ ಆ ಆನಂದದಲ್ಲಿ ಒಂದಾಗುತ್ತಾರೆ- ನಿದ್ದೆಯಿಂದ ಆಗ ತಾನೇ ಎದ್ದ ಮಕ್ಕಳಂತೆ. ನನಗೇ ನೋಡು, ಆತನು ಆಲಿವ್ ಮರಗಳ ನಡುವೆ ಹಾಯುತ್ತಿದ್ದಾಗ ಒಂದೇ ಕ್ಷಣ ನನ್ನ ನೋಡಿದ್ದು ; ಆಗಿನಿಂದ ಮಹಾನ್ ಪ್ರಕಾಶದಂತಹ ಹಿಗ್ಗು ನನ್ನೊಳಗೆ ಮೇಲೆ ಮೇಲೇರುತ್ತಿದೆ. ನನ್ನ ಆಲೋಚನೆಗಳನ್ನೆಲ್ಲ ಮರೆಮಾಚುತ್ತಿದೆ. ಒಂದೇ ಕ್ಷಣ ಆತ ನನ್ನ

ಮೇಳೆ ತನ್ನ ದೃಷ್ಟಿ ನೆಟ್ಟಿದ್ದು; ಇನ್ನು ಇಡೀ ಜೀವನಕ್ಕೆ ಅಷ್ಟು ಸಾಕಾಗುತ್ತದೆ.... ನನ್ನನ್ನು ನೋಡದೆಯೆ ಆತ ನನ್ನ ಗುರುತಿಸಿ ಬಿಟ್ಟ. ನನಗೆ ಆಗಲೇ ತಿಳಿಯಿತು; ಮತ್ತೆ ನನ್ನನ್ನು ನೋಡಬಯಸಿದ.... ಆತ ನನ್ನನ್ನು ಸದಾ ಕಾಲಕ್ಕೂ ಸಲ್ಲುವಂತೆ ಆರಿಸಿಕೊಂಡು ಬಿಟ್ಟ.

ವೀರುಸ್ : ಏನು ನಿನ್ನ ಮಾತಿನ ಅರ್ಥ? ಆತನ ಬಗ್ಗೆ ಮಾತಾಡುತ್ತಿದ್ದೀಯಾ? ಏನು ನಡೆಯಿತು?.... ಮತ್ತೆ ಆತನನ್ನು ನೋಡಿದೆಯಾ?.... ಅವನೊಬ್ಬ ಸಂಚುಗಾರ ಅಂತ ಕೇಳಿದ್ದೆ. ಎಲ್ಲದಕ್ಕೂ ಸಿದ್ಧನಂತೆ ; ಆದರೆ ಇಷ್ಟರ ಮಟ್ಟಕ್ಕೆ ಧೈರ್ಯ ಮಾಡುತ್ತಾನೆ ಎಂದು ಮಾತ್ರ ಹೇಳಿದರೂ ನಂಬುತ್ತಿರಲಿಲ್ಲ.

ಮರಿಯ : ಇಲ್ಲ, ಆತ ಯಾವ ಧೈರ್ಯವನ್ನೂ ಮಾಡಿಲ್ಲ.... ಆತನನ್ನು ನಾನು ಮತ್ತೆ ನೋಡಲಿಲ್ಲ, ನೋಡುವುದೂ ಇಲ್ಲ. ಯಾಕಂದರೆ ಇನ್ನು ಮುಂದೆ ನಾವಿಬ್ಬರೂ ಒಟ್ಟಿಗೆ ಇರಬೇಕೆಂದು ಎಲ್ಲವನ್ನೂ ಬಿಟ್ಟು ಹೊರಟು ಹೋಗುತ್ತಿದ್ದೇವಲ್ಲ.....

ವೀರುಸ್ : (ಹೆಚ್ಚು ಹತ್ತಿರ ಸೆಳೆದು) ನಾವಿಬ್ಬರೇ ಒಟ್ಟಿಗೆ ಇರಲು, ಮಗ್ದಲೀನ್... ಇನ್ನೂ ಆನಂದದ ನಾಡಿಗೆ.... ಅಲ್ಲಿ ಎಲ್ಲವೂ ಆನಂದವನ್ನು ವೃದ್ಧಿಸುತ್ತದೆ, ಪ್ರೇಮಿಗಳ ಮೇಲೆ ಮುಗುಳ್ನಗೆ, ಸೌಂದರ್ಯವನ್ನು ಹರಿಸುತ್ತದೆ.

ಮರಿಯ : (ವೀರುಸ್‌ನ ಎದೆಮೇಲೆ ಬಿಕ್ಕಳಿಸುತ್ತಾ ರೋಧಿಸುತ್ತಾ) ನಾನು ನಿನ್ನನ್ನು ಪ್ರೀತಿಸುತ್ತೇನೆ; ನನಗೆ ಗೊತ್ತಿದೆ.....

ವೀರುಸ್ : ಬಾ, ನಮ್ಮ ಎರಡು ಹೃದಯಗಳ ಒಂದೇ ಸಂತಸದಿಂದ ಒಂದೇ ಕ್ಷಣಕ್ಕೆ ಹೊಮ್ಮುವ ಈ ಕಣ್ಣೀರು ನನಗೆ ಪರಿಚಿತವೇ. ಆದರೆ, ಇಲ್ಲಿ ಈ ಸಾಲು ಕಂಬಗಳ ನಡುವೆ, ಓ, ಸುಂದರ ರೋಮಿನ ಸುಂದರ ಒಡವೆಯೆ, ಬಾ. ಈ ನಗರವನ್ನು ನಮ್ಮ ಪ್ರೇಮದಿಂದ ಚಕಿತಗೊಳಿಸೋಣ.... ಹೌದು, ನನ್ನ ಊಹೆ ಸರಿ; ಅದೊ ನಮ್ಮ ಪ್ರಿಯ ಮಿತ್ರ ಸಿಲಾನುಸ್ ; ಜೊತೆಗೆ ವಿಶ್ವಾಸಾರ್ಹ ಅಪ್ಪಿಯುಸ್, ಮುಂದೆ ಅವರನ್ನು

ಮುನ್ನಡೆಸುತ್ತಿರುವ ಸಾವಿಲ್ಲದ ದೇವರುಗಳು! ತಮ್ಮ ಕಣ್ಣುಗಳ ಕೆಳಗೆ ಮೂಡಿರುವ ಸಂತಸದ ಮೊದಲ ಮುಗುಳ್ನಗೆಯನ್ನು ತಮ್ಮ ಹಿರಿತನದಿಂದ ಪವಿತ್ರಗೊಳಿಸುತ್ತಾ ಅಮೃತ ಶಿಲೆಯ ಸೋಪಾನಗಳನ್ನು ಇಳಿಯುತ್ತಿದ್ದಾರೆ....

ದೃಶ್ಯ -೨

ಅದೇ. ಸಿಲಾನುಸ್, ಅಪ್ಪಿಯುಸ್

ಸಿಲಾನುಸ್ : ಇವತ್ತಿನಂಥಾ ಸುದಿನದಂದು ಎರಡು ವಿಚಿತ್ರಗಳನ್ನು ನಾನು ಕಣ್ಣಾರೆ ನೋಡಬೇಕೆಂದು ಮೊದಲೇ ಹೇಳಲಾಗಿತ್ತು, ಬರೆದಿಡಲಾಗಿತ್ತು ಕೂಡ: ಬಯಸಿದಷ್ಟೂ ದೂರ ಹೋಗುವ ಪ್ರೇಮದ ಹಳೇ ಸಂಪ್ರದಾಯಕ್ಕೆ ಬದಲಾಗಿ ಪುನರ್ಮಿಲನ.

ಅಪ್ಪಿಯುಸ್: ಮೆತ್ರೊದೋರುಸ್, ಹರ್ಮಾಕುಸ್ ಮತ್ತು ಜೇನೋ ದೇವತೆಗಳ ಹೆಸರಲ್ಲಿ ಪ್ರಮಾಣ ಮಾಡಿ ಹೇಳುತ್ತೇನೆ, ಪ್ರೇಮಿಗಳ ಕಿತ್ತಾಟ, ಋಷಿಗಳಿಗಿಂತ ಹೆಚ್ಚು ಗಮನ ಕೊಡಬೇಕಾದ ಇತರೆ ವಿಷಯಗಳೂ ಇರುತ್ತವೆ ! ಏನಾಗಿದೆ ಅನ್ನೋದನ್ನ ತಕ್ಷಣ ಹೇಳಿ ಬಿಡು. ನಿನ್ನ ಗಂಟಲಿನ ಮತ್ತು ಆತ್ಮದ ಶಕ್ತಿಯನ್ನೆಲ್ಲ ಒಗ್ಗೂಡಿಸಿ ಕೂಗಿ ಹೇಳು: ಸಾವು ಇನ್ನಿಲ್ಲ ಅಂತ! ಸತ್ತವರ ಆತ್ಮಗಳು ಹೊರಬರಲೆಂದು ಇನ್ನೇನು ಗೋರಿಗಳು ಬಾಯಿ ತೆರೆಯುತ್ತವೆ... ದೇವರುಗಳೂ ನಡುಗಿ ಹೋಗಿದ್ದಾರೆ. ಜೀವದ ಎಲ್ಲ ನಿಯಮಗಳೂ ತಲೆಕೆಳಗಾಗಿವೆ !... ಬಾಯಲ್ಲಿ ಆಡಲಾಗದ, ಎಂದೂ ಕೇಳಿರದ, ಪ್ರಪಂಚದ ಮೇಲೆ ಬೆಳಕು ಮೂಡಿದಂದಿನಿಂದ ಕಂಡಿರದ, ಮುಂದೆಂದೂ ಸಾವಿನ ದೇವತೆಗಳ ಎದುರಿಗೂ ನೋಡಲು ಸಿಗದ ಅದ್ಭುತವನ್ನು ನಾವು ಈಗ ತಾನೇ ಕಂಡೆವು.

ಸಿಲಾನುಸ್ : ಅಪ್ಪಿಯುಸ್, ನಿನಗೆ ಅದು ಅಸಾಮಾನ್ಯ ಎನಿಸಿದಷ್ಟು, ಅದು ನಿನ್ನ ಆತ್ಮದ ಶಾಂತಿಯನ್ನು ಕಡಿಮೆ ಕಲಕಬೇಕಿತ್ತಲ್ಲ. ಯಾಕಂದರೆ ಮುಂದೆಂದೂ ಕಾಣದ ಅದ್ಭುತ ಅಂದ ಮೇಲೆ ಅದು ಜಗತ್ತಿನ ನಿಯಮಗಳನ್ನಾಗಲಿ, ದೇವರುಗಳ ಭದ್ರತೆಯನ್ನಾಗಲಿ ಅಲುಗಾಡಿಸದೇ ಇರುವುದಿಲ್ಲ!

ವೀರುಸ್ : ಆದದ್ದಾದರೂ ಏನು? ಎಂದಿಗಿಂತ ಹೆಚ್ಚಿನ ಸಂತೋಷಕ್ಕೆ ಈಡಾದವನಂತೆ ಅಪ್ಪಿಯುಸ್ ಕಾಣುತ್ತಿದ್ದಾನೆ ; ಅಲ್ಲದೆ ನೀವು, ನನ್ನ ಒಡೆಯಾ, ನಿಮ್ಮ ಎಂದಿನ ಸಮಚಿತ್ತತೆಯಿದ್ದರೂ ಸಹ, ಜೊತೆಗೆ...

ಅಪ್ಪಿಯುಸ್: ಏನಾಯಿತು ಅಂತ ನಾನು ಹೇಳುತ್ತೇನೆ. ಆತ ಸತ್ತವನನ್ನು ಮರಳಿ ಜೀವಂತ ಮಾಡಿದ!....

ಮರಿಯೆ : ಯಾರು?

ಸಿಲಾನುಸ್ : ಅದೇ, ಆ ನಜರೀನ್. ಆತ ತಿರುಗಿ ಬಂದರೆ ಹೇಳುತ್ತೇನೆಂದು ಮಾತು ಕೊಟ್ಟಿದ್ದೆನಲ್ಲ, ಅದರಂತೆ ಆತ ತಿರುಗಿ ಬಂದಿರುವುದನ್ನು ನಿನಗೆ ಹೇಳಲು ಬಂದಿದ್ದೇನೆ.

ಮರಿಯೆ : ಮರಳಿ ಬಂದನೆ? ಯಾವಾಗ? ಎಲ್ಲಿದ್ದಾನೆ? ನೀವು ಆತನನ್ನು ನೋಡಿದಿರಾ?

ಸಿಲಾನುಸ್ : ಅಮ್ಮಣ್ಣಿ, ನಿನ್ನ ಪ್ರಶ್ನೆಗಳಿಗೆ ಅನುಕ್ರಮವಾಗಿ ಉತ್ತರಿಸಬೇಕೆಂದರೆ: ಆತ ಇವತ್ತು ಬೆಳಿಗ್ಗೆ ತಾನೆ ವಾಪಸ್ಸು ಬಂದ; ನಾನೇ ನನ್ನ ಕಣ್ಣಾರೆ ಆತನನ್ನು ಕಂಡೆ; ಈ ಕ್ಷಣ ಆತ ನನ್ನ ನೆರೆಯವನಾದ ಕುಷ್ಠರೋಗಿ ಸಿಮೋನೆಯ ಜೊತೆಯಲ್ಲಿದ್ದಾನೆ. ಇಡೀ ದೇಶವನ್ನು ಎರಡು ಮೂರು ತಾಸು ನಡುಗಿಸಿದ ಹುಚ್ಚತನ ಈ ನಗರದವರೆಗೂ ಇನ್ನೂ ಮುಟ್ಟಿಲ್ಲದಿರುವುದು ಆಶ್ಚರ್ಯವುಂಟು ಮಾಡುತ್ತಿದೆ. ನಿಮ್ಮ ಮನೆ ಆ ಎತ್ತರದ ಬೆಟ್ಟ ಮತ್ತು ಗೋರಿಗಳ ನಡುವಿನ ಆಲಿವ್ ಮರಗಳಿಂದಾಗಿ ದೂರ ಉಳಿದಿದೆ, ನಿಜ.

ಮರಿಯೆ : ನಾನು.... ನನಗೇನೂ ಅಂತಾ ಸುದ್ದಿ ಮುಟ್ಟಿಲ್ಲ, ತಿಳಿದಿಲ್ಲ. ತಿಳಿಸಿ ಎಂದು ಅಪ್ಪಣೆ ಮಾಡಿದ್ದರೂ ಸಹ ಯಾರೂ ತಿಳಿಸಿಲ್ಲ... ಆದರೆ, ಈಗ ಆಗಿರುವುದಾದರೂ ಏನು?... ಅಪ್ಪಿಯುಸ್ ಅಂತೂ ದೆವ್ವದಂತೆ ಬಿಳುಚಿಕೊಂಡಿದ್ದಾನೆ.... ಏನು ವಿಷಯ? ಆತ ಏನು ಹೇಳಿದ? ಏನು ಮಾಡಿದ?

ಅಪ್ಪಿಯುಸ್ : ಹಿಂದೆಂದೂ ಯಾವ ಮನುಷ್ಯನೂ, ಯಾವ ದೇವರೂ ಮಾಡಿರದ

ಕೆಲಸ ಆತ ಮಾಡಿದ್ದಾನೆ. ಹತ್ತು ಸಾವಿರ ಸಾಕ್ಷಿಗಳೇ ಬಂದು ಸಾವಿರದವರ ಮೇಲೆ ಆಣೆ ಮಾಡಿ ಹೇಳಿದ್ದರೂ ನಾನು ನಂಬುತ್ತಿರಲಿಲ್ಲ. ಆದರೆ ಈಗ ನಾನು ನಿನ್ನನ್ನು ನೋಡುತ್ತಿರುವಷ್ಟೇ ಸಲೀಸಾಗಿ, ಈ ಹೂದಾನಿಯನ್ನು ಮುಟ್ಟುವಷ್ಟೇ ಸಹಜವಾಗಿ ಅದನ್ನು ನೋಡಿರುವುದರಿಂದ ಮತ್ತು ಮುಟ್ಟಿರುವುದರಿಂದ ನನ್ನ ಇರುವಿಕೆಯನ್ನು ನಂಬುವಷ್ಟೇ ಧೃಡವಾಗಿ ಅದನ್ನು ನಂಬ ಬೇಕಾಗಿದೆ. ಆತ ಹೇಳಿದ: 'ಏಳು, ಮುಂದೆ ಬಾ, ನಡೆ.' ಸತ್ತು ಬಿದ್ದಿದ್ದವ ಎದ್ದ, ಮುಂದೆ ಬಂದ, ನಮ್ಮ ನಡುವೆ ನಡೆದಾಡ ತೊಡಗಿದ !

ವೀರುಸ್ : ಆರೋಗ್ಯ ಕೆಟ್ಟು ಸತ್ತಿದ್ದ ಹಾಗೆ ಕಂಡವನಲ್ಲ ತಾನೆ?

ಸಿಲಾನುಸ್ : ಇಲ್ಲ, ಆತ ಸತ್ತಿದ್ದನೆಂಬ ಖಾತ್ರಿ ನನಗಿದೆ.

ಅಪ್ಪಿಯುಸ್: ಅದು ನಿಜವಾಗಿಯೂ ಭಯಂಕರವಾಗಿ ಸತ್ತ ಮನುಷ್ಯನೇ ! ಇಲ್ಲಾಂದರೆ, ನೀಲಿಯಾಕಾಶದಲ್ಲಿ ಸೂರ್ಯ ಹೊಳೆಯುತ್ತಿರುವುದೂ ಸುಳ್ಳು, ಮನುಷ್ಯನ ಮಾಂಸ ಕೊಳೆಯುವುದೂ ಸುಳ್ಳು ಎಂದಾಯಿತು !.... ಆತ ನಾಲ್ಕು ದಿನ ಗೋರಿಯೊಳಗಿದ್ದವ!.....

ಮರಿಯೆ : ಯಾರು? ಹೇಗೆ? ಎಲ್ಲಿ? ...ಮತ್ತೆ ನಜರೀನ್?... ನನಗೆ ವಿಷಯ ಗೊತ್ತಾಗಲೇಬೇಕು. ಸಿಲಾನುಸ್, ಅವನ ಬದಲು ನೀವೇ ಹೇಳಿ. ಅವನ ಪ್ರಜ್ಞೆ ಇನ್ನೂ ಮರಳಿದಂತಿಲ್ಲ...

ಸಿಲಾನುಸ್ : ಏನಾಯಿತೆಂದು ಕೆಲವೇ ಮಾತುಗಳಲ್ಲಿ ಹೇಳುತ್ತೇನೆ, ಕೇಳು. ನಾನಂತೂ ಅಪ್ಪಿಯುಸ್‌ನ ಬೆರಗನ್ನು ಸಂಪೂರ್ಣವಾಗಿ ಹಂಚಿ ಕೊಳ್ಳುವುದಿಲ್ಲ ಎಂದು ಮೊದಲೇ ಸ್ಪಷ್ಟಪಡಿಸುತ್ತೇನೆ. ಮಗುವೊಂದು ಜನ್ಮ ತಾಳುವುದಾಗಲಿ; ಮುದುಕ ಜೀವ ಬಿಡುವುದಾಗಲಿ ಹೇಗೆ ಆಶ್ಚರ್ಯವುಂಟು ಮಾಡುವುದಿಲ್ಲವೊ, ಹಾಗೇ ಸತ್ತವ ಜೀವಂತ ವಾಗುವುದೂ ಆಶ್ಚರ್ಯ ತರಬಾರದು. (ಮಗ್ದಲೀನೆ ಅಸಹನೆಯಿಂದ ಕೈ ಬೀಸುತ್ತಾಳೆ) ನಿನ್ನ ಅಸಹನೆ ನನಗರ್ಥವಾಗುತ್ತದೆ. ಆ ದಿನ ನನ್ನ ನೆರೆಮನೆಯಾತ ಸಿಮೋನೆಯ ವಿಚಾರ ನಿನಗೆ ಹೇಳಿದ್ದೆ. ನನ್ನ ಭೂಮಿಗೆ ತಾಕಿಕೊಂಡಂತಹ ಸಣ್ಣ ಮನೆಯಲ್ಲಿ ತನ್ನ ಹೆಂಡತಿ, ನಾದಿನಿ,

ಮತ್ತು ಲಜರಸ್ ಹೆಸರಿನ ಮೈದುನನ ಜೊತೆ ವಾಸವಾಗಿದ್ದಾನೆ ಎಂದು. ಈ ಲಜರಸ್ - ಯಾವಾಗಲೂ ಮನೆಯಿಂದ ದೂರವೇ ಇರುತ್ತಿದ್ದರಿಂದ ಆತನನ್ನು ಎರಡು ಮೂರು ಸಲ ಮಾತ್ರ ನೋಡಿದ್ದೆ. ಕೆಲವು ವಾರಗಳಿಂದ ಯಾವುದೋ ಕಾಯಿಲೆಯಿಂದ ನರಳುತ್ತಿದ್ದ ಆತ ನಾಲ್ಕು ದಿನದ ಹಿಂದೆ ತೀರಿಕೊಂಡ....

ಅಪ್ಪಿಯುಸ್: ನಾಲ್ಕು ದಿನ... ತಿಳಿಯಿತಾ? ಅದನ್ನು ಮಾತ್ರ ಯಾರೂ ಸುಳ್ಳು ಎನ್ನಲಾಗದು...

ಸಿಲಾನುಸ್ : ಹೌದು, ಹಾಗನ್ನಲು ಯಾರೂ ಧೈರ್ಯ ಮಾಡುತ್ತಿಲ್ಲ, ಅಪ್ಪಿಯುಸ್. ಅವರದು ಬಹಳ ಅನ್ಯೋನ್ಯ ಕುಟುಂಬ; ಆ ಬಡ ಜನರ ದುಃಖ ಅತೀವವಾಗಿತ್ತು. ಹೆಂಗಸರ ಗೋಳಾಟ ನನ್ನ ಮಾಳಿಗೆ ಮೇಲಿಂದ ಕೇಳಿಸುತ್ತಿತ್ತು. ಯಹೂದ್ಯರ ಸಂಪ್ರದಾಯದಂತೆ ಲಜರಸ್‌ನನ್ನು ಸತ್ತ ಮೂರನೆ ರಾತ್ರಿ ಹೂಳಿದರು. ಆ ಬೆಟ್ಟದ ಆಚೆ ಮುಖದಲ್ಲಿ ಬಂಡೆಗಳ ನಡುವೆ ಹೊಸದಾಗಿ ಗೋರಿ ತೋಡಿ, ಅದರಲ್ಲಿ ಅವನನ್ನು ಹೂಳಿ, ಮೇಲೆ ದೊಡ್ಡದೊಂದು ಬಂಡೆ ಇರಿಸಿದರು. ಇವತ್ತು ಬೆಳಿಗ್ಗೆ ಇದ್ದಕ್ಕಿದ್ದಂತೆ ನಜರೀನ್ ವಾಪಸ್ ಬಂದನೆಂದೂ, ಆ ಸತ್ತ ವ್ಯಕ್ತಿಗೆ ಜೀವ ಮರಳಿಸುತ್ತಾನೆಂದೂ ಗುಸುಗುಸು ಹಬ್ಬ ತೊಡಗಿತು. ನಮ್ಮ ಮನೆಯಲ್ಲಿದ್ದ ಅಪ್ಪಿಯುಸ್ ತನ್ನ ಜೊತೆ ನಾನೂ ಹೋಗಲು ನನ್ನನ್ನು ಒಪ್ಪಿಸಿದ; ನಾವು ಜನರ ಗುಂಪನ್ನು ಗೋರಿಗಳ ಕಣಿವೆಗಳವರೆಗೂ ಹಿಂಬಾಲಿಸಿದೆವು.

ಮರಿಯೆ : ಹಾಗಾದರೆ ಆತ ಇವತ್ತು ವಾಪಸ್ಸು ಬರುತ್ತಾನೆಂದು ನಿಮಗೆ ಗೊತ್ತಿತ್ತು; ಅಂದಮೇಲೆ, ನೀವು ಮಾತು ಕೊಟ್ಟಿದ್ದ ಪ್ರಕಾರ ನನಗ್ಯಾಕೆ ತಕ್ಷಣ ಹೇಳಿಕಳಿಸಲಿಲ್ಲ?....

ಸಿಲಾನುಸ್ : ಸೌಂದರ್ಯಪರ್ವದಲ್ಲಿರುವ ಹೆಣ್ಣಿನ ಕಣ್ಣು ನೋಡಬಯಸುವ ದೃಶ್ಯ ಅದಲ್ಲವೆಂದು ನನಗೆ ತೋರಿತು. ಅಲ್ಲದೆ ಉನ್ಮತ್ತ ಜನರ ನಡುವೆ ನೀನು ಮತ್ತೆ ಬಂದರೆ ಆ ದಿನದ ಹಿಂಸಾಚಾರ ಮತ್ತೆ ನಡೆಯುತ್ತೆಂಬ ಭಯವಾಯಿತು. ಶಾಂತವಾಗಿದ್ದರೂ ದುಂಬಿಹಿಂಡಿನಂತೆ ಥರಗುಟ್ಟುತ್ತಿದ್ದ ಜನರಾಶಿ ನಜರೀನನ ಜೊತೆ ಬರುತ್ತಿತ್ತು; ಆತನ ಮುಂದೆ ಲಜರಸ್‌ನ

ಇಬ್ಬರು ಸೋದರಿಯರು ನಡೆಯುತ್ತಿದ್ದರು. ನಾವು - ಅಪ್ಪಿಯುಸ್ ಮತ್ತು ನಾನು- ಯಾವುದೋ ಪೊದೆಯ ಹಿಂದೆ ಅಡಗಿದ್ದ ಬಂಡೆಯನ್ನೇರಿದೆವು; ಯಹೂದ್ಯರನ್ನು ಕೆರಳಿಸದೆಯೇ ಅಲ್ಲಿಂದ ಎಲ್ಲವನ್ನು ನೋಡಬಹುದಿತ್ತು, ಕೇಳಬಹುದಿತ್ತು. ಜನ ನಜರೀನ್‌ಗೆ ಗೋರಿ ತೋರಿಸಿದರು; ನಜರೀನ್ ನಿಂತು ತಲೆಬಾಗಿಸಿದ.

ಅಪ್ಪಿಯುಸ್: ಆತ ಅಳತೊಡಗಿದ. ಜನ ಗುಸುಗುಸ ಅಂದರು ; ''ನೋಡಿ, ಅವನ ಕಂಡರೆ ಇವನಿಗೆ ಅದೆಷ್ಟು ಪ್ರೇಮ!'' ಮುಂದೆ ಬರಲು ಯಾರಿಗೂ ಧೈರ್ಯ ಇರಲಿಲ್ಲ. ದೂರದಲ್ಲೆ ವರ್ತುಲಾಕಾರದಲ್ಲಿ, ಯಾವುದೋ ಭಯಂಕರ ಜೀವಿಯ ಸುತ್ತ ನಿಲ್ಲುವಂತೆ ನಿಂತರು.....

ಸಿಲಾನುಸ್ : ''ಬಂಡೆಯನ್ನು ತೆಗೆಯಿರಿ'', ನಜರೀನ್ ಹೇಳಿದ; ಇಬ್ಬರು ಗೋರಿಯ ಬಳಿ ಹೋದರು.

ಅಪ್ಪಿಯುಸ್: ಒಂದು ವಿಷಯ ಮರೆತೆ- ತಕ್ಷಣ ಸತ್ತವನ ಒಬ್ಬ ಸೋದರಿ,. ಬೆದರಿ ಅಳುತ್ತಾ ನಜರೀನ್‌ನ ತೋಳು ಹಿಡಿದು ಹೇಳಿದಳು: ''ಸ್ವಾಮಿ, ಇಷ್ಟೊತ್ತಿಗೆ ಆತ ಕೊಳೆತು ನಾರುತ್ತಿರುತ್ತಾನೆ; ಆತ ಸತ್ತು ನಾಲ್ಕು ದಿನಗಳಾಗಿದ್ದಾವೆ.'' ನಜರೀನ್ ಉತ್ತರಿಸಿದ; - ಒಂದು ಶಬ್ದವನ್ನು ನಾನು ಮರೆತಿಲ್ಲ - ''ವಿಶ್ವಾಸವಿದ್ದರೆ ದೇವರ ಮಹಿಮೆಯನ್ನು ನೀನು ನೋಡಬಲ್ಲೆ ಎಂದು ನಿನಗೆ ನಾನಾಗಲೇ ಹೇಳಿಲ್ಲವೆ? ಬಂಡೆ ಸರಿಸಿರಿ.''

ಮರಿಯೆ : ಲಜರಸ್‌ನ ಯಾವ ತಂಗಿ ಆಕೆ? ಸಿಮೋನೆಯ ಹೆಂಡತಿಯೆ?

ಸಿಲಾನುಸ್ : ಅಲ್ಲ, ಇನ್ನೊಬ್ಬಳು; ಅವಳ ಹೆಸರು ಮರಿಯೆ. ನಜರೀನ್ ಬೆಥನಿಯಲ್ಲಿ ಉಳಕೊಂಡಾಗೆಲ್ಲ ಅವಳು ಆತನ ಬಳಿಯೇ ಇರುತ್ತಾಳೆ.

ಮರಿಯೆ : ಇನ್ನೂ ಯುವತಿಯೆ?

ಸಿಲಾನುಸ್ : ಸಿಮೋನೆಯ ಹೆಂಡತಿಗಿಂತಾ ಚಿಕ್ಕವಳು.

ಮರಿಯೆ : ನೀವು ಆಕೆಯನ್ನು ನೋಡಿದ್ದೀರಾ? ಆಕೆ ಗೊತ್ತಾ ನಿಮಗೆ?....

ಸಿಲಾನುಸ್ : ಆಕೆಯೊಂದಿಗೆ ಹಲವಾರು ಸಲ ಮಾತಾಡಿದ್ದೇನೆ. ಬಂಡೆಯ ವಿಚಾರಕ್ಕೆ ಮರಳುವುದಾದರೆ ಅದು ದೊಡ್ಡದಾಗಿತ್ತು, ಚಪ್ಪಟೆಯಾಗಿದ್ದು ಗವಿಯ

ಅಂಚಿಗೆ ಕಟ್ಟಿ ಹಾಕಿದಂತಿತ್ತು; ಇಬ್ಬರು ಸನ್ನೆಕೋಲುಗಳೊಂದಿಗೆ ಪ್ರಹಾರ ಶುರುಮಾಡಿದರು. ಮೊದಮೊದಲು ಅದು ಬಿಟ್ಟು ಕೊಡಲಿಲ್ಲ. ಆದರೆ ಆಮೇಲೆ ಇದ್ದಕ್ಕಿದ್ದಂತೆ ಒಮ್ಮೆಲೇ ಬಿದ್ದು ಬಿಟ್ಟಿತು.

ಅಪ್ಪಿಯುಸ್ : ನಾವಂತೂ ಹತ್ತಿರವೇ ಇದ್ದೆವು. ಸ್ವರ್ಗದಿಂದ ಇಡೀ ಭೂಮಿಯನ್ನು ಮತ್ತು ಎಲ್ಲಾ ಜನರನ್ನು ಆಳುವ ಎಲ್ಲ ದೇವರ ಹೆಸರಿನಲ್ಲಿ ಪ್ರಮಾಣ ಮಾಡುತ್ತೇನೆ, ಆ ಕ್ಷಣ... ಸತ್ತ ವ್ಯಕ್ತಿಯ ಭಯಂಕರ ಉಸಿರು ನನ್ನ ಮುಖಕ್ಕೆ ರಾಚಿದಂತಾಯಿತು.

ಮರಿಯ : ನೀನು ಸತ್ತವನನ್ನು ನೋಡಿದೆಯಾ?

ಅಪ್ಪಿಯುಸ್ : ಈಗ ನಿನ್ನನ್ನು ನೋಡುತ್ತಿರುವಂತೆ, ಅಮ್ಮಣ್ಣಿ.

ವೀರುಸ್ : ಇಂಥ ತಿಕ್ಕಲು ಪ್ರಪಂಚದಲ್ಲಿ ಅರ್ಥಹೀನವಾಗಿ ನಡೆಯುವ ಇಂಥ ವಿಚಾರಗಳಲ್ಲಿ ನಿನಗೆ ಇಷ್ಟೊಂದು ಗಂಭೀರವಾದ ಆಸಕ್ತಿ ಅದು ಹೇಗೆ ಇರುವುದೋ ನನಗಂತೂ ತಿಳಿಯುತ್ತಿಲ್ಲ- ಇಲ್ಲಿ ಎಲ್ಲವೂ ಮಾಟ ಮಂತ್ರ, ಮಾಯೆ; ಸುಳ್ಳುಪಳ್ಳುಗಳು....

ಅಪ್ಪಿಯುಸ್ : ಹೇಡೆಸ್ ಮತ್ತು ಪರ್ಸಫೋನ ದೇವತೆಗಳಾಣೆಗೂ ನನ್ನ ಇಂದ್ರಿಯಗಳು ಗ್ರಹಿಸಿದ್ದು ಮಾಯೆ ಅಲ್ಲ ಎಂದು ಖಂಡಿತವಾಗಿ ಹೇಳಬಲ್ಲೆ.... ಬಂಡೆಯಿಂದ ಇನ್ನೇನು ಬಿದ್ದು ಬಿಡುತ್ತಿದ್ದೆವು! ಗವಿಯನ್ನು ನುಂಗುತ್ತಿದ್ದ ಆಸೆಬುರುಕ ಬೆಳಕಿನಲ್ಲಿ ಶವ ಸೆಟೆದುಕೊಂಡು ಬಿಟ್ಟಿತ್ತು - ಆಕಾರವಿಲ್ಲದ ಮೂರ್ತಿಯಂತೆ. ಶವವನ್ನು ಬಟ್ಟೆಯಿಂದ ಬಿಗಿಯಲಾಗಿತ್ತು, ಮುಖವನ್ನು ವಸ್ತ್ರದಿಂದ ಮುಚ್ಚಲಾಗಿತ್ತು. ಜನ ಅರ್ಧ ವರ್ತುಲಾಕಾರದಲ್ಲಿ ಮೇಲೇರಿ ಬಂದರು. ತಡೆಯಲಾಗದ ಆಕರ್ಷಣೆ, ವಿಕರ್ಷಣೆ! ಮುಂದೆ ಬಾಗಿದರು, ಸಾವಿರಾರು ಕತ್ತುಗಳನ್ನು ಮುಂದೆ ಚಾಚಿದರು... ಇನ್ನು ಮುಂದೆ ಬರುವ ಧೈರ್ಯ ಸಾಲದೆ. ನಜರೀನ್ ಒಬ್ಬನೇ ಮುಂದೆ ನಿಂತಿದ್ದ, ಕೈ ಮೇಲೆತ್ತಿದ, ಏನೋ ಮಾತಾಡಿದ, ನನಗೆ ಕೇಳಿಸಲಿಲ್ಲ. ಆಮೇಲೆ ಆ ಶವವನ್ನು ಉದ್ದೇಶಿಸಿ, ನಾನೆಂದೂ ಮರೆಯಲಾಗದಂಥ ಶಕ್ತವಾದ ದನಿಯಲ್ಲಿ ಹೇಳಿದ: ''ಲಜರಸ್, ಬಾ!''

ಮರಿಯೆ : ಅವನು ಎದ್ದು ಬಂದನೆ?....

ಅಪ್ಪಿಯುಸ್ : ಆ ಜನರ ಬಟ್ಟೆಗಳನ್ನು ಅಲುಗಾಡಿಸುತ್ತಿದ್ದ ಗಾಳಿಯ ಶಬ್ದ ಮತ್ತು ಗೋರಿಯೊಳಕ್ಕೆ ನುಗ್ಗಿದ ನೊಣಗಳ ಗೊಂಯ್ ಗುಡುವಿಕೆಯಷ್ಟೆ ನಮಗೆ ಆಗ ಕೇಳಿಸುತ್ತಿದ್ದುದು. ಎಲ್ಲ ಕಣ್ಣುಗಳೂ ಆ ಶವದ ಮೇಲೆ ಹೇಗೆ ನೆಟ್ಟಿತ್ತೆಂದರೆ ಅಲುಗಾಟವಿರದ ಅವರ ದೃಷ್ಟಿಕಿರಣಗಳು ಕತ್ತಲೆ ಕೋಣೆಯಲ್ಲಿ ಸೂರ್ಯ ಕಿರಣಗಳಷ್ಟು ಸ್ಪಷ್ಟವಾಗಿ ಕಂಡವು... ತಕ್ಷಣ ಎಲ್ಲಾ ಸರಳವಾದರೂ ಭಯಾನಕ ಮಾನವಾತೀತವಾಗಿ ಪರಿಣಮಿಸಿತು. ಸತ್ತ ವ್ಯಕ್ತಿ ಆತನ ಆಜ್ಞೆಯನ್ನು ಪಾಲಿಸುವಂತೆ ಮೇಲೆದ್ದು ಕೂತ; ಆಮೇಲೆ ತನ್ನ ಕಾಲುಗಳಿಗೆ ಬಿಗಿದಿದ್ದ ಕಟ್ಟುಗಳನ್ನು ಕಿತ್ತು ನೆಟ್ಟಗೆ ನಿಂತು ಬಿಟ್ಟ- ಶಿಲೆಯಂತೆ ! ಮೈಯೆಲ್ಲಾ ಬಿಳಿ; ತೋಳುಗಳಿನ್ನೂ ಬಿಗಿದಿವೆ, ತಲೆಯಿನ್ನೂ ಬಟ್ಟೆಯಿಂದ ಮುಚ್ಚಿಕೊಂಡಿದೆ, ಪುಟ್ಟ ಪುಟ್ಟ ಆದರೆ ಅಸಾಧ್ಯವಾದ ಹೆಜ್ಜೆಗಳಿಡುತ್ತಾ ಬೆಳಕಿನ ಸಹಾಯದಿಂದ ಗೋರಿಯಿಂದ ಮುಂದೆ ಬಂದ. ಬೆದರಿದ ಜನ ನಿಧಾನವಾಗಿ ಹಿಂದೆ ಸರಿದರು. ದೃಷ್ಟಿ ಮಾತ್ರ ಕದಲಿಸಲು ಅವರಿಂದಾಗಲಿಲ್ಲ, ''ಕಟ್ಟು ಬಿಚ್ಚಿ, ಆತ ಹೋಗಲಿ'' ನಜರೀನ್ ಹೇಳಿದ. ಸೋದರಿಯರಿಬ್ಬರೂ ನೆರೆದ ಜನರಿಂದ ಬಿಡಿಸಿಕೊಂಡು, ಬದುಗಳ ಹಾಗೆ ಹೊರಬಂದು, ಸೋದರನ ಕಡೆ ಧಾವಿಸಿದರು.

ಮರಿಯೆ : ಆಮೇಲೆ ಆತ...?

ಅಪ್ಪಿಯುಸ್ : ಅವನಿಗೆ ಸರಿಯಾಗಿ ನಡೆಯಲಾಗುತ್ತಿರಲಿಲ್ಲ, ಪ್ರತಿ ಹೆಜ್ಜೆಗೂ ಎಡವುತ್ತಿದ್ದ....

ಮರಿಯೆ : ಅವನಲ್ಲ, ನಜರೀನ್?

ಅಪ್ಪಿಯುಸ್ : ಆತ ಒಂದು ಮಾತೂ ಆಡದೆ ಹೋಗಿ ಬಿಟ್ಟ; ಸಿಮೋನೆಯ ಮನೆ ಒಳಕ್ಕೆ

ವೀರುಸ್ : ಸತ್ತಿದ್ದವ? ಅವನು ಹೇಗೆ ಹೋದ....?

ಅಪ್ಪಿಯುಸ್: ಅವನ ಇಬ್ಬರು ಸೋದರಿಯರು ಬಿಟ್ಟಕಣ್ಣು ಬಿಟ್ಟುಕೊಂಡೇ, ಯಂತ್ರದಂತೆ, ಕುರುಡರಂತೆ ತಟ್ಟಾಡುತ್ತಲೇ ಗೋರಿಯ ಬಟ್ಟೆಗಳನ್ನು

ಕಿತ್ತು ಹಾಕಿದರು; ಸತ್ತವನಿಗೆ ಆಸರೆ ನೀಡುತ್ತಾ, ನಡೆಯಲು ಸಹಾಯ ಮಾಡುತ್ತಾ ಅದೇ ಮನೆಯೊಳಕ್ಕೆ ಕರಕೊಂಡು ಹೋದರು. ಜನ ಅವರನ್ನು ಹಿಂಬಾಲಿಸುವ ಧೈರ್ಯ ಮಾಡದೆ ಬರೀ ಕಣ್ಣಲ್ಲಿ ಹಿಂಬಾಲಿಸಿದರು. ಯಾರೂ ತುಟಿಪಿಟ್ಟೆನ್ನಲಿಲ್ಲ; ಆ ಇಬ್ಬರೂ ಹೆಂಗಸರು ಸತ್ತವನ ಜೊತೆ ಇನ್ನೂ ಮಾತಾಡಿರಲಿಲ್ಲ.

ಮರಿಯೆ : ಆಮೇಲೆ ನಜರೀನ್? ಮತ್ತೆ ಕಾಣಿಸಿಕೊಂಡನೆ?

ಸಿಲಾನುಸ್ : ಆತ ಸಿಮೋನೆಯ ಮನೆಯಿಂದ ಇನ್ನೂ ಹೊರಟಿಲ್ಲ. ಜನ ಆತನಿಗಾಗಿ ತೋಟದಲ್ಲಿ, ರಸ್ತೆ ಬದಿಗಳಲ್ಲಿ ಕಾಯುತ್ತಲೇ ಇದ್ದಾರೆ. ಮೊದ ಮೊದಲು ದಂಗು ಬಡಿದಂತಿದ್ದು ಆಮೇಲೆ ಒಂದು ರೀತಿಯ ಹಿಗ್ಗಿನ ವಾತಾವರಣ ಉಂಟಾಗಿದೆ.

ಅಪ್ಪಿಯುಸ್ : ಅದಂತೂ ಆ ಪವಾಡದಷ್ಟೇ ಅದ್ಭುತವಾಗಿತ್ತು. ಮೊದಲು ಒಬ್ಬರನ್ನೊಬ್ಬರು ಹುಡುಕಿ ತಡಕುವ ಪಿಸುಮಾತಿನಿಂದ ಕೂಡಿದ ಮೂಕ ಸಂತಸ ಜನಗಳ ಮೇಲಾಸಿ ಬೀಸಿತು. ಆಮೇಲೆ, ಸತ್ಯವು ಆಕಾಶದ ಕೆಳಗೆ ಸಿಡಿಯಿತೆನ್ನುವ ಹಾಗೆ, ಬಣ್ಣಿಸಲಾಗದ ಖುಷಿ ಜನರನ್ನು ಹಿಡಿದಪ್ಪಿತು. ಪಿಸು ಮಾತುಗಳು ಗುರುತಿಸಲಾಗದ ಕೂಗಾಟವಾಯಿತು. ಹೆಂಗಸರು ಮಕ್ಕಳು, ವಿಶೇಷವಾಗಿ ಮುದುಕರು ಹುಚ್ಚರಂತಾದರು. ಮನುಷ್ಯ ಅಸ್ತಿತ್ವಕ್ಕೆ ಬಂದ ನಂತರ ಮೊದಲ ಬಾರಿಗೆ ಎನ್ನುವಂತೆ, ಈಗ ತಾನೆ ದೇವನೊಬ್ಬ ಸಾವನ್ನು ಸೋಲಿಸಿ, ಕೆಳಕ್ಕೆ ಹಾಕಿದ್ದಾನೆ ಎನ್ನುವಂತೆ, ಜನ ಸಾವನ್ನು ತಾವೂ ತುಳಿದು ತುಳಿದು ಹಾಕುತ್ತಿರುವಂತೆ ತೋರಿತು. ಈ ಅರ್ಥವಾಗದ, ಅಪಾಯಕಾರೀ ಸಂತಸ ಗೋರಿಯ ಸುತ್ತ ಇನ್ನೂ ಆಡುತ್ತಿದೆ. ಹರ್ಕ್ಯುಲಿಸ್‌ನ ಮೇಲಾಣೆ, ನಾವಂತೂ ತೊಂದರೆ ಇಲ್ಲದೆ ತಪ್ಪಿಸಿಕೊಂಡಿದ್ದರೂ ಸಹ, ಅಲ್ಲಿನ ರೋಮನ್ನರ ಟೋಗಾ ಮತ್ತು ಶಸ್ತ್ರಾಸ್ತ್ರಗಳನ್ನು ಎದುರಿಸುವ ಕಷ್ಟ ಯಾವ ವೈರಿಗೂ ಬರಬಾರದು!

ವೀರುಸ್ : ಅಷ್ಟೇನಾ ?

ಅಪ್ಪಿಯುಸ್ : ಇನ್ನೂ ಏನು ಬೇಕು ನಿನಗೆ?

ವೀರುಸ್ : ಇದೆಲ್ಲಾ ಏನನ್ನು ಸಾಬೀತು ಮಾಡುತ್ತದೆ ಎಂದು ತಿಳಿಯ ಬಯಸುತ್ತೇನೆ.

ಅಪ್ಪಿಯುಸ್ : ಇದು ಏನು ಸಾಬೀತು ಮಾಡುತ್ತದೆ ಎಂದರೆ, ಇಲ್ಲೀವರೆಗೆ ಪ್ರಪಂಚವನ್ನು ಸೋಲಿಸಿದ್ದ ಸಾವನ್ನು ಸೋಲಿಸಿರುವ ಆತ ನಮ್ಮ ದೇವರುಗಳಿಗಿಂತ ದೊಡ್ಡವ. ಆದ್ದರಿಂದ ಆತನ ಮಾತನ್ನು ಕೇಳುವುದು, ಅದರಂತೆ ಜೀವನ ಸಾಗಿಸುವುದು ನಮಗೆ ತಕ್ಕುದಾಗಿದೆ.

ಸಿಲಾನುಸ್ : ನಾನು ಇದುವರೆಗೆ ಕಲಿತದ್ದಕ್ಕಿಂತಾ ಉತ್ತಮವಾದದ್ದನ್ನು ಆತ ಕಲಿಸಿದರೆ ನಾನಂತೂ ನನ್ನ ಜೀವನವನ್ನು ಆತ ಹೇಳಿದಂತೆ ಸಾಗಿಸುತ್ತೇನೆ ಅಪ್ಪಿಯುಸ್. ಸತ್ತ ಮನುಷ್ಯನನ್ನು ಗೋರಿಯಿಂದ ಏಳಿಸುವುದರಿಂದ ಆತ ನಮ್ಮ ಹಿರಿಯರಿಗಿಂತಾ ಹೆಚ್ಚಿನ ಶಕ್ತಿ ಉಳ್ಳವನೆಂದು ತೋರಿಸಿಕೊಟ್ಟ, ಸರಿ. ಆದರೆ ಹೆಚ್ಚಿನ ಜ್ಞಾನವನ್ನೇನೂ ಕೊಡಲಿಲ್ಲವಲ್ಲ. ಸಮಚಿತ್ತದಿಂದ ಕಾದು ನೋಡೋಣ. ಒಳಿತನ್ನು ಉಂಟು ಮಾಡುವ ಪ್ರೇಮವನ್ನು ಯಾವುದು ಹಿಗ್ಗಿಸುತ್ತದೆ, ಯಾವುದು ಕುಗ್ಗಿಸುತ್ತದೆ ಎನ್ನುವುದು ಮಕ್ಕಳಿಗೂ ತಿಳಿಯುವಂಥದು ಎಂದು ಆತ ತೋರಿಸಿ ನನ್ನನ್ನು ಒಪ್ಪಿಸಲಿ, ನಾನು ತಿದ್ದಿಕೊಳ್ಳಲು ಸಿದ್ಧ. ನಾನು ಇದುವರೆಗೂ ತಪ್ಪಾಗಿ ನಡಕೊಂಡಿದ್ದೇನೆ ಎಂದು ಆತ ನನಗೆ ತಿಳಿಯುವಂತೆ ಹೇಳಿದರೆ, ತಿದ್ದಿಕೊಳ್ಳುತ್ತೇನೆ. ಯಾಕಂದರೆ ನಾನು ಅರಸುತ್ತಿರುವುದು ಸತ್ಯವನ್ನು ಮಾತ್ರ. ಆದರೆ ಒಂದು ವೇಳೆ ಈ ಕಣಿವೆಗಳಲ್ಲಿ ತುಂಬಿರುವ ಎಲ್ಲ ಸತ್ತ ವ್ಯಕ್ತಿಗಳೂ ಎದ್ದು ಬಂದು ಆತನ ಹೆಸರಲ್ಲಿ ಸಾಕ್ಷಿ ಹೇಳಿ, ನನಗೆ ತಿಳಿದಿರುವುದಕ್ಕಿಂತ ಕಡಿಮೆ ಸತ್ಯವನ್ನು ಹೇಳಿದರೋ ನಾನು ಅವನ್ನು ನಂಬುವುದಿಲ್ಲ. ಸತ್ತವರು ಮಲಗಾದರೂ ಇರಲಿ, ಎದ್ದಾದರೂ ಇರಲಿ, ನನ್ನ ಜೀವನವನ್ನು ಉತ್ತಮಗೊಳಿಸಲು ಕಲಿಸದಿದ್ದರೆ ಅವರ ಬಗ್ಗೆ ನಾನು ಆಲೋಚನೆ ಕೂಡ ಮಾಡುವುದಿಲ್ಲ.

ಮರಿಯೆ : (ಧಡ್ಡನೆ) ಕೇಳಲ್ಲಿ!....

ವೀರುಸ್ : ಏನದು?

ಅಪ್ಪಿಯುಸ್ : ಕಲ್ಲುಗಳು ಉರುಳುತ್ತಿರುವ ಶಬ್ದ!

ವೀರುಸ್ : ಜನಘಂಗುಳಿಯ ನಡುವಿನ ಪಿಸುಮಾತಿನಂತಿದೆ.

ಮರಿಯೆ : ಆತ ಬರುತ್ತಿದ್ದಾನೆ!

ಅಪ್ಪಿಯುಸ್ : (ಮೊದಲ ಕಂಬದ ಬಳಿ ಹೋಗಿ) ಇಲ್ಲಿಂದ ಮೊದಲ ಪಡಸಾಲೆಯ ಗೋಡೆಯನ್ನು ನೋಡಬಹುದು... ಅವರೆಲ್ಲಾ ಕಾಣಿಸುತ್ತಿದ್ದಾರೆ...

ಮರಿಯೆ : (ಬಿಳುಚಿಕೊಂಡಿದ್ದಾಳೆ. ತಟ್ಟಾಡುತ್ತಾ ಏಟ್ರಿಯಮ್‌ನ ಹಿಂದಕ್ಕೆ ಹೆಜ್ಜೆ ಹಾಕುತ್ತಾಳೆ. ದೂರಕ್ಕೆ ನೋಡುತ್ತಾಳೆ) ಹೌದು...

ಅಪ್ಪಿಯುಸ್ : ಧೂಳಿನ ಮೋಡದಿಂದ ಸುತ್ತುವರಿದಿದ್ದಾರೆ.... ಮುಂಬಾಗಿಲ ಬಳಿ ಏನಿಲ್ಲಾಂದರೂ ಎರಡು ಮೂರು ಸಾವಿರ ಜನರ ಗುಂಪಿದೆ.... ಅವರೆಲ್ಲ ಗೋರಿಯ ಬಳಿ ಇದ್ದವರೆಂದು ತೋರುತ್ತಿದೆ.

ವೀರುಸ್ : ಒಳಬರಲು ಧೈರ್ಯ ಮಾಡಲಾರರು!

ಮರಿಯೆ : ವೀರುಸ್!

ವೀರುಸ್ : ಹೆದರಬೇಡ ಮಗ್ದಲೀನ್. ಈ ಸಲ ನಾನೊಬ್ಬನೇ ನಿನ್ನನ್ನು ರಕ್ಷಿಸುತ್ತೇನೆ.

ಅಪ್ಪಿಯುಸ್ : ಬಿಳಿ ಬಟ್ಟೆ ತೊಟ್ಟವನನ್ನು ಹಿಂಬಾಲಿಸುತ್ತಾ ಪಡಸಾಲೆ ಹೊಕ್ಕರು.

ವೀರುಸ್ : ಮೊದಲ ಪಡಸಾಲೆಯ ಕಾವಲುಗಾರ ಏನು ಮಾಡುತ್ತಿದ್ದಾನೆ? ಆತನನ್ನು ತಡೆಯುವುದಿಲ್ಲವೆ?....

ಅಪ್ಪಿಯುಸ್ : ಹೌದು. ಈಗ ಬರುತ್ತಿದ್ದಾನೆ.... ಏನು ಮಾಡ್ತಿದ್ದಾನೆ?... ಅವನು ಹೆದರಿದಂತೆ ಕಾಣುತ್ತದೆ! ತಕ್ಷಣ ನಿಂತು, ಒಂದು ಮಾತನ್ನೂ ಆಡದೆ ಆತನನ್ನು ಹೋಗಗೊಟ್ಟ.....

ವೀರುಸ್ : ಮಿಕ್ಕವರು ಆತನನ್ನು ಹಿಂಬಾಲಿಸಿದರು... ಈಗ ಎರಡನೆ ಪಡಸಾಲೆಗೆ ಹೋಗುತ್ತಿದ್ದಾರೆ... ಆ ಯಹೂದ್ಯರ ಕೊಬ್ಬು ನಿಜವಾಗಿಯೂ ನಂಬಲಸಾಧ್ಯ!.. ರೋಮ್‌ನಲ್ಲಿ, ಸಾಕರ್ನಾಲಿಯಾ ಸಮಯದಲ್ಲೂ ಕೂಡ ಜನರನ್ನು ಹೀಗೆ ನುಗ್ಗಲು ಬಿಡುವುದಿಲ್ಲ.... ಈ ಆಳುಗಳು ಏನು ಮಾಡುತ್ತಿದ್ದಾರೆ ಅಂತ.........?

ಮರಿಯೆ : ಅದು ಆತನೆ?

ಸಿಲಾನುಸ್ : ಯಾರು?

ಮರಿಯೆ : ನಜರೀನನೆ?

ಸಿಲಾನುಸ್ : ಇಲ್ಲಾನ್ನಿಸುತ್ತೆ.... ಅದು ಆತನ ನಡಿಗೆಯಲ್ಲ... ಬಹುಶಃ ಅದು....

ಅಪ್ಪಿಯುಸ್ : ಅಲ್ಲಿದ್ದಾನೆ ಆತ, ಆ ಬೀದಿಯಲ್ಲಿ!

ಸಿಲಾನುಸ್ : ನಮ್ಮ ದಿಕ್ಕಿನಲ್ಲೆ ಸೀದಾ ಬರುತ್ತಿದ್ದಾನೆ...

ವೀರುಸ್ : ಇನ್ನೂ ಹತ್ತಿರದ ಮಾರ್ಗದಲ್ಲಿ. ಲತಾ ಮಂಟಪದ ಕೆಳಗಿನ ಮೆಟ್ಟಿಲುಗಳನ್ನು ಏರುತ್ತಿದ್ದಾನೆ.... ಶಾಂತನಾಗಿದ್ದಂತೆ ತೋರುತ್ತದೆ.... ಅದೃಷ್ಟವಶಾತ್ ಸೇವಕರು ಎಲ್ಲ ದಿಕ್ಕಿನಿಂದ ಆತನತ್ತ ಓಡಿ ಆತ ಪಡಸಾಲೆ ಹೋಗುವುದನ್ನು ತಡೆಯುತ್ತಿದ್ದಾರೆ.

ಮರಿಯೆ : ದಯವಿಟ್ಟು ಸುಮ್ಮನಿರು!

ವೀರುಸ್ : ಏನಾಯಿತು?

ಅಪ್ಪಿಯುಸ್ : ಅವನು ಹತ್ತಿರ ಬರುತ್ತಿದ್ದಾನೆ. ತುಂಬಾ ಬಿಳುಚಿಕೊಂಡಿದ್ದಾನೆ.

ಸಿಲಾನುಸ್ : ಹೌದೌದು, ಬಿಳುಚಿಕೊಂಡಿದ್ದಾನೆ.

ಮರಿಯೆ : ಯಾರು?

ಸಿಲಾನುಸ್ : ಇನ್ನೊಬ್ಬ... ಅದೇ, ಗೋರಿಯಿಂದ ಆಚೆ ಬಂದನಲ್ಲ, ಅವನು....

ಮರಿಯೆ : ಲಾಜರಸ್‌ನಾ?

ಸಿಲಾನುಸ್ : ಹೌದು, ಈಗ ಗುರುತು ಸಿಕ್ಕಿತು...

ವೀರುಸ್ : ನಮ್ಮಿಂದ ಅವನಿಗೇನು ಬೇಕಂತೆ?... ಇಂಥ ಹಾಡಂದ ಹಗಲಲ್ಲಿ ಭೂತಗಳು ಹಾಗೆಲ್ಲ ಓಡಾಡಬಾರದು... ಭಯಂಕರವಾಗಿದ್ದಾನೆ!

ಮರಿಯೆ : ಶ್!ಶ್!

ಸಿಲಾನುಸ್ : ಇಲ್ಲೇ ಬಂದ...

ದೃಶ್ಯ -೩

ಅದೇ ಲಾಜರಸ್. ಪಡಸಾಲೆಯ ಹಿಂದೆ ಸೇವಕರು, ಇನ್ನೂ ದೂರದಲ್ಲಿ ಕಾಣದಿದ್ದರೂ ಊಹಿಸಿಕೊಳ್ಳಬಹುದಾದ, ಯಹೂದ್ಯರ ಗುಂಪು

ನಿಶ್ಶಬ್ದ. ಲಜರಸ್ ಪಡಸಾಲೆ ಹಿಂದಿನಿಂದ ನಿಧಾನವಾಗಿ ಮುಂದೆ ಬಂದು ಕಾಣಿಸಿಕೊಳ್ಳುತ್ತಾನೆ. ಎಡ-ಬಲ ಎಲ್ಲೂ ನೋಡುತ್ತಿಲ್ಲ. ಅವನ ಹಾದಿಗೆ ಅಡ್ಡ ಬರುವ ರೀತಿಯಲ್ಲಿ ಸೇವಕರೆಲ್ಲ ಕಡೆಯ ಕಂಬದ ಕಡೆ ಧಾವಿಸುತ್ತಾರೆ. ಗೋರಿಯಿಂದೆದ್ದು ಬಂದ, ತಮ್ಮ ಇರವನ್ನೇ ಪರಿಗಣಿಸದ ಆ ವ್ಯಕ್ತಿ ಮುಂದೆ ಮುಂದೆ ಬಂದಂತೆ, ಅವರೆಲ್ಲ ಒಬ್ಬೊಬ್ಬರಾಗಿ ಹಿಂದೆ ಬೀಳುತ್ತಾರೆ. ಲಾಜರಸ್ ಏಟ್ರಿಯಂನ ಹಿಂದಿಂದ ಬಂದು ಮೂರು ಮೆಟ್ಟಿಲುಗಳಿಂದ ಎತ್ತರಿಸಲಾಗಿರುವ ಹೊಸ್ತಿಲಲ್ಲಿ ನಿಲ್ಲುತ್ತಾನೆ. ಮರಿಯ ಮಗ್ದಲೀನೆ ಮುಂದಿನ ಕಂಬವೊಂದರ ಬಳಿ ಹಿಂದಿಂದಕ್ಕೆ ನಡೆಯುತ್ತಾ ಹೋಗಿ ಡಿಕ್ಕಿ ಹೊಡೆದು ತಟಸ್ಥಳಾಗಿ ನಿಲ್ಲುತ್ತಾಳೆ. ಆದರೆ ವೀರುಸ್ ಕತ್ತಿಯ ಹಿಡಿಗೆ ಕೈ ಹಾಕಿ ನಿಶ್ಶಬ್ದವನ್ನು ಕಲಕುವಂತೆ ಲಾಜರಸ್‌ನ ಬಳಿ ಹೋಗುತ್ತಾನೆ.

ವೀರುಸ್ : (ಕಾಡುವ ದನಿಯಲ್ಲಿ) ಯಾರು ನೀನು? (ಲಾಜರಸ್ ಉತ್ತರಿಸುವುದಿಲ್ಲ) ಉತ್ತರಿಸುವುದಿಲ್ಲವೆ?..... ಹೌದು, ಒಪ್ಪಿಕೊಳ್ಳಲು ಕಷ್ಟವಾದ್ದನ್ನು ಮೌನದಿಂದ ಮುಚ್ಚಿಹಾಕುವುದೇ ಸುಲಭ. ಹೇಳುವುದೇನೂ ಇರದಿದ್ದರೆ ನಿನಗೆ ಇಲ್ಲೇನು ಕೆಲಸ? ನನ್ನ ಸಿಟ್ಟಿಗಿಂತ ನನ್ನ ಅನುಕಂಪ ಹೆಚ್ಚು ಗಟ್ಟಿಯಾಗಿರುವುದು ನಿನ್ನ ಅದೃಷ್ಟ. ಹೋಗಾಚೆ!

ಮತ್ತೊಮ್ಮೆ ಗಾಢವಾದ ನಿಶ್ಶಬ್ದ

ಲಾಜರಸ್ : (ಮನುಷ್ಯರ ದನಿಯನ್ನಿನ್ನೂ ಪೂರ್ತಿ ಪಡೆದುಕೊಂಡಿಲ್ಲವೆಂಬಂತಹ ದನಿಯಲ್ಲಿ, ಮರಿಯ ಮಗ್ದಲೀನೆಗೆ) ಬಾ, ಗುರುಗಳು ಕರೆಯುತ್ತಿದ್ದಾರೆ.

ತಾನು ಒರಗಿದ್ದ ಕಂಬ ಬಿಟ್ಟು ಮಗ್ದಲೀನೆ ನಿದ್ದೆಯಲ್ಲಿ ನಡೆದಾಡುತ್ತಿರುವವಳಂತೆ ನಾಲ್ಕೈದು ಹೆಜ್ಜೆ ಲಾಜರಸ್‌ನ ದಿಕ್ಕಿನಲ್ಲಿ ಇಡುತ್ತಾಳೆ.

ವೀರುಸ್ : (ಅಡ್ಡ ಬರುತ್ತಾ) ಎಲ್ಲಿ ಹೋಗುತ್ತಿದ್ದೀಯಾ?

ಮರಿಯ : (ಕಷ್ಟದಿಂದ ಪ್ರಜ್ಞೆ ಮರಳಿಸಿಕೊಂಡು, ಹಿಂಜರಿಯುತ್ತಾ) ಆತ ಎಲ್ಲಿಗೆಂದರೆ ಅಲ್ಲಿಗೆ..

ವೀರುಸ್ : ಇಲ್ಲ, ನಾನಿಲ್ಲಿರುವಾಗ ಅದು ಸಾಧ್ಯವಿಲ್ಲ !

ಮರಿಯೆ : (ಪ್ರಜ್ಞೆ ಕಳೆದುಕೊಂಡವಳಂತೆ ವೀರುಸ್‌ನ ತೆಕ್ಕೆಯಲ್ಲಿ ಬೀಳುತ್ತಾ) ವೀರುಸ್!

ವೀರುಸ್ : (ಅವಳನ್ನು ಗಟ್ಟಿಯಾಗಿ ಹಿಡಿದು) ಹೆದರದಿರು ಮಗ್ದಲೀನ್. ಈ ತೋಳುಗಳು ನಿನ್ನ ಬಳಸಿರುವಾಗ ಬೇರೇನೂ ನಿನ್ನನ್ನು ಮುಟ್ಟಲಾರದು. ಈ ನಾಡಿನಲ್ಲಿ ಯಾವುದೇ ಸೋಂಕು ಜಾಡ್ಯಕ್ಕಿಂತಾ ಸಾಂಕ್ರಾಮಿಕ ವಾಗಿ, ಕುಷ್ಠರೋಗಕ್ಕಿಂತ ಜಿಗುಟಾಗಿರುವುದೆಂದರೆ ಹುಚ್ಚು ಎಂದೇ ತೋರುತ್ತದೆ. ಆದರೆ ಗೋರಿಯಿಂದ ಗಬ್ಬು ನಾತ ಎದ್ದು ಬಂದು ಬಡಿದ ಮಾತ್ರಕ್ಕೆ ರೋಮಿನವನ ವಿಚಾರಶಕ್ತಿ ಕಡಿಮೆಯಾಗಿ ಬಿಡುವುದಿಲ್ಲ - ಇತರರಿಗಾಗುವಂತೆ. ಈ ವಿಷಯವನ್ನು ಇಲ್ಲಿಗೇ ಮುರುಟಿ ಬಿಡೋಣ. (ಲಾಜರಸ್‌ಗೆ) ನಿನ್ನನ್ನು ನನ್ನ ಕತ್ತಿಯಿಂದ ಮುಟ್ಟುವುದಿಲ್ಲ. ಶವಗಳನ್ನು ಕಂಡರೆ - ಅದೂ ಅವು ನಡೆದಾಡುವುದನ್ನು, ನಿನ್ನ ಹಾಗೆ ವ್ಯವಹಾರದಲ್ಲಿ ತೊಡಗುವುದನ್ನು ಕಂಡರೆ - ನನ್ನ ಕತ್ತಿ ತಾನೇ ಹಿಂಜರಿಯುತ್ತದೆ. ಗೋರಿಗೆ ನಿನ್ನ ಹಾದಿ ತಿರುಗಿ ತೋರಿಸಬೇಕಾದ್ದು ಆಳುಗಳ ಕೆಲಸ.... ಎಲ್ಲಿ ಆಳುಗಳು? ಹೋಗುವುದಕ್ಕೆ ಮುಂಚೆ ನಿನ್ನ ಒಡೆಯನಿಗೆ ಹೇಳು- ದೇವರೆ, ಅವನಿಗೆ ಅಭಿರುಚಿಯೂ ಇಲ್ಲ, ಧೈರ್ಯವೂ ಇಲ್ಲ!- ಅವನು ಕಣ್ಣು ಹಾಕಿರುವ ಹೆಣ್ಣು ಈ ತೋಳುಗಳ ಆಸರೆ ಪಡೆದಿದ್ದಾಳೆ... .ಈ ತೋಳುಗಳಿಗೆ ಅವನ ಅನಾಗರೀಕ ಮಾಟದ ವಿರುದ್ಧವಾಗಲಿ, ಮಂತ್ರದ ವಿರುದ್ಧವಾಗಲಿ ಅವಳನ್ನು ರಕ್ಷಿಸುವ ತಾಖತ್ತಿದೆ ಎಂದು ಹೇಳಿಬಿಡು. ಎಲ್ಲಕ್ಕಿಂತ ಹೆಚ್ಚಾಗಿ ನಾನೀಗ ಹೇಳಲಿರುವುದನ್ನು ಎರಡೆರಡು ಸಲ ಹೇಳು - ಆಗಾದರೂ ಅರ್ಥವಾಗಲಿ, ಅವನು ಹೀಗೆ ಮಾಡಿದ ಕಾರಣದಿಂದಾಗಿ ಈಗಾಗಲೇ ಮೊಟಕುಗೊಳಿಸಲಾದ ಅವನ ಆಯಸ್ಸು ನಿನ್ನನ್ನು ಇಲ್ಲಿಂದ ಓಡಿಸುತ್ತಿರುವ ಇದೇ ಕೈಯಲ್ಲಿ ಇದೆ. ನಾನು ಹೇಳಿದ್ದಾಯ್ತು ಹೋಗು, ಅವಳು ನಿನ್ನ ಹಿಂದೆ ಬರುವುದಿಲ್ಲ.

ಮರಿಯೆ : (ವೀರುಸ್‌ನ ಅಪ್ಪುಗೆಯಿಂದ ಬಿಡಿಸಿಕೊಳ್ಳಲು ಒದ್ದಾಡುತ್ತಾ ಇರುವಾಗ ಕಟ್ಟಿದ್ದ ಕೂದಲು ಸಡಿಲವಾಗಿ ಅವಳ ಭುಜದ ಮೇಲೆ ಹರಡುತ್ತದೆ) ನಾನು ನಿಮ್ಮ ಹಿಂದೆ ಬರುತ್ತೇನೆ!

ವೀರುಸ್ : (ಬಲವಂತದಿಂದ ಅವಳನ್ನು ಹಿಂದಕ್ಕೆ ಜಗ್ಗುತ್ತಾ) ಹಾಗಂದರೇನು?..... ಅಂದರೆ ನಿನಗೆ ....? (ಮಗ್ದಲೀನೆ ಕತ್ತು ಹಾಕುತ್ತಾಳೆ) ಇನ್ನು ನನಗೇನೂ ಅರ್ಥವಾಗುವುದಿಲ್ಲ.... ಅಥವಾ ಈಗ ನನಗೆ ಚೆನ್ನಾಗಿ ಅರ್ಥವಾಗ ತೊಡಗಿದೆ. ನೀನು ಈ ಮೊದಲು ಸರಿಯಾಗಿದ್ದೆ....ನೀನು ಅವನಿಗಾಗಿ ಕಾಯುತ್ತಿದ್ದರ ಅಸಹನೆಯೆ ನನಗೆ ಅಷ್ಟು ಮಧುರವೆನಿಸಿದ್ದು ? ... ಯಾರಿಗೆ ನಂಬಿಕೆ ಬರುತ್ತೆ ಇಡೀ ಯೂದಿಯಾದ ಅತಿ ಸುಂದರಿ, ಅತಿ ಶ್ರೀಮಂತೆ, ಅತಿ ಗರ್ವಿಯಾದ ಹೆಂಗಸು ಹೀಗೆ... ಯಾವ ಪೂರ್ವ ನಿಯೋಜನೆಯೂ ಇಲ್ಲದೆ... ತಾನು ಜೀವಮಾನದಲ್ಲಿ ಒಂದೇ ಸಲ ಕಂಡವನ ವಿಲಕ್ಷಣ ವಿಕರಾಳ ದೂತನ ಒಂದೇ ಮಾತನ್ನು ಹೀಗೆ ಪರಿಪಾಲಿಸುತ್ತಾಳೆಂದು!... ಇದು ಅತಿಯಾಯಿತು... ನನಗೀಗ ತಿಳಿಯುತ್ತಿದೆ. ಹೋಗು, ನೀನು ಅವನನ್ನೇ ಪ್ರೀತಿಸುತ್ತಿರುವೆ!.

ಮರಿಯೆ : ಇಲ್ಲಾ, ಇಲ್ಲ! ನಾನು ಪ್ರೀತಿಸುವುದು ನಿನ್ನನ್ನು. ಆದರೆ ಆತ....

ವೀರುಸ್ : ಅವನು?

ಮರಿಯೆ : (ಅಳುತ್ತಾ ವೀರುಸ್‌ನ ಕಾಲ ಬಳಿ ಬೀಳುತ್ತಾಳೆ) ಅದು ಬೇರೆ...!

ವೀರುಸ್ : ಆಯಿತು, ಮೇಲೇಳು.... ನಿನ್ನನ್ನು ಬಲವಂತದಿಂದ ಇಲ್ಲಿರಿಸಿ ಕೊಳ್ಳುವುದಿಲ್ಲ. ಆದರೆ ನೀನು ಹೀಗಾಗುತ್ತೀಯ ಎಂದು ಯಾರೇ ಹೇಳಿದ್ದರೂ ನಂಬುತ್ತಿರಲಿಲ್ಲ. ನಿನ್ನ ಯಹೂದಿ ತಂತ್ರಗಳೊಂದರಲ್ಲಿ ನಾನೀಗ ಸಿಲುಕಿಬಿಟ್ಟೆ. ಅಲ್ಲಿ, ಮೊಗಸಾಲೆ ಕೆಳಗಡೆ ನೆರೆದಿರುವ ಜನ ಜಂಗುಳಿ ಕಾಣುತ್ತಿದೆಯಾ? ಬಂಧಿಗಳನ್ನು ಶಂಕಾಸ್ಪದವಾಗಿ ನೋಡುತ್ತಿರುವುದು......? ರೋಮನ್ನರ ಆಸ್ತಿ ಅಪವಿತ್ರವಾಗುವುದಕ್ಕೆ ನಾನು ಬಿಡುವುದಿಲ್ಲ.... ನಿನ್ನ ಬಗ್ಗೆ ನನಗೆ ಯಾವ ದ್ವೇಷವೂ ಇಲ್ಲ, ಮಗ್ದಲೀನ್. ಪ್ರೇಮ ಅನ್ನುವುದು ನನ್ನಲ್ಲಿ ಕ್ಷಣಕ್ಕೆ ಮಾಯವಾಗು ವಂಥದ್ದಲ್ಲ; ಅಲ್ಲದೆ ಹೆಂಗಸರಿಗಿಂತ ಹೆಚ್ಚಿನ ಧೃಡತ್ವ ನನಗಿದೆ... ನಿನ್ನ ಮೇಲೆ ನನ್ನ ಗಮನ ಯಾವಾಗಲೂ ಇರುತ್ತದೆ. ನಾನು ಅವನನ್ನೇ ನಾಶ ಮಾಡಿ ಅವನು ನಾಶ ಮಾಡಬಯಸಿದ್ದಾಕೆಯನ್ನು ರಕ್ಷಿಸಬಲ್ಲೆ. ಅವನು ಜೀವಂತ ಇರುವುದು ನನ್ನ ಕಾರಣದಿಂದ ಎನ್ನುವುದು ಅವನಿಗೂ ಗೊತ್ತಿರಬೇಕು. ಕರುಣೆಯಿಂದಲೊ, ಅಸಡ್ಡೆಯಿಂದಲೊ

ಅಂತೂ ಅವನ ತಲೆಯ ಮೇಲೆ ಹೆಪ್ಪುಗಟ್ಟಿದ್ದ ಎಲ್ಲ ಬೆದರಿಕೆಗಳನ್ನೂ ನಾನು ಇದುವರೆಗೆ ತಡೆಹಿಡಿದಿದ್ದೇನೆ. ಆದರೆ ಅವನೇ ನನ್ನ ಮೇಲೆ ಆಕ್ರಮಣ ಮಾಡಲು ಬಂದಿರುವು ದರಿಂದ ಆ ಎಲ್ಲ ಬೆದರಿಕೆಗಳ ಜೊತೆ ನನ್ನ ಭಗ್ನ ಪ್ರೇಮದ ಭಾರವನ್ನೂ ಹೊರಿಸುತ್ತೇನೆ... ಈಗ ನೀನು ಗೋರಿಯಿಂದೆದ್ದು ಬಂದಿರುವ ಈ ದೂತನ ಜೊತೆ ಹೋಗಬಹುದು..... ಬಹಳ ಬೇಗ ಮತ್ತೆ ಸಂಧಿಸೋಣ.

ಪಡಸಾಲೆಯಾಸಿ ಲಾಜರಸ್ ಹೊರಹೋಗುತ್ತಾನೆ. ಒಂದು ಮಾತನ್ನೂ ಆಡದೆ, ಒಂದು ಚೂರೂ ಅಲುಗಾಡದೆ, ಒಮ್ಮೆಯೂ ಅತ್ತಿತ್ತ ನೋಡದೆ ಮಗ್ದಲೀನೆ ಅವನ ಹಿಂದೆ ಹೋಗುತ್ತಾಳೆ. ಮಿಕ್ಕವರೆಲ್ಲ ಸ್ತಬ್ಧ

ಅಪ್ಪಿಯುಸ್ : (ಬಹಳ ಕಾಲದ ನಂತರ) ನಾವೆಂದೂ ನೋಡಿಲ್ಲದಂಥದ್ದನ್ನು .... ಒಂದಕ್ಕಿಂತ ಹೆಚ್ಚಿನ ಸಂಖ್ಯೆಯ ವಿಚಿತ್ರಗಳನ್ನು ಈ ದಿನ ನೋಡಿಬಿಟ್ಟೆವು....

ಸಿಲಾನುಸ್ : ಹೌದು ಅಪ್ಪಿಯುಸ್, ಸತ್ತ ಮನುಷ್ಯ ಮೇಲೆದ್ದು ಬಂದಷ್ಟೇ ಇದೂ ಆಶ್ಚರ್ಯಕರವಾಗಿದೆ.

ಪರದೆ

ಅಂಕ- ಮೂರು

ಅರಿಮಾಥೀಯದ ಯೂಸೊಫನ ಮನೆಯಲ್ಲಿ 'ಅಂತಿಮ ಭೋಜನ' ನಡೆದ ಭೋಜನ ಶಾಲೆ; ಹಿಂದಕ್ಕೆ ಕಿಟಕಿಗಳು. ಎಡಬಲಕ್ಕೆ ಬಾಗಿಲುಗಳು. ಜ್ಯೂಡೋ ರೋಮನ್ ವಾಸ್ತುಶಿಲ್ಪ. ದೀಪಗಳು ಬೆಳಗುತ್ತಿವೆ. ಏಪ್ರಿಲ್ ಆರರ ರಾತ್ರಿಯ ಕಡೆಯ ಭಾಗ

ದೃಶ್ಯ -೧

ನಿಕೊದೀಮಸ್, ಸುರೆ ವ್ಯಾಪಾರಿ ಲೆವಿ, ಕುಷ್ಠರೋಗಿ ಸಿಮೋನೆ, ಗೋರಿಯಿಂದೆದ್ದ ಲಾಜರಸ್, ಕ್ಲಿಯೋಫಾಸ್, ಜಕ್ಕೇಯುಸ್, ಹುಟ್ಟು ಕುರುಡ, ಜೆರಿಕೋದ ಕುರುಡ ಬಾರ್ತಿಮೇಯಸ್, ಗೆರಾಸಾದ ಭೂತ ಹಿಡಿದ ವ್ಯಕ್ತಿ, ಬೆಥೆಸ್ದಾದ ಮುಖ್ಯ ವ್ಯಕ್ತಿ, ಜಲೋದರ ಖಾಯಿಲೆಯಿಂದ ಗುಣಮುಖನಾದ ವ್ಯಕ್ತಿ, ಕೈ ಮುರಿದುಕೊಂಡಿದ್ದವ, ಸಿಮೋನ ಪೀಟರ್‌ನ ಅತ್ತೆ ಮೇರಿ ಕ್ಲಿಯೊಫಾಸ್, ಜೆಬೆದೀಯ ಹೆಂಡತಿ ಸಲೋಮೆ, ಸುಸನ್ನಾ, ಪವಾಡಗಳಿಂದ ಗುಣಮುಖರಾದ ಅನೇಕ ಅನಾಮಿಕ ಗಂಡಸರು, ಹೆಂಗಸರು, ಗುಣಮುಖರಾಗಲು ಕಾಯುತ್ತಿದ್ದ ಕೆಲವು ಗೂನಿಗಳು, ಕುಂಟರು, ಕುರುಡರು, ಕುಷ್ಠರೋಗಿಗಳು, ವಾಯುರೋಗ ಪೀಡಿತರು, ಕೆಲವು ಭಿಕ್ಷುಕರು, ಇಬ್ಬರು ಮೂವರು ಸೂಳೆಯರು ಇತ್ಯಾದಿ. ಇವರೆಲ್ಲರೂ ಯೇಸುವಿನ ಬಂಧನದ ಕೆಟ್ಟ ಸುದ್ದಿಯಿಂದಾಗಿ ಆಶ್ಚರ್ಯ ಮತ್ತು ಭಯ ಭೀತರಾಗಿದ್ದಾರೆ. ಕೋಣೆಯ ಹಿಂಭಾಗದಲ್ಲಿ ಎಲ್ಲ ಸೇರಿ, ಪಿಸಪಿಸ ಗುಸುಗುಸು ಮಾತಾಡುತ್ತಾ ಇದ್ದಾರೆ. ಲಾಜರಸ್‌ನ ಸಹೋದರಿ ಮಾರ್ಥಾ ಪ್ರವೇಶ

ಮಾರ್ಥಾ : (ಹೆದರಿದ್ದಾಳೆ, ಸುತ್ತ ನೋಡುತ್ತಾ) ಆತನನ್ನು ಕಂಡೆ!

ಎಲ್ಲ ಉತ್ಸುಕರಾಗುತ್ತಾರೆ. ಮಾರ್ಥಾಳ ಸುತ್ತುವರೆಯುತ್ತಾರೆ

ನಿಕೊದೀಮಸ್: ಎಲ್ಲಿದ್ದಾನೆ ಆತ?

ಮೆಲ್ಕಿ : ತೊಂದರೆ ಪಡುತ್ತಿದ್ದಾನಾ?

ಸಲೊಂ : ಏನನ್ನುತ್ತಾನೆ ಆತ?

ಮಾರ್ಥಾ : ನನ್ನ ಸೋದರಿ ಎಲ್ಲಿ?

ಮೆಲ್ಕಿ : ತನ್ನ ತಾಯಿ ಜೊತೆ, ನಮ್ಮ ಅತಿಥೇಯರ ಕೋಣೆಯಲ್ಲಿ... ದುಃಖದಿಂದ ಅವಳ ತಾಯಿ ಬಡವಾಗಿದ್ದಳು...

ಮಾರ್ಥಾ : (ಒಂದು ಕಿಟಕಿ ಬಳಿ ಹೋಗಿ) ಯಾರೂ ನನ್ನ ಹಿಂಬಾಲಿಸಿಲ್ಲವಷ್ಟೇ?. ... ಸದ್ಯ ಬೀದಿ ಖಾಲಿಯಾಗೇ ಇದೆ... ನಾನು ಬಹಳ ದೂರ ಹೋಗಿದ್ದೆ...

ನಿಕೊದೀಮಸ್: ಆತನನ್ನು ನೀನು ನೋಡಿದ್ದು ಎಲ್ಲಿ?

ಮಾರ್ಥಾ : ಆತ ಅನ್ನಾಳ ಮನೆಯಿಂದ ಹೊರಬರುತ್ತಿದ್ದ. ಕಯೋಫಾನ ಮನೆವರೆಗೂ ನಾನು ಆತನನ್ನು ಹಿಂಬಾಲಿಸಿದೆ. ಅವರು ಈಗ ನಮ್ಮನ್ನು ಹುಡುಕುತ್ತಿದ್ದಾರಂತೆ... ಅವರಿಗೆ ಗೋರಿಯಿಂದೆದ್ದು ಬಂದ ಲಾಜರಸ್‌ನ ಕಂಡರೆ ವಿಶೇಷ ದ್ವೇಷವಂತೆ... ಎಲ್ಲಿ ಅವನು?

ನಿಕೊದೀಮಸ್: (ಕತ್ತಲಲ್ಲಿದ್ದ ಲಾಜರಸ್ ಕಡೆ ಬೊಟ್ಟು ಮಾಡುತ್ತಾ) ಇಲ್ಲಿ, ನಮ್ಮ ಮಧ್ಯದಲ್ಲೆ....

ಮಾ ರ್ಥಾ: ಹಾಗಾದರೆ ಆತನ ಜೊತೆ ಹೋದವರನ್ನೆಲ್ಲಾ ಹಿಡಿದು ಹಾಕುತ್ತಾರೆ.... ಕಾನೂನಿನ ಪ್ರಕಾರ ನಮ್ಮೆಲ್ಲರ ಮೇಲೂ ಕಲ್ಲು ತೂರುತ್ತಾರೆ... ಗೆಲೀಲಿಯಿಂದ ಬಂದ ಪ್ರತಿಯೊಬ್ಬರನ್ನೂ ಶಿಕ್ಷೆಗೆ ಗುರಿ ಮಾಡುತ್ತಾರೆ....

ಕ್ಲಿಯೊ ಫಾಸ್: ನಾವೆಲ್ಲಾ ಗೆಲೀಲಿಯನ್ನರೆ....

ಪವಾಡದಿಂದ
ಗುಣವಾದ ಒಬ್ಬ: ಇಲ್ಲಪ್ಪ, ನಾನು ಗೆಲೀಲಿಯವನಲ್ಲ.

ಇನ್ನೊಬ್ಬ : ನಾನೂ ಅಲ್ಲ, ನಾನು ಬೆಥೆನಿಯವನು.

ಬಾರ್ತಿಮೆಯಸ್: ನಾನು ಜೆರಿಕೊದವನು....

ಒಬ್ಬ : ನಾವೆಲ್ಲಾ ಒಟ್ಟಾಗಿ ಇರುವುದು ಯಾಕೋ ಸರಿಬರುತ್ತಿಲ್ಲ.

ನಕೊಡಿಮಸ್: ಎಲ್ಲಿ ಹೋಗುತ್ತೀಯ ಮತ್ತೆ?....

ಒಬ್ಬ : ಎಲ್ಲಾದರೂ ಸರಿಯೆ.... ಇಲ್ಲಿಗಿಂತಾ ಸುರಕ್ಷಿತವಾಗಿರಬಹುದು.

ಇನ್ನೊಬ್ಬ : ಅವರಿಗೆ ನಾವ್ಯಾರೂ ಗೊತ್ತಿಲ್ಲ. ನಾನಂತೂ ಆತನೊಂದಿಗೆ ಎಂದೂ ಯಾರಿಗೂ ಕಾಣಿಸಿಕೊಂಡಿಲ್ಲ.

ಒಬ್ಬ ಹೆಂಗಸು: ನಾನೂ ಅಷ್ಟೆ. ಅವನು ಏನಿದ್ದರೂ ನನ್ನ ಖಾಯಿಲೆ ವಾಸಿ ಮಾಡಿದ ಅಷ್ಟೆ. ನನ್ನ ಮೈ ಬಾಗಿತ್ತು, ಅವನು ಅದನ್ನು ನೆಟ್ಟಗೆ ಮಾಡಿದ, ಅಷ್ಟೆ.

ಒಬ್ಬ : ನಾನು ಅವನನ್ನು ನೋಡಿರುವುದು ಒಂದೇ ಒಂದು ಸಲ. ಅದೂ ಅವನೇ, 'ಏಳು, ಎದ್ದು ನಿನ್ನ ಹಾಸಿಗೆ ಎತ್ತಿಕೊಂಡು ನಿನ್ನ ಮನೆ ಕಡೆ ಹೋಗು' ಅಂದಾಗ ಮಾತ್ರ. ಮಾಳಿಗೆಯಿಂದ ಕೆಳಗೆ ಹಾಸಿಗೆ ಸಮೇತ ಎಸೆದಿದ್ದರಲ್ಲ ಆ ವ್ಯಕ್ತಿ ನಾನೇ. ಈಗ ನಾನೂ ಇತರರ ಹಾಗೆ ಓಡಾಡ ಬಲ್ಲೆ...ನೋಡಿ (ಬಾಗಿಲ ಕಡೆ ತಿರುಗಿ ಆಚೆ ಹೋಗಿ ಬಿಡುತ್ತಾನೆ. ಅವನಿಗೆ ಮುಂಚೆ ಮಾತಾಡಿದ ಪವಾಡಗಳಿಂದ ಆರೋಗ್ಯ ಪಡೆದವರೆಲ್ಲ ಆಚೆ ಹೋಗಿಬಿಡುತ್ತಾರೆ)

ಒಬ್ಬ ರೋಗಿ: ಅವರು ಮಾಡಿದ್ದು ಸರಿ.... ನಾವೂ ಸಹ ಆತನಿಗೆ ಪರಿಚಿತರೇನಲ್ಲ... ಬೇಧಿಯಿಂದ ಮುಕ್ತಿ ಪಡೆದವ ನಾನೇ,... ಆತನನ್ನು ಒಂದು ಸಲವೂ ನಾನು ಮುಟ್ಟಿಲ್ಲ (ಅವನೂ ಬಾಗಿಲ ಬಳಿ ಸಾಗುತ್ತಾನೆ)

ಮಾರ್ಥಾ: ನಿಮಗೆ ನಾಚಿಕೆಯಾಗುತ್ತಿಲ್ಲವೆ?

ರೋಗಿ: (ಹೊಸ್ತಿಲಲ್ಲಿ ತಡೆದು) ಯಾವ ವಿಷಯಕ್ಕೆ? ... ಅವನೇ ರೋಗ ವಾಸಿ ಮಾಡಿರುವಾಗ ಅವನ ಕಾರಣದಿಂದ ನಾವು ಮತ್ತೆ ನಾಶವಾಗುವುದೆಂದರೆ ಅವನು ವಾಸಿ ಮಾಡಿದ್ದರ ಉದ್ದೇಶ ಏನು ಸಾಧನೆ ಆಯಿತು? (ಹೋಗುತ್ತಾನೆ)

ಇನ್ನೊಬ್ಬ: ಅವನು ನಮಗಾಗಿ ಏನೂ ಮಾಡಲಾರ, ಯಾಕಂದರೆ ತನಗಾಗಿ ತಾನೇ ಏನೂ ಮಾಡಿಕೊಳ್ಳಲು ಅವನಿಗೆ ಆಗುತ್ತಿಲ್ಲ. ಆದ್ದರಿಂದ ಅವನಿಗೆ ನಾವೂ ಏನೂ ಮಾಡಲು ಆಗದು....

ಗೂನ : ಹೌದು, ಅವನೇ ಯಾಕೆ ನಮ್ಮನ್ನು ಈಗ ಕಾಪಾಡಬಾರದು?... ಯಾವಾಗಲೂ ತನ್ನ ತಂದೆ ಮತ್ತು ದೇವತೆಗಳ ವಿಚಾರವನ್ನೇ ಮಾತಾಡುತ್ತಿರುತ್ತಾನಲ್ಲ..... ಯಾರವರು ಆ ದೇವತೆಗಳು?

ನಿಕೊದೀಮಸ್: ಅವರ ಕಾಲ ಇನ್ನೂ ಬಂದಿಲ್ಲ, ಅದಿಕ್ಕೆ.

ಗೂನ : ಯಾವಾಗ ಬರುತ್ತಂತೆ ಅವರ ಕಾಲ?... ಎಲ್ಲಾ ಆಗಿ ಹೋದ ಮೇಲಾ?.... ನನಗಂತೂ ಕಾಯಲು ಸಮಯವಿಲ್ಲ... (ಆಚೆ ಹೋಗುತ್ತಾನೆ)

ನಿಕೊದೀಮಸ್: ಆತನ ಬಗ್ಗೆ ಪ್ರೀತಿ ಇಲ್ಲದವರೆಲ್ಲ ಹೋಗಬಹುದು.... ಆ ದೇವ ಪುತ್ರ ಬರುವುದು ನೀವೆಂದುಕೊಂಡ ಕಾಲಕ್ಕೆ ಅಲ್ಲ....

ಕ್ಲಿಯೊಫಾಸ್: ಆತನ ರಾಜ್ಯ ಈ ಪ್ರಪಂಚದ್ದಲ್ಲ.

ಕುರುಡ : ಅವನ ರಾಜ್ಯ ಈಗ ಕಳೆದು ಹೋಗಿದೆ....

ನಿಕೊದೀಮಸ್: ಆತ ಹೇಳಿದರು: ಬರೀ ಎರಡಾಣೆಗೆ ಐದು ಗುಬ್ಬಚ್ಚಿಗಳನ್ನು ಮಾರಿದ್ದರೂ, ದೇವರ ಲೆಕ್ಕದಲ್ಲಿ ಒಂದೂ ಮರೆಯಾಗುವುದಿಲ್ಲ .

ಕ್ಲಿಯೊಫಾಸ್: ಆತ ಹೇಳಿದ, ಅನುಮಾನದಲ್ಲಿ ಮಾತ್ರ ಬದುಕಿರಬೇಡ ಎಂದು.

ನಿಕೊದೀಮಸ್: ಆತ ಹೇಳಿದ, 'ನನ್ನ ಮಾತನ್ನು ಮಾನ್ಯ ಮಾಡಿದವ ಎಂದೂ ಸಾವಿಗೀಡಾಗುವುದಿಲ್ಲ '

ಕುರುಡ: ಅವನು ಹೀಗೂ ಹೇಳಿದ ,'ಸತ್ತವರನ್ನು ಸತ್ತವರು ಹೂತು ಹಾಕಲಿ ಬಿಡಿ' (ತಟ್ಟಾಡುತ್ತಾ ಬಾಗಿಲಿಂದಾಚೆ ಹೋಗಿ ಬಿಡುತ್ತಾನೆ)

ಕುಂಟ: ನಾನೂ ಹೋಗುತ್ತೇನೆ. ಹೆದರಿಕೊಂಡು ಹೋಗುತ್ತಿಲ್ಲ, ಅವನನ್ನು ಹುಡುಕಲು ಹೋಗುತ್ತೇನೆ....

ಇನ್ನೊಬ್ಬ : ನಾನೂ ಅಷ್ಟೇ.... (ಹೋಗುತ್ತಾನೆ)

ಕುಷ್ಠರೋಗಿ: ನಾವು ಅವನಿಗೆ ಕಾಯುತ್ತಾ ಇಲ್ಲೇ ಇರಬೇಕು ಅಂತ ಯಾರು ಹೇಳಿದರು?

ನಿಕೊದೀಮಸ್: ಸೈಮನ್ ಪೀಟರ್.

ಕುಷ್ಠರೋಗಿ : ಸೈಮನ್ ಪೀಟರ್ ಎಲ್ಲಿ ?.... ಅವನೇ ಕಾಣುತ್ತಿಲ್ಲ ಮತ್ತೆ....?

ಮಾರ್ಥಾ : ಮುಖ್ಯ ಅರ್ಚಕರ ಭವನದಲ್ಲಿ, ಅಗ್ನಿ ಪಕ್ಕ ಇದ್ದಾನೆ.

ನಿಕೊದೀಮಸ್: ಮತ್ತೆ ಜಾನ್?

ಮಾರ್ಥಾ : ಅವನು ಆನ್ನಾಸ್‌ನ ಮನೆಯಲ್ಲಿದ್ದ ಎಂದು ಕೇಳಿದ ಹಾಗಿದೆ....

ನಿಕೊದೀಮಸ್: ನೀನು ನೋಡಿದಾಗ ಗುರುಗಳು ಏನು ಮಾಡುತ್ತಿದ್ದರು?....

ಮಾರ್ಥಾ: ನಾನು ಆತನನ್ನು ಒಂದೇ ಕ್ಷಣ ನೋಡಿದ್ದು..... ಮೊಗಸಾಲೆಯ ಆ ಕಿರಣಗಳ ಕಂಭಗಳ ನಡುವೆ ಹಾದು ಹೋಗುತ್ತಿದ್ದಾಗ.... ಆತನ ಸುತ್ತ ಜನಜಂಗುಳಿ ಇತ್ತು.

ಮೇರಿ ಕ್ಲಿಯೊಫಾಸ್: ಆತ ನಿನ್ನ ನೋಡಿದರೆ?....

ಮಾರ್ಥಾ: ಹೌದು, ನನ್ನ ನೋಡಿದರು....

ನಿಕೊದೀಮಸ್: ಬಂಧಿಯಾಗಿರಲಿಲ್ಲವಷ್ಟೆ?

ಮಾರ್ಥಾ: ಕೈಗಳನ್ನು ಕಟ್ಟಿದ್ದರು.... ಆತನನ್ನು ಬೇಗ ಬೇಗ ಹೆಜ್ಜೆ ಹಾಕಲೆಂದು ರೋಮನ್ ಸೈನಿಕರು ಬಾರಿಸುತ್ತಲೇ ಇದ್ದರು.

ಸಲೋನೆ: ಅಯ್ಯೊ!...

ಕ್ಲಿಯೊಫಾಸ್: ಮಿಕ್ಕವರು ..ಆ ಹನ್ನೆರಡು ಮಂದಿ, ಅವರೆಲ್ಲಿ ?

ಮಾರ್ಥಾ: ಯಾರಿಗೂ ತಿಳಿಯದು... ಅವರೆಲ್ಲಾ ಭಯಭೀತರಾಗಿದ್ದರು... ಟಾಮಸ್ ಮತ್ತು ಜ್ಯೂಡ್ ಗೆಲೀಲಿಗೆ ಓಡಿ ಹೋದರೆಂದು ಕೇಳಿದೆ.

ನಿಕೊದೀಮಸ್: ಮರಿಯೆ ಮಗ್ದಲೀನೆ...? ಅವಳನ್ನು ನೋಡಿದಿಯಾ?

ಮಾರ್ಥಾ: ಇಲ್ಲ, ಜೇಮ್ಸ್ ಆಕೆಯನ್ನು ಭೇಟಿ ಮಾಡಿದನಂತೆ... ದುಃಖದಿಂದ ಹುಚ್ಚಿಯಾಗಿದ್ದಾಳಂತೆ... ಅನ್ನಾಸ್‌ನ ಅರಮನೆಯಲ್ಲಿ ಅವಳು ಕೂಗಾಡುತ್ತಾ ಬಟ್ಟೆ ಹರಕೊಳ್ಳುತ್ತಿದ್ದಳಂತೆ, ಗೋಡೆಗೆ ತಲೆತಲೆ ಚಚ್ಚಿಕೊಳ್ಳುತ್ತಿದ್ದಳಂತೆ.... ಆಳುಗಳು ಅವಳನ್ನ ಆಚೆ ಹಾಕಿದರಂತೆ. ಆದಾದ ಮೇಲೆ ಆವಳಿಗೆ ಏನಾಯಿತೋ ಯಾರಿಗೂ ಗೊತ್ತಿಲ್ಲ.... ರೋಮನ್ ಬೀದಿಯಲ್ಲಿ ಅಲೆದಾಡುತ್ತಿದ್ದಳೂಂತ ಯಾರೋ ಬಡವನೊಬ್ಬ ನನಗೆ ಹೇಳಿದ.

ನಿಕೊದೀಮಸ್: ನಾವಿಲ್ಲಿದ್ದೀವೀಂತ ಅವಳಿಗೆ ಗೊತ್ತಿದೆಯಾ?

ಮಾರ್ಥಾ: ಹುಂ, ಸೈಮನ್ ಪೀಟರ್ ಹೇಳಿ ಬಿಟ್ಟಿದ್ದಾನೆ...

ಒಬ್ಬ ರೋಗಿ: ಅವಳಿಲ್ಲಿಗೆ ಬಂದರೆ ಮತ್ತೆ ಆಚೆಗೆ ಹೋಗಲು ಬಿಡಬೇಡ.... ನಮಗೆಲ್ಲಾ ಕೇಡು ತಂದಾಳು. ಭಯಂಕರ ಹೆಂಗಸು, ಏನು ಮಾಡುತ್ತಿದ್ದೇನೆ ಅಂತ ಅವಳಿಗೇ ಗೊತ್ತಿರುವುದಿಲ್ಲ.

ಪವಾಡದಿಂದ

ಗುಣಮುಖನಾದ ಒಬ್ಬ: ರಸ್ತೆಯಲ್ಲಿ ಗಸ್ತುತಿರುಗುತ್ತಿದ್ದಾರೆ... ಶಸ್ತ್ರಗಳ ಶಬ್ದ ಕೇಳಿಸಿತು. ನಮ್ಮನ್ನ ದಸ್ತಗಿರಿ ಮಾಡಲು ಬರುತ್ತಿದ್ದಾರೆ! ಆದವರು ಆದವರು ತಪ್ಪಿಸಿಕೊಳ್ಳಿ! (ಕಿಟಕಿ ಬಳಿ ಹೋಗುತ್ತಿದ್ದ ನಿಕೊದೀಮಸ್‌ಗೆ) ಕಿಟಕಿ ಹತ್ತಿರ ಹೋಗಬೇಡ, ಗುರುತು ಹಿಡಿದುಬಿಟ್ಟಾರು!....

ಬಾರ್ಥಿಮೇಯಸ್: ನಾನು ಹೋಗ್ತೀನಿ. ನಾನು ಜೆರಿಕೋದವ, ನನ್ನ ಪರಿಚಯ ಅವರಿಗಿರುವುದಿಲ್ಲ.... (ಹುಷಾರಾಗಿ ಬೀದಿಯತ್ತ ನೋಡುತ್ತಾನೆ..) ಹನ್ನೆರಡು ಜನ ಸೈನಿಕರ ಜೊತೆ ಒಬ್ಬ ದಳವಾಯಿ... ಹುಶ್! ಮಾತಾಡಬೇಡಿ!.....

ನಿಕೊದಿಮಸ್: ನಿಲ್ಲುತ್ತಿದ್ದಾರಾ?

ಬಾರ್ತಿಮೇಯರ್: ಮುಂದೆ ಹೋಗುತ್ತಿದ್ದಾರೆ.... ಬೀದಿಯಲ್ಲಿ ಈಗ ಯಾರೂ ಇಲ್ಲ... ಇಲ್ಲ, ಆ ಕಡೆಯಿಂದ ಯಾರೋ ಬರುತ್ತಿದ್ದಾರೆ... ಶಬ್ದ ಮಾಡಬೇಡ ... ಒಂದು ಹೆಂಗಸು ನಾಲ್ಕು ಜನ ಗಂಡಸರು... ಓ, ಅವರು ನನಗೆ ಗೊತ್ತಿರುವವರೇ! ಅದು ಮರಿಯೆ ಮಗ್ದಲೀನೆ, ಅರಿಮಾಥಿಯಾದ ಯೂಸುಫ್, ಅವನು ಜೇಮ್ಸ್ ಇರಬೇಕು ಮತ್ತೆ ಸಿಮೋನ್ ಜೀಲೊತ್ಸ್.....ಸುತ್ತ ನೋಡುತ್ತಿದ್ದಾರೆ.... ಬಾಗಿಲು ತಟ್ಟುತ್ತಿದ್ದಾರೆ.... ಕೆಳಕ್ಕೆ ಹೋಗಿ ಅವರಿಗೆ ಬಾಗಿಲು ತೆಗೆದು ಬಾ.....

ದೃಶ್ಯ -೨

ಅದೇ. ಮರಿಯ ಮಗ್ದಲೀನೆ, ಅರಿಮಾಥಿಯಾದ ಯೂಸೂಫ್, ಜೇಮ್ಸ್, ಆಂದ್ರ್ಯೂ ಮತ್ತು ಸಿಮೋನ್ ಜೀಲೊಟ್ಸ್

ಮರಿಯ ಮಗ್ದಲೀನೆ: (ತಲೆ ಕೆದರಿದೆ; ಬರಿಗಾಲು; ಬಟ್ಟೆ ಹರಿದಿದೆ, ತನ್ನ ಪರಿವೆಯೇ ಇಲ್ಲ) ಎಷ್ಟು ಜನ ಇದ್ದೀರಿ?.... ಎಲ್ಲಾ ತಯಾರು ತಾನೆ?.... ನನ್ನ ಕಾಯುತ್ತಾ ಏನು ಮಾಡುತ್ತಾ ಇದ್ದಿರಿ?.... ನಾನೀಗ ಆಂತೋನಿಯಾ ಟವರ್‌ನಿಂದ ಬರುತ್ತಿದ್ದೇನೆ. ಮಿಲಿಟರಿಯ ವಿಚಾರಣಾಧಿಕಾರಿ ರೋಮನ್ ಮನೆಗಳ ಸಾಲುಗಳಲ್ಲಿ ಇರಲಿಲ್ಲ... ಆದರೆ ಅವನ ಮಿತ್ರ ಅಪ್ಪಿಯುಸ್‌ನನ್ನು ಕಂಡೆ... ಅವನು ತಿರುಗಿ ಬಂದ ತಕ್ಷಣ ನಮ್ಮ ಬಳಿ ಕಳಿಸುತ್ತಾನೆ... ಆತನನ್ನು ರಕ್ಷಿಸುವುದು ಸಾಧ್ಯವಾಗಬಹುದು ಎಂದು ವೀರುಸ್ ಹೇಳಿದ... ಹೇಗೆ ಅಂತ ನನಗಂತೂ ಗೊತ್ತಿಲ್ಲ.... ಅವನೇ ಬಂದು ವಿವರಿಸುತ್ತಾನೆ.... ಒಂದು ವೇಳೆ ಅವನಿಂದ ಅದು ಆಗದಿದ್ದರೆ ನಾವೇ ಆತನನ್ನು ರಕ್ಷಿಸಬೇಕಾಗುತ್ತದೆ... ಜೇಮ್ಸ್ ಮತ್ತು ಸಿಮೋನ್ ತಮ್ಮ ನಿಲುವಂಗಿ ಒಳಗೆ ಕತ್ತಿಗಳನ್ನು ಇಟ್ಟುಕೊಂಡಿದ್ದಾರೆ. ಪೀಟರ್ ಎಲ್ಲಿ? ಜಾನ್ ಎಲ್ಲಿ?

ಮಾರ್ಥಾ: ಮುಖ್ಯ ಅರ್ಚಕರ ಮನೆಯಲ್ಲಿ.

ಮರಿಯ ಮಗ್ದಲೀನೆ: ಇಲ್ಲಿಗೆ ಬಂದೇ ಬರುತ್ತಾರೆ... ನಮ್ಮ ಸಂಖ್ಯೆ ಹೆಚ್ಚಿಸಿಕೊಳ್ಳಬೇಕು.... ಆತ ಈ ಬೀದಿಯಾಸಿ ಹಾಯುವವರಿದ್ದಾರೆ... ಆ ಕಿಟಕಿಯ ಕೆಳಗೆ.... ಪಿಲಾತನನ್ನು ಕಾಣುವ ಹಾದಿಯಲ್ಲಿ.....

ನಿಕೊದೀಮಸ್: ಯಾವಾಗ?

ಮರಿಯ ಮಗ್ದಲೀನೆ: ಇವತ್ತು ರಾತ್ರಿ, ಎರಡನೆ ಝಾವಕ್ಕೆ ಮುಂಚೆ... ನಿಮ್ಮಲ್ಲಿ ಯಾರ ಬಳಿ ಶಸ್ತ್ರಾಸ್ತ್ರವಿದೆ? ಎಲ್ಲಿ ಬಚ್ಚಿಟ್ಟುಕೊಂಡಿದ್ದೀರಾ ಅವನ್ನ?

ನಿಕೊದೀಮಸ್: ಏನು ಮಾಡಬೇಕೆಂದಿದ್ದೀಯ?....

ಮರಿಯ ಮಗ್ದಲೀನೆ: ವೀರುಸ್ ಆತನನ್ನು ರಕ್ಷಿಸದಿದ್ದರೆ ನಾವು ಆತನನ್ನು ಸ್ವತಂತ್ರಗೊಳಿಸಬೇಕು... ಬಹಳ ಸುಲಭ. ನೋಡುವಿಯಂತೆ....

ನಾವು ಬಯಸಿದಂತೆ ಮಾಡಲು ಅವರು ಅವಕಾಶ ಕೊಡುತ್ತಾರೆ, ನನಗೆ ಗೊತ್ತು, ಖಂಡಿತಾ ಕೊಡುತ್ತಾರೆ.... ರೋಮನ್ನರು ಆತನ ಬಗ್ಗೆ ತಾವೇ ನಿರ್ಧಾರ ತೆಗೆದುಕೊಳ್ಳಲು ಇಷ್ಟಪಡುವುದಿಲ್ಲ.... ಅಪ್ಪಿಯುಸ್ ಹೇಳಿದ, ಅವರೆಲ್ಲ ಗಲಿಬಿಲಿಗೊಂಡಿದ್ದಾರೆಂದು.... ಆತನನ್ನು ಕಯ್‌ಫಾಸ್‌ಗೆ ಕೊಂಡೊಯ್ದಾಗ ಆತನನ್ನು ಕಾಯಲು ಇದ್ದವರು ಇಬ್ಬರು ಸೈನಿಕರು ಮತ್ತೆ ಕೈಲಿ ದೊಣ್ಣೆ ಹಿಡಿದ ದೇವಾಲಯದ ಇಬ್ಬರು ಸಾರ್ಜೆಂಟುಗಳಂತೆ.... ನನ್ನ ಬಳಿ ಕಡೇ ಪಕ್ಷ ಐದಾರು ಮಂದಿ ಗಂಡಸರಾದರೂ ಇದ್ದಿದ್ದರೆ!.... ಆತನನ್ನು ಬಚ್ಚಿಡಬಹುದಿತ್ತು.... ಜಾಗ ಗೊತ್ತಿತ್ತು.... ಆತನನ್ನು ಆಗಲೇ ರಕ್ಷಿಸಬಹುದಿತ್ತು!.... ಆದರೆ ಇದ್ದಿದ್ದು ನಾನೊಬ್ಬಳೇ!....

ಅರಿಮಾಥಿಯಾದ ಯೂಸುಫ್: ಮಗ್ದಲೀನೆ, ಅದು ನೀನಂದುಕೊಂಡಷ್ಟು ಸುಲಭವಲ್ಲ.... ಜನರೆಲ್ಲ ಅಲ್ಲೇ ಇದ್ದರು.... ಆತನ ಮೇಲೆ ಕಲ್ಲುತೂರಲು ಕಾಯುತ್ತಾ.....

ಮರಿಯೆ ಮಗ್ದಲೀನೆ: ಆದರೆ ಜನರೆಲ್ಲ ಆತನ ಕಡೆನೇ. ಜನ ಆತನಿಗೆ ಭಕ್ತಿ ತೋರುತ್ತಾರೆ ! ... ಆತ ನಗರ ಪ್ರವೇಶ ಮಾಡುವಾಗ ಕೇಳಿದ ಜಯಕಾರವನ್ನು ನೀನು ಮರೆತೇ ಬಿಟ್ಟದ್ದೀಯ!.

ಅರಿಮಾಥಿಯಾದ ಯೂಸುಫ್: ಈಗ ಪರಿಸ್ಥಿತಿ ಬದಲಾಗಿದೆ. ಕಯ್‌ಫಾಸ್‌ನ ಅರಮನೆ ಆಚೆ ನಿಂತು ಈಗ ಅವರೆಲ್ಲ ಆತನು ಸಾಯಬೇಕೆಂದು ಕೂಗುತ್ತಿದ್ದಾರೆ.

ಮರಿಯೆ ಮಗ್ದಲೀನೆ: ಅದು ಫಾರಸೀ ಮತ್ತ ಸದ್ದುಸೀಗಳ ಕೆಲವೇ ಸೇವಕರು....

ಅರಿಮಾಥಿಯಾದ ಯೂಸುಫ್: ಅಂಥಾ ಸಾರ್ವಜನಿಕ ಸ್ಥಳದಲ್ಲಿ ಮಾಳಿಗೆವರೆಗೂ ಜನ ತುಂಬಿದ್ದರೆಂದರೆ ಅದು ಕೆಲವೇ ಕೆಲವು ಸೇವಕರಿಂದ ಆಗದು ಬಿಡು.... ವಿಜಯದ ದಿನ ಇದ್ದ ಅದೇ ಜನ ಅವರು.... ಇಲ್ಲ, ನನ್ನ ಮಾತು ನಂಬು, ಮಗ್ದಲೀನೆ. ತನಗೇನು ಬೇಕು ಎಂದು ಆತನಿಗೆ ತಿಳಿದಿದೆ.... ನಾಶಹೊಂದಲು ಆತ ನಿರ್ಧರಿಸಿ ಬಿಟ್ಟದ್ದಾನೆ.... ಎಲ್ಲವನ್ನೂ ಒಪ್ಪಿಕೊಂಡು ಬಿಟ್ಟದ್ದಾನೆ...

ಮರಿಯೆ ಮಗ್ದಲೀನೆ: ತಪ್ಪೇ ಮಾಡಿಲ್ಲದ ಆತ ಏನನ್ನು ಒಪ್ಪಿಕೊಂಡಿರಬಹುದು?.....

ಅರಿಮಾಥಿಯಾದ ಯೂಸುಫ್: ತಾನು ದೇವರ ಮಗನೆಂದೂ, ಯಹೂದ್ಯರ ರಾಜನೆಂದೂ ಒಪ್ಪಿಕೊಂಡಿದ್ದಾನೆ.

ಮರಿಯ ಮಗ್ದಲೀನೆ: ಅದು ಸತ್ಯವೇ ತಾನೆ?

ಯೂಸುಫ್: ಅದರಲ್ಲಿ ಸಂದೇಹವಿಲ್ಲ. ಆದರೆ ಈ ರಾತ್ರಿ ಅದನ್ನು ಘೋಷಿಸಿ ಕೊಂಡಿಲ್ಲದಿದ್ದರೆ ಚೆನ್ನಾಗಿರುತ್ತಿತ್ತು. ಅರ್ಚಕರ ಮತ್ತು ರೋಮನ್ನರ ದೃಷ್ಟಿಯಲ್ಲಿ ಅದು ಶಿಕ್ಷಾರ್ಹ....

ಒಬ್ಬ ಎಡಬಿಡಂಗಿ: ಆತ ತಪ್ಪು ಮಾಡಿರಲೇಬೇಕು. ಇಲ್ಲಾಂದ್ರೆ ಅವನನ್ನು ಸುಮ್ಮಸುಮ್ಮನೆ ದಸ್ತಗಿರಿ ಮಾಡುತ್ತಿರಲಿಲ್ಲ....

ನಿಕೊದೀಮಸ್: ಆತ ಬಯಸುವುದಕ್ಕಿಂತ ಆತ ಅಪ್ಪಣೆ ಕೊಟ್ಟಿರುವುದಕ್ಕಿಂತ ಹೆಚ್ಚಿಗೆ ನಾವು ಏನೂ ಮಾಡಲಾರೆವು; ಮೇಲಾಗಿ ಆತನೇ ಬೆಂಬಲವನ್ನೆಲ್ಲ ದೂರ ಮಾಡುತ್ತಾನೆ.

ಮರಿಯ ಮಗ್ದಲೀನೆ: ಆತ ನಿಮ್ಮ ವಿಶ್ವಾಸ, ನಿಮ್ಮ ಶಕ್ತಿ, ನಿಮ್ಮ ಪ್ರೇಮವನ್ನು ಪರೀಕ್ಷಿಸಲೆಂದು ಹಾಗೆ ಮಾಡುತ್ತಿದ್ದಾನೆ ಅಂತ ನೀವ್ಯಾರೂ ಯಾಕೆ ಭಾವಿಸುತ್ತಿಲ್ಲ....

ನಿಕೊದೀಮಸ್: ಇದೆಲ್ಲಾ ಹೀಗಾಗುತ್ತೆ ಎಂದು ಅನೇಕ ಸಲ ಭವಿಷ್ಯ ನುಡಿದಿದ್ದ.....

ಮರಿಯ ಮಗ್ದಲೀನೆ: ಯಾಕಂದರೆ ಆತನ ಪ್ರತಿ ಪ್ರೇಮ ನಟಿಸುವವರ ಪುಕ್ಕಲು ಸ್ವಭಾವ ಆತನಿಗೆ ತಿಳಿದಿದ್ದು!.... ಆಹ್! ಈ ಗಂಡಸರು ವೀರರೂ, ಧೀರರೂ, ಢಾಂಬಿಕರೂ ಆಗಿರುತ್ತಾರೆ.... ತಲೆ ತಪ್ಪಿಸಿಕೊಂಡು ಹೋಗದೆ, ಕಡಿಮೆ ಅಧೀರರೆನಿಸಿಕೊಂಡ ಈ ಕೆಲವೇ ಜನ ಗಂಡಸರು! ಪುರುಷೋತ್ತಮರು, ನೀವೆಲ್ಲಾ ಸೇರಿ ಚರ್ಚೆ ವಾದ-ವಿವಾದ ಮಾಡುತ್ತಿದ್ದೀರ.... ಒಂದು ಮಣ ಗೋಧಿಯ ಬಗ್ಗೆ ಚರ್ಚೆ ಮಾಡುವಂತೆ. ಮತ್ತೆ ಈ ಹೆಂಗಸರು ಬಾಯಿ ಮುಚ್ಚಿಕೊಂಡಿರುತ್ತಾರೆ, ಅಳುಪುರುಕಿಯರು !... ಹುಂ, ಏನು ಹೇಳುತ್ತಾರೆ ನನ್ನ ಸೋದರಿಯರು? ಇದೇ ಅಲ್ಲವೆ ಪ್ರೀತಿಯನ್ನು ವ್ಯಕ್ತಗೊಳಿಸಬೇಕಾದ ಕ್ಷಣ ?.... ಅವರೆಲ್ಲಿ, ಆತನಿಂದ ಗಣಮುಖರಾದವರು, ಏನು

ಮಾಡುತ್ತಿದ್ದಾರೆ?... ನೀನು! ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಿರುವ ಕುರುಡ ಬಾರ್ತಿಮೇಯಸ್. ಮತ್ತೆ ನೀನು, ಜೆರಿಕೋದವ, ಮತ್ತೆ ಅಲ್ಲಿ ನೀನು ಸಿಲೋಮದವ: ಆತ ತೆರೆಸಿದ ಆ ಕಣ್ಣುಗಳು.... ನನ್ನಿಂದ ದೂರ ಸರಿಯುತ್ತಿವೆ.... ಯಾಕಂದರೆ ಆತನ ಬಗ್ಗೆ ನಿಮ್ಮ ಮುಂದೆ ಮಾತಾಡುವ ಧೈರ್ಯ ನನಗಿದೆ.... ನೀನು, ಕುಷ್ಠರೋಗಿ ಸಿಮೊನೆ, ಮತ್ತೆ ನೀನು ಸೋಮಾರಿಯಾದವ.... ಆತ ಬರುವ ಮುಂಚೆ ನೀವು ಸಾವಿಗಿಂತಾ ಅತಿ ಕುರೂಪಿಗಳಾಗಿದ್ದಿರಿ ಅನ್ನುವುದನ್ನು ಮರೆತೇ ಬಿಟ್ಟಿರಾ? ನಾನು ನನ್ನ ಸುತ್ತಾ ನೋಡುತ್ತಿರುವುದು ಮುಸುಕಿನಲ್ಲಾಗುತ್ತಿರುವ ಪವಾಡಗಳನ್ನೆ ! ಕೈ ಮೊಂಡಾಗಿದ್ದವ, ಸಬ್ಬತ್‌ನ ದಿನ ಜಲೋದರ ಖಾಯಿಲೆಯಿಂದ ಗುಣವಾದವ. ಮತ್ತೆ ಭೂತಚೇಷ್ಟೆಯಿಂದ ಪೀಡಿತನಾಗಿದ್ದ ಆ ಜೆರಾಸಾದವ !... ಮತ್ತೆ ವಾಯುರೋಗದಿಂದ ಪೀಡಿತವಾದ... ಬಾಗಿಲ ಕಡೆ ಓಡುತ್ತಿರುವ ಆ ಬೆಥೆಸ್ಡಾದವ... ಆರೈಕೆ ಮಾಡಿದಾತನಿಂದ ದೂರ ಓಡಿಹೋಗಲೆಂದೇ ತನ್ನ ಗುಣವಾದ ಕಾಲುಗಳನ್ನು ಬಳಸುತ್ತಿದ್ದಾನೆ !.... ಆತನಿಂದಾಗಿ ಗೋರಿಯಿಂದ ಎದ್ದವರೂ ಕೂಡ ಬೆದರಿದ್ದಾರೆ !... ಅಲ್ಲಿ ನೋಡಿ ಆ ಲಾಜರಸ್‌ನನ್ನ : ನಿಮ್ಮೆಲ್ಲರಿಗಿಂತ ಹೆಚ್ಚು ಬಿಳುಚಿಕೊಂಡಿದ್ದಾನೆ !.... ನೀನು ಸಾವನ್ನು ಕಂಡಿರುವವ; ನಾಲ್ಕುದಿನ ಸತತ ಅದಕ್ಕೆ ಆತುಕೊಂಡೇ ಇದ್ದವ... ಜನ ಅಂದುಕೊಂಡಿರುವುದಕ್ಕಿಂತಾ ಹೆಚ್ಚು ಭಯಂಕರವೆ ಅದು?... ಉತ್ತರಿಸುವುದಿಲ್ಲವೆ?..... (ದೀರ್ಘಕಾಲ ನಿಶಬ್ದತೆ).

ಯೂಸುಫ್: ಕೇಳು ಮಗ್ದಲೀನೆ... ನನಗೆ ಧೈರ್ಯದ್ದಾಗಲಿ ನಿಷ್ಠೆಯದಾಗಲಿ ಕೊರತೆಯಿಲ್ಲ.... ಅರ್ಚಕರ ಸಾಮರ್ಥ್ಯವನ್ನು ಕಡೆಗಾಣಿಸಿ ನಾನು ಆತನ ಹಿಂಬಾಲಕರಿಗಾಗಿ ನನ್ನ ಮನೆಯನ್ನು ತೆರೆದಿಟ್ಟಿದ್ದೇನೆ. ಅದಕ್ಕಾಗಿ ಮುಂದೆ ಅನುಭವಿಸಬೇಕಾಗಿರುವುದು ಏನೆಂದು ನನಗೆ ತಿಳಿದಿದೆ.... ಆತನಿಗಾಗಿ ನನ್ನೆಲ್ಲವನ್ನೂ, ನನ್ನ ಜೀವವನ್ನೂ ಬಲಿಕೊಡಲು ನಾನು ಸಿದ್ಧನಿದ್ದೇನೆ. ಆದರೆ ಆತನ ಇಚ್ಛೆ ಏನೆಂದು ನನಗೆ ತಿಳಿದಿದೆ, ಅದನ್ನು ನಾನು ಮೀರಲಾರೆ.... ಪೀಟರ್ ಆತನನ್ನು

ರಕ್ಷಿಸ ಬಯಸಿ ಕತ್ತಿಯನ್ನು ಈಚೆ ಎಳೆದ... ಆತನೇ ಅದನ್ನು ಒರೆಯೊಳಕ್ಕೆ ಸೇರಿಸುವಂತೆ ಮಾಡಿದ್ದು.... ನಾನು ಗೆಸ್ತಮಾನೆಯಲ್ಲಿದ್ದೆ....

ಮರಿಯ ಮಗ್ದಲೀನೆ: ಅಲ್ಲೇ ಇದ್ದೆ ಅಂದ ಮೇಲೆ ನೀನ್ಯಾಕೆ ಪೀಟರ್‌ಗೆ ಸಹಾಯ ಮಾಡಲಿಲ್ಲ?... ಪ್ರೀತಿಸಿದವರನ್ನು ನಾವು ಮೊದಲು ರಕ್ಷಿಸಬೇಕು; ಆಮೇಲೆ ಅವರ ಮಾತು ಕೇಳಬೇಕು!.... ಆತನನ್ನು ಮುಗಿಸಿದ ಮೇಲೆ ನೀನು ಏನು ಮಾಡುತ್ತೀಯ?... ಓ, ಈ ಹೆದರುಪುಕ್ಕಲರ ಜೊತೆ ನಾನು ಹೆಚ್ಚು ಸಮಯ ವ್ಯಯ ಮಾಡುತ್ತಿದ್ದೇನಲ್ಲ!..... ಈ ಕೆಲಸಕ್ಕೆ ಬಾರದವರ ಮಧ್ಯೆ ನಾನೇನು ಮಾಡುತ್ತಿದ್ದೇನೆ?.... ಆತನ ರಕ್ಷಣೆಯ ಕಡೇ ಸಾಧ್ಯತೆಗಳನ್ನ, ಕಡೇ ಕ್ಷಣಗಳನ್ನ ಅಧ್ವಾನ ಮಾಡುತ್ತಿದ್ದೇನೆ.... ನಾನೀಗ ಪೀರುಸ್‌ನ ನೋಡಲು ಹೋಗುತ್ತೇನೆ; ಅದಾದ ಮೇಲೆ ನೋಡೋಣ.... (ಬಾಗಿಲ ಕಡೆ ತಿರುಗುತ್ತಾಳೆ, ಅರಿಮಾಥಿಯಾ ಯೂಸುಫ್, ಮತ್ತು ನಿಕೊದೀಮಸ್ ಅವಳಿಗೆ ಅಡ್ಡ ಹಾಕುತ್ತಾರೆ)

ನಿಕೊದೀಮಸ್: ಆಚೆ ಹೋಗಬೇಡ, ಮಗ್ದಲೀನೆ; ಹೋದಿಯೆಂದರೆ ಆತನ ಸಾವೂ ಖಂಡಿತ, ಆತನ ಜೊತೆ ನಮ್ಮ ನಾಶವೂ ಖಂಡಿತ....

ಮರಿಯ ಮಗ್ದಲೀನೆ: ಆಹ್! ಆತನ ಜೊತೆ ನಿಮ್ಮ ನಾಶ! ಅದೇ ಬಂದಿರೋದು!... ತಾಳಿ! (ಬಾಗಿಲ ಕಡೆ ಮತ್ತೊಂದು ಹೆಜ್ಜೆ ಇರಿಸುತ್ತಾಳೆ. ನಿಕೊದೀಮಸ್ ಬಲವಂತದಿಂದ ತಡೆಯುತ್ತಾನೆ)

ನಿಕೊದೀಮಸ್: ನೀನು ಆಚೆ ಹೋಗುವಂತಿಲ್ಲ.

ಮರಿಯ ಮಗ್ದಲೀನೆ: ನಾನು ಆಚೆ ಹೋಗುವಂತಿಲ್ಲವೆ?.... ಹೌದು, ಹೆಣ್ಣಿನ ಜೊತೆಯಾದರೆ ನೀನು ಕಾದಲು ಧೈರ್ಯ ಮಾಡುತ್ತೀಯ. ಭೀತಿಯಿದ್ದಲ್ಲಿ ಇಂಥಾ ದಿಟ್ಟತನ ಹುಟ್ಟಿ ಬರುತ್ತೆಂದು ನಾನೆಂದೂ ಮನಗಂಡಿರಲಿಲ್ಲ. ಕಾಳಿಲ್ಲದ ಒಣಗಿದ ತೆನೆಗಳಂತೆ ನೀವೆಲ್ಲ ತಲೆ ಆಡಿಸುತ್ತಿದ್ದೀರ; ಮತ್ತೆ ಹೆಂಗಸರು, ತಾನಾಗೇ ತೋರಿ ಬರುತ್ತಿರುವ ಈ ಗಂಡಸರ ಪುಕ್ಕಲುತನವನ್ನು ಕಂಡು ಹಿಗ್ಗುತ್ತಿದ್ದಾರೆ!.....

ಅರಿಮಾಥಿಯದ ಯೂಸುಫ್: ನಮ್ಮ ಮಾತು ಕೇಳು, ಮಗ್ದಲೀನೆ; ಆತನ ಬಗ್ಗೆ ಯೋಚಿಸು- ಆತ ನಿನ್ನ ಮಾತು ಕೇಳಿಸಿಕೊಂಡರೆ.....

ಮರಿಯ ಮಗ್ದಲೀನೆ: ಸರಿ, ಆತ ನನ್ನ ಮಾತು ಕೇಳಿಸಿಕೊಂಡರೆ ಏನಾಗುತ್ತದೆ? ಆ ದಿನ, ನಿಮ್ಮಗಳಲ್ಲಿ ಒಬ್ಬ, ನಾನು ಅತಿ ಬೆಲೆಬಾಳುವ ಮುಲಾಮನ್ನು ಆತನ ಪಾದಗಳಿಗೆ ಹಚ್ಚಿದೆ ಎಂದು ಆರೋಪಿಸಿದ ದಿನ ಆಯಿತಲ್ಲ, ಈಗಲೂ ಹಾಗೇ ಆಗುತ್ತದೆ !.... ಆತ ಹೇಳಿದ್ದು ಮರೆತು ಹೋಯಿತಾ?... ಯಾರು ನಿರಪರಾಧಿಗಳೆಂದು ಆತ ಸಾರಿದ್ದು, ಹೇಳು?.... ನಿನಗೆ ಏನೇನೂ ಅರ್ಥವಾಗಿಲ್ಲ !... ವರ್ಷಗಟ್ಟಲೆ, ತಿಂಗಳುಗಟ್ಟಲೆ ಆತನ ಬೆಳಕಿನಲ್ಲಿ ಬದುಕಿದ್ದೀರಿ, ಆದರೂ ನಾನೊಬ್ಬಳು ಕಂಡಿದ್ದೇನು ಎಂದು ನಿಮಗ್ಯಾರಿಗೂ ತಿಳಿದಿಲ್ಲ; ಯಾಕಂದರೆ ಕಡೇ ಗಳಿಗೆಯವರೆಗೂ ಹಿಂದೆ ಉಳಿದಿದ್ದ ನನ್ನನ್ನು, ನಿಮ್ಮ ಕೀಳಾತಿಕೀಳಾದ ದಾಸನಿಗಿಂತಲೂ ಕೀಳಾದ ಜಾಗದಿಂದ ನನ್ನನ್ನು ಆತ ಮೇಲೆತ್ತಿದ. ಆತನ ಬಗ್ಗೆ ನನಗೆ ಪ್ರೇಮವಿದೆ!....

ನಿಕೊದೀಮಸ್: (ಆಚೆಯ ಶಬ್ದ ಕೇಳಿಸಿಕೊಳ್ಳುತ್ತಾ) ಶ್ !... ಕೇಳಲ್ಲಿ!.... ಯಾರೋ ಈ ಮನೆಯ ಹೊರಗಡೆ ಓಡಾಡುತ್ತಿರುವಂತಿದೆ... (ಬಾರ್ತಿಮೇಯಸ್‌ಗೆ) ನೋಡಿ ಬಾ ಹೋಗು....

ಬಾರ್ತಿಮೇಯಸ್: (ಕಿಟಕಿ ಬಳಿಯಿಂದ) ಉದ್ದ ನಿಲುವಂಗಿಯಿಂದ ಮೈ ಮುಚ್ಚಿಕೊಂಡಿರುವ ಒಬ್ಬ ವ್ಯಕ್ತಿ.... ರೋಮನ್... ನಿಂತ... ಬಾಗಿಲು ತಟ್ಟುತ್ತಿದ್ದಾನೆ.... ಒಳಗೆ ಬರುತ್ತಿದ್ದಾನೆ.... ಬಾಗಿಲು ಮುಚ್ಚಿರಲಿಲ್ಲ....

ಮರಿಯ ಮಗ್ದಲೀನೆ: (ಭೋಜನಶಾಲೆಯ ಬಾಗಿಲ ಕಡೆ ಸುಗ್ಗುತ್ತಾ) ಅದು ಅವನೆ, ಲೂಸಿಯಸ್ ವೀರುಸ್‌ನೇ!... ಬಾಗಿಲು ತೆರೆಯಿರಿ! ಬೇಗ!... ಆತ ಬರುತ್ತಿರುವುದು ನನಗೆ ಕೇಳಿಸುತ್ತಿದೆ.....

ಭೋಜನ ಶಾಲೆಯ ಬಾಗಿಲು ತೆರೆಯುತ್ತದೆ. ಲೂಸಿಯಸ್ ವೀರುಸ್ ಕಾಣಿಸಿಕೊಳ್ಳುತ್ತಾನೆ. ಪವಾಡಗಳಿಂದ ಗುಣವಾದವರು, ಕುಂಟರು, ಭಿಕ್ಷುಕರು ಮತ್ತು ರೋಗಿಗಳ ವಿಚಿತ್ರ ಸಮಾವೇಶ ಕಂಡು ಸ್ತಬ್ಧನಾಗುತ್ತಾನೆ; ಮೂಕನಂತೆ ಹೊಸ್ತಿಲಲ್ಲೇ ನಿಂತು ಬಿಡುತ್ತಾನೆ.

ದೃಶ್ಯ -೩

ಅದೇ, ಲೂಸಿಯುಸ್ ವೀರುಸ್

ಮರಿಯ ಮಗ್ದಲೀನ್: (ತೋಳುಗಳನ್ನು ಚಾಚಿ ವೀರುಸ್ ಕಡೆ ಧಾವಿಸುತ್ತಾ) ನೀನೇ ನನ್ನ ವೀರುಸ್, ಇದು ನೀನೇ ಬಂದಿದ್ದು!.... ನನ್ನ ಮುಖವನ್ನು ದಿಟ್ಟವಾಗಿ ನೋಡಬಲ್ಲ ಕಣ್ಣಗಳು ಇವು... ನಡುಗದ ಈ ಕತ್ತಿ, ಈ ಭುಜಗಳು, ಈ ಕೈಗಳು!... ಬಾ! ಬಾ! ಈಗ ನಾವೇನು ಮಾಡಬೇಕು?.... ಆತನನ್ನು ಕಂಡೆಯಾ?... ನಾವು ಎಲ್ಲಿ ಹೋಗಬೇಕು?.... ಆತನಿಗ ನಾವು ಯಾವ ರೀತಿ ಸಹಾಯ ಮಾಡಬಲ್ಲೆವು?.... ಎಷ್ಟು ಗಂಡಾಳುಗಳು ನಿನಗೀಗ ಬೇಕಿದೆ?... ನಿನ್ನ ಆಳುಗಳೆಲ್ಲಿ ?.... ನಿನಗೆ ಚೆನ್ನಾಗಿ ಗೊತ್ತಿರುವಂತೆ ಆತ ಕೇವಲ ನಿರಪರಾಧಿಯಲ್ಲ, ಬಹಳ ಪವಿತ್ರನೂ ಆಗಿದ್ದಾನೆ. ಮನುಷ್ಯರ ಆಲೋಚನೆಗೆ ನಿಲುಕದಷ್ಟು ಎತ್ತರದಲ್ಲಿದ್ದಾನೆ... ಜಗತ್ತಿನ ಪಾಪಗಳಿಂದಾಗಿ ಆತ ಎಲ್ಲವನ್ನೂ ಸಹಿಸಿಕೊಳ್ಳುತ್ತಿದ್ದಾನೆ; ಆದರೆ ನಮಗಾಗಿ ಆತನ ಬಲಿಯಾಗುವುದಕ್ಕೆ ನಾವು ಬಿಡಬಾರದು.... ಆತನ ಒಂದೇ ಒಂದು ಕಣ್ಣೋಟ, ಆತನ ಒಂದೇ ಒಂದು ಮಾತು, ಇವು ಎಲ್ಲಾ ಜನರ ಎಲ್ಲಾ ಜೀವಗಳಿಗಿಂತ ಮಿಗಿಲು!

ವೀರುಸ್ : (ಕ್ರೂರವಾಗಿ) ನಾನು ನಿನ್ನನ್ನು ಇಂಥಾ ಜಾಗದಲ್ಲಿ ಭೇಟಿಯಾಗಬೇಕಿತ್ತೆ?... ಯಾರು ಇವರೆಲ್ಲ.... ನಿನ್ನ ಸುತ್ತಮುತ್ತ ಇರುವವರು?....

ಮರಿಯ : ಇವರು ನಂಬಿಕಸ್ತರು... ಆತ ಇವರನ್ನು ಪ್ರೀತಿಸಿದಷ್ಟೇ ಇವರೂ ಆತನನ್ನು ಪ್ರೀತಿಸಿದವರು. ಆದರೆ ಅವರಿಗೊಬ್ಬ ನಾಯಕ ಬೇಕು.... ನಿನ್ನನ್ನೇ ಕಾಯುತ್ತಿದ್ದರು.... ನೀನು ಹೋದಲ್ಲೆಲ್ಲಾ ಹಿಂಬಾಲಿಸುತ್ತಾರೆ...

ವೀರುಸ್ : (ಅಣಕಿಸುವಂತೆ) ನಾನು ಬಂದಿರುವುದು ಇಂಥ ವಿಚಿತ್ರ ಸೈನಿಕರನ್ನು ಮುನ್ನಡೆಸಲು ಅಲ್ಲ... ನಿನ್ನ ಉದ್ದೇಶವೇ ನನಗೆ ತಿಳಿಯುತ್ತಿಲ್ಲ. ಎಲ್ಲೋ ಅಪಾರ್ಥವಾಗಿದೆ; ಇಷ್ಟೊಂದು ಸಾಕ್ಷಿಗಳ ಮುಂದೆ ಅದನ್ನು ಇಲ್ಲಿ ವಿವರಿಸುವುದು ಸೂಕ್ತವೆಂದು ನನಗನ್ನಿಸುತ್ತಿಲ್ಲ....

ಮರಿಯ : ಸರಿಯಾಗಿ ಹೇಳಿದೆ... (ಉಳಿದವರಿಗೆ) ನಮ್ಮನ್ನು ನಮ್ಮ ಪಾಡಿಗೆ ಬಿಡಿ... ಕೆಲಸಕ್ಕೆ ತೊಡಗಬೇಕಾದ ಕಾಲ ಬಂದಾಗ ನಾನೇ ಕರೆಯುತ್ತೇನೆ...

ಮರಿಯ ಮಗ್ದಲೀನೆ ಮತ್ತು ಲೂಸಿಯುಸ್ ವೀರುಸ್ ಹೊರತು ಮಿಕ್ಕವರು ನಿಷ್ಕ್ರಮಣ

ದೃಶ್ಯ -೪

ಲೂಸಿಯುಸ್ ವೀರುಸ್, ಮರಿಯ ಮಗ್ದಲೀನೆ

ವೀರುಸ್ : (ಕುಹಕ) ಆ ಅಸಾಮಾನ್ಯ ಜನರು ಯಾರು?... ಅಷ್ಟೊಂದು ಜನ ಕುಂಟರು, ಅಲೆಮಾರಿಗಳು, ನಾತಹೊಡೆಯುವ ರೋಗಿಷ್ಠರು ಇಷ್ಟೊಂದು ಸಂಖ್ಯೆಯಲ್ಲಿ ಜಮಾಯಿಸಿರುವುದನ್ನು ನಾನು ಎಂದೂ ನೋಡಿರಲಿಲ್ಲ.... ಅವರಿಗೆ ನಿನ್ನಿಂದೇನಾಗಬೇಕು? ನನಗೆ ಯಾರೋ ಹೇಳಿದರು, ನೀನು ಮೇಧಾವಿ ಸಿಲಾನುಸ್‌ರ ಮನೆಯಲ್ಲಿ ಒಮ್ಮೆ ಎಷ್ಟು ಹಿತವಾಗಿ ಇಂಥ ಕೆಟ್ಟ ಕ್ರಿಮಿಗಳ, ಮುದಿಯ, ಕುರೂಪಿ, ಕೊಳಕು ಹಾಗೂ ರೋಗಿಷ್ಠ ಯಹೂದ್ಯರನ್ನು ಅಣಕಿಸಿದ್ದೆಯೋ ಅಂಥವರ ನಡುವೆಯೇ ಇದ್ದೀಯ ಎಂದು. ಆದರೆ ಅವರಿಗೆ ನಿನ್ನ ಜೊತೆ ಇಷ್ಟೊಂದು ಸಲಿಗೆ ಎಂದರೆ ನಾನು ನಂಬುತ್ತಿರಲಿಲ್ಲ.... ಹೇಗೊ, ಅದಕ್ಕೂ ನನಗೂ ಸದ್ಯಕ್ಕೆ ಸಂಬಂಧವಿಲ್ಲ. ಆದರೆ ನಾನು ಹೇಳಿದ್ದೆ, ಮತ್ತೆ ಬಹುಬೇಗ ಭೇಟಿಯಾಗಬೇಕಾಗುತ್ತದೆ ಎಂದು. .... ಅಪ್ಪಿಯುಸ್ ಹೇಳಿದ, ನೀನು ನನಗಾಗಿ ರೋಮನ್ ಬಿಡಾರಗಳಲ್ಲಿ ಹುಡುಕಾಡುತ್ತಿದ್ದಿ ಎಂದು. ನಿನ್ನ ಆಮಂತ್ರಣದಿಂದಾಗಿ ಮಿಕ್ಕಿದ್ದೆಲ್ಲವನ್ನು ಹಾಗೇ ಬಿಟ್ಟು ನಾನು ಇತ್ತ ಧಾವಿಸಿದೆ. ಏನಾಗುತ್ತಿದೆ ಎಂದು ನನಗೆ ತಿಳಿದಿತ್ತು, ಅದಿಕ್ಕೆ ಸಮಯವನ್ನು ಮುಂದೂಡುತ್ತಿದ್ದೆ.

ಮರಿಯ : ನೀನು ಅದೆಷ್ಟು ಒಳ್ಳೆಯವ, ದಯಾಳು! ನಿನ್ನ ಇರವೇ ನಿನ್ನ ಮುಗ್ಧುಳಗೆಯೇ ಎಷ್ಟು ಭರವಸೆ ನೀಡುತ್ತಿದೆ!.... ಅವರೆಲ್ಲ.... ನಿನಗೇ ಗೊತ್ತಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು!..... ನಮ್ಮ ಗುರು ಹೇಳುವ ಹಾಗೆ ಬಿದರಿನಂತೆ ಇವರೆಲ್ಲ ಥರಥರ ನಡುಗುತ್ತಿದ್ದರು, ನಾನು ಅಸಹಾಯಕಳಾಗಿ ನಾಚಿಕೆಯಿಂದ ಸತ್ತು ಹೋಗು

ವಂಶಾಗಿತ್ತು.. ಆದರೆ ನನಗೆ ಗೊತ್ತಿತ್ತು, ನೀನು ನಮ್ಮ ಬಳಿ ಬಂದೇ ಬರುತ್ತೀಯ ಎಂದು. ಇದೊ, ನೀನು, ನಿನ್ನ ತೋಳುಗಳು, ನಿನ್ನ ವಕ್ಷಸ್ಥಳ... ನನಗನ್ನಿಸುತ್ತೆ, ಇಡೀ ರೋಮ್ ತಾನೇ ನಮ್ಮನ್ನು ರಕ್ಷಿಸುತ್ತಿದ್ದಾಳೆ, ಹಾಗಾಗಿ ನಿನ್ನ ಸಮರ್ಥ ತೋಳುಗಳು ಆತನನ್ನು ದೂರ ಮಾಡುವುದಿಲ್ಲ ಎಂದು....

ವೀರುಸ್ : ಇವು ನಿನ್ನಂತೂ ದೂರ ಮಾಡುವುದಿಲ್ಲ, ಮಗ್ದಲೀನ್. ಆದರೆ ಮಿಕ್ಕಿದ್ದು ಎಲ್ಲ ನಿನ್ನೊಬ್ಬಳನ್ನೇ ಆಧರಿಸಿದೆ.... ನಾನು ಒಳ್ಳೆಯವನಿರ ಬಹುದು, ದಯಾಳು ಆಗಿರಬಹುದು. ಆಗಿರುವುದು ಮಾತ್ರ ನನ್ನದೇ ರೀತಿಯಲ್ಲಿ; ನಾವಿಬ್ಬರೂ ಒಬ್ಬರನ್ನೊಬ್ಬರು ಅರ್ಥ ಮಾಡಿ ಕೊಳ್ಳಬೇಕು.... ಅಂದ ಹಾಗೆ, ನಾನು ಮೊದಲೇ ಹೇಳಿದ್ದ ಹಾಗೆ, ನೀನು ಇಷ್ಟೊಂದು ಆಸಕ್ತಿ ವಹಿಸುತ್ತಿರುವ ಆತನನ್ನು ಹಿಡಿದು ಹಾಕಲಾಗಿದೆಯೆ? .....

ಮರಿಯೆ : ದಸ್ತಗಿರಿ ಮಾಡಿರುವುದು ಮಾತ್ರವಲ್ಲ; ದೇವಾಲಯದ ಎಲ್ಲ ಕೆಲಸದವರು, ಚಾಕರಿಮಾಡುವವರು, ಅಡಿಗೆ ಮುಸುರೆ ಮಾಡುವವರು- ಎಲ್ಲರೂ ಅವನತ್ತ ನುಗ್ಗಿ, ಅಪಮಾನಿಸಿ, ನಿಂದಿಸಿ ಕೆಟ್ಟದಾಗಿ ಕಂಡಿದ್ದಾರೆ.....ಅಷ್ಟೇ ಅಲ್ಲ, ಅವರು ಪುಕ್ಕಲರಾದ್ದರಿಂದ ತಾವೊಬ್ಬರೇ ಹಾಗೆ ಮಾಡಿದ್ದು ಎನಿಸಿಕೊಳ್ಳಲು ಧೈರ್ಯವಿಲ್ಲದ್ದರಿಂದ, ರೋಮನ್ ಸೈನಿಕರ ಸಹಾಯವನ್ನೂ ಪಡೆದುಕೊಂಡಿದ್ದಾರೆ.

ವೀರುಸ್ : ಗೊತ್ತಿದೆ.... ನಾವೀಗ ನೇರವಾಗಿ ವಿಷಯಕ್ಕೆ ಬರುವುದು ಸೂಕ್ತವಲ್ಲವೆ ?....

ಮರಿಯೆ : ಹೌದು, ಅಧ್ವಾನ ಮಾಡಲು ಹೆಚ್ಚು ಸಮಯವೇ ಇಲ್ಲ....

ವೀರುಸ್ : ಹೌದು, ನಿಜ. ಈಗ ಪ್ರಶ್ನೆ ಅವನ ದಸ್ತಗಿರಿಯ ಕುರಿತದ್ದು ಅಲ್ಲ, ಜನರ ಕೆಟ್ಟ ನಡುವಳಿಕೆ ಕುರಿತದ್ದೂ ಅಲ್ಲ. ಬದಲಾಗಿ ಸಮೀಪಿಸಿರುವ ಆತನ ಸಾವಿನ ಕುರಿತದ್ದು. ನಾನು ದೇಶಾಧಿಕಾರಿ ಪಾಂತಿಯಸ್ ಪಿಲಾತ್‌ರನ್ನು ಕಂಡು ಬಂದಿದ್ದೇನೆ.

ಮರಿಯೆ : ಒಳ್ಳೆಯದಾಯಿತು. ಏನು ಹೇಳಿದರು ಅವರು?

ವೀರುಸ್ : ಅವನು ಗಲಿಬಿಲಿಗೊಂಡಿದ್ದ. ಅವನು ಮೆತ್ತಗಿನ ಮನುಷ್ಯನಾದರೂ ಧೃಢ ನಿರ್ಧಾರದವ. ಜಗಳ- ಹಿಂಸಾಚಾರಗಳ ಶತ್ರು. ಒಂದು ಕಡೆ ಪುರೋಹಿತರು ಮತ್ತವರ ಪಂಥದವರ ರಕ್ತದಾಹಿ ಬಂಡಾಯದ ಅನಿವಾರ್ಯತೆ; ಇನ್ನೊಂದು ಕಡೆ ನಿಸ್ಸಂಶಯವಾಗಿ ತಾಪತ್ರಯ ದಾಯಕನೂ ಅಪಾಯಕಾರಿಯೂ ಆದ ರೋಮೀಯ ಕಾನೂನು ಕಟ್ಟಳೆಗಳ ಕಣ್ಣುಗಳಲ್ಲಿ ಮರಣ ದಂಡನೆಗೆ ಗುರಿಯಾದ ಗಲಭೆಕೋರನ ಬಲಿ- ಈ ಎರಡರ ಮಧ್ಯೆ ಅವನು ಆಯ್ಕೆ ಮಾಡಿಕೊಳ್ಳಬೇಕಾಗಿತ್ತು. ನಾನು ನನ್ನ ಕರ್ತವ್ಯ ಮತ್ತು ಅಂತಃಕರಣಕ್ಕನುಸಾರವಾಗಿ ಮಾತಾಡಿದೆ. ಅವನು ಒಂದಿಷ್ಟೂ ಹಿಂಜರಿಯದೆ, ಹೆಚ್ಚು ಮಾನವೀಯವಾದ, ಬುದ್ಧಿವಂತಿಕೆಯ ಮಾರ್ಗ ಆರಿಸಿಕೊಂಡ. ರೋಮಿನ ಶಾಂತಿ ಹೊಣೆಗಾರಿಕೆಯುಳ್ಳ ಸಶಸ್ತ್ರ ಸೈನಿಕ ನಾನಾದ್ದರಿಂದ ನಿನ್ನ ನಜರೀನನ ವಿಧಿಯನ್ನು ನನ್ನ ಕೈಲಿರಿಸಿಬಿಟ್ಟ. ಆದರೂ, ನಾವಿಬ್ಬರೂ ಇಲ್ಲಿ ಸಂಧಿಸುವುದಕ್ಕೆ ಮುಂಚೆ ನಾನೇ ಘಟನೆಗಳು ತಾವಾಗೇ ಬೇಕಾದ ದಿಕ್ಕು ಹಿಡಿಯಗೊಟ್ಟಿದ್ದೆ ಎಂದು ನಾನೀಗ ಒಪ್ಪಿಕೊಳ್ಳಲೇಬೇಕು.

ಮರಿಯೆ : ಅಂದರೆ ಆತ ಉಳಿದುಕೊಂಡ ! ನನಗೆ ಖಂಡಿತವಾಗಿ ಗೊತ್ತಿತ್ತು! ಯಾವುದಕ್ಕೂ ಹೆದರದೆ ನಿನ್ನನ್ನೇ ಮೊರೆಹೋಗಬೇಕೆಂದು. ಎಷ್ಟು ಸರಿಯಾದ ದಾರಿ ಹಿಡಿದೆ!

ವೀರುಸ್ : ನಾವು ಅಷ್ಟು ಅವಸರಿಸಬಾರದು. ಯೋಚಿಸಬೇಕಾದ ವಿಚಾರಗಳು ಇನ್ನೂ ಬಹಳಷ್ಟಿವೆ.....

ಮರಿಯೆ : ಏನು ಹೇಳುತ್ತಿದ್ದೀಯ?....

ವೀರುಸ್ : ವಿಚಾರ ಮಾಡಬೇಕಾದ್ದು ಇನ್ನೂ ಬಹಳಷ್ಟು ವಿಷಯಗಳಿವೆ ಎಂದು... ಒಂದು ವೇಳೆ ನಿನ್ನ ವಿಚಾರ ನನಗೆ ಏನೂ ತಿಳಿದಿರದಿದ್ದರೆ, ನನ್ನ ನಿರ್ಧಾರದಲ್ಲಿ ಸಂಶಯಕ್ಕೆ ಆಸ್ಪದವಿರುತ್ತಿರಲಿಲ್ಲ: ಅವನ ಬಗ್ಗೆ ಕರುಣೆ ಬಾರದೆ ಸಾರ್ವಜನಿಕರಿಗೆ ಬೇಸರವಾದರೂ ಸಹ ಆ ಪಾಪದವನನ್ನು ಬಲಿ ಹಾಕಿ ಬಿಡುತ್ತಿದ್ದೆ; ಸಾಮ್ರಾಜ್ಯದ ಕಾನೂನು ಹಾಗೇ ಇರುವುದು ; ಆದರೀಗ....

ಮರಿಯೆ : ಆದರೀಗ ಪರಿಸ್ಥಿತಿ ಬೇರೆ ತೆರನಾದ್ದು. ನಿನಗೆ ಆತ ಯಾರೆಂದು ಗೊತ್ತು, ಎಲ್ಲ ವಿಷಯವೂ ಗೊತ್ತು.... ಒಂದು ಕ್ಷಣ ಹಿಂಜರಿಯಲಿಕ್ಕೂ ಯಾವ ಸಬೂಬೂ ಇಲ್ಲ; ಇಲ್ಲಾಂದರೆ ಭಯಂಕರವಾಗಿ ಬಿಡುತಿತ್ತು.....

ವೀರುಸ್ : ಹೌದು, ಒಂದು ಕ್ಷಣ ಹಿಂಜರಿಯುವುದಕ್ಕೂ ಸಬೂಬಿಲ್ಲ; ಹೌದು ಹಾಗೇ ಭಯಂಕರವಾಗಿಬಿಡುತ್ತಿತ್ತು.... ನೀನಂದಂತೆ..... ಆದರೆ ನಾನು ಪ್ರೀತಿಸುವ, ಪ್ರೀತಿಸಬಲ್ಲ ಒಬ್ಬಳೇ ಹೆಣ್ಣನ್ನು ಎರಡನೆ ಬಾರಿ ಕಳಕೊಳ್ಳಬಾರದೆಂಬು ಉದ್ದೇಶದಿಂದ ಆಕೆ ಬಯಸುವ ನನ್ನ ಪ್ರತಿಸ್ಪರ್ಧಿಯನ್ನು ಅವನಿಗೆ ತಕ್ಕುದಾದ ಸಾವಿನಿಂದ ದೂರ ತಳ್ಳದೇ ಇರಲೆ? ಅದಂತೂ ಅಸಾಧ್ಯ.....

ಮರಿಯೆ : ನನಗೆ ಅರ್ಥವಾಗುತ್ತಿಲ್ಲ.

ವೀರುಸ್ : ಬಹಳ ಸರಳವಾಗಿದೆ: ಆತನನ್ನು ಉಳಿಸಿದೆನೆಂದರೆ ನಿನ್ನನ್ನು ತನ್ನೊಂದಿಗೆ ಸೋಲಿನಿಂದ ಸೋಲಿಗೆ, ತಪ್ಪು ಮತ್ತು ಅಸಹಾಯಕತೆಯ ತಳವಿಲ್ಲದ ಗುಂಡಿಯೊಳಕ್ಕೆ, ಯಾವ ಮಾನವ ಶಕ್ತಿಯಾಗಲಿ, ಬುದ್ಧಿಶಕ್ತಿಯಾಗಲು ನಿನ್ನನ್ನು ಅದರಿಂದ ಹೊರತೆಗೆಯಲಾರದಂತಹ ಗುಂಡಿಯೊಳಕ್ಕೆ ಕರೆದುಕೊಂಡು ಹೋಗಲು ನಾನೇ ಅವಕಾಶ ಮಾಡಿಕೊಟ್ಟಂತೆ ಆಗುತ್ತದೆ. ಅಲ್ಲದೆ, ನನ್ನ ವಿಷಯ ಹೇಳಬೇಕಂದರೆ ಸಲ್ಲದ ರೀತಿಯಲ್ಲಿ ನನ್ನ ಸಂತೋಷಗಳನ್ನು ಕದಿಯುವಾತನಿಗೆ ನಿನ್ನನ್ನು ನನ್ನ ಈ ಮುಗ್ಧ, ಮೂರ್ಖ ಕೈಗಳಿಂದ ಶಾಶ್ವತವಾಗಿ ಕೊಟ್ಟಂತಾಗುತ್ತದೆ. ಬದಲಾಗಿ ಆತನನ್ನು ಅವನ ವಿಧಿಯ ಪಾಡಿಗೆ ಬಿಟ್ಟೆನೆಂದರೆ ನೀನು ಬೆಳಕಿನ ಒಳಿಗೆ ವಾಪಸ್ಸಾಗುವ, ನನ್ನ ದಾರಿಯಲ್ಲಿ ನೀನು ಮತ್ತೊಮ್ಮೆ ಸಿಗಬಹುದಾದ ಅವಕಾಶಗಳು ಉಳಿದು ಕೊಳ್ಳುತ್ತವೆ; ನನಗಿನ್ನೂ ಅನ್ನಿಸುತ್ತಿದೆ, ನಮ್ಮಿಬ್ಬರ ಜೀವಗಳು ಒಟ್ಟಿಗೆ ಇನ್ನೂ ಬಹಳಷ್ಟು ದಾರಿ ಕ್ರಮಿಸಬೇಕಿದೆ ಎಂದು. ನಿನಗೇ ತಿಳಿದಿದೆ, ರೋಮಿಗೆ ತಲುಪಿಸುವ ದಾರಿಗಳು ಅನೇಕ ಎಂದು....

ಮರಿಯೆ : ಈಗ ತಿಳಿಯುತ್ತಿದೆ.... ಈಗ ಅರ್ಥವಾಗುತ್ತಿದೆ, ಅರ್ಥಮಾಡಿಕೊಳ್ಳಲೇ ಬೇಕಾಗಿದೆ.... ಆದರೆ ನಂಬಲಾಗುತ್ತಿಲ್ಲ...

ಇಲ್ಲ, ನಂಬಲಸಾಧ್ಯ; ನೀನು! ನಾನು ಚೆನ್ನಾಗಿ ಬಲ್ಲ ನೀನು, ಆತನನ್ನು ಸಾಯಿಸಲು ಇಷ್ಟ ಪಡುತ್ತೀಯೆಂದೂ, ಇದರಿಂದ ಆತ ಮಾಡಿಲ್ಲದ ತಪ್ಪಿಗೆ ಸೇಡು ತೀರಿಸಿಕೊಳ್ಳುತ್ತೀಯೆಂದೂ ಹೇಳಲು ಬಂದಿಲ್ಲ ತಾನೆ?.... ಇಲ್ಲ, ವಿಷಯ ಏನೊ ಇದೆ. ಏನೋ ಇರಲೇಬೇಕು.

ವೀರುಸ್ : ಹೌದು, ವಿಷಯ ಬೇರೆ ಇದೆ. ಆತನನ್ನು ರಕ್ಷಿಸಲೇಬೇಕೆಂದು ನೀನು ಪಟ್ಟು ಹಿಡಿದಿರುವೆ ಅಂದರೆ... ನಮಗಿರುವುದು ಒಂದೇ ಮಾರ್ಗ. ಆದರೆ ನಾನು ತಲುಪಿರುವ ಘಟ್ಟ, ನಾನು ಈ ಸಾಹಸವನ್ನು ತಲುಪಿಸಿರುವ ಘಟ್ಟ, ನೋಡಿದರೆ ಆತನನ್ನು ರಕ್ಷಿಸುವುದರ ಅರ್ಥ ನನ್ನ ನಾಶ ಎಂದಾಗುತ್ತದೆ. ಅಲ್ಲದೆ ಕಾಲ ಮೀರುತ್ತಿದೆ. ಶಿಕ್ಷೆ ಬರೆದದ್ದಾಗಿದೆ, ನಾನೇ ನೋಡಿದ್ದೇನೆ. ಬೆಳಕು ಹರಿಯುವ ಹೊತ್ತಿಗೆ ಅವನನ್ನು ಸಾಯಿಸುತ್ತಾರೆ ; ಯಾಕಂದರೆ ಪಸ್ಕಾ ಹಬ್ಬದಿಂದಾಗಿ ಕಾಲಾವಕಾಶ ಬಹಳ ಕಡಿಮೆ ಇದೆ.

ಮರಿಯ : ನಾನೇನು ಮಾಡಬೇಕು?.... ತಕ್ಷಣ ಮಾಡುತ್ತೇನೆ ಹೇಳು.

ವೀರುಸ್ : ಬಂಧಿ ನನ್ನ ಕಡೆಯವರ ಕಾವಲಿನಲ್ಲಿದ್ದಾನೆ ; ಹೀಗಾಗಿ ಅವನನ್ನು ತಪ್ಪಿಸಿಕೊಳ್ಳಲು ಬಿಡುವುದು ಅಸಾಧ್ಯವೇನಲ್ಲ.....

ಮರಿಯ : ಹೌದು, ಹೌದು, ಸುಲಭವಾಯಿತು ; ಅದೇ ತಾನೇ ನಾವೀಗ ಮಾಡಬೇಕಾಗಿರುವುದು.... ಸ್ವತಂತ್ರನಾಗಿಬಿಟ್ಟನೆಂದರೆ ಆತ ಅಡಗಿಕೊಳ್ಳುತ್ತಾನೆ.... ಬರಬರುತ್ತಾ ಜನ ಆತನನ್ನು ಮರೆತು ಬಿಡುತ್ತಾರೆ... ಕಾಲಹರಣ ಮಾಡುವುದು ಬೇಡ. ಆದರೆ ಇದನ್ನು ನನಗೆ ಹೇಳಲೆಂದೇ ನೀನು ಬಂದಿರುವುದು ಯಾಕೆಂದು ತಿಳಿಯುತ್ತಿಲ್ಲ....

ವೀರುಸ್ : ಬೇಗನೆ ತಿಳಿಯುತ್ತದೆ.... ಬಂಧಿಯ ಪರವಾಗಿ ನಾನೇ ಉತ್ತರಿಸುತ್ತೇನೆ, ಆದ್ದರಿಂದ ತಿಳಿಯುತ್ತದೆ. ಆತನ ಸ್ವಾತಂತ್ರ್ಯಕ್ಕಾಗಿ ಆತನಿಂದಾಗಿ ನಾನು ಎಷ್ಟು ಕಷ್ಟಕ್ಕೆ ಸಿಲುಕಿಕೊಳ್ಳಬಹುದೊ ಗೊತ್ತಿದೆಯಾ ನಿನಗೆ?

ಮರಿಯ : ನಿರಪರಾಧಿಯೊಬ್ಬನನ್ನು ಬಿಡುಗಡೆ ಮಾಡಿ ನೀನು ನಿನ್ನ ಕರ್ತವ್ಯವನ್ನಷ್ಟೇ ಮಾಡುತ್ತೀಯ....

ಪೀರುಸ್ : ಆತ ನಿರಪರಾಧಿಯೊ ಅಲ್ಲವೊ ವಿಚಾರಿಸುವುದು ನನ್ನ ಕೆಲಸವಲ್ಲ; ಅದಕ್ಕೂ ನನಗೂ ಯಾವುದೇ ಸಂಬಂಧವಿಲ್ಲ. ನಾನು ನ್ಯಾಯವಾದಿಯಲ್ಲ, ಅವನ ಮೇಲ್ವಿಚಾರಕ ಮಾತ್ರ.....

ಮರಿಯೆ : ನಿನ್ನ ಸೈನಿಕರು ಬಾಯಿ ಮುಚ್ಚಿಕೊಂಡಿರುತ್ತಾರೆ, ವಿಷಯ ಇನ್ಯಾರಿಗೂ ತಿಳಿಯವುದಿಲ್ಲ.

ಪೀರುಸ್ : ನನ್ನ ಸೈನಿಕರಿಗೆ ಬಾಯಿ ಮುಚ್ಚಿಕೊಂಡಿರುವುದು ಸಾಧ್ಯವಾಗ ಲಾರದು. ಅವರು ಮೌನ ಮತ್ತು ಸಾವಿನ ನಡುವೆ ಒಂದನ್ನು ಆರಿಸಿಕೊಳ್ಳಬೇಕಾಗಬಹುದು. ಹಾಗಾಗಿ ನಾನೇ ಹೇಳಿ ಮಾಡಿಸಿದೆ ಎನ್ನುವುದು ಎಲ್ಲರಿಗೂ ತಿಳಿದು ಬಿಡುತ್ತದೆ. ಇನ್ನು ಯಾವುದೇ ಬಲಿಪಶು ಅಥವಾ ಸೇಡು ಅಥವಾ ದ್ವೇಷವನ್ನು ಹಾಗೇ ಸುಮ್ಮನೆ ಕೈಬಿಡುವುದು, ಮರೆತು ಬಿಡುವುದು - ಯಾವುದೇ ಅರ್ಚಕರು ಮಾಡಿರುವ ಉದಾಹರಣೆಗಳಿಲ್ಲ. ಸೀದಾ ಹೋಗಿ ಮೊದಲು ಅಂತಿಯೋಖ್‌ನಲ್ಲಿ, ಸಿರಿಯಾದ ಗವರ್ನರ್ ಬಳಿ, ಆಮೇಲೆ ಶಂಕೆ ಎಂಬ ಗಾಳಿ ಮಾತ್ರಕ್ಕೆ ಸಿಟ್ಟಿಂದ ಸಿಡಿದೇಳುವ ಸೀಜರನಲ್ಲೂ ದೂರು ಒಪ್ಪಿಸುತ್ತಾರೆ. ಸೀಜರ್ ಎಂಥಾ ವ್ಯಕ್ತಿಯೆಂದು ನಿನಗೇನಾದರೂ ಗೊತ್ತಾ? ಅವನ ನೆರಳು ಕಂಡರೂ ರೋಮಿನ ಮಹಾನ್ ವ್ಯಕ್ತಿಗಳು, ಶಕ್ತಿಶಾಲಿಗಳು ನಡುಗಿ ಹೋಗುತ್ತಾರೆ..... ನನಗಂತೂ ಸಾವಿನ ಶಿಕ್ಷೆಯಲ್ಲದಿದ್ದರೆ ರೋಮಿನಿಂದ ಉಚ್ಚಾಟನೆಯಾದರೂ ವಿಧಿಸುತ್ತಾನೆ. ಆದರೆ ನಾವು ರೋಮನ್ನರಿಗೆ ಉಚ್ಚಾಟನೆಗಿಂತ ಸಾವೇ ಮಧುರವಾಗಿ ತೋರುತ್ತದೆ.... ಇದೇ, ಇದೇ ನಾನು ಬಾಜಿ ಮಾಡಬೇಕಾಗಿರುವುದು; ಈಗ ನೀನು ಏನು ಬಾಜಿ ಮಾಡಲು ತಯಾರಿರುವೆಯೊ ಕಾಯುತ್ತಿದ್ದೇನೆ.

ಮರಿಯೆ : ನನ್ನ ಬಾಜಿ ಏನೆಂದು ಕಾಯುತ್ತಿದ್ದೀಯ?.... ಏನು ಕೊಡಲಿ ನೀನೇ ಹೇಳು? ನನ್ನಲ್ಲಿ ಏನೂ ಉಳಿದಿಲ್ಲ.... ಆವತ್ತು ಸಾಯಂಕಾಲ ನನ್ನ ಹತ್ತಿರ ಇದ್ದದ್ದನ್ನೆಲ್ಲ ಬಡವರಿಗೆ ಹಂಚಿಬಿಟ್ಟೆ....

ಪೀರುಸ್ : ಬಡವರಿಗೆ ಕೊಡುವಂಥದ್ದೇನನ್ನೂ ನಾನು ಕೇಳುತ್ತಿಲ್ಲ... ಅಲ್ಲದೆ, ಗಾಳಿಗೆ ತೂರುವಂಥಹ ಮಾತುಗಳನ್ನು, ಅದಲು ಬದಲು ಅರ್ಥ

ನೀಡುವ ಮಾತುಗಳನ್ನು ಸಾಕಷ್ಟು ಕೇಳಿದ್ದೇನೆ.... ಆಹ್! ನನ್ನ ವಿಧಿ, ನಾನು ಗಡೀಪಾರಾಗುವ ವಿಚಾರಕ್ಕಿಂತ ನ್ಯಾಯಾನ್ಯಾಯವಾಗಲಿ, ಆ ಅಲೆಮಾರಿಯಾಗಲಿ ನನಗೆ ಮುಖ್ಯವೆನಿಸುವುದಿಲ್ಲ!..... ನನಗೆ ಬೇಕಿರುವುದು ನೀನು, ನೀನೊಬ್ಬಳೇ ನಿನ್ನದೆಲ್ಲವೂ ಎಂದೂ, ನನಗೆ ಅನೇಕ ವರ್ಷಗಳಿಂದ ಈ ಬಯಕೆ ಇರುವುದೂ ಮತ್ತು ಇದು ನನ್ನ ಸದಾವಕಾಶ ಎಂದೂ ನಿನಗಿನ್ನೂ ಅರ್ಥವಾಗಿಲ್ಲವೆ? ಈ ಕ್ಷಣ ಸುಂದರವಾಗಿಲ್ಲ, ನಿಜ, ನಾನು ಕನಸಿದಂತೆ ಕೂಡ ಇಲ್ಲ!.... ಆದರೆ ನನ್ನ ಪಾಲಿಗೆ ಸಿಕ್ಕಿದ್ದೇ ಇದು ; ಮನುಷ್ಯನಾದವನು ತನ್ನ ಜೀವನ ರೂಪಿಸಿಕೊಳ್ಳಲು ತನ್ನ ಕೈ ಹಿಡಿಸಿದ್ದಷ್ಟು ಮಾತ್ರ ತೆಗೆದುಕೊಳ್ಳಬಲ್ಲ!.... ಈಗ ನಾವಿಬ್ಬರೂ ಎದುರುಬದುರು ನಿಂತಿದ್ದೇವೆ. ನಮ್ಮ ನಮ್ಮ ಹುಚ್ಚುತನದೊಂದಿಗೆ. ಆ ಹುಚ್ಚುತನಗಳು ನಮಗಿಂತಲೂ ಶಕ್ತಿಶಾಲಿಯಾಗಿವೆ. ಅವು ಎಂದೂ ಕಡಿಮೆಯಾಗವೆಂಬಂತೆ ನಾವಿಬ್ಬರೂ ಈಗ ಒಂದು ಒಪ್ಪಂದಕ್ಕೆ ಬರಬೇಕು!.... ನೀನು ಆತನನ್ನು ಹೆಚ್ಚು ಹೆಚ್ಚು ಪ್ರೀತಿಸಿದಷ್ಟೂ ನನಗೆ ನಿನ್ನ ಮೇಲಿನ ಪ್ರೀತಿ ಹೆಚ್ಚುತ್ತಿದೆ. ಆತನನ್ನು ನೀನು ರಕ್ಷಿಸಬಯಸಿದಷ್ಟೂ ನನಗೆ ಆತನನ್ನು ನಾಶಮಾಡಬೇಕೆನಿಸುತ್ತಿದೆ! ನಾವಿಬ್ಬರೂ ಒಂದು ಒಪ್ಪಂದಕ್ಕೆ ಬರಲೇಬೇಕು.... ನಿನಗೆ ಆತನ ಜೀವ ಮುಖ್ಯ; ನನಗೆ ನನ್ನದು ಮುಖ್ಯ; ಆತನ ಜೀವ ನಿನಗೆ ಸಿಗಬೇಕೆಂದರೆ ನನಗೆ ನೀನು ಬೇಕು, ಅದೂ ಆತ ಸಾವಿಂದ ತಪ್ಪಿಸಿಕೊಳ್ಳುವ ಮುಂಚೆ.... ಅರ್ಥವಾಯಿತೆ?.... ಒಪ್ಪಿಗೆಯಾಯಿತೆ?.... ಧೈರ್ಯವಿದ್ದರೆ ಇಲ್ಲವೆಂದು ಹೇಳು, ಅವನ ರಕ್ತವು ಅವನ ಸಾವಿಗೆ ಕಾರಣಳಾದ, ಅವನನ್ನು ಎರಡು ಬಾರಿ ಸಾಯಿಸುತ್ತಿರುವ ನಿನ್ನ ಮೇಲೇ ರಾಚುತ್ತದೆ!....

ಮರಿಯೆ ಓಹೋ, ಹಾಗೋ ವಿಷಯ!.... ಈಗ ತಿಳಿಯುತ್ತಿದೆ... ನನಗಂತೂ ಪ್ರಜ್ಞೆಯೇ ಇಲ್ಲದ್ದರಿಂದ ಆ ವಿಚಾರ ಹೊಳೆಯಲೇ ಇಲ್ಲ; ಆದರೆ ಹೀಗೇ ಆಗುವುದಿತ್ತು. ಆದ್ದರಿಂದಲೇ ಬಹುಶಃ ನೀನು ಮಾತಾಡುತ್ತಿದ್ದಾಗ ಇದ್ದ ವಿಶ್ವಾಸವೇ ಹೋಗಹತ್ತಿದ್ದು!.... ಎಷ್ಟು ವಿಚಿತ್ರ, ಎಷ್ಟು ಭಯಂಕರ!.... ಇದನ್ನು ಅರ್ಥ ಮಾಡಿಕೊಳ್ಳಲು ಸ್ವಲ್ಪ ಸಮಯ ಬೇಕಾಗಬಹುದು.... ಆಲೋಚನೆಗಳು ಹಳಿ ತಪ್ಪುತ್ತಿವೆ.

ಆತ್ಮಸ್ಥೈರ್ಯ ಭಾವಿಯೊಳಕ್ಕೆ ಎಸೆದ ಕಲ್ಲು ಬೀಳುವಂತೆ ಕುಸಿಯುತ್ತಿದೆ.... ಯಾವುದರ ಅರ್ಥವೂ ಸಿಗುತ್ತಿಲ್ಲ... ಎಲ್ಲಿ ನಿಂತಿದ್ದೀವಿ ಎಂದೂ ತಿಳಿಯುತ್ತಿಲ್ಲ....

ವೀರುಸ್ : ಇಲ್ಲ, ನಿನಗೆ, ನನಗೆ ತಿಳಿದಿದೆ; ಇದರಲ್ಲಿ ಅಸಾಮಾನ್ಯವಾದ್ದು ಏನಿಲ್ಲವಲ್ಲ.... ಕೆಲವು ದಿನಗಳ ಹಿಂದೆಯಾಗಿದ್ದರೆ ನಿನ್ನನ್ನು ಇಷ್ಟು ಒತ್ತಾಯಪಡಿಸುವ ಅಗತ್ಯವಿರಲಿಲ್ಲ; ಆದರೆ ಇವತ್ತು, ಪ್ರೇಮದ ಬೆಲೆ ಬೇರೆಯಾಗಿದೆ. ಒಂದು ಜೀವದ ಬೆಲೆಯೇ ನಿನಗೆ ಎಲ್ಲಕ್ಕಿಂತ ಮುಖ್ಯವಾಗಿರುವಾಗ... ನೀನು ಯಾಕೆ ಹೀಗೆ ಎಂದು ನನಗೆ ಅರ್ಥವಾಗುತ್ತಿಲ್ಲ.

ಮರಿಯ : ಅಯ್ಯೋ, ನಿನಗೆ ಅರ್ಥವಾಗುತ್ತಿಲ್ಲ !.... ಆತನ ಬಗ್ಗೆ ಪ್ರೀತಿ ಇಲ್ಲದವರಾದರೂ ವಾಸಿ, ಅವರಿಗಾದರೂ ಅರ್ಥವಾಗುತ್ತಿತ್ತೇನೋ !... ಹಾಗಾದರೆ ಅಂತರಂಗ ಹೊಕ್ಕು ಆತ್ಮವನ್ನು ಕಂಡಿರುವವಳು ನಾನೊಬ್ಬಳೇನಾ?.... ಆದರೆ ಅದೇನೂ ಕಷ್ಟದ ಕೆಲಸವಲ್ಲ !.... ಇಡೀ ಜೀವನದಲ್ಲಿ ಆತ ನನ್ನ ಜೊತೆ ಮಾತಾಡಿರುವುದು ಮೂರೇ ಸಲ. ಆದರೂ ಆತನ ಆಲೋಚನೆಗಳೇನೆಂದು ನನಗೆ ಗೊತ್ತು. ಆತನ ಬೇಕು ಬೇಡಗಳೇನೆಂದು ನನಗೆ ಗೊತ್ತು. ನಾನು ಆತನೊಳಗೇ ಇರುವೆನೆನ್ನುವಷ್ಟು ಸಮೀಪದಿಂದ ಆತನನ್ನು ಸಂಪೂರ್ಣವಾಗಿ ಬಲ್ಲೆ. ಆತ ಇಲ್ಲೇ ಹತ್ತಿರದಲ್ಲೇ ನಿಂತು ತನ್ನ ದೃಷ್ಟಿಯನ್ನು ನನ್ನ ಹುಬ್ಬುಗಳ ಮೇಲೆ ನೆಟ್ಟಿರುವಂತೆ, ಇಲ್ಲಿ ಸ್ವರ್ಗದಿಂದ ದೇವತೆಗಳು ಇಳಿದು ಬರುತ್ತಿರುವಂತೆ ಭಾಸವಾಗುತ್ತಿದೆ..... ನಾನು ಆತನ ಪಾದಗಳನ್ನು ಚುಂಬಿಸಿ ನನ್ನ ಕೂದಲಿಂದ ಒರೆಸಿದ ಆ ಸಂಜೆ ನನಗಾದಂತೆ.....

ವೀರುಸ್ : ನಾನು ತಡವಾಗಿ ಬಂದಿರುವೆನೆಂದು ನನಗೆ ಗೊತ್ತಿತ್ತು. ಆದರೆ ನೀನು ಇಷ್ಟು ದೂರ ಹೋಗಿದ್ದೀಯೆಂದು ಮಾತ್ರ ಗೊತ್ತಿರಲಿಲ್ಲ.... ಆತ ನಿನ್ನ ಜೊತೆ ಮೂರೇ ಮೂರು ಸಲ ಮಾತಾಡಿದ್ದರೂ ಹೆಚ್ಚು ಸಮಯ ತೆಗೆದುಕೊಳ್ಳದೆ ನನ್ನ ಸಂಶಯ ನಿವಾರಣೆಯಾಗುವಂಥ ಮಾತನ್ನೇ ಆಡಿರಬೇಕು.... ಈಗ ನಾವು ಶಾಂತರಾಗೇ ಇರೋಣ. ಇದು

ಪ್ರೇಮದ ಪ್ರಶ್ನೆಯಲ್ಲ. ನಿನ್ನ ಪ್ರಿಯತಮನನ್ನೇ ಕೇಳಿದರೂ ಆತ ಕೂಡ ಸಾವಿನ ಎದುರು ಒಂದು ಚುಂಬನವೇನೂ ತೂಕದ ವಿಚಾರವಲ್ಲ ಎಂದು ಹೇಳಿಯಾನು.... ಆತನನ್ನು ನೀನು ಇಷ್ಟೊಂದು ಪ್ರೀತಿಸುವಾಗ ಆತನ ಜೀವಕ್ಕಾಗಿ ಸ್ವಲ್ಪ ಅಸಂತೋಷವನ್ನು ಸಹಿಸಲಾರೆಯಾ?..... ಈ ಕೋಣೆಯಲ್ಲಿ ಕನ್ನಡಿಯೇನಾದರೂ ಇದ್ದಿದ್ದರೆ ಹೋಗಿ ಕುತೂಹಲದಿಂದ ನನ್ನ ಮುಖವನ್ನ ನೋಡಿಕೊಳ್ಳಬೇಕಿತ್ತು.... ನೀನು ಆರಾಧಿಸುವ ಆ ಒಬ್ಬನ ಸಾವನ್ನೆ ನಾನು ಎಲ್ಲಕ್ಕಿಂತ ಹೆಚ್ಚು ಬಯಸುತ್ತಿರುವುದಕ್ಕೆ ಕಾರಣವೇನೆಂದು ನೋಡಿ ತಿಳಕೊಳ್ಳಬೇಕಿತ್ತು !.... ಆದರೆ ಏನಿದು?.... ನಾನು ಊಹಿಸಲೂ ಆಗದ ವಿಚಾರಗಳನ್ನು ಚಿಂತಿಸುತ್ತಿರುವೆ ಎಂದು ನೋಡಿದವರು ಅಂದುಕೊಳ್ಳಬಹುದು!... ನಾನೇನು ಹೇಳಿದೆ ? ನಾನೇನು ಮಾಡಿದೆ?.... ನಿನ್ನ ಮುಖ ಕಿವುಚಿದೆ.... ಅಷ್ಟು ಸಿಟ್ಟಿನಿಂದ ನನ್ನನ್ನು ನೋಡುವ ಅವಶ್ಯಕತೆ ಇಲ್ಲ.... ಸೂರ್ಯ ನೆಲಕ್ಕೆ ಉರುಳಿದನೇನೋ, ಗೋರಿಗಳು ಬಿರಿದವೇನೊ, ಅಣುಗಳೆಲ್ಲ ಸಿಡಿದವೇನೊ ಎಂಬಂತೆ!....

ಮರಿಯೆ : ನನ್ನ ಪಾಡಿಗೆ ನನ್ನನ್ನು ಬಿಡು.... ನಿನಗೆ ಅರ್ಥವಾಗಲಾರದು... ನನಗೆ ಇದೀಗ ಅರ್ಥವಾಗಹತ್ತಿದೆ.....

ವೀರುಸ್ : ಕೆಲವು ದಿನಗಳ ಹಿಂದೆ ನೀನು ಇಷ್ಟು ಮಂದ ಬುದ್ಧಿಯ ವಳಾಗಿರಲಿಲ್ಲ....

ಮರಿಯೆ : (ಮೃದುವಾದ ದನಿಯಲ್ಲಿ, ದೂರದಿಂದ ಎಂಬಂತೆ) ಹೌದು, ಹೌದು.... ಇಷ್ಟಿಷ್ಟೇ ಇಷ್ಟಿಷ್ಟೇ ಕಾಣಹತ್ತಿದೆ.... (ಶೂನ್ಯವನ್ನು ದಿಟ್ಟಿಸುತ್ತಾ)... ತಾನಾಗೇ ಬಿಚ್ಚಿಕೊಳ್ಳುತ್ತಿದೆ.... ಆದಿ ಇಲ್ಲದ, ಅಂತ್ಯವಿಲ್ಲದ, ಹೆಸರೇ ಇಲ್ಲದ ವಸ್ತುವಿನಂತೆ.... ಇಲ್ಲಿ ನನ್ನ ಕೈಯಲ್ಲಿ ಎರಡು ಸಾವುಗಳಿವೆ; ಈ ಭೂಮಿಯ ಮೇಲಿನ ನನ್ನಂಥ ಪಾಪದ ಪ್ರಾಣಿಗೆ ಬಹಳ ಭಾರವೆನಿಸುತ್ತಿದೆ....

ಏರುಸ್ : ಎರಡು ಸಾವುಗಳಾ?.... ಏನು ನೀನು ಹೇಳುತ್ತಿರುವುದು?.... ನೀನು ಆತನನ್ನು ಹಿಂಬಾಲಿಸುವ ಉದ್ದೇಶ ಇಟ್ಟುಕೊಂಡಿಲ್ಲ ತಾನೆ?.... ಅವನೊಂದಿಗೆ ನೀನೂ ಸತ್ತರೆ ಅವನ ಸಾವಿಗೆ ಇನ್ನಷ್ಟು ಕಹಿಯನ್ನು ಅನವಶ್ಯವಾಗಿ ಬೆರೆಸಿದಂತಾಗುತ್ತದೆ......

ಮರಿಯ : (ಅದೇ ದನಿಯಲ್ಲಿ) ಇಲ್ಲ.... ನಾನು ನನ್ನ ಸಾವಿನ ಬಗ್ಗೆ ಹೇಳುತ್ತಿಲ್ಲ.... ಬೇರೆ ಎರಡು ಸಾವುಗಳ ಬಗ್ಗೆ.... ನಾನು ಎಚ್ಚರವಾಗೇ ಇದ್ದೀನಿ.... ನರಕ ಸ್ಪಷ್ಟವಾಗಿ ಕಾಣಿಸುತ್ತಿದೆ.... ನಿನಗೆ ಏನೂ ಕಾಣಿಸಲಾರದು, ಆದರೆ ನನಗೆ ....

ಏರುಸ್ : ಆತನ ರಕ್ಷಣೆ ಮತ್ತು ನಾನು ಪ್ರೇಮದಲ್ಲಿ ಮಾಡುತ್ತಿರುವ ತ್ಯಾಗ- ಈ ಸುದ್ದಿ ತರುವಾಗ ನನಗೆ ಆ ವಿಚಾರಗಳು ಗೋಚರವಾಗಲೇ ಇಲ್ಲ.....

ಮರಿಯ : (ತಕ್ಷಣ ಸಿಡಿದೇಳುತ್ತಾ) ಪ್ರೇಮಕ್ಕಾಗಿ ನೀನು ಮಾಡುತ್ತಿರುವ ತ್ಯಾಗ !.... ಇಲ್ಲಿ ಆಗುತ್ತಿರುವ ತ್ಯಾಗವನ್ನು, ಆ ದೇವತೆಗಳೇ ನೋಡಲು ಹೆದರುವ ಈ ತ್ಯಾಗವನ್ನು ನೀನು ನೋಡುವಂತಿದ್ದರೆ.... ಆತ ಧರೆಗಿಳಿದು ಬಂದಾಗಿನಿಂದ ಇಲ್ಲಿ ಏನೇನೆಲ್ಲ ಆಗಿದೆ ಎಂದು ನೀನಂತೂ ತಿಳಿಯಲಾರೆ!.... ಇದು ಮೊದಲಿನ ಪ್ರಪಂಚವಾಗಿಯೇ ಉಳಿದಿಲ್ಲ; ಹಾಗೇ ಹಳೆಯ ಪ್ರಪಂಚವಾಗಿ ಉಳಿಯಲು ಸಾಧ್ಯವಿಲ್ಲ!... ಆತ ಬರುವ ಮುಂಚೆ ಅತಿ ಪವಿತ್ರರೂ ಹಿಂಜರಿಯುತ್ತಿರಲಿಲ್ಲ!.... ಆತ ಬರುವ ಮಂಚೆ !.... ಈಗ, ಆತನಿಂದಾಗಿ ನಾನು ಮರುಹುಟ್ಟು ಪಡೆದೆ. ಆತನಲ್ಲದೆ ಬೇರೆ ಯಾರಾದರೂ ಆಗಿದಿದ್ದರೆ ನನಗೆ ಶಕ್ತಿಯೇ ಇರುತ್ತಿರಲಿಲ್ಲ!.... ನಾನು ಪ್ರೀತಿಸಿದ್ದನ್ನು ಉಳಿಸಿಕೊಳ್ಳಲು ಆತ ಪ್ರೀತಿಸಿದ್ದರ ವಿರುದ್ಧ ಪಾಪವೆಸಗಬೇಕಾಗಿದೆ!.... ಆದರೆ ಆತ ಪ್ರೇಮದ ಜೊತೆ ಕಷ್ಟವನ್ನು ಸಹಿಸಲು ಅಗಾಧ ಶಕ್ತಿ ಕೊಡುತ್ತಾನೆ!.... ಆತನ ಇಚ್ಛೆಗೆ ವಿರುದ್ಧವಾದ್ದನ್ನೆ ಮಾಡಿ ಆತನನ್ನು ಉಳಿಸಿಕೊಳ್ಳಲು ಬರುತ್ತದೆ. ಆದರೆ ನನ್ನ ಇಚ್ಛೆಗೆ ವಿರುದ್ಧವಾದದ್ದನ್ನು ಮಾಡಲಾರೆ!.... ನೀನು ನಿಗದಿ ಪಡಿಸುವ ಬೆಲೆ ತೆತ್ತು ನಾನೇನಾದರೂ ಆತನ ಜೀವ ಕೊಂಡುಕೊಂಡರೆ, ಆತನ ಆಸೆ, ಆಕಾಂಕ್ಷೆಗಳೆಲ್ಲವೂ ಸತ್ತಂತೇ ಸರಿ! ಬುದ್ಧಿಯನ್ನು ಉಳಿಸಿಕೊಳ್ಳುವ ಸಲುವಾಗಿ ಬೆಂಕಿಯನ್ನು

ಕೊಚ್ಚೆಯೊಳಕ್ಕೆ ಅದ್ದಲಾರೆ! ಆತನನ್ನು ಸೋಕಬಹುದಾದ ಆ ಒಂದು ಸಾವನ್ನು ಮಾತ್ರ ನಾನು ಆತನಿಗೆ ನೀಡಲಾರೆ!.... ದಿಟ್ಟವಾಗಿ ನನ್ನತ್ತ ನೋಡು, ಬಹುಶಃ ನಾನು ಹೇಳಲಾರದ್ದೆಲ್ಲಾ ನಿನಗೇ ಕಂಡೀತು!.... ಪ್ರೇಮ ಭಾರದಿಂದ ನಾನೇನಾದರೂ ಒಂದು ಕ್ಷಣ ಹತೋಟಿ ತಪ್ಪಿದರೂ ಆತನ ಹೇಳಿದ್ದೆಲ್ಲಾ, ಆತ ಮಾಡಿದೆಲ್ಲಾ, ಆತ ನೀಡಿದ್ದೆಲ್ಲಾ ಕತ್ತಲೆಯೊಳಗೆ ಕರಗಿ ವ್ಯರ್ಥವಾಗುತ್ತದೆ. ಆತ ಧರೆಗೆ ಬಾರದೇ ಹೋಗಿದ್ದರೆ ಈ ಭೂಮಿ ಎಷ್ಟು ಬರಡಾಗಿರುತ್ತಿತ್ತೋ ಅದಕ್ಕಿಂತಾ ಹೆಚ್ಚಿಗೆ ಬರಡಾಗುತ್ತದೆ.... ಮಾನವ ಕೋಟಿಗೆ ಸ್ವರ್ಗದ ಬಾಗಿಲು ಎಂದೆಂದಿಗೂ ಮುಚ್ಚಿ ಬಿಡುತ್ತದೆ !.... ಆತನ ಸರ್ವನಾಶಕ್ಕೆ ಆತನಿಗಿಂತಾ ಹೆಚ್ಚಾಗಿ ನಾನೇ ಕಾರಣಳಾಗುತ್ತೇನೆ.... ಆತನ ಜೀವನಕ್ಕೆ ಹೆಚ್ಚಿನ ದಿನಗಳನ್ನು ಒದಗಿಸಿ ಎಲ್ಲದರ ನಾಶಕ್ಕೆ ಕಾರಣಳಾಗುತ್ತೇನೆ.

ವೀರುಸ್ : ಅವನ ಜೀವನಕ್ಕೆ ಹೆಚ್ಚಿನ ದಿನಗಳನ್ನು ಒದಗಿಸುವುದು ಮಾತ್ರವಲ್ಲ, ಅವನಿಗಾಗುತ್ತಿರುವ ಹಿಂಸಾಚಾರವನ್ನೂ ತಪ್ಪಿಸಬಹುದು.... ಇದರ ಹಿನ್ನೆಲೆಯಲ್ಲಿ ಇನ್ನಾದರೂ ಯೋಚನೆ ಮಾಡು....

ಮರಿಯೆ : ಗೊತ್ತಿದೆ, ನನಗೆ ಗೊತ್ತಿದೆ. ಸ್ವರ್ಗವು ಪ್ರೇಮವನ್ನು ಭೂಲೋಕದಲ್ಲಿ ಹರಿಯ ಬಿಡುವ ಮುಂಚೆ ಈ ಪ್ರಪಂಚದಲ್ಲಿ ಯಾರು ಯಾರನ್ನೂ ಪ್ರೇಮಿಸಿರದಷ್ಟು ಪ್ರೇಮ ನನಗೆ ಆತನ ಪ್ರತಿ ಇದೆ. ಆದ್ದರಿಂದ ಯಾವ ಮನುಷ್ಯನ ಆತ್ಮವೂ ಹೊಂದಿರದಿದ್ದನ್ನು ನಾನು ಈಗ ತ್ಯಾಗ ಮಾಡಿ ಆತನನ್ನು ರಕ್ಷಿಸಬಾರದೆ?.... ಆದರೆ ನೀನು ಬಂದು ಕೇಳುತ್ತಿರುವುದು ಆತ ದಯಪಾಲಿಸಿರುವುದನ್ನೇ. ಆತ ದಯಪಾಲಿಸಿರುವುದೆಲ್ಲವೂ ಆತನ ಜೀವಕ್ಕಿಂತಾ ಮಿಗಿಲಾದವು.... ಆತನ ಶರೀರಕ್ಕಿಂತಾ ಹೆಚ್ಚಾಗಿ ನಮ್ಮ ಹೃದಯಗಳಲ್ಲಿ ವಾಸಮಾಡುತ್ತಿರುವಂಥವು!.... ನನ್ನೊಳಗಿನ ಆತನನ್ನು ನಾನು ನಾಶಮಾಡಿದರೆ, ನಮ್ಮೆಲ್ಲರೊಳಗಿನ ಆತನನ್ನು ನಾಶಮಾಡಿದಂತಾಗುತ್ತದೆ !.... ನನಗಿನ್ನೇನೂ ತಿಳಿಯದು, ಏನೂ ಕಾಣದು, ಏನೂ ಅರ್ಥವಾಗದು.... ನನ್ನ ಆತ್ಮ ಒಂಟಿಯಾಗಿದ್ದರೆ ಬಹುಶಃ ನೀನು ಹೇಳಿದ್ದಂತೆ ಮಾಡುತ್ತಿದ್ದೆ. ಆದರೆ ಇನ್ನು ಅದು ಅಸಾಧ್ಯ, ದೇವರು ಹಾಗಾಗಗೊಡುವುದಿಲ್ಲ !.....

ಪೀರುಸ್ : ಮನುಷ್ಯ ಮಾಡಲು ನಿರ್ಧರಿಸಿದ್ದನ್ನು ದೇವರುಗಳು ಆಗಗೊಡು ತ್ತಾರೆ.... ನೀನು ಈಗ ಯಾರನ್ನು ಹಿಂಸಾಚಾರಕ್ಕೆ ತಳ್ಳುತ್ತಿರುವೆಯೋ ಆತನ ದನಿ ಗಟ್ಟಿಯಾಗಿ ಕೇಳುವಂತೆ ಮಾಡುವೆ. ಖಂಡಿತವಾಗಿ ಆತ ಹಿಂಜರಿಯುವುದಿಲ್ಲ.....

ಮರಿಯೆ : ಹೌದು, ಆತ ಹಿಂಜರಿಯುವುದಿಲ್ಲ ಎಂದು ನನಗೆ ಗೊತ್ತಿದೆ! ಅದಿಕ್ಕೆ ನಾನು ಹೀಗೆ ಒದ್ದಾಡುತ್ತಿರುವುದು.... ಕುರುಡು ಪ್ರಾಣಿಯಂತೆ, ಎರಡು ಬಲಿಗಳ ನಡುವೆ ಸಿಕ್ಕಿ!..... ಆತನ ಇಚ್ಛಾಶಕ್ತಿಯ ಮಟ್ಟಕ್ಕೆ ಏರಲಾಗದೆ ನನ್ನ ಮಾನಗೆಟ್ಟ ಗತದಿಂದ ಈಗ ನಾನು ಹಿಂಜರಿಯುತ್ತಿದ್ದೇನೆ.

ಪೀರುಸ್ : ಸಾವಿನ ಮುಂದೆ ಮನುಷ್ಯನಿಗೆ ಇರುವುದು ಒಂದೇ ಇಚ್ಛೆ...

ಮರಿಯೆ : ದೇವರೆ! ದೇವರೆ!... ನಾನು ಏನೂ ಅಲ್ಲವಾಗಿದ್ದೇನೆ. ಒಂದೊಂದು ಕೇಡಿನಿಂದಲೂ ನಾನು ಕೆಡುತ್ತಾ ಹೋಗುತ್ತಿರುವೆ. ಇದೇನು ಮಹಾ, ಜೀವ ಉಳಿಸುತ್ತಲ್ಲಾ ?.... ಪ್ರಶ್ನೆ ಮಾಡುತ್ತಿದ್ದೇನೆಯೆ ?.... ಎಲ್ಲ ಪವಿತ್ರತೆಯ, ಎಲ್ಲ ಆನಂದದ, ಎಲ್ಲ ಜೀವದ ಮೂಲ ಚಿಲುಮೆಯಾದ ನಿನ್ನ, ನಿನ್ನ ಸ್ವರ್ಗವನ್ನೇ ತಾನೆ ನಾನು ಇಂದು ಕುಲಗೆಡಿಸುತ್ತಿರುವುದು?.... ಇನ್ನು ಮುಂದೆ ನನ್ನ ಆತ್ಮವನ್ನು ಎತ್ತ ತಿರುಗಿಸಬೇಕೆಂದು ತಿಳಿಯುತ್ತಿಲ್ಲ!.... ಇವನ್ನೂ ಕಳಕೊಂಡರೆ ನನ್ನಲ್ಲಿ ಮತ್ತೇನೂ ಉಳಿಯುವುದಿಲ್ಲ; ಇನ್ನು ಉಳಿಸಿಕೊಳ್ಳಲು ನಮ್ಮಲ್ಲಿ ಏನೂ ಬಾಕಿ ಉಳಿದಿರುವುದಿಲ್ಲ!.....

ಪೀರುಸ್ : ಜೀವವಿರುವ ತನಕ ಯಾವುದೂ ಕಳೆದು ಹೋಗುವುದಿಲ್ಲ....

ಮರಿಯೆ : ಶ್! ದಯವಿಟ್ಟು ಸುಮ್ಮನಿರು !.... ಆತನ ಮೌನ ಮತ್ತು ಇಚ್ಛೆಯ ಜೊತೆ ನಾನೊಬ್ಬಳೆ ಇರಗೊಡು.... ಆಲೋಚನೆ ಮಾಡಗೊಡು... ಬೇರೆಯವರ ಮಾತು ಕೇಳಿಸಿಕೊಳ್ಳಲು ಅವಕಾಶ ಕೊಡು.... ನಾನು ಆತನಿಗೆ ತಕ್ಕಷ್ಟು ಪ್ರೇಮವನ್ನಂತೂ ನೀಡಲು ಅಸಮರ್ಥಳು!.... ವ್ಯರ್ಥವಾಗಿ ಬೆಳಕಿಗಾಗಿ ಆಕಾಶದತ್ತ ದೃಷ್ಟಿ ಹರಿಸುತ್ತೇನೆ: ಆತನ ಸಾವು, ನೋವು, ಸಂಕಟಗಳೇ ಕಾಣುತ್ತಿವೆ.... ಆತನ ಧೃಡಚಿತ್ತ

ತೋರುವ ಮುಖ, ದಿಟ್ಟಿಸಿದ್ದೆಲ್ಲವನ್ನು ಬೆಳಗಿಸಬಲ್ಲ ಆತನ ಕಣ್ಣುಗಳು, ಆನಂದದ ಬಗ್ಗೆ ಅವ್ಯಾಹತವಾಗಿ ಮಾತಾಡುವ ಆತನ ಮುಖ... ನಾನು ಚುಂಬಿಸಿದ ಆ ಪಾದಗಳು.... ನಿರ್ಜೀವವಾಗಿ, ಬರ್ಫದಂತೆ ಕೊರೆಯುತ್ತಾ!.. ವೀರುಸ್, ವೀರುಸ್, ದಯವಿಟ್ಟು ಕರುಣೆ ತೋರು!... ನನಗೆ ತಡಿಯಲಸಾಧ್ಯ, ಅಸಾಧ್ಯ ! ನಾನು ಕುಸಿಯುತ್ತಿದ್ದೇನೆ!.... ನಿನಗೆ ತೋಚಿದಂತೆ ನನ್ನೊಡನೆ ವರ್ತಿಸು!.....

ವೀರುಸ್ : (ತೋಳಲ್ಲಿ ಹಿಡಿದು) ಮಗ್ದಲೀನ್! ಮಗ್ದಲೀನ್!.... ನನಗೆ ಗೊತ್ತಿತ್ತು....

ಮರಿಯೆ : (ಆತ ಮುಟ್ಟದೊಡನೆ ಪ್ರಜ್ಞೆ ಮರುಕಳಿಸಿ, ಜಗಿದು) ಇಲ್ಲ, ನಿನಗೆ ಗೊತ್ತಿರಲಿಲ್ಲ! ಗೊತ್ತಿದ್ದರೂ ಅದು ಸರಿಯಲ್ಲ!.... ಬೇರೆಯದು!.... ಬೇರೊಂದು ಮಾರ್ಗ ಇದೆ!.... ವೀರುಸ್, ವೀರುಸ್, ನೀನೇನು ಭಾವನೆ ಇಲ್ಲದವನಲ್ಲ, ನೀನು ರಾಕ್ಷಸನಲ್ಲ, ನಿನಗೂ ತಿಳವಳಿಕೆ ಇದೆ.... ನಿನ್ನನ್ನೇ ಅವಲಂಬಿಸಿದೆ.... ನನಗಂತೂ ಅದು ಅಸಾಧ್ಯ.... ದೇವತೆಗಳು ಕಾಪಾಡುತ್ತಿರುವ ಗೋಡೆಯೊಂದು ಅಲ್ಲಿದೆ... ಅದನ್ನ ದಾಟಿ ಹೋಗಲು ನನಗಂತೂ ಅಸಾಧ್ಯ.... ಆಲೋಚನೆ ಮಾಡಲು ಕೂಡ ನನ್ನಿಂದಾಗದು. ಆದರೆ ನೀನು, ನೀನು ಎಲ್ಲವನ್ನು ಮಾಡಬಲ್ಲೆ!.... ಆ ನಿನ್ನ ಮನುಷ್ಯ ಮಾತ್ರ ಕೈಗಳಲ್ಲಿ ಭೂಮಿಗಿಳಿದ ದೇವ ದೇವನ ಜೀವವನ್ನು ಹಿಡಿದಿರುವೆ ಎನ್ನುವ ಆಲೋಚನೆ ಮಾತ್ರವೇ ಎಷ್ಟು ರೋಮಾಂಚಕ ! ನಿನಗೆ ನಂಬಿಕೆ ಬರುವುದಿಲ್ಲ ವೆಂದು ನಾನು ಚೆನ್ನಾಗಿ ಬಲ್ಲೆ. ಆತ ಯಾವ ಕೇಡನ್ನೂ ಮಾಡಿಲ್ಲ ಎಂದು ನಿನಗೆ ಗೊತ್ತೇ ಇದೆಯಲ್ಲ.... ಆತ ಸ್ವಯಂ ಸದ್ಗುಣಿಯಾದ್ದರಿಂದ ಕೇಡೆಂದರೇನೂ ಗೊತ್ತಿಲ್ಲ. ಜನರ ರೋಗ ವಾಸಿ ಮಾಡಿದ್ದಾನೆ, ದುಃಖಿಗಳಿಗೆ ಸಮಾಧಾನ ನೀಡಿದ್ದಾನೆ, ಅವರಿಗಾಗಿ ಪ್ರಾರ್ಥಿಸಿದ್ದಾನೆ, ಬಿಟ್ಟರೆ ಮತ್ತೇನೂ ಮಾಡಿಲ್ಲ...... ಆತನು ಏನೆಂದು ನೀನು ತಿಳಕೊಂಡಿದ್ದರೆ!... ಆತ ನಿರಪರಾಧಿಯಾದ ಕಾರಣ, ಅಲ್ಲದೆ ನೀನು ನ್ಯಾಯವಂತ, ಶಕ್ತಿವಂತ, ಧೈರ್ಯಸ್ಥನಾದ ಕಾರಣ ಆತನನ್ನು ಬಲಿಪೀಠಕ್ಕೆ ಕಳಿಸಲಾರೆ.... ಅದು ರೋಮನ್ನರಿಗೆ ತಕ್ಕುದಲ್ಲ, ಗಂಡಸಾದವರಿಗೂ ತಕ್ಕುದಲ್ಲ.....

ವೀರುಸ್ : ಸಾಕು ಮಾಡು ಅದನ್ನು! ಅದೆಲ್ಲಾ ನಿಷ್ಪ್ರಯೋಜಕ. ಕಡೇ ಪಕ್ಷ ನಿನ್ನ ನಿರ್ಧಾರದಂತೇ ಆತನ ಪ್ರತಿ ನಡೆದು ಕೊಳ್ಳುತ್ತೇವೆ.... ಹಿಂಸೆಗೆ ಕರೆದೊಯ್ಯುತ್ತಿರುವುದು ನಾನಲ್ಲ, ತಿಳಿದುಕೊ....

ಮರಿಯೆ : (ಬಾಗಿಲ ಕಡೆ ಹೆಜ್ಜೆ ಹಾಕುತ್ತಿರುವ ವೀರುಸ್‌ನ ಬಟ್ಟೆಗಳನ್ನು ಜಗ್ಗಿ) ವೀರುಸ್! ವೀರುಸ್!.... ನಿನ್ನ ಬೇಡಿಕೊಳ್ಳುತ್ತೇನೆ!... ಅಷ್ಟೇ ಅಲ್ಲ... ನಾನಿನ್ನೂ ಪೂರ್ತಿ ಹೇಳಿ ಮುಗಿಸಿಲ್ಲ!... ಹೀಗೆ ನಿರ್ಧಾರ ತೆಗೆದುಕೊಳ್ಳಲು ಬರುವುದಿಲ್ಲ!... ಆದರೆ ಅಸಾಧ್ಯವಾದ ಅದೊಂದನ್ನ ಮಾತ್ರ ಕೇಳಬೇಡ.... ನಿನ್ನ ದಾಸಿಯಾಗಿರುತ್ತೇನೆ, ನಿನ್ನ ಕಾಲಬಳಿ ಬಿದ್ದಿರುತ್ತೇನೆ, ಸಾಯುವವರೆಗೆ ಮೊಳಕಾಲ ಮೇಲೆ ನಿಂತು ನಿನ್ನ ಸೇವೆ ಮಾಡುತ್ತೇನೆ.... ಆತನ ಜೀವವನ್ನು ನನ್ನ ಆತ್ಮದಲ್ಲಿ ನಾಶಮಾಡದಂತೆ ಉಳಿಸಿಕೊಡು, ನಮ್ಮ ಹೊಸ ಜೀವನದ ಜೀವವಾದ ಆತನನ್ನು ಇಡೀ ಭೂಮಿಗೆ ಮುಕ್ಕಿಲ್ಲದಂತೆ ಉಳಿಸಿಕೊಂಡು!....

ವೀರುಸ್ : ಸಾಕು ಮಾಡು!... ಸಮಯ ಕೂಡ ಹೆಚ್ಚಾಗಿ ಉಳಿದಿಲ್ಲ. ನನ್ನ ಪ್ರತಿಸ್ಪರ್ಧಿಯನ್ನು ಉಳಿಸಲು ನನಗಿರುವ ತಾಳ್ಮೆ ನಿನ್ನ ಪ್ರಿಯತಮನ ಗುಣಗಾನ ಮಾಡಿ ಆತನನ್ನು ಉಳಿಸಲು ನೀನು ಮಾಡುತ್ತಿರುವ ಪ್ರಯತ್ನದಷ್ಟೇ ತಮಾಷೆಯಾಗಿದೆ! .... ಇನ್ನು ಮೂರು ತಾಸಿಗೂ ಕಡಿಮೆ ಅವಧಿಯಲ್ಲಿ ಅವನ ಸತ್ತ ದೇಹ ಕಂಡಾಗ ಅಳಬೇಡ, ಆ ಕಣ್ಣೀರು ನಿನ್ನ ಮುಖಕ್ಕೇ ತಿರುಗಿ ರಾಚೀತು!.... (ಅರಿಮಾಥಿಯಾದ ಯೂಸುಫ್ ಭೋಜನ ಶಾಲೆಯ ಬಾಗಿಲನ್ನು ತೆರೆದದ್ದು ತಿಳಿದು) ಯಾರಲ್ಲಿ ಹೋಗುತ್ತಿರುವುದು? ಬಾ, ಒಳಕ್ಕೆ ಬಾ, ಈ ಕ್ಷಣವೇ... ನಮಗೀಗ ಸಾಕ್ಷಿಗಳು ಬೇಕು. ಗೂನಿಗಳೆಲ್ಲಿ, ರಾಕ್ಷಸರೆಲ್ಲಿ, ಕುಷ್ಠರೋಗಿಗಳೆಲ್ಲಿ? ಅವರಿಗೆಲ್ಲಾ ನಾನು ಏನೋ ಹೇಳಬೇಕಿದೆ....

ಮರಿಯೆ : ಏನು?

ವೀರುಸ್ : ಅವರ ದೇವರನ್ನು ಯಾರು ಸಾವಿಗೀಡುಮಾಡಿದರು ಎನ್ನುವುದು ಅವರಿಗೆಲ್ಲ ತಿಳಿದಿರಲಿ!.... ಆಗಾದರೂ ಅವರೆಲ್ಲರ ಎದುರಿಗೆ ಆತನನ್ನು ಸಾವಿನ ಕಡೆ ಕಳಿಸಿಕೊಡುವ ಮನಸ್ಸು ನಿನಗೆ ಇದೆಯಾ ಎಂದು ನೋಡಬಹುದು. ಅವರೆಲ್ಲ ಈ ಸುದ್ದಿಯನ್ನು ಹೇಗೆ

ಸ್ವೀಕರಿಸುತ್ತಾರೆ ನೋಡಬಹುದು !... ಅದು ಅಮುಖ್ಯವಾದರೂ ಅವರ ಅನಿಷ್ಟ ಮುಖಗಳನ್ನು ನಾನು ನೋಡಬೇಕು !.... (ಬಾಗಿಲನ್ನು ವಿಶಾಲವಾಗಿ ತೆರೆಯುತ್ತಾನೆ)

ಮರಿಯೆ : (ತಡೆಯಲು ಮುನ್ನುಗ್ಗುತ್ತಾ) ವೀರುಸ್! ವೀರುಸ್!... ಇದು ನಿನಗೆ ತಕ್ಕುದಲ್ಲ!....

ವೀರುಸ್ : ಹೌದು, ಗೊತ್ತು! ನಾನು ಏನಕ್ಕೂ ತಕ್ಕವನಲ್ಲ ಎಂದು ತೋರುತ್ತಿದೆ! ನಿನಗೂ ನಾನು ತಕ್ಕವನಲ್ಲ, ಸೂಳೆ!.... (ಗಟ್ಟಿದನಿಯಲ್ಲಿ) ಹೀ ! ಹೀ! ಎಲ್ಲಿದ್ದೀರಾ ನೀವೆಲ್ಲಾ ? ಬೇಗ ಈ ಕಡೆ ಬನ್ನಿ .... ಕುಂಟ, ಹೆಳವ, ಸೊಟ್ಟ ಕಾಲಿನವ, ಕಾಲಿಲ್ಲದವ... ಭಿಕ್ಷುಕರೆ, ಭಿಕಾರಿಗಳೆ, ಅಲೆಮಾರಿಗಳೆ.... ರೋಗಿಷ್ಠರೆ, ಕುಷ್ಠರೇ, ಲಕ್ವ ಹೊಡೆಸಿ ಕೊಂಡವರೆ!... ಮುಖ್ಯವಾದ ವಿಚಾರ ಹೇಳುವುದಿದೆ, ಬನ್ನಿ !

ಆಶ್ಚರ್ಯಚಕಿತ ಮುಖಗಳು ಇಬ್ಬದಿಯಿಂದಲೂ ಕಾಣುತ್ತವೆ

ದೃಶ್ಯ - ೫

ವೀರುಸ್, ಮರಿಯ ಮಗ್ದಲೀನೆ ಮತ್ತು ದೃಶ್ಯ ೩ರ ಸುಮಾರು ಎಲ್ಲ ಪಾತ್ರಗಳು

ವೀರುಸ್ : ಬನ್ನಿ ಒಳಗೆ ಬನ್ನಿ, ಯಾವುದಕ್ಕೂ ಹೆದರಬೇಕಿಲ್ಲ! (ಹಿಂಜರಿಯುತ್ತಾ ಅವರೆಲ್ಲ ಒಳ ಬರುತ್ತಾರೆ) ಎಲ್ಲಾ ಇದ್ದೀರಾ?... ಕಡಿಮೆ ಇದ್ದ ಹಾಗಿದೆ.... ಮಿಕ್ಕವರೆಲ್ಲಿ ಹೋದರು?.....

ಯೂಸುಫ್ : ಸ್ವಾಮಿ, ಕೆಲವರಿಗೆ ಈ ರಾತ್ರಿ.... ಭಯದಿಂದ.....

ವೀರುಸ್ : ಗೊತ್ತಾಯಿತು, ಅವರು ಹೆದರಿದ್ದಾರೆ....ಅವರ ಪ್ರೇಮ-ನಂಬಿಕೆಗಳು ಶಿಕ್ಷೆಯ ಭೀತಿಯನ್ನು ನಿವಾರಿಸಿಲ್ಲ.... ಆಯಿತು, ಇಷ್ಟೇ ಜನ ಸಾಕು.... ಆ ಹೆಂಗಸು ಕಾಣಿಸುತ್ತಿದೆಯಲ್ಲವೆ? .... ನಾನು ನಿಮ್ಮ ಗುರುವನ್ನು ರಕ್ಷಿಸಲೆಂದು ಬಂದೆ. ಆಕೆ 'ಹೂಂ' ಅಂದಿದ್ದರೆ ಸಾಕಿತ್ತು. ಆದರೆ 'ಉಹುಂ' ಎಂದಿದ್ದಾಳೆ. ಆತ ಸಾಯಲೇಬೇಕೆಂದು ಹೊರಟಿದ್ದಾಳೆ. ಹಾಗಾಗಿ ಆತ ನಾಳೆ ಬೆಳಗಾಗುವ ಹೊತ್ತಿಗೆ ಸಾಯುತ್ತಾನೆ.

ಜನ ಗಲಿಬಿಲಿಗೊಳ್ಳುತ್ತಾರೆ

ನಿಕೊದೀಮಸ್: ಆತನು ಏನು ಹೇಳುತ್ತಿದ್ದಾನೆ, ಮಗ್ದಲೀನೆ?

ಮರಿಯ : (ಉತ್ತರಿಸುವುದಿಲ್ಲ)

ವೀರುಸ್ : ಅವಳನ್ನೆ ಕೇಳಿ, ತಿಳಿಯುತ್ತದೆ....

ನಿಕೊದೀಮಸ್: ಮಗ್ದಲೀನೆ, ಇದು ನಿಜವೆ ?...

ಮರಿಯ ಮಗ್ದಲೀನೆ ಮೌನವಾಗಿರುತ್ತಾಳೆ

ಯೂಸುಫ್: ಉತ್ತರ ಕೊಡು! .... ನಿನಗೆ ಏನಾಗಿದೆ?....

ವೀರುಸ್ : ಅಷ್ಟೇ ಅಲ್ಲ, ಮಾಯೆಯನ್ನು ಅನುಸರಿಸಿ ಬಂದವರೆಲ್ಲರಿಗೂ ಮೋಸ ಮಾಡುತ್ತಿದ್ದಾಳೆ, ಸಾವಿಗೀಡು ಮಾಡುತ್ತಿದ್ದಾಳೆ. ನಾನು ಹೇಳಿದ್ದೆಲ್ಲಾ ಆಯಿತು. ನಮಸ್ಕಾರ. ನಿಮ್ಮನ್ನು ನೀವೇ ಕಾಪಾಡಿಕೊಳ್ಳಬೇಕು. (ಬಾಗಿಲ ಕಡೆ ತಿರುಗುತ್ತಾನೆ)

ಯೂಸುಫ್ : (ತಡೆದು, ಬೇಡಿಕೊಳ್ಳುತ್ತಾ) ಸ್ವಾಮಿ, ಕೈ ಜೋಡಿಸಿ ಬೇಡುತ್ತೇನೆ, ಹೀಗೆ ಹೊರಟು ಹೋಗಬೇಡಿ.... ಏನೋ ಅಪಾರ್ಥವಾಗಿದೆ. ನಿಮಗೇ ತಿಳಿಯುತ್ತದೆ.... ಯಾವುದೋ ಭಯಂಕರ ಅಪಾರ್ಥ.... ಮಗ್ದಲೀನೆ, ಇಲ್ಲಿ ಬಾ. ಇವರು ಹೇಳುತ್ತಿರುವುದೇನು, ನೀನು ಹೇಳುವುದೇನು?.... ಇಲ್ಲ, ಅದು ಅಸಾಧ್ಯ ! .... ಏನಾಯಿತು ಹೇಳು!.....

ಕೆಲವು ರೋಗಿಗಳು,

ಭಿಕ್ಷುಕರು : (ಮಗ್ದಲೀನಳನ್ನು ಸುತ್ತುವರಿಯುತ್ತಾರೆ. ಆಕೆ ಸ್ತಬ್ಧಳಾಗಿ, ಶೂನ್ಯದಲ್ಲಿ ದೃಷ್ಟಿ ನೆಟ್ಟಿರುತ್ತಾಳೆ) ಮಗ್ದಲೀನೆ ! ಮಗ್ದಲೀನೆ !......

ಗೂನಿ : ಇವಳೂ ಆತನನ್ನು ಮಾರಿಬಿಟ್ಟಿದ್ದಾಳೆ..... ಇವಳು ಇಸ್ಕಾರಿಯತ್ ಜೊತೆ ಸೇರಿಕೊಂಡಿದ್ದಾಳೆ.

ಮಾರ್ಥಾ : (ಮಗ್ದಲೀನಳ ಕೊರಳು ಬಳಸಿ) ಮಗ್ದಲೀನೆ!... ನನ್ನ ಮಾತು ಕೇಳು!....ನಿನಗೆ ನನ್ನ ಕಂಡರೆ ಪ್ರೀತಿ ಇತ್ತು..... ಈಗ ಏನಾಗಿದೆ ನಿನಗೆ?.... ಇದು ನಿಜ ಅಲ್ಲ ಎಂದು ಹೇಳು.....

ಕ್ಲಿಯೊಫಾಸ್: (ಮಗ್ದಲೀನೆ ಭುಜದ ಮೇಲೆ ಕೈಯಿರಿಸಿ) ಮಗ್ದಲೀನೆ! ಮಗ್ದಲೀನೆ!.... ಇಲ್ಲ, ಇದು ಅಸಾಧ್ಯ.... ನೀನು ಮರೆತಿರಲಿಕ್ಕೆ ಸಾಧ್ಯವಿಲ್ಲ.....

ಒಬ್ಬ ಬಡವ : ಎಷ್ಟು ಸಿಕ್ಕಿತು ನಿನಗೆ?

ಪವಾಡದಿಂದ ಗುಣನಾದವ: ಹೌದು, ಎಷ್ಟು?.... ಎಲ್ಲಿಟ್ಟುಕೊಂಡಿದ್ದೀಯ ದುಡ್ಡನ್ನ ?....

ಇನ್ನೊಬ್ಬ : ಚಿನ್ನವನ್ನೆಲ್ಲ ಹಿಂತಿರುಗಿಸು! ಹುಂ, ಹಿಂತಿರುಗಿಸು!.... ಹುಡುಕಿ ಅವಳನ್ನೇ !....

ಮೇರಿ ಸಲೋಮ್: ಮಗ್ದಲೀನೆ! ಮಗ್ದಲೀನೆ!.... ಇವಳಿಗೆ ತಲೆ ಕೆಟ್ಟಿದೆ!

ಒಬ್ಬ ಅಲೆಮಾರಿ: ವ್ಯಭಿಚಾರಿ !.... ಸೈನಿಕನ ಸೂಳೆ ! .....

ಇನ್ನೊಬ್ಬ : ಸೂಳೆ ! ಸೂಳೆ ! ಸೂಳೆ !

ಪವಾಡದಿಂದ ಗುಣವಾದವ: ಆತ ಬಿಡಿಸಿದ ಏಳು ದೆವ್ವಗಳೂ ಮತ್ತೆ ಇವಳನ್ನ ಹೊಕ್ಕಿವೆ !

ಇನ್ನೊಬ್ಬ ಎತ್ತುಗಳನ್ನ ಮಾರುವಂತೆ ಈಕೆ ನಮ್ಮನ್ನ ಮಾರಿ ಹಾಕಿದ್ದಾಳೆ !.....

ರೋಗಿ ನಾವೆಲ್ಲಾ ಈಗ ಕಷ್ಟಕ್ಕೆ ಸಿಕ್ಕಿಕೊಂಡೆವು !....

ಇನ್ನೊಬ್ಬ : ಹೌದು, ಆದರೆ ಅವಳನ್ನೇ ಮೊದಲು ಕಷ್ಟಕ್ಕೆ ಗುರಿಮಾಡೋಣ....

ಮೊಂಡುಗೈಯಾಗಿದ್ದವ: ಆಕೆ ಇಲ್ಲಿಂದ ಹೋಗುವಂತಿಲ್ಲ.... ಎಲ್ಲಿವರೆಗೆ ಅಂದರೆ....

ವಾಯುರೋಗಿ: ಆಕೆ ಇಲ್ಲಿಂದ ಜೀವಂತ ಹೋಗುವಂತಿಲ್ಲ, ಆಣೆ ಮಾಡುತ್ತೇನೆ !....

ಹೆಚ್ಚು ಕಮ್ಮಿ ಎಲ್ಲರೂ ಕೂಗಾಡುತ್ತಾ, ಕೈ ಬಾಯಿ ಆಡಿಸುತ್ತಾ, ಮುಷ್ಟಿ ತೋರಿಸಿ ಅವಳನ್ನು ಬೆದರಿಸುತ್ತಾ ಅವಳ ಸುತ್ತಾ ಆಡುತ್ತಾರೆ ; ಮಗ್ದಲೀನೆ ಮಾತಾಡದೆ ಅಲುಗಾಡದೆ ನಿಂತಿರುತ್ತಾಳೆ

ಯೂಸುಫ್ : (ಮಧ್ಯ ಪ್ರವೇಶಿಸುತ್ತಾ) ತಡೀರಿ, ತಡೀರಿ. ನೀವು ಯಾರು, ಎಲ್ಲಿದ್ದೀರಿ, ಯಾರ ವಿಷಯ ಮಾತಾಡುತ್ತಿದ್ದೀರಿ ಎಂದು ಮರೆಯಬೇಡಿ. (ವೀರುಸ್‌ಗೆ) ಸ್ವಾಮಿ, ದಯವಿಟ್ಟು ಸ್ವಲ್ಪ ಶಾಂತರಾಗಿ.... ನಾನೊಬ್ಬ

ನ್ಯಾಯವಾದಿ ಮತ್ತು ವಿವೇಕವುಳ್ಳ ಮನುಷ್ಯ. ಎಲ್ಲವನ್ನೂ ವಿವರವಾಗಿ ತಿಳಿಯೋಣ.... ಮಗ್ದಲೀನೆ, ಇಲ್ಲಿ ಕೇಳು. ಆತನ ಹೆಸರಿನಲ್ಲಿ ನಿನ್ನ ಬಳಿ ಮಾತಾಡುತ್ತಿದ್ದೇನೆ..... ಹೂಂ ಎನ್ನಲು ಕೈಮೀರಿಲ್ಲ, ಸಮಯವಿನ್ನೂ ಉಳಿದಿದೆ.... ಒಬ್ಬ ತಂದೆಯಾಗಿ ನಾನು ಮಾತಾಡುತ್ತಿದ್ದೇನೆ...

ಮಗ್ದಲೀನೆ ಹಾಗೇ ಮೌನವಾಗಿ ಅಲುಗಾಡದೆ ನಿಂತಿರುತ್ತಾಳೆ

ಗೂನಿ : ನೋಡಿದಿರಾ?.... ಲಂಚ ತೆಗೆದುಕೊಂಡಿದ್ದಾಳೆ!....

ದ್ವೇಷದ ಸಿಡಿತ . ಎಲ್ಲರೂ ಅವಳನ್ನು ಮುತ್ತಿಗೆ ಹಾಕುತ್ತಾರೆ. ಕೂಗಾಟ, ಬೆದರಿಕೆ, ಬೇಡಿಕೆ, ಗೋಳಾಟ ದ್ವಿಗುಣಗೊಳ್ಳುತ್ತವೆ. ತಕ್ಷಣ ಆಚೆ ಬೀದಿಯ ಗಲಾಟೆ ಭೋಜನ ಶಾಲೆಯೊಳಗಿನ ಗಲಾಟೆಯನ್ನು ಅಡಗಿಸುತ್ತದೆ. ಸಿಟ್ಟಿಗೆದ್ದ ಜನರ ಗುಂಪು ಇತ್ತ ಕಡೆ ನುಗ್ಗಿ ಬರುತ್ತದೆ ; ಕೈಯಲ್ಲಿ ಶಸ್ತ್ರಾಸ್ತ್ರ, ಜೊತೆಗೆ ಕುದುರೆಗಳು. ಕೋಣೆ ತಕ್ಷಣ ಶಾಂತ ವಾಗುತ್ತದೆ. ಎಲ್ಲರೂ ಕುತೂಹಲದಿಂದ ಕೇಳಿಸಿಕೊಳ್ಳುತ್ತಾರೆ.

ಪವಾಡದಿಂದ ಗುಣವಾದವ: ರೋಮನ್ನರು! ಸೈನಿಕರು! ನಮ್ಮನ್ನು ಹಿಡಿಯಲು ಬರುತ್ತಿದ್ದಾರೆ!.....ಇವಳು ನಮಗೆ ಮೋಸ ಮಾಡಿದ್ದಾಳೆ!... ತಪ್ಪಿಸಿಕೊಳ್ಳೋಣ ಬನ್ನಿ ! .... ಹೀಗೆ.... ಈ ಕಡೆ.... !

ಎಲ್ಲ ತಲೆ ತಪ್ಪಿಸಿಕೊಳ್ಳುತ್ತಾರೆ. ಕೆಲವರು ಕೋಣೆಯ ತುಂಬ ಧಡಬಡ ಓಡಾಡುತ್ತಾರೆ

ಒಬ್ಬ ಅಲೆಮಾರಿ: ಇಲ್ಲ, ಬೇಡ!... ಆಚೆ ಹೋಗಬೇಡಿ!.... ಇರುವುದೊಂದೇ ಬಾಗಿಲು!... ನಾವು ತಪ್ಪಿಸಿಕೊಳ್ಳುವಂತಿಲ್ಲ !... ಸಿಕ್ಕಿಬಿದ್ದೇವು!....

ಪವಾಡದಿಂದ ಗುಣವಾದವ: ಶಾಂತರಾಗಿ !.... ಬಚ್ಚಿಟ್ಟುಕೊಳ್ಳಿ !....

ಒಬ್ಬ ಕುಂಟ: ದೀಪ ಯಾಕೆ ಆರಿಸಬಾರದು?... ಬೆಳಕು ಕಾಣಿಸಿಬಿಡುತ್ತದೆ!... ಬೇಗ, ಆರಿಸಿಬಿಡಿ!....

ದೀಪ ಆರಿಸುತ್ತಾರೆ

ಇನ್ನೊಬ್ಬ : ಕಿಟಕಿ ಕಡೆ ಹೋಗಬೇಡಿ !... ಕಿಟಕಿ ಬಳಿ ಕಾಣಿಸಿಕೊಳ್ಳಬೇಡಿ !.... ಗೋಡೆಗಳ ಪಕ್ಕ ನೆಲದಲ್ಲಿ ಮೈಚಾಚಿ!.....

ವೀರುಸ್ : ಎಂಥಾ ಮನೋಹರ ದೃಶ್ಯ ! ಹಾಗೇ ನೋಡುತ್ತಲೇ ಇರಬೇಕು ಅನ್ನಿಸುತ್ತೆ.....

ಯೂಸುಫ್ : (ವೀರುಸ್ ಬಳಿ ಸಾರಿ) ಸ್ವಾಮಿ, ಅವರನ್ನು ನಾಶಮಾಡಬೇಡಿ.... ಅವರೆಲ್ಲ ಅಬಲರು, ಬಡವರು, ಹೆಚ್ಚೂಕಮ್ಮಿ ಎಲ್ಲರೂ ರೋಗಿಗಳೇ.... ಏನು ಮಾಡಬೇಕೆಂದು ಅವರಿಗೆ ತೋರುತ್ತಿಲ್ಲ.... ಮನುಷ್ಯರ ಬಗ್ಗೆ ಕರುಣೆ ತೋರಿ. ಅವರ ನ್ಯಾಯಾನ್ಯಾಯಗಳನ್ನು ನೀವು ನಿರ್ಧರಿಸಬೇಡಿ.....

ಕೂಗು: ಶಿಲಬೆಗೇರಿಸಿ ಅವನನ್ನು ! ಶಿಲುಬೆಗೇರಿಸಿ ಅವನನ್ನು ! ಅವನೊಬ್ಬ ಪಿಶಾಚಿ ! ವಿಲೋಭಕ! ಗೆಲಿಲೀಯವ ! ನಜರತ್‌ನವ ! ನಮ್ಮ ದೇವಾಲಯಗಳನ್ನು ನಾಶಮಾಡಿಬಿಡುತ್ತಾನೆ !.... ನಮ್ಮ ಕಾನೂನನ್ನು ನಾಶ ಮಾಡುತ್ತಾನೆ !... ಧರ್ಮದ್ರೋಹಿ ! ಶಿಲುಬೆಗೇರಿಸಿ ! ಶಿಲುಬೆಗೇರಿಸಿ! ಶಿಲುಬೆಗೇರಿಸಿ ಅವನನ್ನು !

ಈ ಕೂಗು ಬೀದಿಗಳಲ್ಲಿ ಎರಡು ಪಟ್ಟು ಹೆಚ್ಚುತ್ತದೆ. ಬರಬರುತ್ತಾ ಬಹಳ ಹತ್ತಿರದಿಂದ ಕೇಳಿಬರುತ್ತದೆ. ಪಂಜಿನ ಕೆಂಪು ಬೆಳಕು ಕೋಣೆ ಒಳಕ್ಕೂ ನುಗ್ಗುತ್ತದೆ. ಮೆಂಷೋನ ಕುರುಡ ಕದ್ದು ಕಿಟಕಿಯೊಂದರ ಬಳಿ ಬಂದು ಆಚೆ ನೋಡುತ್ತಾನೆ

ಭಯದ ದನಿಯೊಂದು : ಕಿಟಕಿ ಕಡೆ ಹೋಗಬೇಡ !....

ಒಬ್ಬ ಕುಂಟ : (ಇನ್ನೊಂದು ಕಿಟಕಿ ಕಡೆ ಹೋಗುತ್ತಾ) ಏನಾಗುತ್ತಿದೆ?....

ಕುರುಡ : ಆತನೇ ಅದು !.....

ಕುತೂಹಲ ತಡೆಯಲಾಗದೆ ಬಹಳ ಎಚ್ಚರಿಕೆಯಿಂದ ಕೆಲವರು ಕಿಟಕಿ ಬಳಿ ಬಂದು, ಕಿಟಕಿಯೇರಿ ಬೀದಿಯತ್ತ ನೋಡುತ್ತಾರೆ. ಆಗಾಗ ಅವರಲ್ಲೊಬ್ಬ ಹಿಂದೆ ತಿರುಗಿ ಕೋಣೆಯಲ್ಲಿ ಉಳಿದಿರುವ ಇತರರಿಗೆ ಕಂಡಿದ್ದನ್ನು ತಿಳಿಸುತ್ತಾನೆ

ಕಿಟಕಿ ಹತ್ತಿರದವನೊಬ್ಬ : ಆತನ ಸುತ್ತ ಸೈನಿಕರಿದ್ದಾರೆ !.... ಒಂದು ಗುಂಪೇ ಇದೆ!....

ಇನ್ನೊಬ್ಬ : ಆತ ಬರುತ್ತಿದ್ದಾನೆ; ಇತ್ತ ಕಡೆ ಬರುತ್ತಿದ್ದಾನೆ !.... ಕೈಗಳನ್ನು ಕಟ್ಟಿದ್ದಾರೆ.... ಆತನಿಗೆ ಹೊಡೆಯುತ್ತಿದ್ದಾರೆ!..... ·

ಇನ್ನೊಬ್ಬ : ಓಹ್ ಆತ ಅಳುತ್ತಿದ್ದಾನೆ !.... ಕಣ್ಣಲ್ಲಿ ರಕ್ತ ಹರಿಯುತ್ತಿದೆ !....

ಮತ್ತೊಬ್ಬ : ಆತನನ್ನು ಪಿಲಾತನ ಬಳಿ ಕರೆದೊಯ್ಯುತ್ತಿದ್ದಾರೆ!... ಅಗೋ ಪೀಟರ್ ಮತ್ತು ಯೊಹಾನ್ ಬಚ್ಚಿಟ್ಟುಕೊಳ್ಳುತ್ತಿದ್ದಾರೆ!....

ಮಗದೊಬ್ಬ : ರಕ್ತ ಆತನ ಕಾಲುಗಳ ಮೇಲೆ ಸೋರುತ್ತಿದೆ !....

ಇನ್ನೊಬ್ಬ : ಇನ್ನು ಮುಂದೆ ನಡೆಯಲು ಆತನಿಂದಾಗದು!.... ಮುಗ್ಗರಿಸುತ್ತಿದ್ದಾನೆ!....

ವೀರುಸ್: (ಒಂದಿಷ್ಟೂ ಅಲುಗಾಡದೆ ಕಂಬದ ಬಳಿ ಕೋಣೆಯ ಮಧ್ಯೆ ಶೂನ್ಯ ದಿಟ್ಟಿಸುತ್ತಾ ನಿಂತಿರುವ ಮಗ್ದಲೀನಳಿಗೆ) ಮಗ್ದಲೀನ್ !

ಬೀದಿಯಲ್ಲಿ ಇದ್ದಕ್ಕಿದ್ದಂತೆ ಸಪ್ಪಳ ಅಡಗುತ್ತದೆ. ಯಾವುದೋ ದೊಡ್ಡ ವಸ್ತು ನೆಲಕ್ಕೆ ಬಿದ್ದ ಹಾಗೆ. ವಿಚಿತ್ರ ನಿಶ್ಶಬ್ದತೆ

ಕೋಣೆಯೊಳಗಿನ ಒಂದು ದನಿ: ಏನದು ?....

ಜೆರಿಕೊನ ಕುರುಡ : (ಕಿಟಕಿ ಬಳಿ ಇದ್ದವ) ಆತ ಬಿದ್ದ !... ಆತ ಬಿದ್ದು ಬಿಟ್ಟಿದ್ದಾನೆ !... ಈ ಮನೆಯತ್ತ ನೋಡುತ್ತಿದ್ದಾನೆ!....

ವೀರುಸ್: ಮಗ್ದಲೀನೆ, ಈಗಲೂ ನಾನು ಮಾತ ಕೊಡುತ್ತೇನೆ....

ಮರಿಯೆ ಮಗ್ದಲೀನೆ: (ಒಂದಿಷ್ಟೂ ಕದಲದೆ, ವೀರುಸ್ ಕಡೆ ನೋಡದೆ, ಸಿಟ್ಟೂ ಇಲ್ಲದೆ, ಬೇರೆಯೇ ಜೀವದಿಂದ ಎಂಬಂತೆ ಶಾಂತಳಾಗಿ, ದಿವ್ಯ ಸ್ಪಷ್ಟತೆ ಮತ್ತು ಖಂಡಿತವಾದ ದನಿಯಲ್ಲಿ) ಹೊರಟು ಹೋಗು !......

ಕುರುಡ : (ಕಿಟಕಿ ಬಳಿಯಿಂದ) ಎದ್ದು ನಿಂತ ! ಆತನನ್ನು ಎಳಕೊಂಡು ಹೋಗುತ್ತಿದ್ದಾರೆ !......

ಮತ್ತೆ ಬೀದಿಯಲ್ಲಿ 'ಶಿಲಬೆಗೇರಿಸಿ ಅವನನ್ನು !' ಮುಂತಾದ ಕೂಗು ಶುರುವಾಗುತ್ತದೆ, ಹೆಚ್ಚಾಗುತ್ತದೆ. ಅಲುಗಾಡದೆ ನಿಂತ ಯಾವುದೊ ವಿಚಿತ್ರ ಆನಂದದಲ್ಲಿ ಮುಳುಗಿರುವ ಮಗ್ದಲೀನ್‌ಳತ್ತ ನೋಡುತ್ತಾ ವೀರುಸ್ ನಿಧಾನವಾಗಿ ಆಚೆ ಹೋಗುತ್ತಾನೆ. ಬೀದಿಯಲ್ಲಿ ಸಾಗುವ ಬೆಳಕಿನಿಂದಾಗಿ ರಂಗದ ಮೇಲಿನ ಎಲ್ಲವೂ ಒಮ್ಮೆ ಪ್ರಜ್ವಲಿಸುತ್ತವೆ

-ಪರದೆ-

ಅನುಬಂಧ - I

ಮಾರಿಸ್ ಮೇತರ್‌ಲಿಂಕನ ಬರಹಗಳು

ನಾಟಕಗಳು

೧. ಲ ಪ್ರಿನ್ಸೆಸೆ ಮಲಿಯಾನೆ (೧೮೮೯)

೨. ಲ ಇಂತ್ರೂಸೆ (೧೮೯೦)

೩. ಲೆಸ್ ಅನೆಯೂಗಲ್ಸ್ (೧೮೯೧)

೪. ಲೆಸ್ ಸೆಪ್ತ್ ಪ್ರಿನ್ಸೆಸೆಸ್ಸೆ (೧೮೯೧)

೫. ಪಲಿಯಾಸ್ ಎತ್ ಮೆಲಿಸಾಂದೆ (೧೮೯೨)

೬. ಅಲ್ಲದೈನ್ ಎತ್ ಪಲೊಮ್ಮೈದ್ಸ್ (೧೮೯೪)

೭. ಇಂತೀರಿಯು ಆರ್ (ದಿ ಇಂಟೀರಿಯರ್) (೧೮೯೫)

೮. ಲೊ ಮಾರ್ತ್ ದಿ ತಿಂತಗಿಲೇಸ್ (೧೮೯೫)

೯. ಅಗ್ಲವಿಯಾನೆ ಎತ್ ಸೆಲಿಸೆತ್ತೆ (೧೮೯೬)

೧೦. ಸೊಯಿಯುರ್ ಬಿಯಾತ್ರೀಸೆ (ಸಿಸ್ಟರ್ ಬೀಟ್ರಿಸ್) (೧೮೯೬)

೧೧. ಆರ್ದಿಯೆನ್ ಎತ್ ಬಾರ್ಬೆಬ್ಲೂ (೧೮೯೬)

೧೨. ಮೊನ್ನ ವನ್ನಾ (೧೯೦೨)

೧೩. ಜಾಯ್‌ಜೆಲ್ಲೆ (೧೯೦೩)

೧೪. ಮರಿಯೆ ಮಗ್ದಲೀನೆ (೧೯೦೯)

೧೫. ಲ್ ಓಯಿಸಿಯೂ ಬ್ಲೂ (೧೯೦೯)

೧೬. ದಿ ಬೆಟ್ರಾತಲ್ (೧೯೧೯)

೧೭. ದಿ ಬರ್ಗೊ ಮಾಸ್ಟರ್ ಆಫ್ ಸ್ಟಿಲೆಮಾಂಡೆ

೧೮. ದಿ ಮಿರಕಲ್ ಆಫ್ ಸೇಂಟ್ ಆಂಟೋನಿ

ಗದ್ಯಕೃತಿಗಳು

೧. ಏನ್ಸಿಯೆಂಟ್ ಈಜಿಪ್ಟ್

೨. ದಿ ಗ್ರೇಟ್ ಬಿಯಾಂಡ್

೩.. ದಿ ಅವರ್‌ಗ್ಲಾಸ್

೪. ದಿ ಲೈಫ್ ಆಫ್ ದಿ ಬೀ (೧೯೦೦)

೫. ದಿ ಲೈಫ್ ಆಫ್ ದಿ ವೈಟ್ ಆಂಟ್ (೧೯೩೦)

೬. ದಿ ಲೈಫ್ ಆಫ್ ಟರ್ಮೈಟ್ಸ್ (೧೯೨೭)

೭. ದಿ ಇಂಟಲಿಜೆನ್ಸ್ ಆಫ್ ಫ್ಲವರ್ಸ್ (೧೯೦೭)

೮. ಓಲ್ಡ್ ಫ್ಯಾಷನ್ಡ್ ಫ್ಲವರ್ಸ್ ಅಂಡ್ ದೇರ್ ಓಪನ್‌ಯೇರ್

೯. ಸುಪ್ರೀಂ ಲಾ

೧೦. ವಿಸ್ಡಂ ಅಂಡ್ ಡೆಸ್ಟಿನಿ

೧೨. ದಿ ಟ್ರೆಷರ್ ಆಫ್ ದಿ ಹಂಬಲ್ (೧೮೯೬)

೧೩. ದಿ ಡಬಲ್ ಗಾರ್ಡನ್ (೧೯೦೧)

೧೪. ದಿ ಬೆರೀಡ್ ಟೆಂಪಲ್ (೧೯೦೨)

೧೫. ಡೆತ್ (೧೯೦೩)

೧೬.. ದಿ ಅನ್ನೋನ್ ಗೆಸ್ಟ್

೧೭. ದಿ ಗ್ರೇಟ್ ಸೀಕ್ರೆಟ್ (೧೯೦೪)

೧೮. ಬಿಫೋರ್ ದಿ ಗ್ರೇಟ್ ಸೈಲೆನ್ಸ್ (೧೯೦೫)

೧೯. ದಿ ಶಾಡೋ ಆಫ್ ದಿ ವಿಂಗ್ಸ್ (೧೯೦೬)

೨೦. ಲೈಫ್ ಇನ್ ಸ್ಪೇಸ್ (೧೯೩೪)

೨೧. ಮೈ ಡಾಗ್ (೧೯೧೩)

೨೨. ಲೈಫ್ ಅಂಡ್ ಫ್ಲವರ್ಸ್

೨೩. ಮೌಂಟೇನ್ ಪಾಥ್ಸ್

೨೪. ದಿ ರಾಕ್ ಆಫ್ ದಿ ಸ್ಟಾರ್ಸ್

೨೫. ಬ್ಲೂ ಬಬ್ಬೀಸ್ (೧೯೪೦)

೨೬. ಪಿಜನ್ಸ್ ಅಂಡ್ ಸ್ಪೈಡರ್ಸ್

೨೭. ದಿ ಮ್ಯಾಜಿಕ್ ಆಫ್ ದಿ ಸ್ಟಾರ್ಸ್

೨೮. ಹೌಸ್ ಆಫ್ ಗ್ಲ್ಯಾಡ್‌ನೆಸ್

ಕವನ ಸಂಕಲನ

೧. ಸೆರೆಸ್ ಶಾಡೆಸ್ (೧೮೮೯)

ಕಥೆ

೧. ಮಸಾಕರ್ ಆಫ್ ದಿ ಇನಸೆಂಟ್ಸ್

ಅನುವಾದ

೧. ಮ್ಯಾಕ್‌ಬೆತ್ (೧೯೧೦)

** ** **

ಅನುಬಂಧ - ii

ನೊಬೆಲ್ ಪ್ರಶಸ್ತಿ ವಿಜೇತ ಲೇಖಕ - ಲೇಖಕಿಯರು


ವರ್ಷ	ವಿಜೇತರು	ದೇಶ- ಭಾಷೆ
೧೯೦೧	ಸುಲಿ ಪ್ರುಧೋಮ್ (Sully Prudhomme)	ಫ್ರಾನ್ಸ್- ಫ್ರೆಂಚ್
೧೯೦೨	ಥಿಯೆಡೋರ್ ಮೊಮಸೆನ್ (Theodor Mommesen)	ಜರ್ಮನಿ- ಜರ್ಮನ್
೧೯೦೩	ಬ್ಯೋರ್ನ್‌ಸ್ಟರ್ನೆ ಬ್ಯೋರ್ನ್‌ಸನ್ (Bjornstjerne Bjornson)	ನಾರ್ವೆ- ನಾರ್ವೇಜಿಯನ್
೧೯೦೪	ಫ್ರೆಡರಿಕ್ ಮಿಸ್ತ್ರಲ್ (Frederic Mistral)	ಫ್ರಾನ್ಸ್- ಫ್ರೆಂಚ್
	ಯೋಸೆ ಈಚೆಗಾರೆ (Jose Echegaray)	ಸ್ಪೇನ್- ಸ್ಪ್ಯಾನಿಷ್
೧೯೦೫	ಹೆನ್ರಿಕ್ ಸಿಯೆನ್ ಕಿಯೆವಿಚ್ (Henryk Sienkiewicz)	ಪೋಲೆಂಡ್- ಪೋಲಿಷ್
೧೯೦೬	ಜಿಯೋಸೆ ಕಾರ್ಡುಚ್ಚಿ (Giouse Carducci)	ಇಟಲಿ - ಇಟಾಲಿಯನ್
೧೯೦೭	ರಡ್‌ಯಾರ್ಡ್ ಕಿಪ್ಲಿಂಗ್ (Rudyard Kipling)	ಗ್ರೇಟ್ ಬ್ರಿಟನ್- ಇಂಗ್ಲಿಷ್
೧೯೦೮	ರುಡಾಲ್ಫ್ ಯೂಕೆನ್ (Rudolf Eucken)	ಜರ್ಮನಿ- ಜರ್ಮನ್
೧೯೦೯	ಸೆಲ್ಮಾ ಲಾಗರ್‌ಲಾಫ್ (Selma Lagerlof)	ಸ್ವೀಡನ್- ಸ್ವೀಡಿಷ್
೧೯೧೦	ಪಾಲ್ ಹೇಸೆ (Paul Heyse)	ಜರ್ಮನಿ- ಜರ್ಮನ್
೧೯೧೧	ಮಾರಿಸ್ ಮೇತರ್‌ಲಿಂಕ್ (Mourice Maeterlinck)	ಬೆಲ್ಜಿಯಂ- ಫ್ರೆಂಚ್
೧೯೧೨	ಗೆರ್‌ಹಾರ್ಟ್ ಹಾಪ್ಟ್‌ಮನ್ (Gerhart Hauptmann)	ಜರ್ಮನಿ- ಜರ್ಮನ್
೧೯೧೩	ರವೀಂದ್ರನಾಥ ಠಾಕೂರ್ (Rabindranath Tagore)	ಭಾರತ- ಬಂಗಾಳಿ
೧೯೧೪	ಯಾರಿಗೂ ಇಲ್ಲ	- -
೧೯೧೫	ರೋಮೆ ರೋಲಾ (Romain Rolland)	ಫ್ರಾನ್ಸ್- ಫ್ರೆಂಚ್
೧೯೧೬	ವೆರ್ನರ್ ವಿ. ಹೈದೆನ್‌ಸ್ಟಾಮ್ (Verner V. Heidenstam)	ಸ್ವೀಡನ್ - ಸ್ವೀಡಿಷ್
೧೯೧೭	ಕಾರ್ಲ್ ಜೈಲೆರೂಪ್ (Karl Gjellerup)	ಡೆನ್ಮಾರ್ಕ್- ಡೇನಿಷ್
	ಹೆನ್ರಿಕ್ ಪೋಂತೊಪ್ಪಿದಾನ್ (Henrik Pantoppidan)	ಡೆನ್ಮಾರ್ಕ್- ಡೇನಿಷ್
೧೯೧೮	ಯಾರಿಗೂ ಇಲ್ಲ	- -
೧೯೧೯	ಕಾರ್ಲ್ ಸ್ಪಿಟೆಲರ್ (Carl Spitteler)	ಸ್ವಿಟ್ಜರ್‌ಲ್ಯಾಂಡ್- ಜರ್ಮನ್

೧೯೨೦	ನುಟ್ ಹ್ಯಾಮ್ಸುನ್ (Knut Hamsun)	ನಾರ್ವೆ- ನಾರ್ವೇಜಿಯನ್
೧೯೨೧	ಅನಾತೋಲ್ ಫ್ರಾನ್ಸ್ (Anatole France)	ಫ್ರಾನ್ಸ್-ಫ್ರೆಂಚ್
೧೯೨೨	ಯಾಸಿಂತೊ ಬೆನಾವೆಂತೆ (Jacinto Benavente)	ಸ್ಪೇನ್-ಸ್ಪ್ಯಾನಿಷ್
೧೯೨೩	ಡಬ್ಲ್ಯು. ಬಿ. ಯೇಟ್ಸ್ (W.B. Yeats)	ಐರ್ಲೆಂಡ್-ಇಂಗ್ಲಿಷ್
೧೯೨೪	ವ್ಲಾದಿಸ್ಲಾ ರೇಮೋಂತ್ (Wladyslaw Reymont)	ಪೋಲೆಂಡ್- ಪೋಲಿಷ್
೧೯೨೫	ಜಾರ್ಜ್ ಬರ್ನಾರ್ಡ್ ಷಾ (George Bernard Shaw)	ಗ್ರೇಟ್ ಬ್ರಿಟನ್ - ಇಂಗ್ಲಿಷ್
೧೯೨೬	ಗ್ರೇತ್ಸಿಯಾ ದೆಲೆದ್ದಾ (Grazia Deledda)	ಇಟಲಿ- ಇಟಾಲಿಯನ್
೧೯೨೭	ಹೆನ್ರಿ ಬೆರ್ಗ್‌ಸನ್ (Henri Bergson)	ಫ್ರಾನ್ಸ್- ಫ್ರೆಂಚ್
೧೯೨೮	ಸಿಗ್ರಿದ್ ಉಂದ್‌ಸೆತ್ (Sigrid Undset)	ನಾರ್ವೆ-ನಾರ್ವೇಜಿಯನ್
೧೯೨೯	ಥಾಮಸ್ ಮಾನ್ (Thomas Mann)	ಜರ್ಮನಿ- ಜರ್ಮನ್
೧೯೩೦	ಸಿಂಕ್ಲೇರ್ ಲೀವಿಸ್ (Sinclair Lewis)	ಅಮೆರಿಕ- ಇಂಗ್ಲಿಷ್
೧೯೩೧	ಎರಿಕ್ ಏಕ್ಸೆಲ್ ಕಾರ್ಲ್‌ಫೆಲ್ಡ್ (Erik Axel Karlfeldt)	ಸ್ವೀಡನ್-ಸ್ವೀಡಿಷ್
೧೯೩೨	ಜಾನ್ ಗಾಲ್ಸ್‌ವರ್ದಿ (John Galsworthy)	ಗ್ರೇಟ್ ಬ್ರಿಟನ್ - ಇಂಗ್ಲಿಷ್
೧೯೩೩	ಇವಾನ್ ಬುನಿನ್ (Ivan Bunin)	ರಷ್ಯಾ/ಫ್ರಾನ್ಸ್- ರಷ್ಯನ್
೧೯೩೪	ಲುಯಿಜಿ ಪಿರಾಂಡೆಲೊ (Luigi Pirandello)	ಇಟಲಿ- ಇಟಾಲಿಯನ್
೧೯೩೫	ಯಾರಿಗೂ ಇಲ್ಲ	- -
೧೯೩೬	ಯೂಜೀನ್ ಓನೀಲ್ (Eugene O'Neill)	ಅಮೆರಿಕ - ಇಂಗ್ಲಿಷ್
೧೯೩೭	ರೋಜರ್ ಮಾರ್ತಿನ್ ದ್ಯೂ ಗಾರ್ (Roger Martin Du Gard)	ಫ್ರಾನ್ಸ್- ಫ್ರೆಂಚ್
೧೯೩೮	ಪರ್ಲ್ ಎಸ್. ಬಕ್ (Pearl S. Buck)	ಅಮೆರಿಕ - ಇಂಗ್ಲಿಷ್
೧೯೩೯	ಫ್ರಾನ್ಸ್ ಈಮಿಲ್ ಸಿಲ್ಲಾನ್‌ಪಾ (Frans Eemil Sillanpaa)	ಫಿನ್ಲೆಂಡ್ - ಫಿನ್ನಿಷ್
೧೯೪೦	ಯಾರಿಗೂ ಇಲ್ಲ	- -
೧೯೪೧	ಯಾರಿಗೂ ಇಲ್ಲ	- -
೧೯೪೨	ಯಾರಿಗೂ ಇಲ್ಲ	- -
೧೯೪೩	ಯಾರಿಗೂ ಇಲ್ಲ	- -
೧೯೪೪	ಯೊಹಾನ್ನೆಸ್ ವಿ. ಯೆನ್‌ಸೆನ್ (Johannes V. Jensen)	ಡೆನ್ಮಾರ್ಕ್- ಡೇನಿಷ್

೧೯೪೫	ಗೇಬ್ರಿಯೆಲಾ ಮಿಸ್ತ್ರಲ್ (Gabriela Mistral)	ಚಿಲಿ- ಸ್ಪ್ಯಾನಿಷ್
೧೯೪೬	ಹರ್ಮನ್ ಹೆಸ್ (Hermann Hesse)	ಸ್ವಿಟ್ಜರ್‌ಲ್ಯಾಂಡ್ - ಜರ್ಮನ್
೧೯೪೭	ಆಂದ್ರೆ ಜೀದ್ (Andre Gide)	ಫ್ರಾನ್ಸ್- ಫ್ರೆಂಚ್
೧೯೪೮	ಟಿ. ಎಸ್. ಎಲಿಯಟ್ (T. S. Eliot)	ಗ್ರೇಟ್‌ಬ್ರಿಟನ್- ಇಂಗ್ಲಿಷ್
೧೯೪೯	ವಿಲಿಯಂ ಫಾಕ್ನರ್ (William Faulkner)	ಅಮೆರಿಕ-ಇಂಗ್ಲಿಷ್
೧೯೫೦	ಬರ್ಟ್ರೆಂಡ್ ರಸೆಲ್ (Bertrand Russel)	ಗ್ರೇಟ್‌ಬ್ರಿಟನ್-ಇಂಗ್ಲಿಷ್
೧೯೫೧	ಪಾರ್ ಲಾಗರ್‌ಕ್ವಿಸ್ಟ್ (Par Lagerkvist)	ಸ್ವೀಡನ್ - ಸ್ವೀಡಿಷ್
೧೯೫೨	ಫ್ರಾನ್ಸುವಾ ಮೋರಿಯಾಕ್ (Francios Mouriac)	ಫ್ರಾನ್ಸ್-ಫ್ರೆಂಚ್
೧೯೫೩	ವಿನ್‌ಸ್ಟನ್ ಚರ್ಚಿಲ್ (Winston Churchill)	ಗ್ರೇಟ್‌ಬ್ರಿಟನ್- ಇಂಗ್ಲಿಷ್
೧೯೫೪	ಅರ್ನೆಸ್ಟ್ ಹೆಮಿಂಗ್‌ವೇ (Ernest Hemingway)	ಅಮೆರಿಕ- ಇಂಗ್ಲಿಷ್
೧೯೫೫	ಹಾಲ್‌ದೋರ್ ಲ್ಯಾಕ್ಸ್‌ನೆಸ್ (Halldor Laxness)	ಐಸ್‌ಲೆಂಡ್- ಐಸ್‌ಲ್ಯಾಂಡಿಕ್
೧೯೫೬	ಯುವಾನ್ ಆರ್. ಯಿಮೆನೆಸ್ (Juan R. Jimenez)	ಸ್ಪೇನ್-ಸ್ಪ್ಯಾನಿಷ್
೧೯೫೭	ಆಲ್ಬರ್ಟ್ ಕಾಮು (Albert Camus)	ಫ್ರಾನ್ಸ್ - ಫ್ರೆಂಚ್
೧೯೫೮	ಬೋರಿಸ್ ಪಾಸ್ತರ್‌ನಾಕ್ (Boris Pasternak) (ಪ್ರಶಸ್ತಿ ಪಡೆಯಲಿಲ್ಲ)	ಸೋವಿಯತ್ ಒಕ್ಕೂಟ - ರಷ್ಯನ್
೧೯೫೯	ಸಾಲ್ವತೋರೆ ಕಾಸಿಮೋದೊ (Salvatore Quasimodo)	ಇಟಲಿ- ಇಟಾಲಿಯನ್
೧೯೬೦	ಸೆಂಟ್- ಜಾನ್ ಪೆರ್ಸ (Saint-John Perse)	ಫ್ರಾನ್ಸ್ - ಫ್ರೆಂಚ್
೧೯೬೧	ಇವೊ ಆಂದ್ರಿಚ್ (Ivo Andric)	ಯುಗೋಸ್ಲಾವಿಯಾ-ಸೆರ್ಬೊಕ್ರೋತ್
೧೯೬೨	ಜಾನ್ ಸ್ಟೈನ್‌ಬೆಕ್ (John Steinbeck)	ಅಮೆರಿಕ-ಇಂಗ್ಲಿಷ್
೧೯೬೩	ಜಿಯಾರ್‌ಜೋಸ್ ಸೆಫೇರಿಸ್ (Giorgos Seferis)	ಗ್ರೀಸ್-ಗ್ರೀಕ್
೧೯೬೪	ಜೀನ್- ಪಾಲ್ ಸಾರ್ತ್ರೆ (Jean-Paul Sartre) (ಪ್ರಶಸ್ತಿ ನಿರಾಕರಿಸಿದ)	ಫ್ರಾನ್ಸ್ - ಫ್ರೆಂಚ್
೧೯೬೫	ಮಿಖಾಯಿಲ್ ಶೊಲೊಖೊವ್ (Mikhail Sholokhov)	ಸೋವಿಯತ್ ಒಕ್ಕೂಟ- ರಷ್ಯನ್

೧೯೬೬	ಎಸ್. ವೈ ಅಗ್ನಾನ್ (S. Y. Agnon)	ಇಸ್ರೇಲ್ - ಹೀಬ್ರೂ
	ನೆಲ್ಲಿ ಸ್ಯಾಚ್ಸ್ (Nelly Sachs)	ಜರ್ಮನಿ- ಜರ್ಮನ್
೧೯೬೭	ಮಿಗೇಲ್ ಏಂಜಲ್ ಅಸ್ತೂರಿಯಾಸ್ (Miguel Angel Asturias)	ಗ್ವಾಟೆಮಾಲಾ- ಸ್ಪ್ಯಾನಿಷ್
೧೯೬೮	ಯಸುನಾರಿ ಕವಾಬಾಟ (Yasunari Kawabata)	ಜಪಾನ್ - ಜಾಪನೀಸ್
೧೯೬೯	ಸ್ಯಾಮ್ಯುಯೆಲ್ ಬೆಕೆಟ್ (Samuel Becktt)	ಐರ್ಲೆಂಡ್/ಫ್ರಾನ್ಸ್- ಫ್ರೆಂಚ್/ಇಂಗ್ಲಿಷ್
೧೯೭೦	ಅಲೆಕ್ಸಾಂಡರ್ ಸೋಲ್ಜೆನಿತ್ಸಿನ್ (Alexsander Solzhenitsyn)	ಸೋವಿಯತ್ ಒಕ್ಕೂಟ - ರಷ್ಯನ್
೧೯೭೧	ಪ್ಯಾಬ್ಲೊ ನೆರೂದಾ (Pablo Neruda)	ಚಿಲಿ- ಸ್ಪ್ಯಾನಿಷ್
೧೯೭೨	ಹೇನ್ರಿಚ್ ಬ್ಯೋಲ್ (Heinrich Boll)	ಪಶ್ಚಿಮ ಜರ್ಮನಿ- ಜರ್ಮನ್
೧೯೭೩	ಪ್ಯಾಟ್ರಿಕ್ ವೈಟ್ (Patrick White)	ಆಸ್ಟ್ರೇಲಿಯ- ಇಂಗ್ಲಿಷ್
೧೯೭೪	ಐವಿಂಡ್ ಜಾನ್ಸನ್ (Eyvind Johnson)	ಸ್ವೀಡನ್ - ಸ್ವೀಡಿಷ್
	ಹ್ಯಾರಿ ಮಾರ್ಟಿನ್‌ಸನ್ (Harry Martinson)	ಸ್ವೀಡನ್- ಸ್ವೀಡಿಷ್
೧೯೭೫	ಯೂಜೀನಿಯೊ ಮೊಂತಾಲೆ (Eugeoio Montale)	ಇಟಲಿ- ಇಟಾಲಿಯನ್
೧೯೭೬	ಸಾಲ್ ಬೆಲೊ (Saul Bellow)	ಅಮೆರಿಕ - ಇಂಗ್ಲಿಷ್
೧೯೭೭	ವಿನ್ಸೆಂತೆ ಅಲೆಕ್ಸಾಂದ್ರೆ (Vincente Aleixandre)	ಸ್ಪೇನ್- ಸ್ಪಾನಿಷ್
೧೯೭೮	ಐಸಾಕ್ ಬಾಷೆವಿಸ್ ಸಿಂಗರ್ (Isaac Bashevis Singer)	ಅಮೆರಿಕ - ಯಿದ್ದಿಶ್
೧೯೭೯	ಒಡಿಸ್ಯೂಸ್ ಎಲೀಟಿಸ್ (Odysseus Elytis)	ಗ್ರೀಸ್ - ಗ್ರೀಕ್
೧೯೮೦	ಚೆಸ್ಲಾ ಮಿಲೋತ್ಸ್ (Czeslaw Milosz)	ಪೋಲೆಂಡ್/ಅಮೆರಿಕ - ಪೋಲಿಷ್
೧೯೮೧	ಎಲಿಯಾಸ್ ಕ್ಯಾನೆಟಿ (Elias Canetti)	ಗ್ರೇಟ್ ಬ್ರಿಟನ್ - ಜರ್ಮನ್
೧೯೮೨	ಗೇಬ್ರಿಯಲ್ ಗಾರ್ಸಿಯಾ ಮಾರ್ಕೇಸ್ (Gabriel Garcia Marquez)	ಕೊಲಂಬಿಯ- ಸ್ಪ್ಯಾನಿಷ್
೧೯೮೩	ವಿಲಿಯಂ ಗೋಲ್ಡಿಂಗ್ (William Golding)	ಗ್ರೇಟ್ ಬ್ರಿಟನ್- ಇಂಗ್ಲಿಷ್
೧೯೮೪	ಯೂರೋಸ್ಲಾವ್ ಸೀಫರ್ತ್ (Jaroslow Seifert)	ಚೆಕೋಸ್ಲೋವಾಕಿಯ - ಚೆಕ್

೧೯೮೫	ಕ್ಲಾದ್ ಸಿಮೋನ್ (Claude Simon)	ಫ್ರಾನ್ಸ್ - ಫ್ರೆಂಚ್
೧೯೮೬	ವೊಲೆಸೊಯಿಂಕ (Wole Soyinka)	ನೈಜೀರಿಯಾ - ಇಂಗ್ಲಿಷ್
೧೯೮೭	ಜೋಸೆಫ್ ಬ್ರಾಡ್‌ಸ್ಕಿ (Joseph Brodsky)	ರಷಿಯಾ/ಅಮೆರಿಕ - ರಷ್ಯನ್
೧೯೮೮	ನಜೀಬ್ ಮಹಫೌಜ್ (Najib Mahfuz)	ಈಜಿಪ್ಟ್ - ಅರಾಬಿಕ್
೧೯೮೯	ಕಾಮಿಲೆ ಯೋಸೆ ಸೆಲಾ (Camilo Jose Cela)	ಸ್ಪೈನ್ - ಸ್ಪಾನಿಷ್
೧೯೯೦	ಒಕ್ತಾವಿಯಾ ಫೌಜ್ (Octavio Paz)	ಮೆಕ್ಸಿಕೊ - ಸ್ಪಾನಿಷ್
೧೯೯೧	ನ್ಯಾಡಿನ್ ಗೋರ್ಡಿಮರ್ (Nadine Gordimer)	ದಕ್ಷಿಣ ಆಫ್ರಿಕಾ - ಇಂಗ್ಲಿಷ್
೧೯೯೨	ಡೆರೆಕ್ ವಾಲ್ಕಾಟ್ (Derek Wolcott)	ಸೈಂಟ್ ಲೂಸೀಯ(ಕೆರಿಬಿಯನ್) - ಇಂಗ್ಲಿಷ್
೧೯೯೩	ಟೋನಿ ಮಾರಿಸನ್ (Tony Morison)	ಅಮೆರಿಕ - ಇಂಗ್ಲಿಷ್
೧೯೯೪	ಕೆಂಜಬುರೋ ಒಯೆ (Kngaburo oe)	ಜಪಾನ್ - ಜಪಾನಿ
೧೯೯೫	ಸೀಮನ್ ಹೀನಿ (Seaman Heany)	ಯು.ಕೆ. - ಐರಿಷ್
೧೯೯೬	ವಿಸ್ಲಾವಾ ಸಿಂಬೊ (Wislawa Szymo)	ಪೊಲೆಂಡ್ - ಪೋಲಿಷ್
೧೯೯೭	ಡೇರಿಯೋ ಫೋ (Dario Fo)	ಇಟಲಿ - ಇಟಾಲಿಯನ್



ಬೆಲ್ಜಿಯಂ ದೇಶದ ಮಾರಿಸ್ ಮೇತರ್‌ಲಿಂಕ್ ೧೯೧೧ ರಲ್ಲಿ ಸಾಹಿತ್ಯದ ನೊಬೆಲ್ ಬಹುಮಾನ ಪಡೆದ ಲೇಖಕ. ಫ್ರೆಂಚ್ ಭಾಷೆಯಲ್ಲಿ ಬೆಲ್ಜಿಯಂ ದೇಶದ ಸಾಹಿತ್ಯವನ್ನು ಸಮೃದ್ಧಗೊಳಿಸಿದ ಮೇತರ್‌ಲಿಂಕ್ ಅನುಭಾವದ ಜಗತ್ತನ್ನು, ಅನಂತವಿಶ್ವದ ನಿಗೂಢಗಳನ್ನು, ಬೆಳಕಿನ ಕಾಣ್ಕೆಯನ್ನು ತನ್ನ ಬರಹಗಳಲ್ಲಿ ಮುಖ್ಯವಾಗಿ, ನಾಟಕಗಳಲ್ಲಿ ಅನನ್ಯವಾಗಿ ಅಭಿವ್ಯಕ್ತಿಸಿದ್ದಾನೆ. ಸಂಕೇತವಾದದಿಂದ ಮೊದಲು ಪ್ರಭಾವಿತನಾಗಿದ್ದ ಮೇತರ್‌ಲಿಂಕ್ ಕವಿತೆಗಳ ಮೂಲಕ ಸಾಹಿತ್ಯ ಕ್ಷೇತ್ರಕ್ಕೆ ಅಡಿಯಿಟ್ಟ, ಮುಂದೆ ತನ್ನದೇ ಹಾದಿಯನ್ನು, ಸ್ವಂತಿಕೆಯನ್ನು ತನ್ನ ಪ್ರತಿಭೆಯಲ್ಲಿ ಅಚ್ಚೊತ್ತಿದ. ಈತನ 'ಮರಿಯೆ ಮುಗ್ದಲೀನೆ' ನಾಟಕದ ಪೂರ್ಣ ಅನುವಾದದೊಂದಿಗೆ ಉಳಿದ ನಾಟಕಗಳ, ಕೃತಿಗಳ ಪರಿಚಯ ಈ ವಾಚಿಕೆಯಲ್ಲಿದೆ.

ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು - ೫೬೦ ೦೧೮